ಡಿ. ವಿ. ಗುಂಡಪ್ಪ

26



ಜ್ಞಾಪಕಚಿತ್ರಶಾಲೆ – ೨

ಕಲೋಪಾಸಕರು

ಮುಖಪುಟ

ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

© 2018 Gokhale Institute of Public Affairs, Banglore, Karnataka, INDIA. All rights reserved.

e-Book
026v1.0.0
Date: October 10, 2018
ISBN: 9788193777916
Created by: Sriranga Digital Software Technologies Private Limited
srirangadigital.com

ಅರಿಕೆ

ಸಮುದ್ರದ ಮೇಲ್ತಳದಿಂದ ಆವಿಯ ಮೋಡಗಳು ಏಳುವಂತೆ ನೆನಪಿನಿಂದ ಆಕಾರ ಚಿಹ್ನೆಗಳು ಮೇಲಕ್ಕೇಳುತ್ತವೆ. ಅಂಥ ಆವಿಯ ಆಕಾರಗಳು ಈ ಪುಸ್ತಕದಲ್ಲಿಯ ಚಿತ್ರಗಳು.

ನನಗೆ ಇರುವ ಸಾವಿರ ದೌರ್ಬಲ್ಯಗಳಲ್ಲಿ ಜ್ಞಾಪಕಶಕ್ತಿಯ ದೌರ್ಬಲ್ಯ ಒಂದು. ಅದರಲ್ಲಿಯೂ ತಾರೀಖುಗಳ ಮತ್ತು ಲೆಕ್ಕಾಚಾರಗಳ ವಿಷಯದಲ್ಲಿ ನಾನು ತೀರಾ ಅಶಕ್ತ. ಈ ಚಿತ್ರಗಳನ್ನು ಬರೆಯುವಾಗ ನನ್ನೆದುರಿಗೆ ಯಾವ ದಾಖಲೆ ದೂಖಲೆಗಳೂ ಇರಲಿಲ್ಲ. ನನ್ನ ಜ್ಞಾಪಕದ ನ್ಯೂನತೆಯಿಂದ ಪ್ರಮಾದ ನಡೆದಿದ್ದರೆ ವಾಚಕರು ಅದನ್ನು ಸರಿಪಡಿಸಿಕೊಳ್ಳಬೇಕೆಂದು ಬೇಡುತ್ತೇನೆ.

ಈ ಚಿತ್ರಗಳಲ್ಲಿ ಅಧಿಕಸಂಖ್ಯೆಯವು "ಸುಧಾ" ವಾರಪತ್ರಿಕೆಯಲ್ಲಿ ಮೊದಲು ಪ್ರಕಟವಾದುವು. ಆ ಪತ್ರಕರ್ತರು ಇವುಗಳನ್ನು ಅಂಗೀಕರಿಸಿ ನನಗೆ ದೊಡ್ಡ ಉಪಕಾರಮಾಡಿದ್ದಾರೆ.

"ಸುಧಾ" ಪತ್ರಿಕೆಯ ವಾಚಕರು ಬಹುಮಂದಿ ಮೆಚ್ಚಿಕೆಯನ್ನು ತೋರಿಸಿ ಬರೆದದ್ದಲ್ಲದೆ ಒಂದೆರಡು ಸಂಗತಿಗಳಲ್ಲಿ ತಿದ್ದಾವಣೆಗಳನ್ನೂ ಸೂಚಿಸಿದ್ದಾರೆ. ಅವರಿಗೆಲ್ಲ ನನ್ನ ವಂದನೆ.

ಬಿಡಾರಂ ಕೃಷ್ಣಪ್ಪನವರು, ವಾಸುದೇವಾಚಾರ್ಯರು, ಚಿಂತಲಪಲ್ಲಿ ವೆಂಕಟರಾಯರು-ಇವರನ್ನು ಕುರಿತ ಪ್ರಬಂಧಗಳೂ, ಕಲಾನುಭವವನ್ನು ಕುರಿತ ಉಪಸಂಹಾರಭಾಗವೂ ಹೊಸದಾಗಿ ಸೇರಿಸಲ್ಪಟ್ಟಿವೆ. ನಾಟಕಶಿರೋಮಣಿ ವರದಾಚಾರ್ಯರನ್ನು ಕುರಿತ ಲೇಖನ ಬೆಂಗಳೂರಿನ ವರದಾಚಾರ್ಯ ಸ್ಮಾರಕ ಕಲಾಸಂಘವು ಪ್ರಕಟಿಸಿದ ಆಚಾರ್ಯರ ಜನ್ಮ ಶತಮಾನೋತ್ಸವ ಸ್ಮಾರಕ ಗ್ರಂಥಕ್ಕಾಗಿ ಬರೆದದ್ದು.

ವೀಣೆ ಶೇಷಣ್ಣನವರು, ಸುಬ್ಬಣ್ಣನವರು, ಬಿಡಾರಂ ಕೃಷ್ಣಪ್ಪನವರು, ಚಿಂತಲಪಲ್ಲಿ ವೆಂಕಟರಾಯರು-ಈ ಮಹನೀಯರ ಚಿತ್ರಪಟಗಳನ್ನು ಎರವಲು ಕೊಟ್ಟು "ಸುಧಾ" ಪತ್ರಿಕೆಯ ಮಾಲಿಕರು ಉಪಕರಿಸಿದ್ದಾರೆ. ನನ್ನ ಮದರಾಸಿನ ಮಿತ್ರರು "ಕಲ್ಕಿ" ಪತ್ರಿಕೆಯ ಸಂಪಾದಕರು ಶ್ರೀ ಟಿ. ಸದಾಶಿವಂ ಅವರು ಬೆಂಗಳೂರು ನಾಗರತ್ನಮ್ಮನವರ ಚಿತ್ರದ ಪಡಿಯಚ್ಚನ್ನು ಒದಗಿಸಿ ನೆರವಾಗಿದ್ದಾರೆ. ಅನಂತಶಾಸ್ತ್ರಿಗಳ ಚಿತ್ರಕ್ಕಾಗಿ ಶ್ರೀಮತಿ ಎಂ. ಎಸ್. ರಾಜಮ್ಮನವರಿಗೂ ಬಿಂದೂರಾಯರ ಚಿತ್ರಕ್ಕಾಗಿ ಶ್ರೀ ಬಿ. ಎಸ್. ಪಾಂಡುರಂಗರಾಯರಿಗೂ ನಾನು ಕೃತಜ್ಞನಾಗಿದ್ದೇನೆ.

ನನ್ನ ಬೇರೆ ಪುಸ್ತಕಗಳಿಗೆ ಆಗಿರುವಂತೆ ಈ ಪುಸ್ತಕಕ್ಕೂ ಶ್ರೀ ಎಸ್. ಆರ್. ರಾಮಸ್ವಾಮಿ ಅವರಿಂದ ಬಹುವಿಧವಾಗಿ ಸಹಾಯವಾಗಿದೆ. ಬರವಣಿಗೆಯ ಕೆಲಸ, ಅಚ್ಚಿನ ಕರಡುಗಳನ್ನು ತಿದ್ದುವ ಕೆಲಸ. ಅಲ್ಲಲ್ಲಿ ದಾಖಲೆಗಳನ್ನು ನೋಡಿ ಒದಗಿಸುವ ಕೆಲಸ, ಚಿತ್ರಪಟಗಳನ್ನು ಹೊಂದಿಸುವ ಕೆಲಸ-ಈ ಎಲ್ಲ ಕೆಲಸಗಳಲ್ಲಿಯೂ ಅವರು ಶ್ರದ್ಧೆ ಉತ್ಸಾಹಗಳಿಂದ ಶ್ರಮಿಸಿದ್ದಾರೆ. ಅವರಿಗೆ ಭಗವಂತನು ಶುಭಗಳನ್ನು ಕರುಣಿಸಲಿ.

ಹಾಗೆಯೇ ಶ್ರೀ ಮಣಿ ಮೊದಲಾದ ಸ್ನೇಹಿತರೂ ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ವಂದನೆ.

ಶ್ರೀ ಚಿದಂಬರಂ ಅವರ ಉಪಕಾರ ತುಂಬುಮನಸ್ಸಿನಿಂದ ಆದದ್ದು. ಅವರಿಗೆ ನನ್ನ ಕೃತಜ್ಞತೆಯನ್ನು ತಕ್ಕಂತೆ ತಿಳಿಸಲು ನನ್ನಲ್ಲಿ ಮಾತುಗಳಿಲ್ಲ.

ಮುಖ್ಯ ಮುಖ್ಯ ಹೆಸರುಗಳ ಅಕಾರಾದಿಯೂ ಅವರ ಕೃಪೆಯಿಂದ ಆದದ್ದು.

ಇಂತು ಸರ್ವಂ ಶಿವಂ.

ಬೆಂಗಳೂರು
26-12-1969

ಡಿ. ವಿ. ಜಿ.

ಪ್ರಸ್ತಾವನೆ

ಗಾಯನನಿಪುಣರೂ ನಾಟ್ಯನಿಪುಣರೂ ಬೆಲೆಕೊಡಬಹುದಾದ ಸಂಗತಿ ಈ ಪುಸ್ತಕದಲ್ಲೇನೂ ಇರಲಾರದು. ಶಾಸ್ತ್ರಜ್ಞಾನವಿಲ್ಲದೆ, ಅಭ್ಯಾಸಬಲವಿಲ್ಲದೆ, ಬರಿಯ ಖುಷಿಗಾಗಿ ಸಂಗೀತ ಕೇಳಿ ನಾಟ್ಯ ನೋಡಿದ ಒಬ್ಬ ಸಾಮಾನ್ಯ ಮನುಷ್ಯನು ತನ್ನಂಥ ಸಾಮಾನ್ಯರಿಗಾಗಿ ತನ್ನ ಅನುಭವಗಳನ್ನು ಗುರುತುಹಾಕಿಟ್ಟ ಪುಸ್ತಕ ಇದು.

ನಾನು ಹುಟ್ಟಿ ಬೆಳೆದ ಮನೆಯ ನೆರೆಹೊರೆಯಲ್ಲಿ ಗಾಯಕರ ಮತ್ತು ನರ್ತಕರ ಮನೆಗಳಿದ್ದವು. ಅಂಥ ಸಹವಾಸ ಚಿಕ್ಕಂದಿನಿಂದ ನನಗೆ ದೊರೆತಿದ್ದದ್ದರಿಂದ ಕೊಂಚ ಕಲಾಭಿರುಚಿಯುಂಟಾಗಿರಬಹುದು. ಆಮೇಲೆ ಅದು ಬೆಳೆಯಲು ಅವಕಾಶ ದೊರೆಯಿತು. ನನ್ನ ತೀರ್ಥರೂಪ ಮಾವಂದಿರಾದ ದಿವಂಗತ ಬಿ. ಎಸ್. ರಾಮಯ್ಯನವರು

ಸಂಗೀತಪ್ರೇಮಿಗಳು. ಬೆಂಗಳೂರಿನ ಮೊದಮೊದಲ ಸಂಗೀತಸಂಸ್ಥೆಗಳಲ್ಲೊಂದಾದ ಗಾನವಿನೋದಸಭೆಗೆ ಅವರು ಗೌರವ ಕೋಶಾಧಿಕಾರಿಯಾಗಿದ್ದರು. ಆ ಸಂಸ್ಥೆಯ ಅಧ್ಯಕ್ಷರು ದಿ ॥ ಕೆ. ಎಸ್. ಚಂದ್ರಶೇಖರಯ್ಯರ್ ಅವರು; ಕಾರ್ಯದರ್ಶಿಗಳು ದಿ ॥ ಡಿ. ಬಿ. ರಾಮಚಂದ್ರ ಮೊದಲಿಯಾರ್ ಮತ್ತು ದಿ ॥ ಬಿ. ವಿ. ಲಕ್ಷ್ಮಣರಾಯರು. ಆ ಸಭೆಯ ಎಷ್ಟೋ ಕಛೇರಿಗಳು ರಾಮಯ್ಯನವರ ಮನೆಯಲ್ಲಿ ನಡೆದವು. ಈ ಸಂದರ್ಭಾನುಕೂಲ್ಯದಿಂದ ಬೆಳೆಯಿತು ನನ್ನ ಸಂಗೀತದ ಖಯಾಲಿ. ಅಂಥಾದ್ದರಲ್ಲಿ ಪ್ರಮಾಣವತ್ತಾದ ವಿದ್ವತ್ತೆಯಾಗಲಿ ಪರಾಮರ್ಶಕುಶಲತೆಯಾಗಲಿ ನನಗೆ ಹೇಗೆ ಬರಬೇಕು? ಕೇವಲ ಉತ್ಸಾಹ ಈ ಪುಸ್ತಕದ ತಿರುಳು.

ನಾನು ಕೇಳಿರುವ ಎಷ್ಟೋ ಮಂದಿ ಗಾಯಕರ ಪ್ರಸ್ತಾವವನ್ನು ಇಲ್ಲಿ ಮಾಡಿಲ್ಲ. ಮಹಾ ಪ್ರಖ್ಯಾತರಾದ ಟೈಗರ್ ವರದಾಚಾರ್ಯರ ಹಾಡಿಕೆಯನ್ನು ನಾಲ್ಕಾರು ಸಾರಿ ಕೇಳಿದ್ದೇನೆ; ಬಹಿರಂಗ ಕಛೇರಿಗಳಲ್ಲಿ ಮಾತ್ರವಲ್ಲದೆ, ಸ್ನೇಹಿತರ ಮನೆಗಳಲ್ಲಿಯೂ ಕೇಳಿದ್ದೇನೆ. ಆದರೂ ಈ ಪುಸ್ತಕದಲ್ಲಿ ಅವರ ಸ್ಮರಣೆ ಬಂದಿಲ್ಲ.

ನನ್ನ ಬಾಲ್ಯದಲ್ಲಿ ವೆಂಕಟರಾಮಯ್ಯನವರೆಂಬ ವಿದ್ವಾಂಸರೊಬ್ಬರು-ಎಲ್ಲಿಯವರೋ-ನಮ್ಮ ಮನೆಗೆ ಬಂದಿದ್ದರು. ಅವರ ಬಾಯಿಂದ ನಾನು ಕೇಳಿದ ತ್ಯಾಗರಾಜರ ತೋಡಿರಾಗದ

ಆರಗಿಂಪವೇ ಪಾಲಾರಗಿಂಪವೇ ॥

ಕೃತಿಯನ್ನು ಕೇಳಿ ಆ ರಾಗದ ವೈಭವವನ್ನು ಅನುಭವಿಸಿ ಎಪ್ಪತ್ತು ವರ್ಷ ಕಳೆದರೂ ಇನ್ನೂ ಜ್ಞಾಪಕದಲ್ಲಿದೆ.

ಹಾಗೆಯೇ ಇನ್ನೊಬ್ಬರು ವೆಂಕಟರಾಮ ಭಾಗವತರೆಂಬವರಿದ್ದರು. ಅವರನ್ನು ಪಟ್ಟುನೂಲು ಭಾಗವತರೆಂದೂ ಕರೆಯುತ್ತಿದ್ದರು. ನಾನು ಅವರ ಮುಖದಿಂದಲೇ ಚಕ್ರವಾಕ ರಾಗವನ್ನು ಮೊದಲಸಾರಿ ಕೇಳಿ ಮೋಹಿತನಾದದ್ದು.

ಮಾತಿನ ಪರಿಮಿತಿ

ಲಲಿತಕಲೋಪಾಸಕರ ಪಾಡು ಜಾಜಿ ಪಾರಿಜಾತಗಳ ಪಾಡಿನಂತೆ; ಅದು ಒಂದೆರಡು ಕ್ಷಣ ತನ್ನ ಸೌಭಾಗ್ಯವನ್ನು ಸೂಸಿ ಬಳಿಕ ಕಣ್ಣು ಮುಚ್ಚುವುದು; ಆಮೇಲೆ ಅದು ಅಲಭ್ಯ. ಮರೆವು ಅದನ್ನು ಆವರಿಸಿ ಎಲ್ಲಿಯೋ ಕರಗಿಸಿಬಿಡುತ್ತದೆ. ಆದರೆ ಅದೆಂಥ ಒಂದೆರಡು ಕ್ಷಣ! ಅನುಭವಿಸಿದವರ ಪಾಲಿಗೆ ಅದು ಯಾವಜ್ಜೀವವೂ ಜೊತೆಯಲ್ಲಿರುವ ಕ್ಷಣ. ಅದೇ

ಅಮೃತ ಕ್ಷಣ. ಆ ಅಮೃತತ್ವವು ಅನುಭವಿಸಿದ್ದವರಿಗೆ ಮಾತ್ರ. ಆ ಅನುಭವವನ್ನು ಇತರರಿಗೋಸ್ಕರ ಮಾತಿನಲ್ಲಿ ಹಿಡಿದಿಡುವುದು ಸಾಧ್ಯವಲ್ಲ. ಮಾತು ಅಷ್ಟರದಲ್ಲ.

ನೀವು ಒಂದು ತೋಟದಲ್ಲಿ ಎಂಥೆಂಥ ಸುಖಗಳನ್ನನುಭವಿಸುತ್ತೀರಿ! ಅದನ್ನೆಲ್ಲ ಮಾತಿನಿಂದ ವರ್ಣಿಸಲಾದೀತೋ? ಹೂವಿನ ವಾಸನೆಯನ್ನು ಭಟ್ಟಿಯಿಳಿಸಲಾದೀತೋ! ಸೆಂಟ್ (Scent) ಪರಿಮಳಗಳು ಹಾಗೆ ಭಟ್ಟಿಯಿಳಿಸಿ ಆದುವಂತೆ! ಆದರೆ ಹೂವಿನ ಕೋಮಲಸ್ಪರ್ಶವನ್ನು ಹೇಗೆ ವರ್ಣಿಸೀರಿ? ಅದರ ರೇಕುಗಳ ಚಿತ್ರವಿಚಿತ್ರಗಳನ್ನು ಹೇಗೆ ಮಾತಿನಿಂದ ತಿಳಿಸೀರಿ? ಎಲೆ ಚಿಗುರುಗಳ ರಂಗುಗಳಿಗೂ ಛಾಯೆಗಳಿಗೂ ಹೆಸರುಗಳುಂಟೆ? ಬಳ್ಳಿಯ ಬಳುಕಾಟವನ್ನೂ ಮೊಗ್ಗು ಗೊಂಚಲಿನ ಕುಲುಕಾಟವನ್ನೂ ಹೇಗೆ ಬಣ್ಣಿಸೀರಿ? ಸಂಗೀತದ ಸೊಗಸುಗಳ ವರ್ಣನೆಯೂ ಹಾಗೆಯೇ ಮಾತಿಗೆ ಅಶಕ್ಯವಾದದ್ದು.

ಕನ್ನಡ ವೈಯಾಕರಣಿ ಕೇಶಿರಾಜನು ವಾಗ್ದೇವಿಯನ್ನು

> ...ಶಬ್ದದಿ- ।
> ನಾವಾವಿಂದ್ರಿಯದ ವಿಷಯಮುಂ ಶ್ರೋತ್ರದೊಳು- ॥
> ದ್ಭಾವಿಪ... ।

-ಎಂದು ಸ್ತುತಿಸಿದ್ದಾನೆ. ಅದು ಸತ್ಯಕ್ಕೆ ಬಹು ಸಮೀಪವಾದ ಮಾತು; ಆದರೆ ಸತ್ಯಸರ್ವಸ್ವವೂ ಅಲ್ಲ. ಶಬ್ದವು ಇಂದ್ರಿಯಾನುಭವದ ಸ್ಥೂಲಾಕಾರವನ್ನು ಗುರುತುಮಾಡಲಾಗುತ್ತದೆ. ಸೂಕ್ಷ್ಮಾಂಶವನ್ನೆಲ್ಲ ಹೊರತರಲಾರದು. ಶಬ್ದವು ಬಹಿರಂಗದ್ದು, ಅನುಭವವು ಅಂತರಂಗದ್ದು.

ಇಲ್ಲಿ ಒಂದು ಕಥೆಯನ್ನು ಉದಾಹರಿಸಬಹುದು.

ತೆನಾಲಿ ರಾಮಕೃಷ್ಣನ ಒಂದು ಕಥೆ

ಒಂದು ದಿನ ಲಿಪಿಸಾರ್ವಭೌಮ ಅಕ್ಷರಶೇಖರ ಲೇಖನಶಿಖಾಮಣಿಯೆಂಬೊಬ್ಬ ವಿದ್ವಾಂಸರು ರಾಜಾಸ್ಥಾನಕ್ಕೆ ಬಂದು ಮಹಾರಾಜರನ್ನುದ್ದೇಶಿಸಿ "ಪ್ರಭೋ! ನಾನು ಲೇಖನಕಲೆಯಲ್ಲಿ ಬಹು ಬಿರುದು ಭುಜಕೀರ್ತಿ ಘಂಟಾಲಂಕಾರಗಳನ್ನು ಪಡೆದವನು. ತಮ್ಮಿಂದ ಜಯಪತ್ರ ಪಡೆಯಲು ಬಂದಿದ್ದೇನೆ. ನನ್ನನ್ನು ಸೋಲಿಸಬಲ್ಲ ಲಿಪಿಕಾರರು ತಮ್ಮ ಆಸ್ಥಾನದಲ್ಲಿದ್ದರೆ ನಾನು ಅವರಿಗೆ ನಮಸ್ಕಾರ ಮಾಡಿ ನನ್ನ ಬಿರುದಾವಳಿಗಳನ್ನೊಪ್ಪಿಸುತ್ತೇನೆ. ಹಾಗೆ ಮಾಡದೆ ಅವರು ನನ್ನಿಂದ ಸೋತರೆ ಆಗ ಅವರ ಬಿರುದಾವಳಿಯೇನಾದರೂ ಇದ್ದರೆ ಅದನ್ನು ನನಗೆ ವಶಪಡಿಸತಕ್ಕದ್ದು. ನನಗೆ ಜಯಪತ್ರ ಮಹಾಸ್ವಾಮಿಯವರ ಹಸ್ತದಿಂದ ಅಪ್ಪಣೆಯಾಗಬೇಕು" - ಎಂದು ಬೇಡಿದ. ಆಗ ಮಹಾರಾಜರಿಗೆ ಕೊಂಚ ಪೇಚಾಟವಾಯಿತು. ತಮ್ಮ ಆಸ್ಥಾನದ ಲಿಪಿಕಾರರು ಸೋತುಹೋದರೆ ಅದು ಅಪಮಾನಕರವಲ್ಲವೆ! ತಾವು ಯೋಗ್ಯತೆ ನೋಡಿ ಆಶ್ರಯ ಕೊಡುವವರಲ್ಲವೆ?

ಹೀಗೆ ಚಿಂತಾಕ್ರಾಂತರಾಗಿ ಅವರು ತೆನಾಲಿ ರಾಮಕೃಷ್ಣಯ್ಯನ ಕಡೆ ತಿರುಗಿ ನೋಡಿ "ಏನು ನಿಮ್ಮ ಸಲಹೆ?" ಎಂದು ಕೇಳಿದರು. ಆತನು ನಸುನಕ್ಕು "ಈ ವಿದ್ವಾಂಸರು ಬೇಡುವಂತೆ ಆಗಬಹುದಲ್ಲ?" ಎಂದ. ರಾಯರು "ರಾಮಕೃಷ್ಣಯ್ಯ, ಹಾಗಾದರೆ ನೀವೇ ಈ ವಿದ್ವಾಂಸರು ಏನು ಬರೆಯಬೇಕೋ ಹೇಳುವಿರಾ?" ಎಂದರು. ರಾಮಕೃಷ್ಣಯ್ಯನು "ಪ್ರಭುಗಳ ಅಪ್ಪಣೆಯಂತೆ" ಎಂದು ಬಿನ್ನವಿಸಿ ಲೇಖ್ಯಾಕ್ಷರಗಳನ್ನು ಹೇಳಲಾರಂಭಿಸಿದ, ಹೀಗೆ:

"ಭುಸ್...ಭುಸ್ಸ್...ಭುಸ್ಸ್
ಸ್ಸ್ ಸ್ಸ್ ಸ್ಸ್......ಸ್ಸ್"

ಹತ್ತಿಪ್ಪತ್ತು ನಿಮಿಷ ಕಳೆಯಿತು. ಸಕಾರ ಮುಗಿಯಲೇ ಇಲ್ಲ, ಸಭಿಕರು ಅಚ್ಚರಿಗೊಂಡು ನಗುತ್ತಿದ್ದರು. ಮಹಾರಾಜರು ತಾಳ್ಮೆ ಮುಗಿದವರಂತೆ "ಏನು, ಒಂದೇ ಅಕ್ಷರವೆ?" ಎಂದರು. ರಾಮಕೃಷ್ಣಯ್ಯನು ಈಗ-

"ಗೊಟೃ...ಗೊಟ್ರ್...ಟರ್ರ್
ರ್ರ್ ರ್ರ್ ರ್ರ್.............ರ್"

ಎಂದು ಆರಂಭಿಸಿ ರಕಾರವನ್ನು ಸೆಳೆದನು. ಸಭಿಕರು ಬಿದ್ದು ಬಿದ್ದು ನಗುತ್ತಿದ್ದರು. ಲೇಖನ ಶಿಖಾಮಣಿ ತಬ್ಬಿಬ್ಬಾಗಿ ಎದ್ದುನಿಂತು, “ಸ್ವಾಮಿ, ನನಗೆ ಏಕೋ ಮೈಯಲ್ಲಿ ಅಸ್ವಸ್ಥವಾಗಿದೆ, ತಲೆ ನೋಯುತ್ತಿದೆ” ಎಂದ.

ರಾಯರು “ಅಯ್ಯೋ ಪಾಪ! ವೈದ್ಯರನ್ನು ಕರಸೋಣ. ಇಲ್ಲಿಗೆ ಇಂದಿನ ಸಭೆ ಸಾಕು. ನಾಳೆ ಇಂದಿನ ಕಾರ್ಯವನ್ನು ಮುಂದುವರಿಸೋಣ” ಎಂದರು. ಸಭೆ ಬರಖಾಸ್ತಾಯಿತು.

ಮಾರನೆಯ ದಿನ ಸಭೆ ಸೇರಿತು. ಆದರೆ ಲೇಖನಶಿಖಾಮಣಿ ಬಂದಿರಲಿಲ್ಲ. ಅವನ ಬಿಡಾರ ಖಾಲಿಯಾಗಿತ್ತು. ಅರ್ಥವಾಯಿತು. ದೊರೆಗಳು ತೆನಾಲಿ ರಾಮಕೃಷ್ಣಯ್ಯನನ್ನು ಕುರಿತು “ಏನಯ್ಯ ನಿನ್ನೆ ನೀನು ಹೇಳಿದ್ದು?” ಎಂದು ಕೇಳಿದರು. ಆತ ಹೇಳಿದ:

"ಮಹಾಸ್ವಾಮಿ, ಅದು ಒಂದು ಶಿವತಾಂಡವ ಸ್ತೋತ್ರ, ಹೀಗೆ:

ಭುಸ್ಸನೆ ನಾಗೇಶುಡು
ಗೊಟ್ಟೆಗೊಟ್ಟೆಮನೆ ನಂದೀಶುಡು ॥
ಘೋಿಮನೆ ವಿಘ್ನೇಶುಡು
ಥೊತ್ಥೋಮನೆ ನಟನೇಶುಡು ॥

ಇದನ್ನು ನನ್ನ ಗುರುಗಳು ಹೇಳಿಕೊಟ್ಟ ಹಾಗೆ ಸರಾಗವಾಗಿ ಹೇಳಿದೆ. ಇದನ್ನು ಬರೆದುಕೊಳ್ಳಲಾಗದ ಆ ಲೇಖನಶಿಖಾಮಣಿ ಎಲ್ಲಿ ಹೋದನೋ!"

ಬರವಣಿಗೆಯ ಮಿತಿಯನ್ನು ತೋರಿಸುತ್ತದೆ ಈ ಉಪಕಥೆ.

ತೆನಾಲಿ ರಾಮಕೃಷ್ಣಯ್ಯನ ಅಕ್ಷರದ ಒತ್ತುಗಳು ಹೇಗೋ ತ್ಯಾಗರಾಜರ ಅಕ್ಷರದ ದೀರ್ಘಗಳೂ ಕೊಂಬುಗಳೂ ಹಾಗೆ ಲಿಪಿಗೆ ಸಿಕ್ಕತಕ್ಕವಲ್ಲ. ಸಂಗೀತವಿರುವುದು ಈ ಲಿಪಿಗೆ ಸಿಕ್ಕದ ಕಾಕು ಕೊಂಕುಗಳಲ್ಲಿ. ಸಂಗೀತವಿರುವುದು ಅಕ್ಷರದಲ್ಲಲ್ಲ. ಒಂದಕ್ಷರಕ್ಕೂ ಇನ್ನೊಂದಕ್ಷರಕ್ಕೂ ನಡುವೆ ಹುದುಗಿಕೊಂಡಿರುವ ನಾದದ ಉರುಳು ಜಾರುಗಳಲ್ಲಿ.

ಮುರಹರ । ರಾ_ರಾ_ ॥
ಸಾ_ರೀ_ದೆನೋ ನಿ_ನ್ನಾ_ ॥

ಅಕ್ಷರ ಬರೆಯದೆ(-) ಗೀಟು ಹಾಕಿರುವ ಕಡೆ ಬರುವುದು ಸಂಗೀತ.

ಕಲಾಜೀವಿಯ ಸಿದ್ಧಿ ಅಂತರಂಗದ್ದು

ಸಂಗೀತಗಾರನ ಜಾರುಗಳೂ ಕೊಂಕುಗಳೂ ಹೇಗೋ ಕಲಾಕರ್ತನ ಮರ್ಮಗಳೂ ಸ್ವಾರಸ್ಯಗಳೂ ಹಾಗೆಯೇ ಲೇಖನಾತೀತಗಳು-ಹಾಗೆ ಅನುಭವದಿಂದಲೇ ತಿಳಿಯಲಾಗತಕ್ಕವು. ಆ ಅನುಭವವು ನೀರಿನ ಆವಿಯಂತೆ; ಗೊತ್ತಾದ ಮೈಕಟ್ಟಿಲ್ಲದವು. ಕಲಾಜೀವಿಯ ಸಿದ್ಧಿಯೇ ಹೀಗೆ ಅವಿಲೇಖ್ಯವೆಂದಮೇಲೆ, ಅವನ ಜೀವಿತಚರಿತ್ರೆಯೆಂಬುದೆಂಥದು? ಕವಿ, ಶಾಸ್ತ್ರವಿದ್ವಾಂಸ, ಗಾಯಕ, ನರ್ತಕಿ-ಇಂಥವರ ಜೀವನ ಅಂತರಂಗದ್ದು, ಬಹಿರಂಗದ್ದಲ್ಲ. ರಾಜಕೀಯಸ್ಥನ ಜೀವನವೂ ವ್ಯಾಪಾರಿಯ ಜೀವನವೂ ಬಹಿರಂಗದ್ದು. ಅವರಿಗೆ ಗಿರಾಕಿ ಬೇಕು. ಆದದ್ದರಿಂದ ಅವರು ಹೊರಗಣ ಜನದೊಡನೆ ಹೆಣಗಾಡಬೇಕು: ಹಾರಬೇಕು, ಹರಟಬೇಕು, ಕುಣಿಯಬೇಕು, ಕುಪ್ಪಳಿಸಬೇಕು, ಕಿರಿಚಬೇಕು, ಬೊಬ್ಬೆಯಿಡಬೇಕು. ಹೀಗೆ ಪ್ರಪಂಚವನ್ನು ತಮ್ಮೆಡೆಗೆ ಸೆಳೆದುಕೊಳ್ಳಬೇಕು. ಈ ಕಾರ್ಯಾವಸರದಲ್ಲಿ ಅವರು ಮಾಡುವ ಸಾಹಸಗಳೂ ಉಪಾಯಗಳೂ ಅನುಸಂಧಾನಗಳೂ ವರ್ಣನೆಗೆ ವಿಷಯಗಳಾಗುತ್ತವೆ. ರಾಜಕೀಯಸ್ಥನ ಭಾಷಣಘೋಷಣಗಳು ಗ್ರಂಥವಸ್ತುವಾಗುತ್ತವೆ. ಗಾಯಕನ ಗಾನವಿಲಾಸಗಳನ್ನು ಹಾಗೆ ಬರೆದು ಅಚ್ಚಿಡಲಾದೀತೆ? ಕಲೋಪಾಸಿಯೂ ಶಾಸ್ತ್ರ ಪಾಠಕನೂ ಬದುಕುವುದು ಅವರವರ ಒಳಗೆ-ಅವರವರ ಮನಸ್ಸು ಬುದ್ಧಿಗಳ ಒಳಗಡೆ. ಹೊರಗಡೆಗೆ ಅವರು ಎಲ್ಲ ಮನುಷ್ಯರಂತೆ ಇರುತ್ತಾರೆ-ಸಾಮಾನ್ಯವಾಗಿ. ದೇಹಪ್ರವೃತ್ತಿಗಳಲ್ಲಿ ಕಲೆಗಾರನ ವಿಶೇಷವೇನೂ ಇಲ್ಲ, ಅಲ್ಲಿ ಅವನೂ ಪ್ರಕೃತಿಗೊಳಪಟ್ಟವನೇ; ಅವನ ವಿಶೇಷವೇನಿದ್ದರೂ ಅಂತರಂಗದಲ್ಲಿ. ಆದದ್ದರಿಂದ ಕವಿ ಗಾಯಕ ನರ್ತಕ ಶಿಲ್ಪಿ ಚಿತ್ರಕಾರರನ್ನು ಕುರಿತ ಜೀವಿತಚರಿತ್ರೆಗಳು ಬಹುಮಟ್ಟಿಗೆ ಔಪಚಾರಿಕ ಕೃತಿಗಳಾಗಿರುತ್ತವೆ; ವಾಸ್ತವಿಕವಲ್ಲ. ಅವು ರಾಜಕೀಯಸ್ಥನ ಜೀವಿತಚರಿತ್ರೆಗೆ ಸಮನಾಗಿ ವಿಸ್ತರಿಸಲಾರವು. ಗಾಯಕನ ಜೀವಿತಚರಿತ್ರೆ ನಾಮಮಾತ್ರಕ್ಕೆ ಜೀವಿತಚರಿತ್ರೆ.

ಹಾಗಾದರೆ ನಾನು ಇಲ್ಲಿ ಉದ್ದೇಶಿಸಿರುವುದೇನು? ಅದು ಬರಿಯ ಗುರುತುಗೀರು. ಅಕ್ಷರ ಕಲಿಯುವ ಬಾಲಕನ ಅಭ್ಯಾಸಕ್ಕಾಗಿ "ಕಾಪಿ" ಪುಸ್ತಕದಲ್ಲಿ ಅಕ್ಷರದ ಹೊರ ಆಕಾರವನ್ನು ಸೂಚಿಸುವ ಗೆರೆಗಳನ್ನೂ ಚುಕ್ಕೆಗಳನ್ನೂ ಗುರುತಿಸಿರುತ್ತದೆಯಲ್ಲವೆ? ಹಾಗೆ ಬಿಡುವು ಬಿಟ್ಟಿರುವುದನ್ನು ಬಾಲಕನು ಭರ್ತಿಮಾಡಬೇಕು. ಚಿತ್ರಲೇಖನ ಕಲಿಸುವವರೂ ಹಾಗೆಯೇ ಒಂದು ಆಕಾರದ ಹೊರಗೆರೆಗಳನ್ನು ತೋರಿಸಿಕೊಟ್ಟು ಅದರ ಒಳಮೈಯನ್ನು ವಿದ್ಯಾರ್ಥಿಗೆ ಪೂರಣಮಾಡಹೇಳುತ್ತಾರೆ. ನಾನು ಮಾಡಹೊರಟಿರುವ ಕೆಲಸ ಅಂಥಾದ್ದು; ಪ್ರಸಕ್ತ

ವ್ಯಕ್ತಿಗಳ ಹೆಗ್ಗುರುತನ್ನಾದರೂ ಹೇಳಬೇಕೆಂಬುದು. ಬಿಡತಿಗಳನ್ನು ವಾಚಕರ ಪ್ರತಿಭೆ ಭರ್ತಿಮಾಡೀತು.

ಇದು ಲೇಖನಕಾರ್ಯಕ್ಕಾಗಿ ಪಟ್ಟುಹಿಡಿದು ಕುಳಿತು ಆದ ಪುಸ್ತಕವೂ ಅಲ್ಲ. ವಿಷಯದ ತುಣುಕು ತುಂಡುಗಳು ಈಗಲೊಂದು ಆಗಲೊಂದು ನೆನಪಿಗೆ ಬಂದಾಗ ನೆನಪು ಹೇಳಿದಂತೆ ಬರೆಯಿಸಿ ಆಗಿರುವ ಪುಸ್ತಕ. ಆದದ್ದರಿಂದ ಇದರಲ್ಲಿ ಒಂದು ಗೊತ್ತಾದ ವಿಷಯಾನುಕ್ರಮ ಕಾಣಲಾರದು.

ಮುದುಕನೊಬ್ಬನ ಅನುಭವಗಳೂ ಜ್ಞಾಪಕಗಳೂ ತಮಗೆ ಬೇಕೆಂಬವರು ಇದ್ದಾರು. ಅಂಥವರಿಗೆ ನಷ್ಟಮಾಡಕೂಡದೆಂಬ ಆತುರದಲ್ಲಿ ಆಗಿರುವ ಕೆಲಸ ಇದು. ಈ ಸಂದರ್ಭವನ್ನು ವಾಚಕರು ಮನಸ್ಸಿಗೆ ತೆಗೆದುಕೊಂಡು ಕೃಪೆ ತೋರಿಯಾರೆಂದು ನಾನು ನಂಬಿ ಕೊಂಡಿದ್ದೇನೆ.

ಸರ್ವಂ ಶಿವಂ.

೧

ನಾಟ್ಯಕಲೆಯ ಗೌರವಾರ್ಹತೆ

ಮನುಷ್ಯನು ಪ್ರಪಂಚವನ್ನು ತಾನು ತಿಳಿದುಕೊಳ್ಳುವುದಕ್ಕೂ ಪ್ರಪಂಚಕ್ಕೆ ತನ್ನನ್ನು ತಿಳಿಯಪಡಿಸಿಕೊಳ್ಳುವುದಕ್ಕೂ ಇರುವ ಸಾಧನಗಳಲ್ಲಿ ಮುಖ್ಯವಾದವು ಎರಡು: (೧) ಮನಸ್ಸು (೨) ಬುದ್ಧಿ.

ಕಣ್ಣು ಕಿವಿ ಮೊದಲಾದ ಇಂದ್ರಿಯಗಳೂ ಅವುಗಳ ಆಶ್ರಯಸ್ಥಾನಗಳಾಗಿರುವ ದೇಹಾಂಗಗಳೂ ಆ ಎರಡಕ್ಕೂ ಉಪಕರಣಗಳಾಗಿರುತ್ತವೆ.

ಮನಸ್ಸನ್ನು ಸಂಸ್ಕಾರದಿಂದ ಬಲಪಡಿಸುವ ವಿದ್ಯೆ ಕಲೆ. ಬುದ್ಧಿಯನ್ನು ಸಂಸ್ಕಾರದಿಂದ ಬಲಪಡಿಸುವ ವಿದ್ಯೆ ಶಾಸ್ತ್ರ.

ಕಲೆಯು ಮನಸ್ಸಿನ ಮೃದು ಕೋಮಲ ಭಾವಗಳನ್ನು ಮೇಲಕ್ಕೆಬ್ಬಿಸಿ ರೂಪಗೊಳಿಸುತ್ತದೆ: ನಮಗೆ ನಡೆ ನುಡಿಗಳಲ್ಲಿ ನಯ ನಾಜೂಕುಗಳ ಅಭ್ಯಾಸವನ್ನು ಮಾಡಿಕೊಡುತ್ತದೆ. ಕಲೆಯ ಮುಖ್ಯ ರೂಪಗಳು ನಾಲ್ಕು: (೧) ಕಾವ್ಯ (೨) ಸಂಗೀತ (೩) ನಾಟ್ಯ (೪) ಚಿತ್ರಶಿಲ್ಪ. ನಾಟ್ಯದಲ್ಲಿ ನೃತ್ಯ, ಅಭಿನಯ-ಎಂಬ ಎರಡು ಮುಖ್ಯ ವಿಭಾಗಗಳಿವೆ.

ಸಂಗೀತ ನಾಟ್ಯಗಳನ್ನು 'ಗಾಂಧರ್ವ ವೇದ' ಎಂದು ಕರೆದು ಅವಕ್ಕೆ ನಮ್ಮ ಪೂರ್ವಿಕರು ವೇದಕ್ಕೆ ಅತಿಸಮೀಪವಾದ ಸ್ಥಾನವನ್ನು ಕೊಟ್ಟಿದ್ದಾರೆ. ವೇದದಲ್ಲಿಯೇ ಸಂಗೀತದ ಪ್ರಶಸ್ತಿಯಿದೆ. ರಾಜಸೂಯ ಮೊದಲಾದ ಯಜ್ಞಗಳಲ್ಲಿಯೂ ಸೀಮಂತೋನ್ನಯನ ಮೊದಲಾದ ಸಂಸ್ಕಾರ ಕರ್ಮಗಳಲ್ಲಿಯೂ ಸಂಗೀತ ಅವಶ್ಯವಾಗಿರುತ್ತದೆ. ಹೀಗೆ ಗೀತ ನಾಟ್ಯಗಳು ಗೌರವವುಳ್ಳ ವಿದ್ಯೆಗಳು. ಗಂಧರ್ವ, ವಿದ್ಯಾಧರ, ಅಪ್ಸರೆಯರು ಸಂಗೀತ ನಾಟ್ಯಗಳಿಗೆ ಅಭಿಮಾನ ದೇವತೆಗಳು.

ಸ್ವರ್ವೇಶ್ಯಾ ಊರ್ವಶೀಮುಖಾಃ ॥

—ಅಮರಸಿಂಹ

ಊರ್ವಶಿ ಮೊದಲಾದ ಅಪ್ಸರೆಯರು ದೇವಲೋಕದ ವೇಶ್ಯೆಯರೆಂದು ಹೇಳಿದ್ದಾನೆ ಅಮರಸಿಂಹ. ಊರ್ವಶಿಯ ಪ್ರಸ್ತಾವ ಋಗ್ವೇದದಲ್ಲಿದೆ. ಭೂಲೋಕದಲ್ಲಿ ಯಾರಾದರೂ ತಪಸ್ಸನ್ನು ಕೈಕೊಂಡರೆ ಅವರು ಸ್ವರ್ಗಲೋಕಕ್ಕೆ ಬಂದು ದೇವತೆಗಳಿಗೆ ಪ್ರತಿಸ್ಪರ್ಧಿಯಾದಾರೆಂಬ ಭೀತಿಯಿಂದ ದೇವೇಂದ್ರನು ತನ್ನ ಅಪ್ಸರೆಯರನ್ನು ಭೂಲೋಕಕ್ಕೆ ತಪೋಭಂಗ ಮಾಡುವುದಕ್ಕಾಗಿ ಕಳುಹಿಸುತ್ತಾನೆ. ವಿಶ್ವಾಮಿತ್ರರಿಗೆ ಹೀಗೆ ಮೇನಕೆ ಮೊದಲಾದವರಿಂದ ತಪೋಭಂಗವಾದ ಕಥೆ ಪ್ರಸಿದ್ಧವಾದದ್ದು. ದಶರಥ ರಾಜನು ಯಜ್ಞ ಮಾಡತೊಡಗಿ ಅದು ಸಾಂಗವಾಗಬೇಕಾದರೆ ಋಷ್ಯಶೃಂಗರು ಬರಬೇಕಾದದ್ದು ಅವಶ್ಯವೆಂದು ತಿಳಿದು, ಋಷ್ಯಶೃಂಗರನ್ನು ಆಕರ್ಷಿಸಿ ಕರೆತರಲು ವೇಶ್ಯೆಯರನ್ನು ನಿಯೋಜಿಸಿ ಕಳುಹಿಸಿದ್ದರ ವೃತ್ತಾಂತ ಶ್ರೀಮದ್ರಾಮಾಯಣದಲ್ಲಿದೆ. ಹೀಗೆ ನಮ್ಮಲ್ಲಿ ಬಹು ಪುರಾತನವಾದದ್ದು ವೇಶ್ಯಾವೃತ್ತಿ. ಅದನ್ನು ಜಗತ್ತಿನ ಅತ್ಯಂತ ಪುರಾತನವಾದ ಕಸಬೆಂದು ಇಂಗ್ಲಿಷಿನಲ್ಲಿ ಹೇಳುವುದುಂಟು.

ವೇಶ್ಯಾಕುಲವು ಪುರಾತನ ಗ್ರೀಸ್ ದೇಶದಲ್ಲಿಯೂ ಇತ್ತು. ಸಭ್ಯ ಸಮಾಜವು ಆ ವೃತ್ತಿಯನ್ನು ತಳ್ಳಿಹಾಕಿರಲಿಲ್ಲ. ಸಂಗಾತಿಯರನ್ನು ಅಥವಾ ಒಡನಾಡಿಯರನ್ನು (Hetaera, ಹೆಟೇರ) ಇರಿಸಿಕೊಳ್ಳುವ ವಾಡಿಕೆ ಆ ಜನದಲ್ಲಿತ್ತು. ಗ್ರೀಕರ ವೇಶ್ಯೆಯರಲ್ಲಿ ಪ್ರಸಿದ್ಧಳಾದವಳು ಆ್ಯಸ್ಪೇಸಿಯ (Aspasia) ಎಂಬಾಕೆ. ಅಥೆನ್ಸ್ (Athens) ಪಟ್ಟಣ-ರಾಜ್ಯದ ಪ್ರಭುವಾದ ಮಹಾಪ್ರಸಿದ್ಧ ಪುರುಷ ಪೆರಿಕ್ಲೀಸನ (Pericles) ಉಪಪತ್ನಿ ಆ್ಯಸ್ಪೇಸಿಯ. ಆಕೆ ಸುಂದರಿ ಮಾತ್ರವಲ್ಲದೆ ವಿದ್ಯಾವತಿ; ರಸಿಕಳು; ಜಾಣೆ. ಪೆರಿಕ್ಲೀಸನು ಆಕೆಯೊಡನೆ ರಾಜ್ಯವಿಚಾರಗಳನ್ನು ಕೂಡ ಆಲೋಚನೆ ಮಾಡುತ್ತಿದ್ದನಂತೆ. ಆಕೆಯ ಮನೆ ಅಥೆನ್ಸಿನ ಪ್ರಮುಖ ಜನರಿಗೆ ವಿನೋದಸ್ಥಾನವಾಗಿತ್ತು. ಜಗದ್ವಿಖ್ಯಾತ ತಾತ್ತ್ವಿಕ ಶಿರೋಮಣಿ ಸಾಕ್ರೆಟೀಸನು (Socrates) ಸಹ ಮಾತು ಕಥೆಗಾಗಿ ಆಕೆಯ ಮನೆಗೆ ಹೋಗುತ್ತಿದ್ದನಂತೆ.

ಪರಂಪರಾಗತ

ಸಂಗೀತ ನಾಟ್ಯಗಳಿಗೆ ಪ್ರಥಮ ಶಾಸ್ತ್ರಪ್ರವರ್ತಕರು ಮತಂಗ, ಭರತ ಮೊದಲಾದ ಮಹರ್ಷಿಗಳೆಂದು ಹೇಳುತ್ತಾರೆ. ಈ ಕಲಾಶಾಸ್ತ್ರಗಳು ನಮ್ಮ ಪುರಾತನ ವ್ಯವಸ್ಥೆಯಲ್ಲಿ ಒಂದಾನೊಂದು ಜನದ ಗುಂಪಿಗೆ ವಂಶಪಾರಂಪರ್ಯದಿಂದ ಕುಲವೃತ್ತಿಯಾಗಿ ಬಂದಿವೆ. ಪೂರ್ವಕಾಲದ ಸಮಾಜವ್ಯವಸ್ಥೆಯಲ್ಲಿ ಪುರೋಹಿತ್ತ, ಶಾನುಭೋಗ, ಪಟೇಲ, ಅಗಸ, ಕ್ಷೌರಿಕ, ತೋಟಿ, ತಳವಾರ-ಇವರೆಲ್ಲ ಕುಲಕ್ರಮದಿಂದ ಬಂದವರಷ್ಟೆ? ನಟುವರೂ ಹಾಗೆಯೇ. ನಟುವಾಂಗವೂ ಒಂದು ಪ್ರಾಚೀನವಾದ ಕುಲವೃತ್ತಿ.

‘ನಟುವ’ ಎಂಬ ಪದವೂ ನಟನ, ನಾಟ್ಯ ಮೊದಲಾದವೂ ಒಂದೇ ಬುಡಕಟ್ಟಿಗೆ ಸೇರಿದ ಪದಗಳು. ನಟನ ಮಾಡುವವರು ಸಾಮಾನ್ಯವಾಗಿ ಹೆಂಗಸರೇ ಆದದ್ದರಿಂದ ನಟುವಿತಿಯಯರಿಗೆ ನರ್ತಕಿ, ಗಾಯಕಿ, ವೇಶ್ಯೆ, ವಾರಾಂಗನೆ, ದೇವದಾಸಿ, ನಾಯಕಸಾನಿ- ಇತ್ಯಾದಿ ಅನೇಕ ಹೆಸರುಗಳು ರೂಢಿಗೆ ಬಂದಿವೆ, ಗಾನನರ್ತನಗಳಲ್ಲಿಯೂ ಮರ್ಯಾದೆಯಲ್ಲಿಯೂ ಹೆಸರುವಾಸಿಯಾದಾಕೆಯನ್ನು ‘ಘನ ನಾಯಕಸಾನಿ’ ಎಂದು ಕರೆಯುತ್ತಿದ್ದರು. ಕೆಲವು ಹೆಸರುಗಳಲ್ಲಿ ಸಂಗೀತ ನಾಟ್ಯಗಳ ಪ್ರಸ್ತಾವವಿಲ್ಲದೆ ಆ ಕಲೆಗಳಿಗೆ ಅಂಟಿಕೊಂಡುಬಂದಿರುವ ದೇಹವ್ಯಾಪಾರದ ಧ್ವನಿ ಎದ್ದು ಕೇಳಿಸುತ್ತದೆ. ಅದು ಮನುಷ್ಯ ಚಾಪಲ್ಯವನ್ನು ಎತ್ತಿ ಪ್ರಕಟಪಡಿಸುತ್ತದೆಯಾದ ಕಾರಣದಿಂದ ಆ ಹೆಸರುಗಳು ಅಷ್ಟು ಅಭಿಮತಗಳಾಗಿಲ್ಲ. ನಾವು ಇಲ್ಲಿ ‘ನಟುವರು’ ‘ನಾಯಕಸಾನಿ’ ‘ದೇವದಾಸಿ’ ಎಂಬ ಪದಗಳನ್ನೇ ಉಪಯೋಗಿಸೋಣ.

ಅವರ ವೃತ್ತಿಗೆ ಮೊದಲು ಗೌರವ ದೊರೆತದ್ದು ದೇವಸ್ಥಾನಗಳ ಕಾರಣದಿಂದ. ಆದಿ ಕಾಲದಿಂದಲೂ ಗುಡಿಯಲ್ಲಿಯೂ ಹೊರಗಡೆಯೂ ನಡೆಯುವ ದೇವತೋತ್ಸವಗಳಲ್ಲಿ ನಾಟ್ಯಸಮರ್ಪಣೆ ಒಂದು ಅವಶ್ಯವಾದ ಅಂಗ. ವಿಗ್ರಹಪೂಜೆಯಲ್ಲಿ ಅಡಗಿಕೊಂಡಿರುವ ಪರಮತತ್ತ್ವವು ಭಕ್ತನು ತನಗಿಷ್ಟವಾದ ಭೋಗಭಾಗ್ಯಗಳನ್ನೆಲ್ಲ ಪರಮೇಶ್ವರನಿಗೆ ಸಮರ್ಪಣೆ ಮಾಡುತ್ತಾನೆಂಬುದು ತಾನೆ? ಯಾವುದು ತನಗೆ ಇಷ್ಟವೋ, ಯಾವುದು ತನಗೆ ರುಚಿಯೋ, ಯಾವುದು ತನಗೆ ಸುಖವೋ ಆ ನಾನಾ ಸಾಮಗ್ರಿಗಳನ್ನೆಲ್ಲ ತನಗೆ ದೊರಕಿಸಿರುವುದು ಭಗವತ್ಕೃಪೆ. ಅವುಗಳನ್ನನುಭವಿಸಲು ತನಗೆ ಶಕ್ತಿ ಬಂದಿರುವುದು ಭಗವತ್ಕೃಪೆಯಿಂದ. ತನಗೂ ತನ್ನೆಲ್ಲಕ್ಕೂ ಸರ್ವಾಧಿಕಾರಿಯಾದ ಶಕ್ತಿಯು ಭಗವಂತ. ಹೀಗಿರುವುದರಿಂದ ಮನುಷ್ಯನು ತಾನು ಯಾವ ಸುಖಾನುಭವವನ್ನು ಪಡೆಯುವುದಾದರೂ ಅದನ್ನು ಮೊದಲು ಭಗವದರ್ಪಣೆ ಮಾಡಬೇಕೆಂಬುದು ನ್ಯಾಯವೂ ಸಹಜಸಿದ್ಧವೂ ಆಗಿರುತ್ತದೆ. ಆದರೆ ಭಗವಂತು ಸಾಕ್ಷಾತ್ತಾಗಿ ದೊರೆಯುವ ವಸ್ತುವಲ್ಲ. ಈ ಕಾರಣದಿಂದ ಭಗವತ್ಪ್ರತಿನಿಧಿಯಾದ ಒಂದು ದೇವಮೂರ್ತಿಗೆ ಭಕ್ತನು ತನ್ನ ಭೋಗಸಾಮಗ್ರಿಯನ್ನರ್ಪಿಸುತ್ತಾನೆ. ಹೀಗೆ ಸಂಗೀತ ನರ್ತನಗಳು ಅರ್ಪ್ಯಗಳಾಗುತ್ತವೆ. ಇಂಥ ಭಗವತ್ಕೈಂಕರ್ಯಕ್ಕಾಗಿ ಗೀತ ನರ್ತನ ವಿದ್ಯೆಗಳನ್ನು ಕಲಿಸುವವರು ನಟುವರು.

ಸಂಭಾವಿತ ವಿದ್ಯೆ

ನಾಟ್ಯಕಲೆಯು ಶಾಸ್ತ್ರ ಸಂಪ್ರದಾಯಗಳಿಂದ ಅಂಗೀಕೃತವಾದ ಚತುಷ್ಷಷ್ಟಿ ಕಲೆಗಳಲ್ಲೊಂದು. ಅನೇಕ ವೈದಿಕ ಕರ್ಮಗಳಲ್ಲಿ ನಾಟ್ಯಕ್ಕೆ ಸ್ಥಾನವುಂಟು. ಯಾರೆಂದರೆ ಅವರು ನರ್ತಕಿಯರಾಗುತ್ತಿರಲಿಲ್ಲ,

1. ಶಾಸ್ತ್ರಸಂಪ್ರದಾಯದಿಂದ ನರ್ತಕಿಯೆಂದು ಗಣ್ಯಳಾದವಳು ಹುಟ್ಟಿನಿಂದ ನಟುವಿತಿಯಾಗಿರಬೇಕು.
2. ಆಕೆ ಹಾಗೆ ಅಂಗೀಕೃತನಾದ ಗುರುವಿನಲ್ಲಿ ಭರತಶಾಸ್ತ್ರವನ್ನು ಅಭ್ಯಾಸ ಮಾಡಿರಬೇಕು.
3. ಆಕೆ ವಿದ್ಯಾವತಿಯೆಂದು ಗುರುವು ಅಂಗೀಕರಿಸಿದ ಬಳಿಕ, ಆಕೆ ಕುಲಪುರೋಹಿತರ ಕೈಯಿಂದ ಗೆಜ್ಜೆಪೂಜೆ ಮಾಡಿಸಿಕೊಳ್ಳಬೇಕು. ಇದೊಂದು ಶಾಸ್ತ್ರಕರ್ಮ. ಆಕೆ ನರ್ತನಕಾಲದಲ್ಲಿ ತಾನು ಧರಿಸುವ ಗೆಜ್ಜೆ ಸರಪಳಿಗಳನ್ನೂ ತಾಳಗಳನ್ನೂ ಮದ್ದಳೆ ಮೊದಲಾದ ವಾದ್ಯಗಳನ್ನೂ ದೇವತಾ ಪ್ರತಿಬಿಂಬವೆಂದು ಭಾವಿಸಿ, ಆ ಬಳಿಕ ಒಂದು ಕಳಶವನ್ನೂ ಅರಿಶಿನದ ಗೌರಿಯನ್ನೂ ಇರಿಸಿ ಕ್ರಮವಾಗಿ ಪೂಜೆ ನಡಸಿ ಆ ಗೆಜ್ಜೆಗಳನ್ನು ಪುರೋಹಿತರ ಕೈಯಿಂದ ಗ್ರಹಿಸಿ ಗುರುಗಳಿಗೆ ದಕ್ಷಿಣೆಯನ್ನೂ ಸಭಿಕರಿಗೆ ಗಂಧಪುಷ್ಪತಾಂಬೂಲಗಳನ್ನೂ ಹಂಚಬೇಕು.
4. ಪೂಜೆಯಾದ ತರುವಾಯ ಗುಡಿಗೆ ಹೋಗಿ ಅಲ್ಲಿ ಆ ಗೆಜ್ಜೆಗಳನ್ನು ಧರಿಸಿ ಸ್ವಾಮಿಯ ಸನ್ನಿಧಿಯಲ್ಲಿ ನರ್ತನ ಮಾಡಬೇಕು.

ಹೀಗೆ ದೇವಸಾನ್ನಿಧ್ಯದಲ್ಲಿ ಆಕೆಯ ಪ್ರಥಮ ನರ್ತನ. ಇದಾಗುವುದಕ್ಕೆ ಮುಂಚೆ ಆಕೆ ಸಭೆಯಲ್ಲಿ ನರ್ತನ ಮಾಡತಕ್ಕದ್ದಲ್ಲ.

ನಾಟ್ಯಕಲೆ ಹೀಗೆ ಒಂದು ಸಂಭಾವಿತವಾದ ವಿದ್ಯೆ. ಅದಕ್ಕೆ ಶಾಸ್ತ್ರ ಮರ್ಯಾದೆಗಳೂ ವಿಹಿತಕರ್ಮಗಳೂ ಉಂಟು.

ಕಾಲಿದಾಸ ಕವಿಯ ಮಾಲವಿಕಾಗ್ನಿಮಿತ್ರ ನಾಟಕದಲ್ಲಿಯೂ ಇನ್ನೂ ಎಷ್ಟೋ ಪ್ರಾಚೀನ ಕೃತಿಗಳಲ್ಲಿಯೂ ನರ್ತನಕಲೆಯ ಪ್ರಶಂಸೆಯಿದೆ. ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅರ್ಜುನನು ಬೃಹನ್ನಳೆಯಾಗಿ ನರ್ತನವನ್ನು ಕಲಿಸುತ್ತಿದ್ದನಷ್ಟೆ? ಹೀಗೆ ನಮ್ಮಲ್ಲಿ ಬಹು ಪುರಾತನವಾದದ್ದು ನಾಟ್ಯಕಲೆ.

ನಾಟ್ಯವಿರೋಧ

ಹೀಗೆ ಒಂದು ದೃಷ್ಟಿಯಿಂದ ಆರ್ಷೇಯವಾಗಿ ಬಂದಿರುವುದು ನಟುವರ ಜಾತಿ. ಅದಕ್ಕೆ ಕೊಂಚ ಕಲಂಕವನ್ನು ತಂದಿರುವುದು ಪ್ರಕೃತಿಸಿದ್ಧವಾದ ಮಾನುಷ ಚಾಪಲ್ಯ. ಈ ಸಂಗತಿಯ ವಿವರವನ್ನು ಪರ್ಯಾಲೋಚಿಸದೆ ಕೆಲಮಂದಿ ನಮ್ಮ ಸ್ವದೇಶಾಭಿಮಾನಿಗಳು ಆ ವೃತ್ತಿಗೆ ಈ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಒಂದು ಅಪಘಾತ ತಂದರು. ನಮ್ಮ ಸಮಾಜ ಸುಧಾರಕರಲ್ಲಿ ಬಹುಮಂದಿ ವಿದ್ವಾಂಸರು ವಿಚಾರಶೀಲರು, ದೂರದರ್ಶಿಗಳು ಮತ್ತು ಹಿತೈಕದೃಷ್ಟಿಯುಳ್ಳವರು; ರಾಜಾ ರಾಮಮೋಹನರಾಯ್ ಅವರು, ಮಹದೇವ ಗೋವಿಂದ ರಾನಡೆಯವರು, ಈಶ್ವರಚಂದ್ರ ವಿದ್ಯಾಸಾಗರ್ ಅವರು, ರಾಮಕೃಷ್ಣ ಗೋಪಾಲ ಭಂಡಾರಕರ್ ಅವರು-ಈ ಮಹನೀಯರ ಪಂಕ್ತಿಗೆ ಸೇರಿದವರು. ಅವರೆಲ್ಲ ಪ್ರೌಢ ಪಂಡಿತರೂ, ಸೌಶೀಲ್ಯಸಂಪನ್ನರೂ ಆಗಿ ಪ್ರಸಿದ್ಧರಾಗಿದ್ದ ಕಾರಣದಿಂದ ದೇಶದಲ್ಲಿ ಅವರ ವಾದೋಪದೇಶಗಳಿಗೆ ಹೆಚ್ಚು ಪುರಸ್ಕಾರ ದೊರೆಯುವಂತಾಯಿತು. ಆದರೆ ಅವರಲ್ಲಿ ಕೆಲವರಿಗೆ ಕೆಲವು ಹೊಸ ಹೊಸ ಅಭಿಪ್ರಾಯಗಳು ಬರಿಯ ಉದ್ವೇಗಾವೇಶದಲ್ಲಿ ಬಂದಿರಬೇಕು. ಅಂಥ ವಿಚಾರಸಿದ್ಧವಲ್ಲದ ಅಭಿಪ್ರಾಯಗಳಲ್ಲಿ ನಾಟ್ಯವಿರೋಧವೊಂದು.

ಇದು ಹೇಗೋ ಮೈಸೂರನ್ನಾಳುತ್ತಿದ್ದವರ ತಲೆಗೆ ಹತ್ತಿಕೊಂಡಿತು. ಸರ್.ಕೆ.ಶೇಷಾದ್ರಿ ಅಯ್ಯರ್ ಅವರ ಕಾಲದಲ್ಲಿ, ದೇವಸ್ಥಾನಗಳ ಆಡಳಿತಕ್ಕೆ ಸಂಬಂಧಪಟ್ಟ ಮುಜರಾಯಿ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಆರ್ಕಾಟ್ ಶ್ರೀನಿವಾಸಾಚಾರ್ಯರವರ ಕಾಲದಲ್ಲಿ, ದೇವಸ್ಥಾನಗಳಲ್ಲಿದ್ದ ದೇವದಾಸಿ ಕೈಂಕರ್ಯವು ನಿಂತುಹೋಯಿತು. ಆ ಸಮಯದ ಒಂದು ಐವತ್ತು-ನೂರು ವರ್ಷಗಳಷ್ಟರ ಪೂರ್ವಚರಿತ್ರೆಯನ್ನು ಮಾತ್ರ ನೋಡಿದರೆ ದೇವದಾಸಿ ಪದ್ಧತಿಯನ್ನು ನಿಲ್ಲಿಸಲು ತಕ್ಕಷ್ಟು ಕಾರಣವಿತ್ತೆಂದು ಯಾರಿಗಾದರೂ ಅನ್ನಿಸುತ್ತದೆ. ಅನೇಕ ದೇವಸ್ಥಾನಗಳಲ್ಲಿ ಪಾರುಪತ್ತೆಗಾರರೂ ಅರ್ಚಕರೂ ದೇವದಾಸಿಯರೂ ಆ ವೃತ್ತಿಯನ್ನು ದುರುಪಯೋಗ ಮಾಡಿದ್ದರೆಂಬುದು ನಿಜ. ಎಷ್ಟೋ ದೇವಸ್ಥಾನಗಳಲ್ಲಿ ಮೆರವಣಿಗೆ ಹೊರಟರೆ ಜನದ ಗುಂಪು ದೇವರ ಬಳಿ ಇರುವುದಕ್ಕಿಂತ ತಾಫಾದವರನ್ನು ಫೇರಾಯಿಸುವುದೇ ಮುಖ್ಯವಾಗಿತ್ತು. ಮುಕ್ಕೋಟಿ ಏಕಾದಶಿ, ವೈರಮುಡಿ, ಕಲ್ಯಾಣೋತ್ಸವ-ಇಂಥ ವಿಶೇಷ ದಿನಗಳಲ್ಲಿ ದೇವರ ದರ್ಶನಕ್ಕಾಗಿ ಬಂದವರೆಷ್ಟು ಮಂದಿಯೋ, ತಾಫಾ ನೋಡಲು ಬಂದವರೆಷ್ಟು ಮಂದಿಯೋ!

ಹೀಗೆ ಒಂದು ಕೆಲವು ಕಾಲದ ಅನುಭವವನ್ನು ಮಾತ್ರ ನೋಡಿದರೆ ಆರ್ಕಾಟ್ ಶ್ರೀನಿವಾಸಾಚಾರ್ಯರು ಮಾಡಿದ್ದು ಸರಿಯಲ್ಲವೆಂದು ಯಾರಿಗೂ ಅನ್ನಿಸದು. ಅದು

ನಡೆದಾಗ ಅದು ಒಳ್ಳೆಯ ಹುಕುಂ ಎಂದೇ ಬಹುಮಂದಿ ಒಪ್ಪಿಕೊಂಡರು. ಒಂದು ಒಳ್ಳೆಯ ಸುಧಾರಣೆಯಾಯಿತು; ಆದರೆ ಒಂದು ಒಳ್ಳೆಯ ವಿದ್ಯೆ ಹೋಯಿತು.

ಮೈಸೂರಿನಲ್ಲಿ ಈ ಸುಧಾರಣೆ ನಡೆದ ಕೆಲವು ವರ್ಷಗಳ ತರುವಾಯ ಬ್ರಿಟಿಷ್ ಇಂಡಿಯದಲ್ಲಿಯೂ ಅದಕ್ಕಾಗಿ ಚಳವಳಿ ಹಬ್ಬಿತು. ಬೊಂಬಾಯಿಯಲ್ಲಿ ಪ್ರಸಿದ್ಧ ಹೈಕೋರ್ಟ್ ಜಡ್ಜಿಗಳಾಗಿದ್ದ ಸರ್ ನಾರಾಯಣ ಚಂದಾವರ್ಕರ್ ಅವರೂ, ಅವರ ಮಿತ್ರರೂ 'ಸೋಷಲ್ ರಿಫಾರ್ಮರ್' ಪತ್ರಿಕೆಯ ಸಂಪಾದಕರೂ ಆದ ಕೆ.ನಟರಾಜನ್ ರವರೂ ಇತರರೂ ನಾಟ್ಯವಿರೋಧ (Anti-Nautch) ಚಳವಳಿಯನ್ನು ಆರಂಭಿಸಿದರು. ನನಗೆ ಆಗ ಹದಿನೈದು-ಹದಿನಾರು ವರ್ಷ ವಯಸ್ಸಿರಬಹುದು. ನಾನೂ ಆ ಚಳವಳಿಗೆ ಸೇರಿದೆ. ಆ ಪ್ರತಿಜ್ಞೆಯ ಗುರುತಾಗಿ ಬಲ ಮುಂಗೈಯಲ್ಲಿ ಕರಿಯ ದಾರವನ್ನು ಕಟ್ಟಿಕೊಂಡಿದ್ದೆ.

ನಾಟ್ಯಕಲೆ-ವ್ಯಭಿಚಾರ

ವ್ಯಭಿಚಾರ ವೃತ್ತಿಯನ್ನು ತಡೆಯಬೇಕೆಂಬ ಉದ್ದೇಶವನ್ನು ಯಾರೂ ತಪ್ಪೆನ್ನಲಾರರು. ಆದರೆ ನಾಟ್ಯಕಲೆ ವ್ಯಭಿಚಾರಕ್ಕೆ ಕಾರಣವೆಂಬುದನ್ನಾಗಲಿ ಪ್ರೋತ್ಸಾಹಕರವೆಂಬುದನ್ನಾಗಲಿ ಒಪ್ಪಲಾಗದು. ನಾಟ್ಯಕಲೆಯನ್ನು ನಿಗ್ರಹಿಸಿದರೆ ಉಳಿದ ವ್ಯಭಿಚಾರ ಕಾರಣಗಳನ್ನು ನಿಗ್ರಹಿಸಲಾದೀತೆ? ಈಗಿನ ವರ್ತಮಾನಪತ್ರಿಕೆಗಳ ವ್ಯಾಪಾರ ಜಾಹಿರಾತುಗಳಲ್ಲಿ ಎಂಥ ಆಕರ್ಷಕವಾದ ರೂಪಗಳೂ ಅಂಗಾಂಗಭಾವಗಳೂ ಬರುತ್ತಿವೆ? ಸಿನಿಮಾ ಚಿತ್ರಗಳು ಎಂಥೆಂಥವು ಬರುತ್ತಿವೆ? ಸೌಂದರ್ಯಾಲಂಕಾರ ವಿಷಯಗಳಿಗೇ ಮುಡುಪಾಗಿರುವ ವೃತ್ತಪತ್ರಿಕೆಗಳು ಎಷ್ಟಿವೆ? ಸೌಂದರ್ಯಾಕರ್ಷಣೆಗಳ ಸ್ಪರ್ಧೆಗಳೂ ಪ್ರದರ್ಶನಗಳೂ ಎಷ್ಟು ನಡೆಯುತ್ತವೆ? ರಾಜ್ಯದ ಮಂತ್ರಿಗಳೂ ನ್ಯಾಯಾಧೀಶರುಗಳೂ ಈ ಸ್ತ್ರೀರೂಪಪ್ರದರ್ಶನಗಳಿಗೆ ಅಧ್ಯಕ್ಷರಾಗಿಯೂ ನಿರ್ಣಾಯಕರಾಗಿಯೂ ಹೋಗಿ ಸಹಕರಿಸುವ ಪ್ರಸಂಗಗಳು ಎಷ್ಟು ನಡೆಯುತ್ತಿವೆ? ಇಂಥ ಕಾಲದಲ್ಲಿ, ಭರತನಾಟ್ಯದಿಂದ ವ್ಯಭಿಚಾರಕ್ಕೆ ಪ್ರೋತ್ಸಾಹವೆಂದು ಹೇಳುವುದು ಆನೆ ನುಂಗಿದ ಗಂಟಲಿಗೆ ದ್ರಾಕ್ಷಿ ದೊಡ್ಡದಾಯಿತೆಂದು ಹೇಳುವ ಹಾಗಿದೆ.

೧೯೦೯-೭ರ ತಾಫಾವಿರೋಧ ಕೊಂಚ ಕಾಲದಲ್ಲಿಯೇ ತನ್ನಷ್ಟಕ್ಕೆ ತಾನೇ ತಣ್ಣಗಾಯಿತು.

ಆ ಚಳವಳಿಯ ಮೂಲಕರ್ತರಲ್ಲೊಬ್ಬರಾದ ಜಡ್ಜಿ ಚಂದಾವರ್ಕರ್ ಮಹಾಶಯರು ತಾರಾನಾಯಕಿ ಎಂಬ ವಾರಾಂಗನೆಯ ವೃತ್ತಾಂತವನ್ನು ಮನೋಹರವಾದ ಶೈಲಿಯಲ್ಲಿ ಬರೆದಿದ್ದಾರೆ. ಚಂದಾವರ್ಕರ್ ಅವರ ಇಂಗ್ಲಿಷ್ ಶೈಲಿ ಸುಂದರವಾದದ್ದು. ಅವರು ಮಹಾ ಮೇಧಾವಿಗಳ ಪಂಕ್ತಿಯಲ್ಲಿ ಸೇರತಕ್ಕವರು. ಅವರು ಒಂದು ಬಾರಿ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು.

ಬೊಂಬಾಯಿಯಲ್ಲಿ ತಾರಾನಾಯಕಿಯ ಹೆಸರಿನಲ್ಲಿ ಬೀದಿಯೊಂದಿದೆಯಂತೆ. ಚಂದಾವರ್ಕರ್ ಅವರು ತಾರಾನಾಯಕಿಯ ಗುಣಾತಿಶಯವನ್ನೂ ಸೌಜನ್ಯವನ್ನೂ ಮುಕ್ತಕಂಠದಿಂದ ಹೊಗಳಿ ಬರೆದ ಲೇಖನವನ್ನು ನಾನು ಓದಿದ್ದೇನೆ. ಅದು ಇಂದಿಗೂ ಪಠನಯೋಗ್ಯವಾದ ಸಾಹಿತ್ಯವೆಂದು ನನಗನ್ನಿಸುತ್ತದೆ.

ನರ್ತಕಿಯರಲ್ಲಿ ದೈವಭಕ್ತಿಯೂ ಸಜ್ಜನಭಕ್ತಿಯೂ ಸೌಜನ್ಯ ಸದಾಚಾರಗಳೂ ಇದ್ದ ಸಂಗತಿಗಳು ನನಗೆ ಹತ್ತಾರು ತಿಳಿದಿವೆ. ಅವರ ಮನೆಗಳಲ್ಲಿ ಶ್ರೀರಾಮನವಮಿ,

ಗೋಕುಲಾಷ್ಟಮಿ, ಶಿವರಾತ್ರಿ, ಕಾರ್ತಿಕ ಸೋಮವಾರ-ಇಂಥ ಪವಿತ್ರ ದಿವಸಗಳಲ್ಲಿ ಪೂಜೆ ಪುರಸ್ಕಾರಗಳು ಯಥಾವಿಧಿಯಾಗಿ ನಡೆಯುತ್ತಿದ್ದವು. ಅವರು ಪಾನಕ ಪಣ್ಯಾರಗಳನ್ನು ಮಾಡಿಸಿ ಹಂಚಿಸುತ್ತಿದ್ದರು. ಸುಮಂಗಲಿಯರಿಗೂ ಬ್ರಾಹ್ಮಣರಿಗೂ ದಕ್ಷಿಣೆ ಸಲ್ಲಿಸುತ್ತಿದ್ದರು. ಆಶ್ರಯದಾತನು ಕಾಲಾಧೀನನಾದ ಬಳಿಕ ಆತನ ಆಶ್ರಿತಳು ವೈಧವ್ಯದೀಕ್ಷೆಯನ್ನು ತಾಳಿ ವ್ರತೋಪವಾಸಾದಿಗಳಲ್ಲಿ ಜೀವನ ಸಾಗಿಸಿದ ನಿದರ್ಶನಗಳೂ ಇವೆ.

ಆ ಬಾಳನ್ನು ನಡಸಿದವರಿಗೆ ದೇಹಜೀವನದ ವಿಷಯದಲ್ಲಿ ಜಿಹಾಸೆ ಬರುವುದೂ, ಭೋಗವಿಷಯದಲ್ಲಿ ವಿರಕ್ತಿ ಬರುವುದೂ, ಭಗವದ್ವಿಷಯದಲ್ಲಿ ಆಸಕ್ತಿ ಹೆಚ್ಚುವುದೂ, ಸ್ವಾಭಾವಿಕವೇ ಆಗಿದೆ.

ಭವಾನಿ, ತಾಯಿ

೧೯೦೬-೭ರ ಸುಮಾರಿನಲ್ಲಿ ಬೆಂಗಳೂರು ಪಟ್ಟಣದಲ್ಲಿ ಭವಾನಿ, ಕೊಯಮತ್ತೂರು ತಾಯಿ- ಎಂಬಿಬ್ಬರು ಗಾಯಕಿಯರ ಪ್ರಸಿದ್ಧಿ ತುಂಬಿತ್ತು. ಆಗ ಸರಕಾರದ ಸೆಕ್ರೆಟರಿಯಾಗಿದ್ದ (ಆಮೇಲೆ ಹೈಕೋರ್ಟಿನ ಚೀಫ್ ಜಡ್ಜಿಯಾದ) ಕೆ.ಎಸ್.ಚಂದ್ರಶೇಖರ ಅಯ್ಯರ್ ಅವರ ಮನೆಯಲ್ಲಿ ಭವಾನಿ, ತಾಯಿ-ಅವರ ಕಛೇರಿ ನಡೆಯಿತು. “ಇಂಥ ಪ್ರತಿಷ್ಠಾವಂತರು ವೇಶ್ಯೆಯರನ್ನು ಪ್ರೋತ್ಸಾಹಿಸಬಹುದೆ?” -ಈ ರೀತಿಯ ಟೀಕೆಗಳು ಪತ್ರಿಕೆಗಳಲ್ಲಿ ಬಂದವು. ಯಾವ ಟೀಕೆಗಳಿಂದಲೂ ಆ ಕಛೇರಿಗಳು ನಿಲ್ಲಲಿಲ್ಲ.

ಕೊಯಮತ್ತೂರು ತಾಯಿ, ಭವಾನಿ-ಇವರು ಬೆಂಗಳೂರಿನಲ್ಲಿ ಕಛೇರಿ ನಡಸುತ್ತಿದ್ದ ಕಾಲದಲ್ಲಿ ಯಾವ ರಸಿಕಸಮಾಜಕ್ಕೆ ಹೋದರೂ ಅಲ್ಲಿ ಅವರ ಪ್ರಶಂಸೆಯದೇ ಮಾತಾಗಿತ್ತು. ಅವರ ಗಾನಶೈಲಿ ಬೆಂಗಳೂರಿನ ಜನಕ್ಕೆ ಕೊಂಚ ಹೊಸ ರೀತಿಯದೆನಿಸಿತ್ತು. ಆ ಇಬ್ಬರಲ್ಲೊಬ್ಬರು-ಯಾರೆಂಬುದು ಈಗ ನನಗೆ ಮರೆತುಹೋಗಿದೆ-ಪ್ರಸಿದ್ಧವಾದ

ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ

ಎಂಬ ಕಾಂಭೋಜಿರಾಗದ ಕೀರ್ತನೆಯನ್ನು ಹಾಡುತ್ತಿದ್ದ ರೀತಿ ಇಲ್ಲಿಯವರಿಗೆ ಅಪೂರ್ವವೆನಿಸಿತು.

ಶ್ರೀ-ಸು-ಬ್ರ-ಹ್ಮ-ಣ್ಯಾ-ಯ

ಎಂಬುದರಲ್ಲಿಯೂ

ನ-ಮ-ಸ್ತೇ

ಎಂಬುದರಲ್ಲಿಯೂ ಅವರು ಅಕ್ಷರಕ್ಕೆ ನಡುವೆ ಗಮಕಪ್ರಯೋಗಗಳನ್ನು ಮಾಡುತ್ತಿದ್ದರು. ಅವರ ಶಾರೀರದಲ್ಲಿ ಸೊಗಸಾದ ಪಲುಕುಬಡಿ ಇದ್ದದ್ದರಿಂದ ಅವರ ಹಾಡಿಕೆ ಸೊಗಯಿಸುತ್ತಿತ್ತು. ಅವರ ಗಮಕಸ್ಥಾನಗಳನ್ನು ಕುರಿತು ಚರ್ಚೆಯೂ ನಡೆಯುತ್ತಿತ್ತು.

“ಈ ಪ್ರಯೋಗ ನಮ್ಮ ಗುರುಗಳು ಹೇಳಿದ್ದಲ್ಲ. ಅದನ್ನು ನಾವು ಅನುಸರಿಸತಕ್ಕದ್ದಲ್ಲ” -ಎಂದರು ಕೆಲವರು.

“ಪ್ರಯೋಗ ನಿಮಗೆ ಪಾಠವಿಲ್ಲದೆಹೋಗಿದ್ದರೆ ಅದರ ಸೊಗಸನ್ನು ಇಲ್ಲವೆನ್ನುವುದಕ್ಕಾದೀತೆ?” -ಎಂದರು ಇನ್ನು ಕೆಲವರು.

“ಗುರುಗಳು ಹೇಳಿಕೊಡದೆ ಇದ್ದದ್ದನ್ನು ನಾವು ಸೇರಿಸಿದರೆ ಗುರುದ್ರೋಹವಾಗುತ್ತದೆ- ಎಂದರು ಮತ್ತೆ ಕೆಲವರು.

“ನಿಮ್ಮ ಗುರುಗಳಿಗೆ ಕಲ್ಪನಾಸಾಮರ್ಥ್ಯವಿಲ್ಲದೆ ಹೋಗಿದ್ದರೆ ಬೇರೆಯವರು ಕಲ್ಪನೆ ಮಾಡಿದ್ದು ಸೊಗಸಾಗಿರುವ ಪಕ್ಷಕ್ಕೆ ಅದನ್ನು ಏಕೆ ಅಂಗೀಕರಿಸಬಾರದು? ಅಂಗೀಕರಿಸಿದ್ದರಿಂದ ನಿಮ್ಮ ಗುರುಗಳು ಮಾಡಿದ ಕೆಲಸವನ್ನು ನೀವು ಇನ್ನೂ ಬೆಳಸಿ ಮುಂದಕ್ಕೆ ತಂದ ಹಾಗಾಗುತ್ತದೆಯಲ್ಲವೆ?” -ಎಂದರು ಇನ್ನು ಕೆಲವರು.

ಹೀಗೆ ವಾದವಿವಾದಗಳು ಚಿಕ್ಕಪೇಟೆಯ ರಾಮಕೃಷ್ಣಪ್ಪನವರ ಫ್ಯಾಷನ್ ಸರಕಿನ ಅಂಗಡಿಯಲ್ಲಿಯೂ, ರಾಮಸ್ವಾಮಯ್ಯನವರ ಪುಸ್ತಕದ ಅಂಗಡಿಯಲ್ಲಿಯೂ, ಕಾಳಪ್ಪನವರ ವೀಳ್ಯದೆಲೆ ರಸಬಾಳೆ ಹಣ್ಣಿನ ಅಂಗಡಿಯಲ್ಲಿಯೂ ನಡೆಯುತ್ತಿತ್ತು. ಈಗ ಅಂಥ ರಸಿಕರು ಪೇಟೆಯಲ್ಲಿದ್ದರೆ ಅದು ನನಗೆ ಗೊತ್ತಿಲ್ಲ.

ಏವಂ ಚ ಕೊಯಮತ್ತೂರು ವಿದುಷಿಯರ ಪ್ರಭಾವ ಬೆಂಗಳೂರಿನ ಸಂಗೀತ ಪ್ರಪಂಚದ ಮೇಲೆ ಒಂದಿಷ್ಟು ಪರಿಣಾಮಕಾರಿಯಾಯಿತು.

ಪ್ರಾಯಶ್ಚಿತ್ತ

ಒಂದಾನೊಂದು ದಿನ ಬಸವನಗುಡಿಯಲ್ಲಿ ಶ್ರೀಕೃಷ್ಣರಾಜೇಂದ್ರ ರಸ್ತೆಯಲ್ಲಿ ಇರುವ ಒಂದು ಭಾರೀ ಮನೆಯಲ್ಲಿ ಕಛೇರಿ ಏರ್ಪಾಟಾಗಿತ್ತು. (ಆ ಮನೆ ಈಗಲೂ ಇದೆ-ಬಸವನ ಗುಡಿ ಯೂನಿಯನ್ ಅಂಡ್ ಸರ್ವಿಸ್ ಕ್ಲಬ್ಬಿನ ಎದುರುಗಡೆ- 'ಚಿದ್ವಿಲಾಸ'. ಈಗ ಅಲ್ಲಿ ಪೋಸ್ಟ್ ಆಫೀಸ್ ಇದೆ.) ಸಂಗೀತ ಕಛೇರಿ ಏರ್ಪಾಟಾಗಿದ್ದದ್ದು ಒಂದು ಭಾನುವಾರ ಸಂಜೆ. ಸುಮಾರು ನಾಲ್ಕು ಘಂಟೆ ಇರಬಹುದು. ಬಹುಮಂದಿ ದೊಡ್ಡಮನುಷ್ಯರು ಬಂದು ನೆರೆದಿದ್ದರು. ನಾನು ಆ ಮನೆಯ ಉತ್ತರದ ಕಡೆ ಇಳಿಜಾರಿನಲ್ಲಿ ಹುಲ್ಲಿನ ಮೇಲೆ ಸಂಗೀತ ಕೇಳಲು ಕುಳಿತಿದ್ದೆ. ಎರಡು ಮೂರು ನಿಮಿಷಗಳಾದ ಮೇಲೆ ಪಕ್ಕದ ಮನೆಯಿಂದ ಹೆಡ್ ಮಾಸ್ಟರ್ ಕೆ.ಎ.ಕೃಷ್ಣಸ್ವಾಮಿ ಅಯ್ಯರ್ [1] ಅವರು ಹೊರಟು ಬಂದರು. ನನ್ನನ್ನು ನೋಡಿ ಕೇಳಿದರು:

ಕೃ: "ಏನಯ್ಯಾ ಇಲ್ಲಿ ಕುಳಿತಿದ್ದೀ?"

ನಾನು: "ಸಂಗೀತಕ್ಕಾಗಿ."

ಕೃ: "ಒಳಗೆ ಬರಬಾರದೆ? ಇಲ್ಲಿ ಏನು ಕೇಳುವುದು?"

ನಾನು: "ನಾನು ನಾಟ್ಯವಿರೋಧಿ. ನಾನು ಅವರ ಮುಖವನ್ನು ನೋಡಬಾರದು. ವ್ರತ ತೊಟ್ಟಿದ್ದೇನೆ."

ಹೀಗೆ ಹೇಳಿ ನನ್ನ ಕೈಯಲ್ಲಿದ್ದ ವ್ರತದ ದಾರವನ್ನು ತೋರಿಸಿದೆ. ಅವರು ಗಟ್ಟಿಯಾಗಿ ನಕ್ಕು ರಟ್ಟೆ ಹಿಡಿದೆಳೆದು- "ವ್ರತವಂತೆ ವ್ರತ! ಏನು ಕಂಡಿದ್ದೀ ನೀನು, ಮುಖ ನೋಡುವುದಿಲ್ಲ ಎನ್ನುವುದಕ್ಕೆ? ಒಳ್ಳೆಯದಾಯಿತು. ನೀನು ಮುಖ ನೋಡಬೇಡ. ಕಣ್ಣು ಮುಚ್ಚಿ ಕುಳಿತುಕೊ" ಎಂದು ಹೇಳುತ್ತ ದರದರನೆ ಒಳಕ್ಕೆಳೆದುಕೊಂಡುಹೋದರು. ನನಗೆ ವ್ರತಭಂಗವೇನೋ ಆಯಿತು. ಆದರೆ ದುಃಖವಾಗಲಿಲ್ಲ. ಸಂತೋಷವೇ ಆಯಿತು.

ನಾಚಿಕೆಯೂ ಆದದ್ದುಂಟು. ಆದರೆ ಅದು ಬೇಗನೆ ಮರೆತುಹೋಯಿತು. ಈಗ ಅದನ್ನು ಜ್ಞಾಪಿಸಿಕೊಂಡರೆ ಆ ನೆವ ನನಗೆ ದೊರಕಿತಲ್ಲ!-ಎಂದು ಸಂತೋಷವೇ ಆಗಿದೆ. ತಪ್ಪು ವ್ರತ ಮಾಡಿದ್ದಕ್ಕೆ ಪ್ರಾಯಶ್ಚಿತ್ತವಾಯಿತು.

ಕಸಬಿನ ಮುಖ್ಯಭಾಗ

ನಾಯಕಸಾನಿಯರ ಜೀವನ ನಡೆಯುತ್ತಿದ್ದದ್ದು ಮುಖ್ಯವಾಗಿ ಅವರ ಗಾನಸೇವೆ, ನೃತ್ಯಸೇವೆಗಳಿಂದ. ಅವರು ಧನಿಕರಿಗೆ ಉಪಪತ್ನಿಯರಾಗಿ ಜೀವನ ಸಂಪಾದಿಸುತ್ತಿದ್ದರೆಂಬುದು ವಿಷಯ ತಿಳಿಯದವರ ಮಾತು-ಉತ್ಪ್ರೇಕ್ಷೆಯ ಮಾತು. ಉಪಪತ್ನಿಯನ್ನಿರಿಸಿಕೊಳ್ಳುವಷ್ಟು ದ್ರವ್ಯೋಪಪತ್ತಿಯುಳ್ಳ ಜನ ಹೇರಳವಾಗಿರಲಿಲ್ಲ. ಒಂದು ದೊಡ್ಡ ಊರಿನಲ್ಲಿ ಅಂಥವರು ಇಬ್ಬರು ಮೂವರಿದ್ದರೆ ಹೆಚ್ಚು. ಬಹುಮಂದಿ ನಟುವಿತಿಯರಿಗೆ ದೇವಸ್ಥಾನದಲ್ಲಿ ಅವರು ಮಾಡುವ ಸೇವೆಗಾಗಿ ಒಂದಿಷ್ಟು ಜಮೀನು ಇರುತ್ತಿತ್ತು. ಬಹುಮಂದಿ ನಟುವರು ವಿವಾಹಿತರಾಗಿಯೂ ಇರುತ್ತಿದ್ದರು. ಅವರು ಬೇಸಾಯವನ್ನೇ ತಮ್ಮ ಮುಖ್ಯ ಜೀವನವೃತ್ತಿಯನ್ನಾಗಿ ಆಶ್ರಯಿಸಿಕೊಂಡಿದ್ದವರು. ಇಂಥ ಮನೆತನದವರು ವಾರಕ್ಕೊಂದು ದಿನವೋ ಎರಡು ದಿನವೋ ಕ್ಲೃಪ್ತವಾದ ಕಾಲದಲ್ಲಿ ಕ್ಲೃಪ್ತವಾದಂತೆ ಗುಡಿಗೆ ಹೋಗಿ ಅಲ್ಲಿ ಸಾಯಂದೀಪಾರಾಧನೆಯ ಅಂಗವಾಗಿ ನರ್ತನ ಮಾಡಿ ಬರಬೇಕಾಗಿತ್ತು. ಅರ್ಚಕರು "ಸ್ವಾಮಿನಃ ಸ್ವಸ್ತಿ ಮಂತ್ರಾರ್ಥಾಃ ಸಫಲಾಃ ಸತ್ಯಾಃ ಸನ್ತ್ವಿತಿ ಭವಂತೋ ಮಹಾಂತಃ ಪ್ರಾರ್ಥಯನ್ತು" ಎಂದು ಸ್ವಸ್ತಿ ಹೇಳುವ ಸಂದರ್ಭದಲ್ಲಿ "ಸಂಗೀತಮವಧಾರಯ", "ನರ್ತನಮಧಾರಯ" -ಎಂದು ಹೇಳಿದಾಗ ಕೆಲವು ನಿಮಿಷಗಳ ಕಾಲ ನಟುವರ ಸೇವೆ. ಇದಕ್ಕಾಗಿ ಅವರಿಗೆ ಕೆಲವು ಜಮೀನು ಮಾನ್ಯವಾಗಿ ಬಂದಿತ್ತು. ಇದೇ ಅವರ ಕಸಬಿನ ಮುಖ್ಯಭಾಗ.

ಈ ವೃತ್ತಿಯು ಮೈಸೂರು ದೇಶದಲ್ಲಿ ದೇವದಾಸಿಯರ ಸೇವೆಯ ಪದ್ಧತಿಯನ್ನು ಸರಕಾರವು ನಿಲ್ಲಿಸುವವರೆಗೂ ನಡೆಯುತ್ತಿತ್ತು. ಆರ್ಕಾಟ್ ಶ್ರೀನಿವಾಸಾಚಾರ್ಯರು ದೇಶದಲ್ಲಿ ವ್ಯಭಿಚಾರವನ್ನು ನಿಲ್ಲಿಸುವ ಉದ್ದೇಶದ ಅಂಗವಾಗಿ ನಾಟ್ಯವೃತ್ತಿಯು ವ್ಯಭಿಚಾರಕ್ಕೆ ಆಶ್ರಯವೆಂಬ ತಪ್ಪು ತಿಳಿವಳಿಕೆಯಿಂದ ಪ್ರಾಚೀನಕಾಲದಿಂದ ಬಂದಿದ್ದ ನರ್ತನಸೇವೆಯ ಪದ್ಧತಿಯನ್ನು ನಿಲ್ಲಿಸಿದರು. ಅಲ್ಲಿಂದೀಚೆಗೆ ಆ ಕುಲವು ಕ್ಷೀಣದಶೆಗೆ ಇಳಿಯಿತು.

ವ್ಯಭಿಚಾರವೇನೋ ನಿಲ್ಲಲಿಲ್ಲ; ನಾಟ್ಯಕಲೆ ಬಡವಾಯಿತು. ವ್ಯಭಿಚಾರ ನಿರ್ಮೂಲವಾಗಿದ್ದರೆ ಅದು ನನಗೆ ಗೊತ್ತಿಲ್ಲದ ಸಂಗತಿ. ನಾಟ್ಯವಿದ್ಯೆಯು ಬಡವಾದುದಂತೂ ನಿಸ್ಸಂದೇಹವಾದ ಸಂಗತಿ.

ಈಚೆಗೆ ಮದರಾಸಿನಲ್ಲಿ ಅಡಿಯಾರ್ ಕಲಾಕ್ಷೇತ್ರದ ಶ್ರೀಮತಿ ರುಕ್ಮಿಣೀದೇವಿ ಮೊದಲಾದವರ ಪ್ರಯತ್ನಗಳಿಂದ ಭರತನಾಟ್ಯವೂ, ಕೇರಳದ ಕಥಕ್ಕಳಿ ನೃತ್ಯವೂ,

ಆಂಧ್ರದ ಕೂಚಿಪುಡಿ ನೃತ್ಯವೂ ಅಸ್ಸಾಂ ಕಡೆಯ ಮಣಿಪುರಿ ನೃತ್ಯವೂ ವೃತ್ತಪತ್ರಿಕೆಗಳಲ್ಲಿ ಪ್ರಶಸ್ತವಾಗುತ್ತಿವೆ. ಈ ನೃತ್ಯಪದ್ಧತಿಗಳು ಕಾಲಕ್ರಮದಲ್ಲಿ ಹೇಗೆ ಪರಿಣಾಮ ಹೊಂದಿಯಾವೋ ಹೇಳುವುದು ಕಷ್ಟ.

***

ನಾನು ಕೆಲವು ವರ್ಷಗಳ ಕೆಳಗೆ ಒಬ್ಬಾನೊಬ್ಬ ವೃದ್ಧ ನರ್ತಕಿಯನ್ನು ಕಂಡಾಗ ಕೇಳಿದೆ:

"ಅಮ್ಮ, ಒಳ್ಳೆಯ ತಾಫಾ ನೋಡಿ ಬಹುಕಾಲವಾಯಿತು. ಈಗ ಸಂಪ್ರದಾಯ ರೀತಿಯ ನರ್ತನ ಮಾಡುವವರು ಯಾರಾದರೂ ಇದ್ದಾರೆಯೆ? ಇದ್ದರೆ ತಿಳಿಸಿ. ನಾನು ಹಿಂದಿನ ಕಾಲದ ತಾಫಾ ಕಂಡವನು. ಈಗ ಅದನ್ನು ನೋಡುವ ಕುತೂಹಲ ಉಂಟು."

ಅದಕ್ಕೆ ಆಕೆಯು ಉತ್ತರವಾಗಿ ನಿಟ್ಟುಸಿರುಬಿಟ್ಟು ಕೊಂಚ ನಗುತ್ತ ಕೈ ಅಭಿನಯದಿಂದ ನಿರಾಶೆ ತೋರಿಸಿ ಹೇಳಿದಳು:

"ಸ್ವಾಮಿ, ಈಗ ಅದೆಲ್ಲ ಹೋಯಿತು. ಈಗ ಇರುವುದು ಆಕಾಶನರ್ತನವೊಂದೇ."

ಆಕೆ ಉಪಯೋಗಿಸಿದ ಮಾತಿಗೆ ಏನೇನೋ ಅರ್ಥಗಳು ಸಾಧ್ಯ. ನಾನು ಅದರ ಗೋಜಿಗೆ ಹೋಗದೆ ಆ ಪ್ರಸ್ತಾಪವನ್ನು ಅಲ್ಲಿಗೇ ಬಿಟ್ಟೆ.

ಈಗ ತಯಾರಾಗುತ್ತಿರುವ ನರ್ತಕ ನರ್ತಕಿಯರು ಹೊಸ ರೀತಿಯವರು-ಪರಂಗಿಯವರ ಬ್ಯಾಲೆ ಮೊದಲಾದವನ್ನು ಅನುಕರಿಸುತ್ತಾರಂತೆ. ಮಾವಿನ ಹಣ್ಣಿನ ಕಾಲದಲ್ಲಿ ಬಾದಾಮಿ ರಸಪೂರಿ ಹಣ್ಣುಗಳನ್ನು ಹೀರಿದ ಬಾಯಿಗೆ ನಾಟುಹುಳಿಗಾಯಿಯ ಚಟ್ನಿ, ದಾಡೀಪಸಂದಿನ ತೊಕ್ಕು ಹೇಗಿರಬಹುದು?

೨

ಕೆಲವರು ಗಣ್ಯ ನರ್ತಕಿಯರು

ಮುಳಬಾಗಲಿನ ಗುಣಿಗಂಟಿಪಾಳ್ಯದ ಸೀತಕ್ಕ ಎಂಬಾಕೆ ವೃದ್ಧವೇಶ್ಯೆ. ಆಕೆ ಒಬ್ಬ ಸಾಕುಮಗಳನ್ನು ಮಾಡಿಕೊಂಡಿದ್ದಳು. ಈಕೆಯ ಹೆಸರು ರತ್ನಾಸಾನಿ ಎಂದು ನನಗೆ ಜ್ಞಾಪಕ. ಆ ಕಾಲದಲ್ಲಿ ನಮ್ಮ ಊರಿನಲ್ಲಿದ್ದ ಭರತಾಚಾರ್ಯರು ಪನಸಕಾಯಲ ವೆಂಕಟಸುಬ್ಬಾಭಟ್ಟರೆಂಬ ವೈದಿಕರು. ನಾನು ಇವರನ್ನು ಕಂಡಾಗ ನನ್ನ ವಯಸ್ಸು ಏಳೆಂಟಿರಬಹುದು. ಅವರದು ಎಪ್ಪತ್ತರ ಸುಮಾರು. ಅವರನ್ನು ಊರಿನ ರಸಿಕ ಗೋಷ್ಠಿಯಲ್ಲಿ ಗೌರವಿಸುತ್ತಿದ್ದರು. ವೆಂಕಟನಾರಣಭಟ್ಟರೇ ಮೊದಲಾದ ರಸಿಕರು ಒಂದು ಸಾರಿ ವೆಂಕಟಸುಬ್ಬಾಭಟ್ಟರನ್ನು ಕೊಂಚ ಅಭಿನಯ ಮಾಡಬೇಕೆಂದು ಕೋರಿದರು. ವೆಂಕಟಸುಬ್ಬಾಭಟ್ಟರು ಉತ್ತರ ಹೇಳಿದ್ದು ನನಗೆ ಸುಮಾರಾಗಿ ಜ್ಞಾಪಕವಿದೆ: "ಏನಯ್ಯಾ- ನನಗೆ ಎಪ್ಪತ್ತಾಯಿತು. ಗಡ್ಡಮೀಸೆ ನರೆಯಿತು. ಮುಖ ಮೈ ಜಬ್ಬಲು ಬಿತ್ತು. ಈಗ ಏನು ಕೇಳುತ್ತೀರಿ ನನ್ನ ಅಭಿನಯವನ್ನ? ಮೈಯಲ್ಲಿ ಲವಲವಿಕೆ ಇಲ್ಲದಾಗ ಅಭಿನಯ ಹೋಗಿ ಅಣಕವಾಗುತ್ತದೆ. ಈಗ ಏನಿದ್ದರೂ ಈ...ಯರನ್ನು ಕಟ್ಟಿಕೊಂಡು ಏಗಬೇಕಾಗಿದೆ. ಅವರಿಗೆ ಬರುವುದಿಲ್ಲ, ನನಗೆ ಮರೆಯುವುದಿಲ್ಲ.

> ನೀಕು ಪಾಠಂ ಚೆಪ್ಪಿ ನಾಕು ಮಾನಂಪೋಯ ।
> ನೀಕು ವಚ್ಚೇಲೇದು ನಾಕು ಮರ್ಚೇಲೇದು ॥"

ಇದನ್ನು ಕಮಾಚ್ ರಾಗದ ಹಾಡಿನ ಮಧ್ಯೆ ಸೇರಿಸಿ ಲೇವಡಿ ಮಾಡುತ್ತಿದ್ದರು.

ಶಿಕ್ಷಣ ವಿಧಾನ

ಅವರು ಪಾಠ ಹೇಳುತ್ತಿದ್ದ ಮನೆ ನಾನು ಸ್ಕೂಲಿಗೆ ಹೋಗುತ್ತಿದ್ದ ದಾರಿಯಲ್ಲಿತ್ತು. ಆ ಮನೆಯ ನಡುಮನೆಯಲ್ಲಿ ಉತ್ತರದ ಗೋಡೆಯ ಪಕ್ಕದಲ್ಲೂ ದಕ್ಷಿಣದ ಗೋಡೆಯಲ್ಲೂ ದೃಢವಾಗಿ ಹೂಳಿದ ಗೂಟಗಳಿದ್ದವು. ಆ ಗೂಟಗಳಿಂದ ಹಗ್ಗಗಳನ್ನು ಬಿಗಿದು ನರ್ತನವಿದ್ಯಾರ್ಥಿಗಳ ಕಾಲಿಗೆ ಕಟ್ಟಿರುತ್ತಿದ್ದರು-ಕುದುರೆಗೆ ಅಗಾಡಿ ಪಿಚಾಡಿ ಕಟ್ಟಿದಂತೆ. ಈ ಕಟ್ಟುಗಳ ಉದ್ದೇಶವೇನೆಂದರೆ, ವಿದ್ಯಾರ್ಥಿನಿ ಒಂದು ಗೊತ್ತಾದ ಗೆರೆಗಿಂತ ಮುಂದಕ್ಕೆ

ಹೋಗಬಾರದು; ಇನ್ನೊಂದು ಗೊತ್ತಾದ ಗೆರೆಗಿಂತ ಹಿಂದಕ್ಕೂ ಹೋಗಬಾರದು. ಹೀಗೆ ನೃತ್ಯರಂಗದ ಮೇರೆಗಳನ್ನು ನಿರ್ಬಂಧಪಡಿಸುವುದಕ್ಕಾಗಿ ಆ ಹಗ್ಗದ ವ್ಯವಸ್ಥೆ.

ಹಾಗೆ ಗೊತ್ತಾದ ನೃತ್ಯಪ್ರದೇಶದಲ್ಲಿಯಾದರೂ ತಪ್ಪು ಹೆಜ್ಜೆ ಬೀಳಬಹುದಲ್ಲ? ಆಗ ಹಿಮ್ಮಡಿಯ ಮೇಲೆ ಪೆಟ್ಟು.

ತಾಳಕ್ಕಾಗಿ ಒಂದು ಮರದ ಹಲಗೆಯನ್ನೂ ಅದರ ಮೇಲೆ ತಟ್ಟುವುದಕ್ಕಾಗಿ ಒಂದು ಮೋಟು ಕಟ್ಟಿಗೆಯನ್ನೂ ವೆಂಕಟಸುಬ್ಬಾಭಟ್ಟರು ಇಟ್ಟುಕೊಂಡಿರುತ್ತಿದ್ದರು. ಅವರು ತಟ್ಟುಕಟ್ಟಿಗೆಯಿಂದ ತಾಳಹಾಕಿ ನರ್ತಕಿಯ ಪಾದವಿನ್ಯಾಸಕ್ಕೆ ಆಜ್ಞೆ ಸೂಚಿಸುತ್ತಿದ್ದರು, ಹೀಗೆ:

> ಥೈ ಥಕ್ಕ ಥೋಮ್-ಥಾ ಥಕ್ಕ ಥೋಮ್ ।
> ತದಿಗಿಣ ತದಿಗಿಣ ತೋಮ್-ಥಾ ಥಾ ಥಕ್ಕಿಟ ಥೋಮ್ ॥

ಹೀಗೆ ಶೊಲ್ಲುಕಟ್ಟುಗಳನ್ನು ಹೇಳುತ್ತ, ನರ್ತಕಿ ಹೆಜ್ಜೆ ತಪ್ಪಿದರೆ ಆಕೆಯ ಹಿಮ್ಮಡಿಯ ಮೇಲೆ ಪೆಟ್ಟು ಕೊಡುತ್ತ ತಿದ್ದುವರು. ಒಂದೊಂದು ಸಾರಿ ಕೋಪ ಬಂದಾಗ- “ತಪ್ಪಿತಿವಾ ವೆರ್ರಿ...” ಎಂದು ಬೈದದ್ದೂ ಉಂಟು. ಅವರು ಬೈದರೆ, ಕಟ್ಟಿಗೆಯಿಂದ ಕುಟ್ಟಿದರೆ, ಶಿಷ್ಯೆಯರು ನಗುತ್ತಿದ್ದದ್ದೂ ಉಂಟು.

ನರ್ತನವಿದ್ಯೆಯಲ್ಲಿ ಇದೆಲ್ಲ ಮೊದಮೊದಲಿನ ವಿಧಿಗಳು. ಅಭಿನಯ ಇದಕ್ಕಿಂತ ಮೇಲ್ಮಟ್ಟದ್ದು.

ರತ್ನಾಸಾನಿ

ವೆಂಕಟಸುಬ್ಬಾಭಟ್ಟರವರಲ್ಲಿ ತಯಾರಾಗಿದ್ದ ನರ್ತಕಿ ಮೇಲೆ ಹೇಳಿದ ರತ್ನಾಸಾನಿ. ಆಕೆ ಚೆನ್ನಾಗಿ ವಿದ್ಯೆ ಕಲಿತಿದ್ದಳೆಂದು ಊರಿನ ರಸಿಕರು ಹೇಳಿಕೊಳ್ಳುತ್ತಿದ್ದರು. ಆಕೆಯ ಗೆಜ್ಜೆ ಪೂಜೆ ನನ್ನ ಕುಲಗುರುಗಳಾದ ವೇದಮೂರ್ತಿ ವೆಂಕಟರಾಮಭಟ್ಟರವರ ಮನೆಯಲ್ಲಿ ನಡೆಯಿತು. ಅವರದು ನಮ್ಮ ಮನೆಯ ಎದುರು ಮನೆ. ಅಲ್ಲಿ ಪೂಜೆಯಾದಮೇಲೆ ಆ ಸಾಯಂಕಾಲ ಶ್ರೀಮದಾಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀಕೋದಂಡರಾಮ ಸನ್ನಿಧಿಯಲ್ಲಿ ನರ್ತನವಾಯಿತು. ಅದೇ ರಾತ್ರಿಯೋ ಅಥವಾ ಅಲ್ಲಿಂದ ಮೂರು ನಾಲ್ಕು ದಿವಸ ಕಳೆದ ಮೇಲೆ ಒಂದು ರಾತ್ರಿಯೋ ಶ್ರೀರಾಮದೇವರ ಉತ್ಸವ ನಡೆಯಿತು. ಮೆರವಣಿಗೆ ನಮ್ಮ ಮನೆಯಿದ್ದ ಬೀದಿಯಲ್ಲಿ ಬರುವುದು ವಾಡಿಕೆ. ನನ್ನ ತಾತಂದಿರು ಧರ್ಮದರ್ಶಿಯಾಗಿದ್ದ ಕಾರಣದಿಂದಲೋ ಅಥವಾ ವೆಂಕಟರಾಮಭಟ್ಟರು ಗೆಜ್ಜೆಪೂಜೆ ಮಾಡಿಸಿದ ಗುರುವೆಂಬ ಕಾರಣದಿಂದಲೋ ಆ ಮೆರವಣಿಗೆ ನಮ್ಮ ಮನೆಯ ಮುಂದೆ ಹದಿನೈದಿಪ್ಪತ್ತು ನಿಮಿಷ ನಿಂತು, ರತ್ನಾಸಾನಿಯ ನೃತ್ಯಾಭಿನಯಗಳನ್ನು ನೋಡಲು ನನಗೆ ಅವಕಾಶವಾಯಿತು. ಆಗ ಹಾಡುತ್ತಿದ್ದವರು ಅದೇ ಜಾತಿಯ ಕೆಲವರು ಹೆಂಗಸರು. ಪಿಟೀಲು ನುಡಿಸುತ್ತಿದ್ದವರು ನಟುವ ಮಾದಯ್ಯನವರು. ಮದ್ದಳೆ ನುಡಿಸುತ್ತಿದ್ದವರು ಮೇಲೆ ಹೇಳಿದ ಸೀತಕ್ಕನ ತಮ್ಮ ನಟುವ ಸೀತಾರಾಮಯ್ಯನವರು. ಆಗ ಹಾಡುತ್ತಿದ್ದ ಹಾಡು ಕಮಾಚ್ ರಾಗದ್ದು:

ಸಾಂಬಶಿವಾ-ಯೆನವೇ
ರಜತಾಗಿರಿ-ಸಾಂಬಶಿವಾ ಯೆನವೇ ।
ಪರಮದಯಾ-ಕರುಡನು ಚೂ
ಮೊರಲಿಡುತೂ-ನಿರತಮುನಾ
ಪರಾತ್ಪರಾ-ಶುಭಾಕರಾ
ಗಿರೀಶ ಶಂ-ಕರಾ ಯೆನಿ ॥

ಇದನ್ನು ರತ್ನಾಸಾನಿ ಅಭಿನಯಿಸುತ್ತಿದ್ದಳು. ಆಗ ಆಕೆ ಮಾಡಿದ ಬಾಹುವಿನ್ಯಾಸವೂ ಹಸ್ತಮುದ್ರಿಕೆಯೂ ನೋಡಿದವರ ಮನಸ್ಸಿನಲ್ಲಿ ಅನುಭವಕಾರಕವಾಯತು. ಅಲ್ಲಿ ಮುಖ್ಯವಾದದ್ದು ಅವಯವವಲ್ಲ, ಅಭಿನಯ: ಬಾಹುವಿನ್ಯಾಸದ ರೇಖಾಸೌಂದರ್ಯ.

***

ನಮ್ಮ ಊರಿನಲ್ಲಿ ಗಣ್ಯರಾಗಿದ್ದ ನರ್ತಕಿಯರು ಅನೇಕರಿದ್ದರು:

1. ಬೈರಕೂರು ವೆಂಕಟಲಕ್ಷ್ಮಾಸಾನಿ.
2. ಜೌಗುಪಾಳ್ಯದ ವೆಂಕಟಾಸಾನಿ, ಮಗಳು ಕಮಲಾಸಾನಿ.
3. ಗೌರಕ್ಕ, ಪದ್ಮಾವತಿ-ಸಹೋದರಿಯರು.
4. ತುಳಸಾಸಾನಿ.
5. ನಟುವ ಅಪ್ಪಾಜಯ್ಯನ ಮಕ್ಕಳು.

ವೆಂಕಟಲಕ್ಷ್ಮಾಸಾನಿ

ಇವರಲ್ಲಿ ಬೈರಕೂರು ವೆಂಕಟಲಕ್ಷ್ಮಮ್ಮನ ನರ್ತನ ಅಭಿನಯಗಳು ಪ್ರಸಿದ್ಧವಾದವು. ಆಕೆಗೆ ಸಂಗೀತ ಭರತನಾಟ್ಯಗಳ ಜ್ಞಾನ ಮಾತ್ರವಲ್ಲದೆ ಕೊಂಚ ಸಾಹಿತ್ಯಜ್ಞಾನವೂ ಇತ್ತು. ಜಯದೇವನ ಅಷ್ಟಪದಿಗಳು, ಕೃಷ್ಣಕರ್ಣಾಮೃತ-ಇವನ್ನು ಹಾಡಿ ಅಭಿನಯಿಸುತ್ತಿದ್ದಳು. ಆದದ್ದರಿಂದ ಮೇಲ್ಮಟ್ಟದ ರಸಿಕರು ಆಕೆಯ ಮನೆಯಲ್ಲಿ ಸೇರುತ್ತಿದ್ದರು-ಇಸ್ಪೀಟು ಹರಟೆಗಳಿಗಾಗಿ ಅವರಲ್ಲಿ ಮುಖ್ಯರು ವೆಂಕಟನಾರಣಭಟ್ಟರು, ಪುರೋಹಿತ ರಾಮಚಂದ್ರಾಚಾರ್ಯರು, ತಬಲದ ಮುನಿಸ್ವಾಮಾಚಾರ್ಯರು, ಅರ್ಚಕ ಶ್ರೀನಿವಾಸಾಚಾರ್ಯರು ಇತ್ಯಾದಿ. ನಮ್ಮ ತಂದೆಯೂ ಹೋಗುತ್ತಿದ್ದದ್ದುಂಟು.

ಆಕೆಯನ್ನು ಯಾರೂ ಹೀನಾಯ ಮಾಡಿ, ಕಂಡವರಲ್ಲ. ಆಕೆಯ ಅಣ್ಣ ನಾರಾಯಣಸ್ವಾಮಪ್ಪ ಎಂಬಾತ ಸಂಗೀತಶಾಸ್ತ್ರವನ್ನು ಬಲ್ಲವ. ಆತ ಭಾನು ಭಾನುವಾರವೂ ಸೂರ್ಯ ನಮಸ್ಕಾರ ಮಾಡುತ್ತಿದ್ದದ್ದನ್ನು ನಾನು ಕಣ್ಣಾರ ಕಂಡಿದ್ದೇನೆ. ಸ್ನಾನ ಮಾಡಿ, ನಾಮಧಾರಣ ಮಾಡಿ, ಕಳಶವಿಟ್ಟು ಪೂಜೆಮಾಡಿ, ಅದಕ್ಕೆ ಹನ್ನೆರಡು ಸಾರಿ ಪ್ರದಕ್ಷಿಣೆಮಾಡಿ ಅನಂತರ ಕಳಶದ ತೀರ್ಥವನ್ನು ಸೇವಿಸಿ ಬೇರೆ ಕೆಲಸಕ್ಕೆ ಬರುತ್ತಿದ್ದ. ಊರಿನ ಗೃಹಸ್ಥರೆಲ್ಲ ಎಲ್ಲ ಉತ್ಸವ ಸಂದರ್ಭಗಳಲ್ಲಿಯೂ ವೆಂಕಟಲಕ್ಷ್ಮಾಸಾನಿಯನ್ನು ಅರಿಶಿನ ಕುಂಕುಮಕ್ಕೆ ಕರೆಯುತ್ತಿದ್ದದ್ದುಂಟು. ನಮ್ಮ ಮನೆಯಲ್ಲಿಯೂ, ನಮ್ಮ ಗುರುಗಳ ಮನೆಯಲ್ಲಿಯೂ ಆಕೆಯನ್ನು ನಮ್ಮ ಮನೆ ಹೆಂಗಸರಂತೆ ಕಾಣುತ್ತಿದ್ದರು.

ನನ್ನ ಬಾಲ್ಯದಲ್ಲಿ ತಿರುಪತಿ ದೇವಾಲಯಕ್ಕೆ ಸಲ್ಲಬೇಕಾದ್ದನ್ನು ಸಲ್ಲಿಸುವುದಕ್ಕೆ ಮುಂಚೆ ವೆಂಕಟಲಕ್ಷ್ಮಮ್ಮ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮುಂದಲೆಗೆ ಮೊಗ್ಗಿನ ಕುಲಾವಿ ಹೊಲಿದು ಹೆರಳು ಹಾಕಿ ಮಲ್ಲಿಗೆ ಜಡೆ ಹಾಕುತ್ತಿದ್ದಳು. ಅಲ್ಲದೆ ನಾನು ಮನೆಯಲ್ಲಿದ್ದರೆ ತಾನು ಮಾಡಿದ ಹೂವಿನ ಸಿಂಗಾರ ನಲುಗಿ ಹೋಗುತ್ತದೆಂದು ಹೇಳಿ ರಾತ್ರಿ ನನ್ನ ಊಟವಾದ ಮೇಲೆ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿರಿಸಿಕೊಳ್ಳುತ್ತಿದ್ದಳು. ಮಾರನೆಯ ಬೆಳಗ್ಗೆ ಪೇಟೆಪೇಟೆಯಲ್ಲಿಯೂ ನನ್ನ ಮೆರವಣಿಗೆ! ಆಕೆ ನನ್ನೊಡನೆ ಬಂದು ತಾನು ಮಾಡಿದ್ದ ಸಿಂಗಾರವನ್ನು ಹೆಮ್ಮೆಯಿಂದ ತೋರಿಸುತ್ತಿದ್ದಳು.

ವೆಂಕಟಲಕ್ಷ್ಮಮ್ಮನು 'ಗರಿಮಾಪಣತಿ' ಎಂಬ ವರ್ಣವನ್ನು ಹಾಡಿ ಅಭಿನಯಿಸುತ್ತಿದ್ದಳು. ಅಲ್ಲದೆ ಅನೇಕ ಕನ್ನಡ ಜಾವಳಿಗಳನ್ನು ಹಾಡಿ ಅಭಿನಯಿಸಿದ್ದನ್ನು ನಾನು ನೋಡಿದ್ದೇನೆ:

ಕಾನಡಾ ರಾಗದ 'ಕರೆಯೇ ಆತನ ನೀನು' ಎಂಬ ಜಾವಳಿ ಅತ್ಯಂತ ಮೋಹಕವಾಗಿರುತ್ತಿತ್ತು.

ಕರೆಯೇ ಆತನ ನೀನು ।
ಕರೆಯೇ ಆತನನೀಗ ॥ ಪಲ್ಲವಿ ॥
ಕರೆಯೇ ಆತನನೀಗ ।
ಸರಸ ಲೀಲೆಗೆ ಬೇಗ ॥
ಹರುಷದಿ ಬರನೇಕೆ ।
ಮರೆತನೋ ಅವನೆನ್ನ ॥ ಕರೆಯೇ . . .

ಇಂಥ ಹಾಡುಗಳಲ್ಲಿ ಮಾತುಗಳು ಬಳಕೆಯವು. ಸ್ವಾರಸ್ಯವಿರುವುದು ಮಾತಿಗೂ ಮಾತಿಗೂ ನಡುವೆ ಇರುಕಿಸುವ ಕೊರಲ ಕೊಂಕುಗಳಲ್ಲಿ, ಕುಲುಕುಗಳಲ್ಲಿ, ಕಣ್ಣಸನ್ನೆಗಳಲ್ಲಿ, ಕೈಯ ಮುದ್ರಿಕೆಗಳಲ್ಲಿ. ಈ ಅವಾಂತರ ಸಂಗತಿಗಳಿಂದ ಮಾತುಗಳಿಗೆ ಭಾವಪುಷ್ಟಿ ಬಂದು, ಹಾಡು ಕೃತಕೃತ್ಯವಾಗುತ್ತದೆ.

ಆ ಕನ್ನಡ ಜಾವಳಿಗಳು ಈಗ ಎಲ್ಲಿ ಹೋದವೋ ತಿಳಿಯದು.

ವೆಂಕಟಲಕ್ಷ್ಮಮ್ಮನಿಗೆ ಸ್ವಂತ ಮನೆ ಜಮೀನು ಎಲ್ಲ ಇದ್ದವು. ಒಳ್ಳೆಯ ರೂಪ, ಕಳೆ ಕಳೆಯಾದ ಮುಖ. ಗಂಭೀರವೂ, ದೊಡ್ಡಮನುಷ್ಯತನವೂ ಆಕೆಯಲ್ಲಿ ಸ್ವಾಭಾವಿಕವಾಗಿದ್ದುವು.

ಒಂದು ದಿನ ಯಾವುದೋ ಸಂದರ್ಭದಲ್ಲಿ ಆಕೆ ಇಷ್ಟಮಿತ್ರರ ನಡುವೆ ಒಂದು ಅಷ್ಟಪದಿಯನ್ನು ಅಭಿನಯಿಸಿದ್ದು ನನಗೆ ಜ್ಞಾಪಕವಿದೆ. ಅದೇ ಅಷ್ಟಪದಿಯನ್ನು ನಾನು ಬಹುವರ್ಷಗಳಾದ ಮೇಲೆ ಬೆಂಗಳೂರು ನಾಗರತ್ನಮ್ಮನವರು ಅಭಿನಯಿಸಿದ್ದನ್ನು ಕಂಡೆ. ಆ ಅಷ್ಟಪದಿ ಹೀಗೆ:

ಯಾಹಿ ಮಾಧವ-ಯಾಹಿ ಕೇಶವ ।
ಮಾ ವದ ಕೈತವವಾದಮ್ ॥

ಇದನ್ನು ವೆಂಕಟಲಕ್ಷ್ಮಮ್ಮ ಯಾವ ರಾಗದಲ್ಲಿ ಹಾಡಿದ್ದಳೋ ನನಗೆ ಆಗ ತಿಳಿಯುವಷ್ಟು ಪ್ರಜ್ಞೆ ಇರಲಿಲ್ಲ. ನಾಗರತ್ನಮ್ಮನವರು ಹಾಡಿದ್ದು ಮೋಹನರಾಗದಲ್ಲಿ. ಅದರಲ್ಲಿ ವಿಶೇಷವಿರುವುದು ಮುಖ್ಯವಾಗಿ ರಾಗದಲ್ಲಲ್ಲ; ಒಂದೇ ಪದವನ್ನು ವಿವಿಧಭಾವಗಳಿಗೆ ಆಳವಡಿಸಿಕೊಂಡದ್ದರಲ್ಲಿ "ಯಾಹಿ" ಎಂದರೆ "ಹೋಗು" ಎಂದರ್ಥ. ರಾಧೆಯು

ಕೃಷ್ಣನನ್ನು “ಹೋಗು” ಎನ್ನುತ್ತಾಳೆ. ಇದರ ಭಾವವೇನು? ದೂರ ಕಳಿಸಬೇಕು ಎಂಬುದೆ? ಹತ್ತಿರ ಬಾ ಎನ್ನುವುದೆ? ಬೇಸರವೆ? ಆಕ್ಷೇಪಣೆಯೆ? ನಿರಾಶೆಯೆ? ಪ್ರೇಯಸಿಯು ತನ್ನ ಪ್ರಿಯನನ್ನು ಕುರಿತು “ಹೋಗು” ಎಂಬ ಮಾತನ್ನು ಎಷ್ಟೋ ಅರ್ಥಗಳಲ್ಲಿ ಬಳಸಬಲ್ಲಳೆಂಬುದು ಅನುಭವರಸಿಕರಿಗೆ ತಿಳಿದಿರುವ ವಿಷಯ.

1. ಹೋಗು = ದೂರ ಹೋಗು, ಹತ್ತಿರವಿರಬೇಡ.
2. ಹೋಗು = ಹೋಗಪ್ಪ, ಬೇಸರವಾಗಿದೆ.
3. ಹೋಗು = ಹೋಗಪ್ಪ, ನೀ ಕೆಟ್ಟವನು.
4. ಹೋಗು = ಹೋಗಬೇಡ.

ಒಂದೇ ಮಾತಿನಿಂದ ಈ ಪರಸ್ಪರ ವ್ಯತಿರಿಕ್ತಗಳಾದ ಭಾವಗಳನ್ನು ಮುಖಾಭಿನಯಗಳಿಂದ ವ್ಯಕ್ತಪಡಿಸುವುದು ನೈಪುಣಿ. ಮುಖಚೇಷ್ಟೆಯ ಜೊತೆಗೆ ಮೂಲುಗುವುದು ಮೊದಲಾದ ಧ್ವನಿಚೇಷ್ಟಿತಗಳೂ ಪೋಷಕಗಳಾಗುತ್ತವೆ. ಹಾಗೆ ಭಾವೋದ್ದೀಪನ, ರಸಪುಷ್ಟಿ. ಈ ಕಾರಣದಿಂದ ಹೃದಯಶಿಕ್ಷಣದ ಸಾಧನಗಳಲ್ಲಿ ಮುಖಭಂಗಿ ಧ್ವನಿಭಂಗಿಗಳಿಗೆ ಈ ಒಂದು ಪ್ರಮುಖಸ್ಥಾನವುಂಟಾಗಿದೆ. ಧ್ವನಿಚೇಷ್ಟಿತದ ರೂಪಾಂತರಗಳನ್ನೇ ಸಾಹಿತ್ಯದಲ್ಲಿ ವಕ್ರೋಕ್ತಿ ಮೊದಲಾದ ಹೆಸರುಗಳಿಂದ ಕರೆಯುವುದು. ಶೃಂಗಾರ ಕ್ಷೇತ್ರದಲ್ಲಿ ಹೃದಯದ ಪ್ರಸುಪ್ತಭಾವಗಳನ್ನು ಎಬ್ಬಿಸಿ ವಿಕಾಸಕ್ಕೆ ತರುವುದು ನರ್ತನಾಭಿನಯದ ಮುಖ್ಯೋದ್ದೇಶ.

ಈ ಉಪಕರಣಗಳಿಲ್ಲದೆಯೇ ಭಾವೋದ್ರೇಕವಾಗುತ್ತದಲ್ಲ?-ಎಂದು ಕೆಲವರು ವಾದಿಸಿಯಾರು. ಕೇಸರಿ ಪಚ್ಚಕರ್ಪೂರವಿಲ್ಲದೆಯೇ ಹಸಿವಾಗುತ್ತದೆ. ಆದರೆ ರಸಿಕ ಭೋಜನಕ್ಕೆ ಪರಿಮಳ ಬೇಕು. ಗಬಗಬನೆ ತುರುಕುವುದು ರಸಿಕ ಭೋಜನವಲ್ಲ. ರಸಿಕತೆಯ ವಿಷಯ ಬೇರೆ.

ನಾನು ಪ್ರಸ್ತಾವಿಸಿರುವ ನಾಯಕಸಾನಿಯರಲ್ಲಿ ಎಲ್ಲರೂ ಸಂಗೀತ ನರ್ತನಶಾಸ್ತ್ರಗಳ ಪರಿಚಯವನ್ನು ಆಷ್ಟಿಷ್ಟು ಸಂಪಾದಿಸಿದ್ದವರೇ. ‘ಅಪ್ಪಾಜಿಯ ಮಕ್ಕಳು’ ಎಂಬವರ ತಾಫೆ ಬಹುಜನಕ್ಕೆ ಪ್ರಿಯವಾಗಿತ್ತು. ಅಪ್ಪಾಜಯ್ಯನ ಮಕ್ಕಳು ಮೂರು ನಾಲ್ಕು ಮಂದಿ ಎಂದು ಜ್ಞಾಪಕ. ಅವರೆಲ್ಲರೂ ಸೊಗಸಾಗಿ ನರ್ತನ ಮಾಡುತ್ತಿದ್ದರು; ಸುಂದರಿಯರು. ಒಬ್ಬಾಕೆ ಕೊಂಚ ಸ್ಥೂಲ. ಅಪ್ಪಾಜಯ್ಯನಿಗೆ ಸ್ವಂತ ಮನೆ, ಗದ್ದೆ, ಹೊಲ ಎಲ್ಲ ಇದ್ದವು.

ಗೌರಿ, ಪದ್ಮ-ಇವರುಗಳ ಹಾಡುಗಾರಿಕೆ ಸೊಗಸು. ಪದ್ಮ ಸ್ವಲ್ಪ ಮಸುಕು ಬಣ್ಣ. ಅವಳ ಶಾರೀರ ಬೆಡಗುಗೊಳಿಸುವಂಥದು.

ತುಳಸಾಸಾನಿ

ನಾನು ಇದುವರೆಗೆ ನೋಡಿರುವ ಸ್ತ್ರೀವಿಗ್ರಹಗಳಲ್ಲಿ ತುಳಸಾಸಾನಿಯ ರೂಪವನ್ನು ಧ್ಯಾನಿಸಿದರೆ ಆಗುವ ಆಪ್ಯಾಯನ ಇನ್ನಾವುದರಿಂದಲೂ ಆಗಲಾರದೆಂದು ಹೇಳಿಯೇನು. ಅದು ಸೌಮ್ಯವೂ ಶಾಂತಿಕರವೂ ಆದ ಸೌಂದರ್ಯ. ಸೌಂದರ್ಯದಲ್ಲಿ ನಾನಾ ಪ್ರಕಾರಗಳುಂಟು. ಕೆಲವು ಮನಸ್ಸನ್ನು ಕೆರಳಿಸುತ್ತವೆ. ಕೆಲವು ಆವೇಶ ತರುತ್ತವೆ. ಕೆಲವು ಹೆಚ್ಚಿನ ವಿಕಾರವನ್ನು ತರುತ್ತವೆ; ಇನ್ನು ಕೆಲವು ಮನಸ್ಸಿಗೆ ತಲ್ಲಣವುಂಟುಮಾಡದೆ ತಂಪನ್ನುಂಟು ಮಾಡುತ್ತವೆ-ಕಲಕಿದ ಮನಸ್ಸು ಶಾಂತವಾಗುವಂತೆ ಮಾಡುತ್ತವೆ. ನಮ್ಮ ತುಳಸಾಸಾನಿಯದು ಅಂಥ ಮನಃಪ್ರಸಾದಕಾರಿಯಾದ ರೂಪ.

ಆಕೆಯ ಆಕಾರ ಎತ್ತರವಾದದ್ದು. ಗಾತ್ರವನ್ನು ದಪ್ಪವೆಂದು ತೋರಿಸದೆ ಇರುವಷ್ಟು ಉದ್ದ, ಮುಖ ಕೊಂಚ ಕೋಲ್ಮುಖ. ಬಣ್ಣ ಬಿಳಪು; ಆದರೆ ತುಂಬ ಬಿಳುಪಲ್ಲ. ಆನೆಯ ದಂತದ ಬಣ್ಣವೆಂದು ಹೇಳಬಹುದು. ಆಕೆ ಹೆಚ್ಚು ಆಭರಣಗಳನ್ನು ಧರಿಸುತ್ತಿದ್ದವಳೂ ಅಲ್ಲ; ಸಾಮಾನ್ಯವಾದ ಉಡುಪಿನಲ್ಲಿರುತ್ತಿದ್ದಳು.

ನಾನು ಸ್ಕೂಲಿಗೆ ಹೋಗುವ ದಾರಿಯಲ್ಲಿಯೇ ಆಕೆಯ ಮನೆ, ನಮ್ಮ ಮನೆಯಿಂದ ಅರ್ಧ ಮುಕ್ಕಾಲು ಫರ್ಲಾಂಗು. ಒಂದೊಂದು ದಿನ ನನ್ನನ್ನು ಕರೆಯುವಳು. ಬಾಳೆಯ ಹಣ್ಣೋ ದ್ರಾಕ್ಷಿಯೋ ಕೊಟ್ಟು, "ಓದಿ ಬುದ್ಧಿವಂತನಾಗು" ಎನ್ನುವಳು. ಕೊಂಚ ಕೊಂಚ ಹಾಸ್ಯಮಾಡುವಳು. ಒಂದೊಂದು ದಿನ ತಲೆಬಾಚಿ ಹೆಣೆಯುವಳು. ಆಕೆಯ ಮುಖಭಾವದಿಂದಲೂ ಮಾತುಕಥೆಯ ರೀತಿಯಿಂದಲೂ ನನಗೆ ತುಂಬ ಸಂತೋಷವಾಗುತ್ತಿತ್ತು. ಈಗ ನನಗನ್ನಿಸುತ್ತದೆ, ಒಬ್ಬ ಒಳ್ಳೆಯ ದೊಡ್ಡಕ್ಕನನ್ನು ಪಡೆದ ಮಗುವಿಗೆ ಸಿಗುವ ಸೌಖ್ಯ ಅಂಥಾದ್ದು-ಎಂದು. ಅಷ್ಟು ವಾತ್ಸಲ್ಯ ಆಕೆಯದು.

ಕೆಲವು ದಿನದ ಮೇಲೆ ಆಕೆ ಊರು ಬಿಟ್ಟು ಬೇರೆ ಕಡೆ ಹೋದಳು. ಚಿನ್ನದ ಗಣಿಯ ಪ್ರಾಂತದ ಯಾರೋ ಒಬ್ಬ ಸಾಹುಕಾರರು-ಅಲ್ಲಿ ಕಂಟ್ರಾಕ್ಟು ಮಾಡುತ್ತಿದ್ದವರು-ಆಗಾಗ ಆಕೆಯ ಮನೆಗೆ ಬಂದುಹೋಗುತ್ತಿದ್ದರು. ಅವರು ಬರುತ್ತಿದ್ದದ್ದು ಬೈಸಿಕಲ್ಲಿನ ಮೇಲೆ. ಎಪ್ಪತ್ತು ವರ್ಷಗಳ ಕೆಳಗೆ ಬೈಸಿಕಲ್ಲು ನಮ್ಮ ಊರಿಗೆ ಅಪರೂಪದ ವಸ್ತುವಾಗಿದ್ದದ್ದರಿಂದ ಆ ಸಾಹುಕಾರರ ಬರೋಣ ಹೋಗೋಣ ಜನದ ಗಮನವನ್ನು ಸೆಳೆದಿತ್ತು. ತುಳಸಮ್ಮನು ಆತನ ಆಶ್ರಯವನ್ನು ಸೇರಿದ ಮೇಲೆ ನನಗೆ ಆಕೆಯ ಸಮಾಚಾರ ತಿಳಿಯಲಿಲ್ಲ. ಆದರೆ

ಒಬ್ಬ ಒಳ್ಳೆಯ ಹೆಂಗಸು ನಮ್ಮ ಊರು ಬಿಟ್ಟಳಲ್ಲಾ ಎಂದು ಅವರಿವರು ಆಡಿಕೊಂಡದ್ದು ನನ್ನ ನೆನಪಿನಲ್ಲಿದೆ.

೨

ಬೆಂಗಳೂರು ನಾಗರತ್ನಮ್ಮ

ಬೆಂಗಳೂರು ನಾಗರತ್ನಮ್ಮ ಎಂಬಾಕೆ ಮೈಸೂರು ಪ್ರಾಂತದವಳು.

ಈಕೆಯಿಂದ ಬೇರೆಯಾದವಳು ಕೋಲಾರದ ನಾಗರತ್ನಮ್ಮ. ಕೋಲಾರದ ನಾಗರತ್ನಮ್ಮನ ತಾಯಿ ನಂಜುಂಡಾಸಾನಿ ಆ ಕಾಲದಲ್ಲಿ ಪ್ರಸಿದ್ಧಳಾಗಿದ್ದ ವಿದುಷಿ-ಸಂಗೀತದಲ್ಲಿಯೂ ಭರತನಾಟ್ಯದಲ್ಲಿಯೂ ಮಹಾಪ್ರವೀಣೆಯೆಂದು ಅನೇಕ ಸಭೆಗಳಲ್ಲಿ ಜಯಪತ್ರ ಗಳಿಸಿದ್ದವಳು.

ಕೋಲಾರದ ನಾಗರತ್ನಮ್ಮನೂ ಪ್ರಸಿದ್ಧಳಾದ ಗಾಯಕಿ. ಆಕೆಯ ಹಾಡಿಕೆಯೂ ಶ್ರಾವ್ಯವಾದದ್ದು. ಆಕೆಯ ಸಹೋದರ ಪುಟ್ಟಸ್ವಾಮಯ್ಯನವರು ಪಿಟೀಲುವಾದನದಲ್ಲಿ ಹೆಸರಾಗಿದ್ದರು; ಚಿಕ್ಕವಯಸ್ಸಿನಲ್ಲಿಯೇ ಕಾಲವಾದರು.

ಬೆಂಗಳೂರು ನಾಗರತ್ನಮ್ಮ ವಾಸ್ತವವಾಗಿ ನಂಜನಗೂಡಿನ ಹೆಣ್ಣುಮಗಳು. ಆಕೆಯ ತಾಯಿ ನಂಜನಗೂಡಿನಲ್ಲಿದ್ದ ಲಾಯರ್ ಸುಬ್ಬರಾಯರೆಂಬವರ ಆಶ್ರಿತಳು. ಮಗಳು ಪ್ರಾಪ್ತವಯಸ್ಕಳಾದ ಮೇಲೆ ಆಕೆಯು ಮಗಳ ವಿದ್ಯಾಭ್ಯಾಸಕ್ಕೋಸ್ಕರ ಮೈಸೂರಿನಲ್ಲಿ ನೆಲಸಿದಳು. ಆಸ್ಥಾನ ವಿದ್ವಾನ್ ಕವಿ ಗಿರಿಭಟ್ಟರ ತಮ್ಮಯ್ಯನೆಂಬವರ ಬಳಿ ನಾಗರತ್ನಮ್ಮ ಸಂಗೀತವನ್ನೂ ಸಾಹಿತ್ಯವನ್ನೂ ಅಭ್ಯಾಸ ಮಾಡಿದಳು. ಆಕೆಗೆ ಸಂಸ್ಕೃತ ಕಾವ್ಯ ಪಾಠವಾಗಿತ್ತು. ಶಬ್ದದ ಸಾಧುತ್ವ ಅಸಾಧುತ್ವಗಳು ಗೊತ್ತಿದ್ದದ್ದು ಮಾತ್ರವಲ್ಲದೆ ಸಂಧಿ ಸಮಾಸ ಅಲಂಕಾರ ಮೊದಲಾದ ವಿವರಗಳು ತಿಳಿದಿದ್ದವು. ಆದದ್ದರಿಂದಲೇ ಸಂಸ್ಕೃತ ಶ್ಲೋಕಗಮಕದಲ್ಲಿ ಆಕೆ ಈಹೊತ್ತಿಗೂ ಅಸಮಾನಳಾಗಿದ್ದಾಳೆ. ಗ್ರಾಮೊಫೋನ್ ರಿಕಾರ್ಡಿಗಾಗಿ ಆಕೆ ಹಾಡಿದ ಭಕ್ತಾಪಾಯಭುಜಂಗಗಾರುಡಮಣಿಸ್ತ್ರೈ-ಲೋಕ್ಯರಕ್ಷಾಮಣಿಃ', 'ಶತುಚ್ಛೇದೈಕಮಂತ್ರಂ' -ಈ ಶ್ಲೋಕಪಠನಗಳಲ್ಲಿಯೂ 'ನಿತ್ಯ ಕಲ್ಯಾಣಿ' ಎಂಬ ಸಂಸ್ಕೃತ ರಾಗಮಾಲಿಕೆಯಲ್ಲಿಯೂ ಆಕೆಯ ಸಾಹಿತ್ಯಪರಿಜ್ಞಾನ ಪ್ರಕಾಶಿಸುತ್ತದೆ.

ಆಕೆ ಕನ್ನಡ ಸಾಹಿತ್ಯದಲ್ಲಿಯೂ ಪರಿಶ್ರಮ ಮಾಡಿದ್ದವಳು. ಜೈಮಿನಿ ಭಾರತದಿಂದಲೂ, ರಾಜಶೇಖರವಿಲಾಸದಿಂದಲೂ, ಕುಮಾರವ್ಯಾಸ ಭಾರತದಿಂದಲೂ ಹತ್ತಾರು ಪದ್ಯಗಳನ್ನು ಉಚಿತ ರಾಗಗಳೊಡನೆ ಹಾಡಿ ವಿವರಣೆ ಕೊಡುತ್ತಿದ್ದಳು. ಆಕೆ ಮಹಾ ವಿದುಷಿ.

ಆಕೆಯನ್ನು ನಾನು ೧೯೦೮-೯ನೆಯ ವರ್ಷದಿಂದ ಬಲ್ಲೆ. ಆಗ ಆಕೆ ಚಿಕ್ಕಪೇಟೆಯಲ್ಲಿರುವ ಸಾಹುಜಿಯವರ ಮಹಡಿಯ ಮೇಲೆ ಸಂಗೀತ ಕಛೇರಿ ನಡಸಿದ್ದನ್ನು ನಾನು ನಾಲ್ಕಾರು ಸಲ ಕೇಳಿದ್ದೇನೆ. ಆಕೆಯ ಕಛೇರಿಗೆ ಕುತೂಹಲದಿಂದ ಬರುತ್ತಿದ್ದವರಲ್ಲಿ ದಿವಂಗತರಾದ ಚೀಫ್ ಜಡ್ಜಿ ಕೆ.ಎಸ್. ಚಂದ್ರಶೇಖರಯ್ಯರ್ ಅವರೂ ಒಬ್ಬರು. ಅವರಿಗೆ ಆಕೆಯ ಸಂಸ್ಕೃತಶ್ಲೋಕಗಾನದಲ್ಲಿ ಹೆಚ್ಚು ಮೆಚ್ಚಿಗೆ. “ನಾಗರತ್ನಮ್ಮನ ಸ್ಟೈಲೇ ಸ್ಟೈಲು” ಎನ್ನುತ್ತಿದ್ದರು.

ನಾಗರತ್ನಮ್ಮನು ಮೈಸೂರು ಪಟ್ಟಣದಲ್ಲಿ ವಿದ್ಯಾಭ್ಯಾಸ ನಡಸುತ್ತಿದ್ದಾಗಲೇ ಆಕೆಯ ಕೀರ್ತಿ ಮಹಾರಾಜ ಶ್ರೀ ಚಾಮರಾಜ ಒಡೆಯರವರ ಸನ್ನಿಧಾನದವರೆಗೂ ಹಬ್ಬಿತೆಂದು ಕಾಣುತ್ತದೆ. ಆಗ ಮಹಾಸ್ವಾಮಿಯವರ ಕಟಾಕ್ಷ ಆಕೆಯ ಕಡೆಗೆ ತಿರುಗಿತು.

ಕೆಲವು ದಿವಸಗಳಾದ ಮೇಲೆ ಆಕೆಯ ವಿದ್ಯಾವೈದುಷ್ಯಗಳು ಇನ್ನೂ ವಿಕಾಸ ಪಡೆಯಬೇಕಾದರೆ ಮೈಸೂರಿಗಿಂತ ಬೆಂಗಳೂರು ಹೆಚ್ಚು ತಕ್ಕ ಸ್ಥಳವೆಂದು ಆಕೆಯ ತಾಯಿ ಆಲೋಚಿಸಿ ಆಕೆಯನ್ನು ಬೆಂಗಳೂರಿನಲ್ಲಿದ್ದ ತನ್ನ ಅಣ್ಣ ಪಿಟೀಲು ವೆಂಕಟಸ್ವಾಮಪ್ಪನವರ ಮನೆಯಲ್ಲಿರುವಂತೆ ಏರ್ಪಡಿಸಿದಳು. ವೆಂಕಟಸ್ವಾಮಪ್ಪನವರು ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧರಾದ ಪಿಟೀಲು ವಿದ್ವಾಂಸರು. ಆತನ ಮನೆಯಿದ್ದದ್ದು ನಗರ್ತರ ಪೇಟೆಯಲ್ಲಿ-ಕಾಳಮ್ಮನ ಗುಡಿಯ ಸಮೀಪದಲ್ಲಿ. ಅಲ್ಲಿ ನಾಗರತ್ನಮ್ಮನು ಸಂಗೀತ ನರ್ತನಗಳೆರಡನ್ನೂ ಅಭ್ಯಾಸ ಮಾಡುತ್ತಿದ್ದಳು.

ನರಹರಿರಾಯರ ಆಶ್ರಯ

ನಾಗರತ್ನಮ್ಮನ ಸೌಂದರ್ಯ ಲಾವಣ್ಯಗಳ ವಾರ್ತೆ ಆಗ ಹೈಕೋರ್ಟಿನ ಜಡ್ಜಿಯಾಗಿದ್ದ ನರಹರಿರಾಯರ ಕಿವಿಯನ್ನು ಮುಟ್ಟಿತು. ನರಹರಿರಾಯರು ಆಕೆಗೆ ಆಶ್ರಯದಾತರಾದರು.

ನರಹರಿರಾಯರಿಗೆ ನಾಗರತ್ನಮ್ಮನವರಿಗೆ ಆಶ್ರಯಕೊಡಬೇಕೆಂದು ಮನಸ್ಸಾದಾಗ ಮೊದಲು ತಮ್ಮ ಧರ್ಮಪತ್ನಿಯ ಅನುಮತಿಯನ್ನು ಪಡೆದುಕೊಂಡರು. ಭಾರ್ಯೆಯನ್ನು ಕರೆಸಿಕೊಂಡು ಕೇಳಿದರು:

ನ: “ಏನ್ರಿ, ನಿಮ್ಮಲ್ಲಿ ಒಂದು ಮಾತು ಹೇಳಬೇಕಾಗ್ಯದೆ. ನಿಮ್ಮ ಅನುಮತಿ ಬೇಕಾಗ್ಯದೆ.”

ಆಕೆ: “ನನ್ನ ಅನುಮತಿ ನಿಮಗೆ ಬೇಕು ಎಂದರೆ ಅದು ಯಾರಾದರೂ ಒಪ್ಪುವಮಾತೆ? ನನ್ನಿಂದೇನಾಗಬೇಕು ಹೇಳ್ರಿ.”

ನ: “ಹಾಂಗಲ್ರಿ, ಇದೊಂದು ವಿಶೇಷ ಸಂದರ್ಭ. ನಮಗೆ ಕೆಲವು ದಿವಸದಿಂದ ನಾಗರತ್ನಮ್ಮ ಎಂಬಾಕೆಯ ಸಂಗೀತದ ಮೇಲೆ ಮನಸ್ಸಾಗ್ಯದೆ. ಆಕೆ ಬಹಳ ಛಂದಾಗಿ ಹಾಡ್ತಾರೆ. ನಾನು ಆಗಾಗ ಆಕೆಯ ಸಂಗೀತ ಕೇಳಬೇಕೆಂದು ಅಪೇಕ್ಷಾ ಆಗ್ಯದೆ. ನಿಮಗೆ ಅದು ಸಮ್ಮತವಿಲ್ಲದಿದ್ದರೆ ಹೇಳಿಬಿಡ್ರಿ. ಆ ಅಪೇಕ್ಷಾನ ಅಲ್ಲಿಗೇ ಬಿಟ್ಟುಬಿಡುತ್ತೇನೆ.”

ಆಕೆ: “ನಿಮ್ಮ ಅಪೇಕ್ಷಾ ಏನದೋ ಅದನ್ನು ನಡೆಸಬೇಕೆಂದು ನಮ್ಮ ಅಪೇಕ್ಷಾ.”

ನ: “ಅದರಿಂದ ನಿಮಗೆ ಯಾವ ಅನನುಕೂಲವೂ ಆಗದ ಹಾಂಗೆ ನಾನು ನೋಡಿಕೊಳ್ಳುತ್ತೇನೆ.”

ಆಕೆ: “ನಮಗೆ ಅನನುಕೂಲ ಆಗುವುದೇನಿದೆ? ಸಂಸಾರಕ್ಕೆ ಬೇಕಾದ್ದನ್ನೆಲ್ಲ ಮಾಡಿದೀರಿ. ಮಕ್ಕಳೆಲ್ಲ ಬೆಳೆದು ಅವರ ಕಾಲಮೇಲೆ ನಿಂತುಕೊಂಬೋರಾಗಿದ್ದಾರೆ. ಹೆಣ್ಣುಮಕ್ಕಳಿಗೆ ಮದುವೆ ಆಗ್ಯದೆ. ಗಂಡುಮಕ್ಕಳು ವಿದ್ಯಾವಂತರಾಗ್ಯಾರೆ. ಈಗ ನೀವು ಸಂತೋಷವಾಗಿರುವ ಹಾಂಗಿರುವುದು ನಮಗೆಲ್ಲ ಕರ್ತವ್ಯ.”

ಹೀಗೆ ಆ ಮಹಾತಾಯಿ ಅಪ್ಪಣೆ ಕೊಟ್ಟರು. ಅನಂತರ ನರಹರಿರಾಯರ ಸಂಕಲ್ಪ ನಡೆದದ್ದು.

ಈ ಸಂಗತಿಯನ್ನು ನಾನು ಅವರ ಅತ್ಯಂತ ಸಮೀಪಸ್ಥರೊಬ್ಬರಿಂದ ಕೇಳಿದ್ದೇನೆ. ನನಗೆ ಹೇಳಿದವರು ನರಹರಿರಾಯರ ಮನೆಯಲ್ಲಿ ಊಟಮಾಡಿಕೊಂಡು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದು ಬಳಿಕ ಸಾಧು ಸಜ್ಜನರೆಂದೂ ಕಾರ್ಯಸಮರ್ಥರೆಂದೂ ಗಣ್ಯರಾಗಿದ್ದ ಒಬ್ಬ ಹಳಬರು.

ರಾಯರು ಕೋರ್ಟಿನಿಂದ ಸಂಜೆ ಹಿಂದಿರುಗುವಾಗ ನಗರ್ತ ಪೇಟೆಗೆ ಬಂದು ತಮ್ಮ ಕೋಚ್‌ಗಾಡಿಯನ್ನು ಹೊರಗೆ ನಿಲ್ಲಿಸಿ ನಾಗರತ್ನಮ್ಮನ ಮನೆಯೊಳಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಸಂಗೀತ ಕೇಳುತ್ತಿದ್ದರು. ನರಹರಿರಾಯರಿಗೆ ಸಂಗೀತ ಸಾಹಿತ್ಯಗಳಲ್ಲಿ ತುಂಬಾ ಅಭಿರುಚಿ. ಅವರ ಮಕ್ಕಳು ಲಕ್ಷ್ಮೀನರಸಿಂಹರಾಯರೂ, ಟಿ.ಹನುಮಂತರಾಯರೂ ಸಂಗೀತ ವಿದ್ವಾನ್ ವಾಸುದೇವಾಚಾರ್ಯರಿಗೆ ಮುಖ್ಯಸ್ನೇಹಿತರು. ಆಚಾರ್ಯರ ಸಂಗೀತದಲ್ಲಿ ತುಂಬಾ ಸಂತೋಷ. ಅಣ್ಣತಮ್ಮಂದಿರಿಬ್ಬರೂ ವಾಸುದೇವಾಚಾರ್ಯರನ್ನು ದಿನಗಟ್ಟಲೆ ತಮ್ಮ ತಮ್ಮ ಮನೆಗಳಲ್ಲಿ ಅತಿಥಿಯಾಗಿರಿಸಿಕೊಂಡು ಉಪಚರಿಸುತ್ತಿದ್ದರು. ಟಿ.ಲಕ್ಷ್ಮೀನರಸಿಂಹರಾಯರು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರು. ಅವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ವಿಸ್ತಾರವಾದ ಪರಿಚಯವಿತ್ತು. ಈ ಗುಣಸಂಪತ್ತು ಅವರ ತೀರ್ಥರೂಪರಿಂದ ಬಂದಿದ್ದದ್ದೆಂದು ತೋರುತ್ತದೆ.

ನರಹರಿರಾಯರ ಔದಾರ್ಯ, ಕರ್ತವ್ಯ ಜಾಗೃತಿ

ನರಹರಿರಾಯರು ಸಂಗೀತ ಸಾಹಿತ್ಯಗಳಿಗೆ ಮನಸೋತಿದ್ದವರು ಮಾತ್ರವಲ್ಲದೆ ತುಂಬ ಉದಾರಿಗಳೂ ಮರ್ಯಾದೆವಂತರೂ ಆಗಿದ್ದರು. ಅವರ ಮನೆಯಲ್ಲಿ ಊಟಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿಯಿಲ್ಲ. ಅನೇಕ ಮಂದಿ ಸಣ್ಣ ಹುಡುಗರು ಮೊದಲುಗೊಂಡು ಕಾಲೇಜು ದರ್ಜೆಯ ವಿದ್ಯಾರ್ಥಿಗಳವರೆಗೂ ಭೋಜನಕ್ಕಿರುತ್ತಿದ್ದರು. ನರಹರಿರಾಯರಿಗೆ ಆ ಹುಡುಗರ ಹೆಸರು ವಿಳಾಸಗಳೊಂದೂ ಗೊತ್ತಿರಲಿಲ್ಲ. ಅವರು ಪ್ರತಿಯೊಬ್ಬ ಬಾಲಕನನ್ನೂ "ಏನ್ರಿ? ಯಾವ ತರಗತಿಯಲ್ಲಿ ಓದುತ್ತಿದ್ದೀರಿ? ನಿಮಗೆ ಪುಸ್ತಕ ಇದೆಯೆ? ಏನು ಬೇಕು?" -ಎಂದು ವಿಚಾರಿಸುತ್ತಿದರು. ಅವರು ಯಾರನ್ನೂ ಎಂದೂ ಏಕವಚನದಲ್ಲಿ ಮಾತನಾಡಿಸಿದ್ದಿಲ್ಲ.

ಒಂದು ದಿನ ವಿಶೇಷ ಸಂಗತಿ ನಡೆಯಿತು. ಜಡ್ಜಿ ನರಹರಿರಾಯರು ಆಗಾಗ ನಾಗರತ್ನಮ್ಮನ ಮನೆಗೆ ಹೋಗುತ್ತಿದ್ದ ಸಂಗತಿ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಅವರಿಗೆ ಹೇಗೋ ತಿಳಿದುಬಂತು. ಆಮೇಲೆ ಒಂದು ದಿನ ಬೆಳಗ್ಗೆ ಶೇಷಾದ್ರಿ ಅಯ್ಯರ್ ಅವರು ನರಹರಿರಾಯರ ಮನೆಗೆ ದಯಮಾಡಿಸಿದರು. ಅವರ ಮನೆಯಿದ್ದದ್ದು ಕೋಟೆಯಲ್ಲಿ; ವೆಂಕಟರಮಣಸ್ವಾಮಿ ದೇವಸ್ಥಾನದ ಎದುರುಗಡೆ - ಈಗ ಬೆಂಗಳೂರು ಮೆಡಿಕಲ್ ಕಾಲೇಜಿರುವ ಜಾಗದ ಪೂರ್ವಕ್ಕೆ. ದಿವಾನರು ತಮ್ಮ ಮನೆಗೆ ದಯಮಾಡಿದರೆಂದು ನರಹರಿರಾಯರಿಗೆ ಒಂದು ಕಡೆ ಸಂತೋಷ; ಒಂದು ಕಡೆ ಆಶ್ಚರ್ಯ. ಶೇಷಾದ್ರಿ ಅಯ್ಯರ್ ರವರಿಗೆ ತಮ್ಮ ಉದ್ದೇಶದ ವಿಷಯವನ್ನು ಹೇಳಲು ಸಂಕೋಚ. ಕುಶಲಪ್ರಶ್ನೆಗಳಾದ ಬಳಿಕ ಶೇಷಾದ್ರಿ ಅಯ್ಯರ್ ಅವರು ಹೇಳಿದರು:

"ರಾಯರೆ, ನಾನು ಹೇಳಬೇಕೆಂದು ಬಂದಿರುವ ವಿಷಯ ನಿಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟಿದ್ದು. ಅದರಲ್ಲಿ ನನಗೆ ಯಾವ ಅಧಿಕಾರವೂ ಸಲ್ಲದು. ನಾನು ಆ ಮಾತಿಗೆ ಬರುವುದು ಅಧಿಕಪ್ರಸಂಗಿತನವಾಗುತ್ತದೆ. ಇಷ್ಟರ ಮೇಲೆ ತಾವು ಪ್ರಾಜ್ಞರು; ವಿನಯಶೀಲರು; ಧರ್ಮಾಧರ್ಮವಿವೇಕವುಳ್ಳವರು. ಆದರೆ ಪ್ರಜೆಯ ಮನಸ್ಸನ್ನು ತಿಳಿದು ನಡೆಯಬೇಕಾದದ್ದು ನನ್ನ ಕರ್ತವ್ಯ. ಸರಕಾರವು ಜನರ ಮನಸ್ಸಿನಲ್ಲಿ ಮನ್ನಣೆ ಪಡೆದಿರಬೇಕು, ಜನ ಸರಕಾರಕ್ಕೆ ಕೊಡುವ ಗೌರವವನ್ನು ಕಾಪಾಡಬೇಕಾದದ್ದು ನನ್ನ ಕರ್ತವ್ಯ. ಆದದ್ದರಿಂದ ನಾನು ಒಂದು ವಿಜ್ಞಾಪನೆ ಮಾಡಿಕೊಳ್ಳಬಂದಿದ್ದೇನೆ. ನಾನು ದುಡುಕಿರುವುದಾದರೆ ತಾವು ಸ್ನೇಹದಿಂದ ಕ್ಷಮಿಸಬೇಕು."

ಇದಕ್ಕೆ ಉತ್ತರವಾಗಿ ನರಹರಿರಾಯರು ಹೇಳಿದರು:

ನ: “ತಾವು ಇಷ್ಟು ಹೇಳುವುದು ಅನಾವಶ್ಯಕ. ತಮಗೆ ಯಾವುದು ಕರ್ತವ್ಯವೋ ಅದು ನನಗೂ ಕರ್ತವ್ಯ. ಸಂಗತಿ ಅಪ್ಪಣೆಯಾಗಬೇಕು.”

ಶೇ: “ನೀವು ಸಂಜೆ ಹೈಕೋರ್ಟಿನಿಂದ ಮನೆಗೆ ಹಿಂದಿರುಗುವಾಗ ನಾಗರತ್ನಮ್ಮನವರ ಮನೆ ಸಮೀಪಿಸಿದ ಕೂಡಲೆ ಕೋಚಿನ ಮೇಲೆ ಸಾರಥಿಯ ಪಕ್ಕದಲ್ಲಿ ಕುಳಿತಿರುವ ಜವಾನನು ತನ್ನ ಕೈಯಲ್ಲಿರುವ ಬೆಳ್ಳಿ ಹಿಡಿಯ ಕೋಲನ್ನು ಕೆಳಗಿರಿಸಿಬಿಡುವಂತೆ ಅಪ್ಪಣೆಯಾಗಬೇಕು. ಆ ಕೋಲು ಅಧಿಕಾರಲಾಂಛನ. ಅದನ್ನು ಜನ ನೋಡಿದೊಡನೆಯೇ ‘ಇದು ಜಡ್ಜಿಗಳು ಒಲಿದಿರುವ ಸ್ಥಳ’ ಎಂದು ಭ್ರಾಂತಿಪಟ್ಟಾರು.”

ಈ ಮಾತನ್ನು ಕೇಳಿದ ಕೂಡಲೆ ನರಹರಿರಾಯರು ಮೇಲಕ್ಕೆದ್ದು-

“ತಾವು ಹೇಳಿದ್ದು ಸರಿಯಾದ ಮಾತು. ಇದುವರೆಗೂ ಅಜಾಗ್ರತೆಯಿಂದ ತಪ್ಪು ನಡೆಯಿತು. ಈ ಕೂಡಲೆ ಅದನ್ನು ಸರಿಪಡಿಸುತ್ತೇನೆ. ಈ ಹೊತ್ತು ತಾವು ನನಗೆ ದೊಡ್ಡ ಉಪಕಾರ ಮಾಡಿದ್ದೀರಿ. ತಮ್ಮಿಂದ ನಾನು ಕರ್ತವ್ಯ ಜಾಗರೂಕನಾದೆ. ಇದುವರೆಗೆ ನಡೆದದ್ದನ್ನು ಮಾಫ್ ಮಾಡಬೇಕು.”

-ಹೀಗೆ ಹೇಳಿ ಬೀಳ್ಕೊಟ್ಟರು.

ಮೌಂಟ್ ಜಾಯ್

ಇದಾದ ಕೆಲವು ದಿನಗಳ ತರುವಾಯ ನರಹರಿರಾಯರು ತಮ್ಮ ಸಂಗೀತ ವಿನೋದಕ್ಕೆ ತಕ್ಕ ಜಾಗವನ್ನು ಊರ ಹೊರಗಡೆ ಕಲ್ಪಿಸಿಕೊಳ್ಳತಕ್ಕದ್ದೆಂದು ನಿಶ್ಚಯಿಸಿ ಬೆಂಗಳೂರು ಸುತ್ತಮುತ್ತಿನ ಪ್ರದೇಶಗಳಲ್ಲಿ ಹುಡುಕಾಡಿ ಕಡೆಗೆ ಈಗ “ನರಹರಿರಾಯರ ಗುಡ್ಡ” ಎಂದು ಪ್ರಸಿದ್ಧವಾಗಿರುವ ಸ್ಥಳವನ್ನು ಗೊತ್ತುಮಾಡಿದರು. ಆ ಕಾಲಕ್ಕೆ ಈ ಪ್ರದೇಶವೆಲ್ಲ ಕಾಡಾಗಿತ್ತು. ಗುಡ್ಡಕ್ಕೆ “ಮೌಂಟ್‌ಜಾಯ್” (ಆನಂದ ಶೈಲ) ಎಂದು ಹೆಸರಿಟ್ಟವರು ಅವರೇ, ಮತ್ತು ಅಲ್ಲಿಯ ಅನೇಕ ಮಂಟಪಗಳನ್ನೂ ಕಟ್ಟಡಗಳನ್ನೂ ಕಟ್ಟಿಸಿದವರು ಅವರೇ. ಆ ಗುಡ್ಡದ ಮೇಲಣ ಶಿವಾಲಯ ಅಲ್ಲಿ ಮೊದಲೇ ಇದ್ದದ್ದು. ನರಹರಿರಾಯರು ಅದರ ಜೀರ್ಣೋದ್ಧಾರ ಮಾಡಿಸಿದರು. ತಿಂಗಳಿಗೆ ಒಂದು ಸಾರಿಯೋ ಎರಡು ಸಾರಿಯೋ ನರಹರಿರಾಯರು ಮಿತ ಪರಿವಾರದೊಡನೆ ಅಲ್ಲಿಗೆ ಹೋಗಿ ನಾಗರತ್ನಮ್ಮನವರ ಸಂಗೀತದಿಂದ ಸಂತೋಷಪಡುತ್ತಿದ್ದರು.

ನರಹರಿರಾಯರು ಕೆಲಸದಿಂದ ನಿವೃತ್ತರಾಗುವ ದಿವಸ ಬರುವ ಸಮಯದಲ್ಲಿ ಅವರು ಮುಂದಾಲೋಚನೆಯಿಂದ ನಾಗರತ್ನಮ್ಮನವರಿಗೆ ಮದರಾಸಿನಲ್ಲಿ ಆಶ್ರಯವನ್ನು ಕಲ್ಪಿಸಿದರು. ಹಾಗೆ ಅಲ್ಲಿ ಆಶ್ರಯ ಕೊಟ್ಟವರು ಸಾಹುಕಾರರಾದ-ಮೊದಲಿಯಾರ್ ಎಂಬವರು. ಸ್ವಲ್ಪ ಕಾಲದ ಮೇಲೆ ನಾಗರತ್ನಮ್ಮ ಸಂಗೀತಪ್ರಪಂಚದಲ್ಲಿ ಸ್ವತಃ ಮಹೋನ್ನತಳಾಗಿ ಇತರ ಆಶ್ರಯದ ಅಪೇಕ್ಷೆಯಿಲ್ಲದವಳಾದಳು.

ನಾಗರತ್ನಮ್ಮನವರ ಕಡೆಯ ದಿನಗಳು

ಆಕೆಯನ್ನು ನಾನು ಕಡೆಯ ಸಾರಿ ಕಂಡದ್ದು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರು ದಿವಾನರಾಗಿದ್ದಾಗ. ಆಗ ಆಕೆ ಬೆಂಗಳೂರಿಗೆ ಬಂದಿದ್ದದ್ದು ಒಂದು ಧರ್ಮಕಾರ್ಯಕ್ಕೆ ಸಹಾಯ ಸಂಪಾದಿಸುವುದಕ್ಕಾಗಿ. ಆಕೆಯ ವೈಯಕ್ತಿಕ ಜೀವನ ಕಡೆಯ ದಿನಗಳಲ್ಲಿ ಸಂತೋಷಕರವಾಗಿರಲಿಲ್ಲ. ಇದ್ದ ಒಂದೆರಡು ಮಕ್ಕಳು ತೀರಿಕೊಂಡಿದ್ದವು; ಸಾಕಿಕೊಂಡಿದ್ದ ಒಂದು ಮಗುವೂ ಹೋಯಿತು. ಭಾಗವತದಲ್ಲಿ ಹೇಳುವಂತೆ ಭಗವಂತನು ಯಾರಲ್ಲಿ ಅನುಗ್ರಹ ಮಾಡಬೇಕೆಂದಿರುತ್ತಾನೋ ಅವರಿಗೆ ಕಷ್ಟಪರೀಕ್ಷೆಯನ್ನಿಡುತ್ತಾನೆ.

> ಯಸ್ಯಾನುಗ್ರಹಮಿಚ್ಛಾಮಿ
> ತಸ್ಯ ವಿತ್ತಂ ಹರಾಮ್ಯಹಮ್ ॥

ಶ್ರೀರಾಮಪಾದಾರವಿಂದದ ವಿನಾ ಮತ್ತೆಲ್ಲಿಯೂ ತನಗೆ ಸುಖಶಾಂತಿಗಳು ಲಭ್ಯವಲ್ಲವೆಂದು ಆಕೆ ಮನಗಂಡಳು. ತಾನು ಸಂಪಾದಿಸಿದ್ದ ಹಣವೂ ಕೀರ್ತಿಯೂ ತ್ಯಾಗರಾಜರ ಮಹಿಮೆಯಿಂದ ಬಂದವು. ಆದದ್ದರಿಂದ ತನ್ನ ಸರ್ವಸ್ವವನ್ನೂ ತನ್ನ ಗುರುಸ್ವಾಮಿಯಾದ ತ್ಯಾಗರಾಜರಿಗೂ ತ್ಯಾಗರಾಜರ ಇಷ್ಟದೈವವಾದ ಶ್ರೀರಾಮಚಂದ್ರನಿಗೂ ಸಮರ್ಪಿಸತಕ್ಕದ್ದೆಂದು ನಿಶ್ಚಯಿಸಿದ್ದಳು.

ಮನಸ್ಸು ಈ ನಿಶ್ಚಯಕ್ಕೆ ಬಂದಮೇಲೆ ಒಂದು ರಾತ್ರಿ ಆಕೆಗೆ ತ್ಯಾಗರಾಜರ ಸಮಾಧಿ ಸ್ಥಳದ ದೃಶ್ಯವು ಕನಸಿನಲ್ಲಿ ತೋರಿತಂತೆ. ಮಾರನೆಯ ದಿನವೇ ಆಕೆ ತ್ಯಾಗರಾಜರ ಸಮಾಧಿಸ್ಥಳವಾದ ತಿರುವಾಯೂರಿಗೆ ಹೋಗಿ ಅಲ್ಲಿ ಒಬ್ಬಿಬ್ಬರು ಸ್ನೇಹಿತರೊಡನೆ ಶ್ಮಶಾನದಲ್ಲೆಲ್ಲ ಹುಡುಕಿ ಸಮಾಧಿಯನ್ನು ಗೊತ್ತು ಮಾಡಿಕೊಂಡಳು. ಬಳಿಕ ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಬೇಕಾದ ಜನಸಹಾಯವನ್ನು ಸಂಪಾದಿಸಿ ಸಮಾಧಿಸ್ಥಳದಲ್ಲಿ ಶ್ರೀ ಸೀತಾರಾಮ ದೇವಾಲಯವನ್ನು ಕಟ್ಟಿಸಿ ತನ್ನ ಸರ್ವಸ್ವವನ್ನೂ ಅದಕ್ಕೆ ಧಾರೆಯೆರೆದಳು. ಮದರಾಸಿನ ಸಾಹುಕಾರಪೇಟೆಯಲ್ಲಿ ತಾನು ತನಗಾಗಿ ಕಟ್ಟಿಸಿಕೊಂಡಿದ್ದ ಮನೆಯನ್ನೂ ಮಾರಿ ಆ ಉತ್ಪತ್ತಿಯನ್ನೆಲ್ಲ ತಿರುವಾಯೂರಿನ ಕಾರ್ಯಕ್ಕಾಗಿ ವಿನಿಯೋಗಿಸಿದಳು. ಸುಮಾರು ಆ ಕಾಲದಲ್ಲಿ ಅದಕ್ಕೆ ಮೂವತ್ತು ಸಾವಿರ ರೂಪಾಯಿ ಬಂತೆಂದು ನನ್ನ ಜ್ಞಾಪಕ. ಅದರ ಜೊತೆಗೆ ತನ್ನಲ್ಲಿದ್ದ ಚಿನ್ನ, ಬೆಳ್ಳಿ, ರತ್ನಾಭರಣಗಳನ್ನೆಲ್ಲ ಮಾರಿದಳು ಈ ಉದ್ದೇಶಕ್ಕಾಗಿ.

***

ಬೆಂಗಳೂರು ನಾಗರತ್ನಮ್ಮನು ಮದರಾಸಿನಲ್ಲಿ ಸಾಹುಕಾರಪೇಟೆಯಲ್ಲಿ ಮನೆ ಕಟ್ಟಿಸಿದಾಗ ಗೃಹಪ್ರವೇಶೋತ್ಸವದ ದಿವಸ ಹಾಡಿಕೆಗಾಗಿ ಮೈಸೂರಿನಿಂದ ಬಿಡಾರಂ ಕೃಷ್ಣಪ್ಪನವರನ್ನು ಕರೆಯಿಸಿದ್ದಳು. ಆ ಸಂಗೀತ ಕಛೇರಿಗೆ ಮದರಾಸಿನ ರಸಿಕಪ್ರಮುಖರು ಬಂದಿದ್ದರು. ಅವರಲ್ಲೊಬ್ಬರು "ಹಿಂದೂ" ಪತ್ರಿಕೆಯ ಸಂಪಾದಕರಾದ ಕಸ್ತೂರಿರಂಗಯ್ಯಂಗಾರ್ಯರು. ಕಛೇರಿ ಬಲು ಸೊಗಸಾಗಿತ್ತು. ಅದು ಮುಕ್ತಾಯವಾದ ಮೇಲೆ ಕಸ್ತೂರಿರಂಗಯ್ಯಂಗಾರ್ಯರು ಕೇಳಿದರು:

"ಈ ಗಾಯಕರು ಬೇರೆ ಇನ್ನೆಲ್ಲಿಯಾದರೂ ಹಾಡಿಯಾರೆ? ನಮ್ಮ ಮನೆಗೆ ಬಂದಾರೆ?"

"ಸಂತೋಷವಾಗಿ ಬಂದಾರು."

ಈ ಉತ್ತರ ಬಂದಮೇಲೆ ಕಸ್ತೂರಿರಂಗಯ್ಯಂಗಾರ್ಯರು ಹೇಳಿದರು:

"ನಮಗೆ ವಿಶೇಷವಾಗಿ ಬೇಕಾದದ್ದು ಕನ್ನಡ ದೇವರನಾಮಗಳ ಹಾಡಿಕೆ. ತ್ಯಾಗರಾಜರ ಕೃತಿಗಳನ್ನು ಹಾಡುವವರು ನಮಗೆ ಇಲ್ಲಿ ಬೇರೆ ಸಿಗುತ್ತಾರೆ. ದೇವರನಾಮಗಳನ್ನು ಕೇಳಬೇಕೆಂದು ಇಷ್ಟವಾಗಿದೆ."

ಕೃಷ್ಣಪ್ಪನವರು ಬಹುಸಂತೋಷದಿಂದ ಒಪ್ಪಿಕೊಂಡರು. ಅದರಂತೆ ಮದರಾಸಿನಲ್ಲಿ ಕನ್ನಡ ದೇವರನಾಮಗಳ ಸಂಗೀತ ಕಛೇರಿ ನಡೆಯಿತು. ಕೃಷ್ಣಪ್ಪನವರಿಗೆ ಕಾಲಕ್ರಮದಲ್ಲಿ ಬಂದ ಅತಿಶಯವಾದ ತಮಿಳುನಾಡು ಪ್ರಖ್ಯಾತಿಗೆ ಇದೇ ಪ್ರಾರಂಭವೆಂದು ತೋರುತ್ತದೆ.

ಮೈಸೂರು ಸತ್ರ

ನಾಗರತ್ನಮ್ಮ ಸ್ವಾಭಾವಿಕವಾಗಿ ಉದಾರಿ, ಅಸೂಯೆಯನ್ನರಿಯದವಳು. ಆಕೆಯ ಮನಸ್ಸಿನಲ್ಲಿ ಒಂದು ಕೊರತೆಯಿತ್ತು. ತಿರುವಾಯೂರಿನಲ್ಲಿ ತನ್ನ ಹುಟ್ಟೂರಾದ ಮೈಸೂರಿನ ಹೆಸರಿನಲ್ಲಿ ಒಂದು ಸತ್ರವಿರಬೇಕೆಂದು, ಆಕೆ ಹೇಳಿದಳು:

"ನನಗೆ ದೇವರು ಕೊಟ್ಟಿದ್ದನ್ನೆಲ್ಲ ಗುಡಿಗೂ ಪೂಜೆಗಳಿಗೂ ವೆಚ್ಚಮಾಡಿದೆ. ಈಗ ನನ್ನಲ್ಲಿ ಒಂದು ಬಿಡಿಗಾಸೂ ಇಲ್ಲ. ತಮಿಳು ದೇಶದಲ್ಲಿ ನಾನು ಕೇಳಿದರೆ ಹಣ ಕೊಡುವವರು ಎಷ್ಟೋ ಜನ ಇದ್ದಾರೆ. ನಾಟುಕೋಡಿ ಚೆಟ್ಟಿಗಳಲ್ಲಿ ನನಗೆ ಬೇಕಾದವರು ಒಬ್ಬೊಬ್ಬರೇ ಸತ್ರ ಕಟ್ಟಿಸಿಕೊಡಬಲ್ಲವರಿದ್ದಾರೆ. ಆದರೆ ಅವರು ತಮಗೆ ಬೇಕಾದ ಹೆಸರುಗಳನ್ನು ಸತ್ರಕ್ಕೆ ಕೊಟ್ಟಾರು. ಅದರಿಂದ ಮೈಸೂರಿಗೇನು ಕೀರ್ತಿ? ನಮ್ಮ ಕನ್ನಡ ಜನದ ಹೆಸರು ತ್ಯಾಗರಾಜಸನ್ನಿಧಿಯಲ್ಲಿಯೂ ಬೆಳಗಬೇಕು. ಮೈಸೂರಿನಿಂದ ಬಂದವರು ಇಳಿದುಕೊಳ್ಳುವುದಕ್ಕೂ ಒಂದು ಕರ್ನಾಟಕ ಸಂಗೀತದ ಪಾಠಶಾಲೆಗೂ ಅನುಕೂಲಿಸುವಂತೆ ಒಂದು ಮೈಸೂರು ಸತ್ರವನ್ನು ತಿರುವಾಯೂರಿನಲ್ಲಿ ಕಟ್ಟಿಸಬೇಕು. ಅದಕ್ಕಾಗಿ ಚಂದಾಹಣ ಬೇಡಲು ಈಗ ಬಂದಿದ್ದೇನೆ."

ನಾನು ಈ ಸಂಗತಿಯನ್ನು ನನ್ನ ಸ್ನೇಹಿತರಾದ ಕೆಲಮಂದಿ ಮಂತ್ರಿಗಳಲ್ಲಿಯೂ ಹೇಳಿದೆ. ಯಾವುದೂ ಫಲಕ್ಕೆ ಬರಲಿಲ್ಲ. ಕಡೆಗೆ, ರಾಜಕೀಯದಲ್ಲಿ ನನಗೆ ಪ್ರತಿಕಕ್ಷಿ ಸ್ಥಾನದಲ್ಲಿದ್ದ ದಿವಾನ್ ರಾಮಸ್ವಾಮಿ ಮೊದಲಿಯಾರ್ ಅವರಿಗೆ ಹೇಳಿದೆ. ಅವರು ಆದರಿಸಿ ತಮ್ಮ ಕಾರು ಕಳುಹಿಸಿ ನಾಗರತ್ನಮ್ಮನವರನ್ನು ತಮ್ಮ ಮನೆಗೆ ಕರೆಯಿಸಿಕೊಂಡು ತಮ್ಮ ಧರ್ಮ ಪತ್ನಿಯವರ ಮೂಲಕ ಐದುನೂರು ರೂಪಾಯಿಗಳಷ್ಟನ್ನು ಕೊಡಿಸಿ ಬಳಿಕ ಮೊದಲಿಯಾರ್ ಸಂಘದಲ್ಲಿ ಕಛೇರಿ ನಡೆಸಿ ಒಂದು ಘನವಾದ ಸಂಭಾವನೆಯನ್ನು ಕೊಡಿಸಿದರು. ಮತ್ತು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಒಂದು ಸಹಾಯಾರ್ಥ ಕಛೇರಿ ಏರ್ಪಾಡು ಮಾಡುವಂತೆ ಸಲಹೆ ಕೊಟ್ಟು ತಾವೇ ಖುದ್ದು ಆ ಕಛೇರಿಗೂ ಬಂದು ಪ್ರೋತ್ಸಾಹಿಸಿದರು. ಹೀಗೆ ನಾಗರತ್ನಮ್ಮನವರ ಉದ್ದೇಶ ಸಂಪೂರ್ಣ ನಿಷ್ಫಲವಾಗಲಿಲ್ಲ.

ಸಂಗೀತ ಶಿಕ್ಷಣ ರೀತಿ

ನಾಗರತ್ನಮ್ಮ ಕಡೆಯ ಸಾರಿ ಬೆಂಗಳೂರಿಗೆ ಬಂದಾಗ ಬಸವನಗುಡಿಯಲ್ಲಿ ತಾರಾಬಾಯಮ್ಮನವರ ಮನೆಯಲ್ಲಿ ಇಳಿದುಕೊಂಡಿದ್ದರು. ನಾಗರತ್ನಮ್ಮನವರು ಶನಿವಾರ ಸಂಜೆ ದೇವರ ಪೂಜೆ ಮಾಡಿಸಿ ಭಜನೆ ಮಾಡುವುದು ವಾಡಿಕೆ. ಇಂಥ ಒಂದು ಸಂದರ್ಭಕ್ಕೆ ನಾನು ಹೋಗಿದ್ದೆ. ಭಜನೆಯಾದ ನಂತರ ಸದಾಶಿವರಾಯರ ಒಂದು ಕೀರ್ತನೆಯನ್ನು ಆಕೆ ಒಬ್ಬ ಶಿಷ್ಯಳಿಗೆ ಪಾಠ ಹೇಳಿಕೊಟ್ಟರು. ರಾಗ ಹರಿಕಾಂಬೋಧಿ ಎಂದು ನನ್ನ ಜ್ಞಾಪಕ.

ರಾಮಕಥಾಸುಧಾಸಾಗರಮೀಜೇ....

ಇದು ಬಹು ಕಷ್ಟವಾದ ಕೀರ್ತನೆ. ಮೊದಲು ಹರಿಕಾಂಬೋಧಿ ರಾಗವೇ ಕೊಂಚ ಕಷ್ಟದ್ದು. ಕಳೆದ ಮೂವತ್ತು ವರ್ಷಗಳಲ್ಲಿ ಯಾವ ಪ್ರಸಿದ್ಧ ವಿದ್ವಾಂಸನೂ ಆ ರಾಗವನ್ನು ಆಲಾಪನೆ ಮಾಡಿ ಪಲ್ಲವಿ ಹಾಡಿದ್ದನ್ನು ನಾನು ಕೇಳಿಲ್ಲ. ಬಹು ಸೊಗಸಾದ ಒಂದು ರಾಗ ಯಾವ ಕಾರಣದಿಂದಲೋ ಮೂಲೆಗೆ ಬಿದ್ದಿದೆ. ಈ ರಾಗದಲ್ಲಿ ಸದಾಶಿವರಾಯರ ಕೀರ್ತನೆಯೆಂದರೆ ಕಬ್ಬಿಣದ ಕಡಲೆ. ಅಂಥ ಕೃತಿಯನ್ನು ನಾಗರತ್ನಮ್ಮ ಆರಿಸಿಕೊಂಡು ಗಮಕಗಳನ್ನು ಸೇರಿಸುತ್ತಿದ್ದುದ್ದು ನನಗೆ ಅದ್ಭುತವೆನಿಸಿತು. ಆಕೆ ತನ್ನ ಕಂಠದಿಂದ ಸ್ವರಗಳನ್ನೂ ಜಾರುಗಳನ್ನೂ ನುಡಿದದ್ದಲ್ಲದೆ ಶಿಷ್ಯೆಗೂ ಆ ರೀತಿಯಲ್ಲಿ ಪಲುಕು ಬಡಿ ಬರುವಂತೆ ಅಕ್ಷರ ಅಕ್ಷರಕ್ಕೂ ಸ್ವರಸ್ವರಕ್ಕೂ ತಿದ್ದುತ್ತಿದ್ದದ್ದು ಸೋಜಿಗವೆನಿಸಿತು. ವೇದಾಕ್ಷರಗಳನ್ನು ಅಧ್ಯಯನ ಮಾಡುವುದರಲ್ಲಿ ಹೇಗೆ ಸ್ವರಕ್ರಮಕ್ಕೆ ಪ್ರಾಧಾನ್ಯ ಕೊಟ್ಟು ಅಧ್ಯಾಪಕರು ಗಮನವಿರಿಸಿರುತ್ತಾರೋ ಹಾಗೆ ನಾಗರತ್ನಮ್ಮನವರು ಸ್ವರವಿನ್ಯಾಸದ ಮೇಲೆ ಗಮನವಿರಿಸಿರುತ್ತಿದ್ದರು.

ನಾನು "ಇಷ್ಟು ಕಷ್ಟವಾದ ಕೀರ್ತನೆಯನ್ನು ಯಾಕಮ್ಮ ಆರಿಸಿಕೊಂಡಿರಿ ಈ ವಯಸ್ಸಿನಲ್ಲಿ?" ಎಂದು ಕೇಳಿದೆ. ಆಕೆ "ಸುಲಭವಾದದ್ದನ್ನು ಹೇಳಿಕೊಡುವುದಕ್ಕೆ ಎಷ್ಟೋ ಮಂದಿ ಸಿಕ್ಕಿಯಾರು. ಕಷ್ಟವಾದದ್ದನ್ನು ಕಲಿಸುವ ವಿದ್ವಾಂಸರು ಪೂರ್ವಕಾಲದಲ್ಲಿದ್ದರು. ಅಂಥವರು ನನ್ನ ಗುರುಗಳು. ಅವರು ಹಾಕಿಕೊಟ್ಟ ದಾರಿಯನ್ನು ನಾನು ಹಿಡಿದಿದ್ದೇನೆ" ಎಂದರು.

ಸಂಪ್ರದಾಯ

ಐದಾರು ದಿನಗಳಾದ ಮೇಲೆ ಒಂದು ಮಧ್ಯಾಹ್ನ ಸುಮಾರು ಮೂರೂವರೆ ಘಂಟೆಗೆ ನಾನು ಅವರಲ್ಲಿಗೆ ಹೋದೆ. ಆಕೆ ಹಾಸಿಗೆಯ ಮೇಲೆ ಮಲಗಿ ಮುಲುಗುತ್ತಿದ್ದರು. ನಾನು ಹೋಗಿ "ಏನಮ್ಮಾ" ಎಂದು ಕೂಗುತ್ತಲೇ ಕಣ್ಣು ಬಿಟ್ಟು ನೋಡಿ "ಮೈಯಲ್ಲಿ ಸ್ವಸ್ಥವಿಲ್ಲಪ್ಪಾ" ಎಂದು ಹೇಳುತ್ತ ಅಲ್ಲಿಯೇ ಎದ್ದು ಕುಳಿತರು. ನಾನು ಹೊರಡುತ್ತೇನೆಂದೆ. "ಬೇಡ, ನಿಮ್ಮೊಡನೆ ಕೊಂಚ ಮಾತನಾಡುತ್ತಿದ್ದರೆ ಈ ಜಾಡ್ಯ ಮರೆಯುತ್ತದೆ" ಎಂದರು.

ಮಾತು ನಾಟ್ಯಕಲೆಯ ಕಡೆಗೆ ತಿರುಗಿತು. ಪ್ರಾಸ್ತಾವಿಕವಾಗಿ ಹಳೆಯ ಸಂಪ್ರದಾಯದ ನಾಟ್ಯವನ್ನು ಕುರಿತು ಪ್ರಶ್ನೆಯೆತ್ತಿದೆ. ಆಕೆ- "ಈ ಮುದುಕಿ ಅದನ್ನು ಹೇಗೆ ತೋರಿಸುವುದು? ಕೂತ ಹಾಗೆಯೇ ಆದಷ್ಟು ತೋರಿಸುತ್ತೇನೆ" ಎಂದು ಹೇಳಿ ತಲೆಗೆ ಸುತ್ತಿದ್ದ ಬಟ್ಟೆಯನ್ನು ತೆಗೆದು ಹೊದ್ದಿದ್ದ ಕಂಬಳಿಯನ್ನು ದೂರ ತಳ್ಳಿ ಕೈಮುಗಿದು ಕುಳಿತು ರಾಗಾಲಾಪನೆಗೆ ಆರಂಭಿಸಿದರು.

ಸಭಾಕಲ್ಪತರುಂ ವಂದೇ
ವೇದಶಾಖೋಪಜೀವಿನಮ್ ।
ಶಾಸ್ತ್ರಪುಷ್ಪಸಮಾಯುಕ್ತಂ
ವಿದ್ವದ್‌ಭ್ರಮರಶೋಭಿತಮ್ ॥
ಷಡ್ದರ್ಶನೀಪರಿಜ್ಞಾನ-
ಪಂಡಿತೈರಿವ ಮಂಡಿತೈಃ ।
ಸ್ತಂಭೈಶ್ಚಿತ್ರೈರ್ವಿತಾನೈಶ್ಚ
ಸಭಾ ಕಿಮವಭಾಸತೇ ॥

"ಹೀಗೆ ಸಭಾವಂದನ ಮಾಡತಕ್ಕದ್ದು. ನಾಟರಾಗದಲ್ಲಿ ಪ್ರಾರಂಭಿಸುವುದು ಪದ್ಧತಿ. ಅನಂತರ ವಸಂತರಾಗಕ್ಕೆ ಬರತಕ್ಕದ್ದು. ಅದರಲ್ಲಿ ಪದಮಟ್ಟು ವರ್ಣ ಹಾಡತಕ್ಕದ್ದು."

ಇದನ್ನು ಹೇಳಿ ಒಂದು ಹತ್ತು ನಿಮಿಷ ಅದನ್ನು ಪ್ರದರ್ಶನ ಮಾಡಿದರು. ನರ್ತನದಲ್ಲಿ ಪೀಠಿಕಾಭಾಗಕ್ಕೆ ಅಲರಿಪು ಎಂದು ಹೆಸರು. ಹಾಗೆಂದರೆ "ಹೂವು ಅರಳುವುದು" ಎಂದರ್ಥ. ಹೂ ಅರಳಿದಂತೆ ಸಭಿಕರ ಮನಸ್ಸು ಅರಳಬೇಕು. ಪದವನ್ನು ಹಾಡಿ

ಅಭಿನಯಿಸಿದರೆ ಕಲಾವಂತೆಯ ಮನಸ್ಸೂ ಅರಳಬೇಕು; ಕೇಳುವವರ ಮತ್ತು ನೋಡುವವರ ಮನಸ್ಸೂ ಅರಳಬೇಕು.

ಈ ವಿವರಣೆಯಾದ ಮೇಲೆ ನಾನು ಹಿಂದೆ ಉದಾಹರಿಸಿದ (ಪುಟ ೧೮೮) "ಯಾಹಿಮಾಧವ" ಎಂಬ ಅಷ್ಟಪದಿಯನ್ನು ಪ್ರಶಂಸೆ ಮಾಡಿದೆ. ನಾಗರತ್ನಮ್ಮ ಆ ಭಾಗವನ್ನು ಹಿಡಿದು ಅಷ್ಟಪದಿಯನ್ನು ಅಭಿನಯಿಸಿದರು. "ಯಾಹಿ" ಎಂಬ ಸಣ್ಣ ಮಾತಿನಲ್ಲಿ ಅಷ್ಟೊಂದು ಭಾವವಿಶೇಷಗಳು ಅಡಗಿವೆಯೆಂಬುದು ಆಗಲೇ ನನಗೆ ಸ್ಪಷ್ಟವಾದದ್ದು. ಮಹಾಕವಿಯು ಹೇಗೆ ನೂತನ ನಿರ್ಮಾಪಕನೋ (Creative), ಮಹಾ ಅಭಿನಯವೇತ್ತಳು ಹಾಗೆ ನಿರ್ಮಾಪಕಳಾಗುತ್ತಾಳೆ. ಅಭಿನಯವೂ ಒಂದು ರೀತಿಯ ಭಾಷ್ಯ.

***

ನಾಗರತ್ನಮ್ಮನವರಲ್ಲಿ ಹಾಸ್ಯಪರಿಪಾಟಿ ತುಂಬಿತ್ತು. ಆಕೆ ಸ್ವವಿಷಯವನ್ನು ಹೇಳಿಕೊಳ್ಳುತ್ತಾ "ಹುಟ್ಟಿನಲ್ಲಿ ನಾಗರತ್ನ, ಆಮೇಲೆ ಭೋಗರತ್ನ, ಈಗ ರೋಗರತ್ನ" ಎಂದು ಮಾತು ಮುಗಿಸಿದರು. ನಾನು "ಎರಡನ್ನು ಮರೆತುಬಿಟ್ಟಿರಿ" -ಎಂದೆ. "ಅದೇನು?" ಎಂದರು. "ಒಂದು ರಾಗರತ್ನ; ಇನ್ನೊಂದು ತ್ಯಾಗರತ್ನ. ಭೋಗ- ರೋಗಗಳು ಕ್ಷಣಿಕವಾದವು. ನಿಮ್ಮ ರಾಗ ಅದನ್ನು ಕೇಳಿದವರ ಮನಸ್ಸಿನಲ್ಲಿ ಪರಿಣಾಮಮಾಡಿ ಅವರ ಜೀವನೋಲ್ಲಾಸದಲ್ಲಿಯೂ ಜೀವನೋನ್ನತಿಯಲ್ಲಿಯೂ ಚಿರಕಾಲ ಉಳಿದುಕೊಂಡಿರುತ್ತದೆ. ನಿಮ್ಮ ತ್ಯಾಗದ ಪ್ರತ್ಯಕ್ಷ ರೂಪವಾದ ತಿರುವಾಯೂರು ಕ್ಷೇತ್ರದ ದೇವತಾ ಮಂದಿರಗಳು ಶಾಶ್ವತವಾಗಿ ನಿಂತಿರುತ್ತವೆ."

ಇದನ್ನು ನಾನು ಹೇಳುತ್ತಿದ್ದಂತೆ ನಾಗರತ್ನಮ್ಮನವರು ಕೈಮುಗಿದು "ನಿಮ್ಮ ಈ ಮಾತನ್ನು ನೀವೇ ಇಟ್ಟು ಕೊಳ್ಳಿ" ಎಂದರು.

ಅನುಬಂಧ

೧೯೪೯ರ ಮಾರ್ಚಿ ತಿಂಗಳಲ್ಲಿ ಮದರಾಸಿನ “ಗೃಹಲಕ್ಷ್ಮಿ” ಎಂಬ ಆಂಧ್ರ ಮಾಸ ಪತ್ರಿಕೆಯ ಸಂಪಾದಕರೂ ಕೇಸರೀಕುಟೀರಂ ಎಂಬ ಆಯುರ್ವೇದ ಔಷಧಶಾಲೆಯ ವ್ಯವಸ್ಥಾಪಕರೂ ಆದ ಡಾ ॥ ಕೆ. ಎನ್. ಕೇಸರಿ ಎಂಬ ಮಹನೀಯರು ನಾಗರತ್ನಮ್ಮನವರಿಗೆ ಒಂದು ಸ್ವರ್ಣಕಂಕಣವನ್ನು ಕೊಟ್ಟು ಬಹುಮಾನಿಸಿದರು. ಆ ಸಮಾರಂಭಕ್ಕಾಗಿ ಸೇರಿದ್ದ ಮಹಾಸಭೆಯಲ್ಲಿ ಮದರಾಸ್ ಮಹಿಳಾಮಂಡಲಿಯವರು ಆಕೆಗೆ “ತ್ಯಾಗಸೇವಾಸಕ್ತ” ಎಂಬ ಪ್ರಶಸ್ತಿಯನ್ನಿತ್ತರು. ಈ ಸಮಾರಂಭಗಳ ವೃತ್ತಾಂತವು “ಗೃಹಲಕ್ಷ್ಮಿ” ಪ್ರತಿಕೆಯ ೧೯೪೯ರ ಮಾರ್ಚಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆ ವೇಳೆಗೆ ಮುಂಚೆಯೇ ನಾಗರತ್ನಮ್ಮನವರಿಗೆ “ವಿದ್ಯಾಸುಂದರಿ”, “ಗಾನಕಲಾ ವಿಶಾರದಾ” ಮೊದಾಲಾದ ಬಿರುದುಗಳು ಬಂದಿದ್ದವು. ಆಕೆಯ ಜೀವಿತ ಚರಿತ್ರೆಯನ್ನು ಕುರಿತ ಕೆಲವು ಸಂಗತಿಗಳು “ಗೃಹಲಕ್ಷ್ಮಿ” ಪತ್ರಿಕೆಯಲ್ಲಿ ಪ್ರಕಟವಾಗಿವೆ:

1. ಆಕೆಯ ಜನನ ಕ್ರಿಸ್ತವರ್ಷ ೧೮೭೭ಲಕ್ಕೆ ಸರಿಯಾದ ಬಹುಧಾನ್ಯ ಸಂವತ್ಸರದಲ್ಲಿ.
2. ಆಕೆಯ ತಾಯಿ ಪುಟ್ಟಲಕ್ಷ್ಮಮ್ಮನವರು.
3. ನಾಗರತ್ನಮ್ಮ ಬೆಂಗಳೂರಿನಲ್ಲಿ ವಾಸವಾಗಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದದ್ದು ಮುನಿಸ್ವಾಮಪ್ಪನವರ ಮನೆಯಲ್ಲಿ.
4. ಆಕೆಗೆ ಭರತಶಾಸ್ತ್ರ ಶಿಕ್ಷಣ ಮದರಾಸಿನ ತಿರುವೆಂಕಟಾಚಾರ್ಯರು, ಬೆಂಗಳೂರು ಕಿಟ್ಟಣ್ಣ-ಇವರಲ್ಲಿ.
5. ಆಕೆಯ ಸಂಗೀತ ಗುರುಗಳಲ್ಲಿ ಬಿಡಾರಂ ಕೃಷ್ಣಪ್ಪನವರು, ರಾಮನಾಡ್ ಶ್ರೀನಿವಾಸಯ್ಯಂಗಾರ್ಯರು, (ಬೂಚಿ) ಪೂಚಿ ಅಯ್ಯಂಗಾರ್ಯರು-ಇವರು ಮುಖ್ಯರು.

೪

ಮುಳಬಾಗಲಿನ ಪಿಟೀಲುಗಾರರು

ಮುಳಬಾಗಲಿನ ಪಿಟೀಲುಗಾರರಲ್ಲಿ ನಾಲ್ವರು ಮುಖ್ಯರು:

1. ಮಾಧವಯ್ಯ
2. ರಾಮಚಂದ್ರಾಚಾರ್ಯರು
3. ವೆಂಕಟಪ್ಪ
4. ಸೇತುಮಾಧವರಾಯರು.

ಇವರಲ್ಲಿ ಮಾಧವಯ್ಯ ವಾದ್ಯಾಧಿಕಾರದಲ್ಲಿಯೂ ರಾಗನೈಪುಣಿಯಲ್ಲಿಯೂ ಮೊದಲಿಗ. ಆದರೆ ಸೇತುಮಾಧವರಾಯರು ವಯಸ್ಸಿನಲ್ಲಿಯೂ ಅನುಭವದಲ್ಲಿಯೂ ಹಿರಿಯರು. ಆದದ್ದರಿಂದ ಇವರನ್ನು ಕುರಿತು ಮೊದಲು ಹೇಳುತ್ತೇನೆ.

ಸೇತುಮಾಧವರಾಯರು

ಸೇತುಮಾಧವರಾಯರು ವೈಷ್ಣವ ದೇಶಸ್ಥ ಬ್ರಾಹ್ಮಣರು. ಅವರ ಪೂರ್ವಿಕರು ಶ್ರೀಮಂತರಾಗಿದ್ದರೆಂದು ಜನ ಹೇಳುತ್ತಿದ್ದರು. ಸೇತುಮಾಧವರಾಯರು ನೆಮ್ಮದಿವಂತರು. ನಾನು ಅವರನ್ನು ನೋಡುವಾಗ್ಗೆ ಅವರು ಎಪ್ಪತ್ತು ವರ್ಷ ದಾಟಿದ್ದ ಮುದುಕರು. ಅವರಿಗೆ ಕಳತ್ರ ಪುತ್ರಾದಿವಿಯೋಗವಾಗಿತ್ತಂತೆ. ಆದದ್ದರಿಂದ ಅವರು ಯಾರೋ ಒಬ್ಬರು ದೂರದ ಬಂಧುಗಳ ಮನೆಯಲ್ಲಿ ಊಟಮಾಡುತ್ತಿದ್ದರು. ವಾಸ ಬೇರೆ ಕಡೆ. ಅವರು ತಮ್ಮ ಕಾಲವನ್ನು ಪಿಟೀಲು ಅಭ್ಯಾಸ, ವಿನೋದದ ಹರಟೆ, ಇಸ್ಪೀಟಾಟ-ಇದರಲ್ಲಿ ಕಳೆಯುತ್ತಿದ್ದರು. ಆಗಾಗ ನರಸಿಂಹತೀರ್ಥಕ್ಕೆ ಹೋಗಿ ಪೂಜೆಮಾಡಿಸಿ ಬರುತ್ತಿದ್ದದ್ದೂ ಉಂಟು. ದಿನವೂ ಸಂಜೆ ಪ್ರಾಣದೇವರ ಗುಡಿಗೆ ಹೋಗಿ ಬರುತ್ತಿದ್ದರು. ಅವರ ಕಡೆಯ ದಿನಗಳಲ್ಲಿ ಅವರನ್ನು ಜನ ಸೇತುಮಾಧವ ದಾಸರು ಎಂದೂ ಕರೆಯುತ್ತಿದ್ದರು. ಒಟ್ಟಿನಮೇಲೆ ಅವರು ಖುಷ್‌ಭಾಷ್ ಮನುಷ್ಯರು.

ಜ್ಯೇಷ್ಠಮಾಸದಲ್ಲಿ ನರಸಿಂಹತೀರ್ಥದಲ್ಲಿ ಶ್ರೀಪಾದರಾಜ ಸ್ವಾಮಿಗಳ ರಥೋತ್ಸವ ನಡೆಯುತ್ತದೆ. ಅರುವತ್ತು ವರ್ಷಗಳ ಹಿಂದೆ ಆ ಉತ್ಸವಕ್ಕೆ ಎಂಟು ಹತ್ತು ಸಾವಿರ ಮಂದಿ ಸೇರುತ್ತಿದ್ದರು.

ಶ್ರೀಪಾದರಾಜರು ಮಹಾಮಹಿಮರು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಕರ್ಣಾಟಕ ಸಂಗೀತ ಚರಿತ್ರೆಯಲ್ಲಿಯೂ ಅವರು ಪ್ರಥಮಪಂಕ್ತಿಯ ಸ್ಮರಣೀಯರು. ಅವರ ಸಮಾಧಿಯ ಮೇಲೆ ವೃಂದಾವನ ಬಹು ದೊಡ್ಡದಾಗಿ ಪ್ರೇಕ್ಷಣೀಯವಾಗಿದೆ. ಪ್ರದಕ್ಷಿಣೆ ಹೋಗಲು ಅನುಕೂಲವಾದ ನೆರಳು ಮಂಟಪ ಇದೆ. ಅದಲ್ಲದೆ ಯೋಗನರಸಿಂಹ ದೇವಾಲಯ, ಆಂಜನೇಯ ಮೂರ್ತಿಯ ದೇವಾಲಯ, ವ್ಯಾಸರಾಯರ ಪಾಠಸ್ಥಾನ, ಸಮಾಧಿಸ್ಥರಾದ ಇತರ ಸ್ವಾಮಿಗಳ ವೃಂದಾವನಗಳು, ನರಸಿಂಹತೀರ್ಥವೆಂಬ ವಿಶಾಲವಾದ ಪುಷ್ಕರಿಣಿ, ನಾಲ್ಕಾರು ಮಂಟಪಗಳು-ಇವೆಲ್ಲ ಆ ಕ್ಷೇತ್ರವನ್ನು ಭಕ್ತಾಕರ್ಷಕವನ್ನಾಗಿ ಮಾಡಿವೆ.

ಶ್ರೀಪಾದರಾಜರ ರಥೋತ್ಸವದ ಮಾರನೆಯ ದಿನ ಪಲ್ಲಕ್ಕಿ ಉತ್ಸವ ನಡೆಯುವುದು ಪದ್ಧತಿ. ಅಂದು ಪಾಲಕಿಯಲ್ಲಿ ಸ್ವಾಮಿಗಳ ವೃಂದಾವನವನ್ನಿರಿಸಿ ಓಲಗದೊಡನೆ ಮೆರವಣಿಗೆ ಹೊರಟು ಮುಳಬಾಗಲು ಊರಿನ ಮುಖ್ಯ ಬೀದಿಗಳಲ್ಲಿ ಬಂದು ಊರಿನ ಮಧ್ಯದಲ್ಲಿರುವ ಶ್ರೀಪಾದರಾಜಮಠಕ್ಕೆ ಬಿಜಯ ಮಾಡಿಸಿ ಅಲ್ಲಿ ಮಂಗಳಾರತಿಯೂ ಪ್ರಸಾದ ವಿನಿಯೋಗವೂ ನಡೆದ ತರುವಾಯ ಮೆರವಣಿಗೆ ಹೊರಟು ಮತ್ತೆ ನರಸಿಂಹತೀರ್ಥವನ್ನು ಸೇರುತ್ತಿತ್ತು. ಈ ಮೆರವಣಿಗೆಯಲ್ಲಿ ಸೇತುಮಾಧವರಾಯರು ಇರುತ್ತಿದ್ದರು.

ಮೆರವಣಿಗೆಯ ಕ್ರಮ ಹೀಗೆ: ಮೊದಲು ಮೇಳದವರು. ಅವರ ಹಿಂದೆ ಹರಿದಾಸರ ಗುಂಪು. ಅವರು ದೇವರನಾಮಗಳನ್ನು ಹೇಳುತ್ತಿದ್ದರು. ಆ ಬಳಿಕ ಇತರ ಮಾಧ್ವಬ್ರಾಹ್ಮಣರ ಸಮೂಹ. ಆಮೇಲೆ ವೃಂದಾವನವುಳ್ಳ ಪಾಲಕಿ. ಅದರ ಹಿಂದೆ ಇತರರು.

ಭಜನೆಯ ಗುಂಪಿನ ನಾಯಕರು ಅಚ್ಚಪ್ಪದಾಸರು. ಇವರು ಬೇರೊಂದು ಪ್ರಕರಣಕ್ಕೆ ಅರ್ಹರಾದಷ್ಟು ಸ್ವಾರಸ್ಯವುಳ್ಳ ವ್ಯಕ್ತಿ. ಇವರು ಕೂಡ ಸೇತುಮಾಧವರಾಯರನ್ನು ಗೌರವಾದರಗಳಿಂದ ಕಾಣುತ್ತಿದ್ದರು.

ಮೆರವಣಿಗೆ ಊರಲ್ಲಿ ಎರಡು ಮೂರು ಕಡೆ ಅಲ್ಲಲ್ಲಿ ನಿಂತು ಐದು ಹತ್ತು ನಿಮಿಷಗಳ ಕಾಲ ಸುಧಾರಿಸಿಕೊಂಡು ಮುಂದೆ ಹೊರಡುವುದು ಪದ್ಧತಿ. ನಮ್ಮ ಮನೆಯ ಮುಂದೆ ಜಗಲಿಗಳು ವಿಸ್ತಾರವಾಗಿ, ನೆರಳು ತಂಪಾಗಿರುತ್ತಿದ್ದದ್ದರಿಂದ ಮೆರವಣಿಗೆ ಅಲ್ಲಿ ಕೊಂಚ ನಿಲ್ಲುವುದು ವಾಡಿಕೆ. ಆಗ ಭಜನೆಯವರು ಆ ಜಗಲಿಗಳ ಮೇಲೆ ಕೂಡುತ್ತಿದ್ದರು.

ಸೇತುಮಾಧವರಾಯರು ತಮ್ಮ ಪೇಟಿಲನ್ನು ತೆಗೆದುಕೊಂಡು ಕೊಂಚ ನುಡಿಸುತ್ತಿದ್ದರು. ಅದನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರು. ಆದರೆ ರಾಯರು ಐದು ಹತ್ತು ನಿಮಿಷ ನುಡಿಸಿದ ಬಳಿಕ ಎಲ್ಲರ ಕಡೆಯೂ ತಿರುಗಿ "ಏನಪ್ಪಾ ನುಡಿಸುವುದು? ರಟ್ಟೆಯಲ್ಲಿ ತ್ರಾಣವಿದ್ದರೆ ತಾನೆ? ಈಗ ಮುದುಕನಾಗಿಬಿಟ್ಟೆ!" -ಎನ್ನುವರು. ಅಲ್ಲಿದ್ದ ಕೆಲವರು "ಹೌದು ಹೌದು ಪಾಪ. ವಯಸ್ಸಿದ್ದಾಗ ರಟ್ಟೆಗಳು ಬಹಳ ಮೆಹನತ್ತು ಮಾಡಿದ್ದಿರಬೇಕು" ಎನ್ನುತ್ತಿದ್ದರು. ಕೆಲವರು ಮುಸಿನಗು ನಗುತ್ತಿದ್ದರು. ರಾಯರಿಗೆ ಆ ಮಾತು ಅಸಮ್ಮತವಾಗಿರಲಿಲ್ಲ.

ಸೇತುಮಾಧವರಾಯರು ಕೆಲವು ಭಕ್ತಿಕೀರ್ತನೆಗಳನ್ನೂ ರಚಿಸಿದ್ದರು. ಅವುಗಳಲ್ಲಿ ನಾನು ಕೇಳಿರುವುದು ಒಂದು:

ಶ್ರೀಪಾದರಾಯರ-ಸ್ಮರಣೆಯ ಮಾಡಲು
ಪಾಪಗಳೆಲ್ಲವೂ-ಪರಿಹಾರವೋ ರಂಗಾ ॥

ರಾಯರು ಇದನ್ನು ಬಹು ಭಕ್ತಿಯಿಂದ ಹಾಡುತ್ತಿದ್ದರು. ಅದು ಬೇಹಾಗ್ ರಾಗದಲ್ಲಿ ಎಂದು ನನ್ನ ನೆನಪು. ರಾಯರು ಹಾಡಿ ಮುಗಿಸಿದ ಕೆಲವು ನಿಮಿಷಗಳಾದ ಮೇಲೆ ಅವರಲ್ಲಿ ಸಲಿಗೆಯುಳ್ಳ ಒಬ್ಬರು "ಒಳ್ಳೆಯ ಉಪಾಯ ಮಾಡಿಕೊಂಡಿದ್ದೀರಿ-ಪಾಪ ಪರಿಹಾರಕ್ಕೆ ಈ ಹೊತ್ತಿನವರೆಗೆ ಆದದ್ದು ಈಗ ಕಳೆದುಹೋಯಿತು. ಇನ್ನು ಹೊಸ ಲೆಕ್ಕ ತಾನೆ?" ಎನ್ನುವರು. ರಾಯರು ಮುನಿಸಿನ ಮುಖದಿಂದ "ಹೂ....ಗಂಡರಿರಾ" ಎಂದು ಬಯ್ಯುವರು. ಆದರೆ ಅವರ ತುಟಿಯಲ್ಲಿ ನಗೆ ನಲಿದಾಡುತ್ತಿತ್ತು. ಇನ್ನು ಕೆಲವರು ಕುಚೇಷ್ಟೆಗಾರರು

ಸ್ತ್ರೀಪಾದರಾಯರು....

ಎಂದು ಅಣಕಿಸುವುದೂ ಉಂಟು. ಆಗ ರಾಯರು ಇನ್ನೂ ರೇಗುತ್ತಿದ್ದರು. ಆದರೆ ಅದರಲ್ಲಿ ರೋಷವಾಗಲಿ ದ್ವೇಷವಾಗಲಿ ಇರಲಿಲ್ಲ. ಮರುಕ್ಷಣದಲ್ಲಿಯೇ ಎಲ್ಲರೂ ನಗುತ್ತಿದ್ದರು.

ನನ್ನ ಮನಸ್ಸಿನಲ್ಲಿ ಉಳಿದಿರುವ ಮುದ್ರಿಕೆ ಒಟ್ಟಿನ ಮೇಲೆ ಒಬ್ಬ ರಸಿಕ ಭಕ್ತರದು. ರಾಯರ ಪುಣ್ಯಪಾಪಗಳು ಅವರಿಗೂ ಅವರು ನಂಬಿಕೊಂಡಿದ್ದ ದೈವಕ್ಕೂ ನಡುವೆ ಲೆಕ್ಕಕ್ಕೆ ಬರತಕ್ಕವು. ಇತರರಿಗಾದರೋ ಲೆಕ್ಕಕ್ಕೆ ಸಿಕ್ಕತಕ್ಕದ್ದು ರಾಯರ ಸರಳತೆ, ಅವರ ಸಂಗೀತದ ರಸಭಾವ, ಅವರ ಔದಾರ್ಯ.

ಮಾಧವಯ್ಯ

ಈತ ಹುಟ್ಟಿನಿಂದ ನಟುವಾಂಗದವನು. ಜೀವನ ಬೇಸಾಯದಿಂದ, ಸ್ವಂತವಾಗಿ ಜಮೀನು ಸಾಗುವಳಿಯನ್ನಿಟ್ಟುಕೊಂಡಿದ್ದ.

ಆತನಿಗೆ ಇಬ್ಬರು ಹೆಣ್ಣು ಮಕ್ಕಳು: ಗೌರಿ, ಪದ್ಮಾಸಾನಿ. ಅವರಿಬ್ಬರೂ ಸೊಗಸಾಗಿ ಹಾಡುತ್ತಿದ್ದರು. ಆಗಾಗ ಸಾಹುಕಾರರ ಮನೆಯ ಮದುವೆ ಮೊದಲಾದ ಶುಭಸಮಯದಲ್ಲಿ ಅವರ ಸಂಗೀತ ಕಛೇರಿಯಾಗುತ್ತಿತ್ತು.

ಮಾಧವಯ್ಯನ ಬಳಿ ಪಿಟೀಲು ಕಲಿಯಲು ವಿದ್ಯಾರ್ಥಿಗಳು ಪರಸ್ಥಳದಿಂದ ಬರುತ್ತಿದ್ದರು. ಅವರ ಪೈಕಿ ಇಬ್ಬರ ಗುರುತನ್ನು ನಾನು ಹೇಳಬಹುದು. ಮೊದಲನೆಯಾತ ಪುಟ್ಟಸ್ವಾಮಿ. ಈತ ಪ್ರಸಿದ್ಧ ಗಾಯಕಿಯಾದ ಕೋಲಾರದ ನಾಗರತ್ನಮ್ಮನವರ ಸಹೋದರ. ಇವರ ತಾಯಿ ನಂಜುಂಡಾಸಾನಿ ಬಹು ಪ್ರಸಿದ್ಧಳಾದ ಗಾಯಕಿ ಮತ್ತು ನರ್ತಕಿ. ಆಕೆ ಬೆಂಗಳೂರು ಮದರಾಸುಗಳಲ್ಲಿ ಮಹಾಸಭೆಗಳಲ್ಲಿ ವಿದ್ವತ್ತನ್ನು ತೋರಿಸಿ ಬಹುಮಾನಗಳಿಸಿದವಳು. ಪುಟ್ಟಸ್ವಾಮಯ್ಯ ಬೆಂಗಳೂರಿನಲ್ಲಿ ಹೆಸರುವಾಸಿಯಾಗಿದ್ದನು. ಅಡ್ವೊಕೇಟ್ ಡಿ. ರಾಘವಾಚಾರ್ಯರ ಮನೆಯಲ್ಲಿಯೂ ಇತರ ಕಡೆಗಳಲ್ಲಿಯೂ ತನ್ನ ಪ್ರತಿಭೆಯನ್ನೂ ಕೈವಾಡವನ್ನೂ ತೋರಿಸಿ ಮೆಚ್ಚಿಕೆ ಸಂಪಾದಿಸಿದ್ದ. ನಡುವಯಸ್ಸಿನಲ್ಲಿಯೇ ದೈವಾಧೀನನಾದ.

ಮಾಧವಯ್ಯನ ಇನ್ನೊಬ್ಬ ಶಿಷ್ಯ ರಂಗನಾಥರಾವ್ ಎಂಬಾತ. ಈತ ಬ್ರಾಹ್ಮಣ. ನಮ್ಮ ಮನೆಯಲ್ಲಿ ಊಟ ಮಾಡಿಕೊಂಡಿದ್ದ. ಈತನ ವಿಷಯದಲ್ಲಿ ಹೇಳಬೇಕಾದ ಸಂಗತಿ ಒಂದಿದೆ. ಈತ ಆಗಾಗ ನನ್ನ ಅಜ್ಜಂದಿರಲ್ಲಿ ಮಾತನಾಡುತ್ತ ತನ್ನ ಗುರುವಿನ ವಿಷಯದಲ್ಲಿ ಅಸಮಾಧಾನ ತೋರಿಸುತ್ತಿದ್ದ, ತನಗೆ ಆತ ಮರ್ಯಾದೆ ತೋರಿಸುತ್ತಿರಲಿಲ್ಲವೆಂದು. ಒಂದು ದಿನ ನನ್ನ ತಾತಂದಿರು ಮಾಧವಯ್ಯನನ್ನು ಕಂಡಾಗ ಹೀಗೆ ಆಕ್ಷೇಪಿಸಿದರು (ತೆಲುಗಿನಲ್ಲಿ):

“ಏನೋ ಮಾಧವ, ನಿನಗೆ ಕೊಬ್ಬು ಹೆಚ್ಚಾಯಿತೇನೋ? ಬ್ರಾಹ್ಮಣರಿಗೆ ಅವಮಾನ ಮಾಡುತ್ತೀಯಾ?”

ಮಾಧವಯ್ಯನ ಮನೆ ನಮ್ಮ ಮನೆಗೆ ಬಹು ಸಮೀಪವಾಗಿತ್ತು. ಆದದ್ದರಿಂದ ನನ್ನ ತಾತಂದಿರಿಗೆ ಸಲಿಗೆ. ಅಷ್ಟೇ ಅಲ್ಲದೆ ಊರಿನಲ್ಲಿ ಯಜಮಾನಿಕೆ ನಡೆಸಿ ಯಜಮಾನ

ಧೋರಣೆಯಿಂದ ಮಾತನಾಡುವುದು ನನ್ನ ತಾತಂದಿರ ರೂಢಿ, ಅದನ್ನು ಎಲ್ಲರೂ ನಡೆಸಿ ಕೊಡುತ್ತಿದ್ದರು.

ಮಾಧವಯ್ಯ ಮೇಲಣ ಆಕ್ಷೇಪಣೆಯನ್ನು ಕೇಳಿ ಕೋಪ ತೋರಿಸಲಿಲ್ಲ. ವಿನಯದಿಂದಲೇ ಜವಾಬು ಹೇಳಿದ, ಹೀಗೆ:

"ನಾನು ಬ್ರಾಹ್ಮಣರಿಗೆ ಅವಮರ್ಯಾದೆ ಮಾಡುತ್ತೇನೆಯೇ ಸ್ವಾಮಿ? ಅದು ಎಂದಾದರೂ ನಡೆದೀತೆ? ನೀವು ನನ್ನನ್ನು ಚಿಕ್ಕಂದಿನಿಂದ ಬಲ್ಲವರು. ನಾನು ಈತನಿಗೆ ನನ್ನ ಬೇಸಾಯದ ಕೆಲಸದಲ್ಲಿ ಸಹಾಯವಾಗಬೇಕೆಂದು ಕೇಳಿದೆ. 'ಮೇಡಿನಲ್ಲಿಗಾಡಿ ಹೊಡೆಯುವಾಗ ಎತ್ತಿಗೆ ಆಯಾಸವಾಗುತ್ತದೆ, ಸ್ವಲ್ಪ ಚಕ್ರ ತಳ್ಳು' ಎಂದು ಹೇಳಿದೆ ಅಷ್ಟೆ. ಅದು ತಪ್ಪಾದರೆ ನಾನು ಈಗಲೇ ನಿಮ್ಮ ಕಾಲಿಗೆ ಬೀಳುತ್ತೇನೆ."

ನಮ್ಮ ತಾತನವರಿಗೆ ಅರ್ಥವಾಯಿತು. ಅವರು ರಂಗನಾಥರಾಯನನ್ನು ಕುರಿತು "ಏನಯ್ಯಾ, ನೀನು ಗುರು ಶುಶ್ರೂಷೆ ಮಾಡಬೇಡವೆ? ವಿದ್ಯೆ ಸುಮ್ಮಸುಮ್ಮನೆ ಬರುತ್ತದೆಯೆ? ಆತ ವಿದ್ವಾಂಸ. ನೀನು ಅವನಿಗೆ ಏನು ಗುರುದಕ್ಷಿಣೆ ಕೊಟ್ಟೀಯೆ? ಸಣ್ಣ ಪುಟ್ಟ ಕೆಲಸ ಹೇಳಿದರೆ ಸಂತೋಷದಿಂದ ಅದನ್ನು ಮಾಡಬೇಕು" ಎಂದು ಹೇಳಿದರು.

ಇನ್ನೊಂದು ದಿನ ಇನ್ನೂ ಕಟುವಾದ ಒಂದು ಪ್ರಸಂಗ ನಡೆಯಿತು. ಊಟ ಮಾಡುತ್ತಿದ್ದಾಗ ರಂಗನಾಥರಾಯನು ಅಳುಮೋರೆ ಮಾಡಿಕೊಂಡು "ಮಾಧವಯ್ಯ ನನ್ನನ್ನು ಹೊಡೆದರು" -ಎಂದು ಹೇಳಿದ. ನನ್ನ ತಾತಂದಿರು "ಆಗಲಿ ವಿಚಾರಿಸೋಣ, ಸಮಾಧಾನದಿಂದ ಊಟ ಮಾಡು" ಎಂದರು ಆ ಸಂಜೆ ಮಾಧವಯ್ಯ ಬೀದಿಯಲ್ಲಿ ಹೋಗುತ್ತಿದ್ದಾಗ ಆತನನ್ನು ಬಳಿಗೆ ಕರೆದು "ಏನೋ, ಹೊಡೆಯುತ್ತೀಯಾ? ಈ ವಿದ್ಯೆ ಎಂದಿನಿಂದ?" ಎಂದು ರೇಗಾಟದ ಧ್ವನಿಯಲ್ಲಿ ಕೇಳಿದರು. ಮಾಧವಯ್ಯ ಹೀಗೆ ಜವಾಬು ಹೇಳಿದ:

"ಸ್ವಾಮಿ, ಈತನಿಗೆ ನಾನು ಬಹಳ ದಿನಗಳಿಂದ ಒಂದು ಕೀರ್ತನೆ ಪಾಠ ಮಾಡಿಸುತ್ತಿದ್ದೇನೆ. ಅದು ತ್ಯಾಗರಾಜರ ಕೀರ್ತನೆ, ಬಹು ಸೊಗಸಾದದ್ದು. ಅದು ಕಾಂಭೋಜಿ ರಾಗದಲ್ಲಿದೆ, ಹೀಗೆ:

ಓ-ಓ-ಓ ರಂಗಶಾಯೀ
ಎನಿ ಪಿಲಚಿತೇ ರಾ-ರಾ-ದಾ ॥

ಇದರಲ್ಲಿ 'ಓ' ಎಂಬುದೂ 'ರಾ' ಎಂಬುದೂ ಖಂಡಖಂಡವಾಗಿ ಬರಬಾರದು. ಸಂಗೀತವು ತುಂಡುತುಂಡಾಗಿರತಕ್ಕದ್ದಲ್ಲ; ಅಖಂಡ ಪ್ರವಾಹವಾಗಿ ಬರಬೇಕು. ಈ ಕೀರ್ತನೆಯಲ್ಲಿ

ಭಗವಂತನನ್ನು ತೊಟ್ಟಿಲಿನಲ್ಲಿರಿಸಿ ತೂಗುತ್ತಿರುವಂತೆ ಭಾಸವಾಗಬೇಕು. ತೊಟ್ಟಿಲು ಹಿಂದಕ್ಕೂ ಮುಂದಕ್ಕೂ ಹೋಗಿಬರುವಂತೆ 'ಓ-ಓ-ಓ, 'ರಾ-ರಾ-ರಾ' -ಇವು ಬರಬೇಕು. ಅಕ್ಷರಗಳು ತೆರೆತೆರೆಗಳಂತೆ ಒಂದನ್ನೊಂದು ಎಡೆಬಿಡದೆ ಹಿಂಬಾಲಿಸಿಕೊಂಡು ಬರಬೇಕು. ಈತ ನಾನು ಎಷ್ಟು ಸಾರಿ ಹೇಳಿದರೂ ಅಕ್ಷರಗಳನ್ನು ಸರಪಳಿಯಂತೆ ಹೇಳದೆ ಅಲ್ಲಲ್ಲಿಗೆ ಮೊಟಕು ಮಾಡಿ ಹೇಳುತ್ತಾನೆ. ನನ್ನ ಮಾತಿನ ಮೇಲೆ ಈತನಿಗೆ ಲಕ್ಷ್ಯವೇ ಇಲ್ಲ. ಕೀರ್ತನೆಯನ್ನು ತುಂಡುತುಂಡು ಮಾಡಿ ಹೇಳಿದರೆ ಗೀತವಾಗುತ್ತದೆಯೆ? ಈತನಿಗೆ ಪಾಠದ ಮೇಲೆ ನಿಗಾ ಇಲ್ಲ. ನನಗೆ ಕೋಪ ಬಂದು ಆ ಆವೇಶದಲ್ಲಿ ಪಿಟೀಲು ಕಮಾನಿನಿಂದ ಈತನನ್ನು ಹಾಗಂದದ್ದುಂಟು. (ನನ್ನ ಕಡೆ ಕೈ ತೋರಿಸಿ) ಇವರು ಆಗ ಅಲ್ಲಿದ್ದರು. ಅವರನ್ನೇ ಕೇಳಿ ನಾನು ಹೊಡೆದೆನೇನೋ. ಎಷ್ಟು ಪೆಟ್ಟು ಬಿತ್ತೋ ಹೇಳಿ."

ನಮ್ಮ ತಾತ ಅರ್ಥ ಮಾಡಿಕೊಂಡರು. ರಂಗನಾಥರಾಯನನ್ನು ಕುರಿತು "ಅಯ್ಯಾ ನಿನಗೆ ಇಲ್ಲಿ ಸಂಗೀತ ವಿದ್ಯೆ ಬರುವುದಿಲ್ಲ. ಗುರುವನ್ನು ಬಹುವಾಗಿ ಅಸಮಾಧಾನ ಪಡಿಸಿದ್ದೀ. ಅದು ವಿದ್ಯಾರ್ಥಿಯ ಲಕ್ಷಣವಲ್ಲ. ನಿನಗೆ ಸಂಗೀತ ವಿದ್ಯೆ ಬೇಕಾದರೆ ಬೇರೆ ಎಲ್ಲಿಗಾದರೂ ಹೋಗು" ಎಂದರು. ರಂಗನಾಥರಾಯ ಆಮೇಲೆ ಏನು ಮಾಡಿದನೋ ನನಗೆ ತಿಳಿಯದು. ಈ ಮೇಲಣ ಪ್ರಸಂಗಗಳಾಗದೆ ಇದ್ದಿದ್ದರೆ ಆತನ ಹೆಸರು ನನ್ನ ನೆನಪಿನಲ್ಲಿರುತ್ತಿರಲಿಲ್ಲ.

ಮಾಧವಯ್ಯ ತುಂಬ ಒಳ್ಳೆಯ ಮನುಷ್ಯ, ವಿನಯಶೀಲ; ಮೃದುಸ್ವಭಾವದವನು. ಆತನ ವಾದನದಲ್ಲಿ ರಾಗವು ಭಾವಭರಿತವಾಗಿ ತುಂಬುಹೊಳೆಯಂತೆ ಹರಿದು ಬರುತ್ತಿತ್ತು. ನನಗೆ ಬಹು ಮಂದಿ ಪ್ರಸಿದ್ಧ ಪೀಟಿಲು ವಿದ್ವಾಂಸರ ವಾದನವನ್ನು ಕೇಳುವ ಯೋಗ ದೈವಾನುಗ್ರಹದಿಂದ ದೊರಕಿತು. ತಿರುಕ್ಕೋಟಿಕಾವಲ್ ಕೃಷ್ಣಯ್ಯರವರ ಮಹಾವಾದನವನ್ನು ಮೂರು ನಾಲ್ಕು ಸಾರಿ ಕೇಳಿದ್ದೇನೆ. ಗೋವಿಂದಸ್ವಾಮಿ ಪಿಳ್ಳೆಯವರ ವಾದನವನ್ನು ಕೇಳಿದ್ದೇನೆ. ನಮ್ಮ ಮಾಧವಯ್ಯ ಅಪ್ರಸಿದ್ಧವಾದ ಮುಳಬಾಗಲಿನಿಂದ ಹೊರಕ್ಕೆ ಬಂದು ಮದರಾಸು ತಂಜಾವೂರುಗಳ ಕಡೆ ಪ್ರವಾಸ ಮಾಡಿದ್ದಿದ್ದರೆ ಆತ ಕೀರ್ತಿವಂತನಾಗುತ್ತಿದ್ದನೆಂದು ನನಗನ್ನಿಸುತ್ತದೆ. ಅವನ ಪ್ರತಿಭೆಯ ವಿಕಾಸಕ್ಕೆ ಅವಕಾಶ ದೊರೆಯದೆಹೋಯಿತು. ಆದರೆ ತನ್ನ ಕೀರ್ತಿ ಹರಡಲಿಲ್ಲವೆಂದು ಅವನು ಒಂದು ದಿನವೂ ನೊಂದವನಲ್ಲ. ಅವನಿಗೆ ಕೀರ್ತಿಯೆಂದರೇನೆಂಬುದೇ ತಿಳಿದಿರಲಿಲ್ಲ. ಕಲಿತ ವಿದ್ಯೆಯನ್ನು ಆದಷ್ಟು ಚೆನ್ನಾಗಿ ಕಲಿಸುವುದು; ಕೈಗೆ ಬಂದ ಕೆಲಸವನ್ನು ಆದಷ್ಟು ಚೆನ್ನಾಗಿ ಮಾಡುವುದು-ಇದಿಷ್ಟೇ ಆತನ ಮತ.

ರಾಮಚಂದ್ರಾಚಾರ್ರು

ನಾನು ೧೯೦೬ರ ಸುಮಾರಿನಲ್ಲಿ ಬೆಂಗಳೂರಿನಲ್ಲಿದ್ದ ಹೆಡ್‌ಮಾಸ್ಟರ್ ಕೆ.ಎ.ಕೃಷ್ಣಸ್ವಾಮಿ ಅಯ್ಯರ್ ಅವರ [1] ಮನೆಗೆ ಅವರನ್ನು ನೋಡಲು ಹೋದೆ. ಅವರು ಇಂಗ್ಲಿಷ್ ಭಾಷಾ ಸಾಹಿತ್ಯಗಳಲ್ಲಿ ಮಹಾಪಂಡಿತರೆಂದು ಪ್ರಸಿದ್ಧರಾಗಿದ್ದರು. ಅವರು ವೇದಾಂತ ಶಾಸ್ತ್ರವನ್ನು ಕುರಿತು *The Science of Reality* ಎಂಬ ಪ್ರಶಸ್ತವಾದ ಗ್ರಂಥವನ್ನು ಬರೆದಿದ್ದಾರೆ. ಅವರು ಸಂಗೀತ ರಸಿಕರೂ ಹೌದು. ನನ್ನನ್ನು ಕಂಡೊಡನೆಯೇ ಅವರು ಕೇಳಿದರು:

ಕೃ: "ನಿನ್ನದು ಯಾವ ಸ್ಥಳ?"

ನಾನು : "ಮುಳಬಾಗಲು."

ಕೃ: "ಭೇಷ್! ಅದು ನನ್ನ ಬಾಲ್ಯ ಸ್ನೇಹಿತನಿರುವ ಊರು. ಪುರೋಹಿತ ರಾಮಚಂದ್ರಾಚಾರ್ರು ಅಲ್ಲಿದ್ದಾರಲ್ಲ ಬಲ್ಲೆಯಾ?"

ನಾನು: "ಚೆನ್ನಾಗಿ ಬಲ್ಲೆ. ಅವರು ನಮ್ಮ ತಂದೆಯ ಆಪ್ತಸ್ನೇಹಿತರಲ್ಲೊಬ್ಬರು."

ಕೃ: "ಏನಾಗಿದ್ದಾರೆ ಅವರು?"

ನಾನು: "ಗರ್ಲ್ಸ್ ಸ್ಕೂಲಿನಲ್ಲಿ ಮ್ಯೂಸಿಕ್ ಟೀಚರಾಗಿದ್ದಾರೆ."

ಕ: "ಆತನೂ ನಾನು ಜೊತೆಯಲ್ಲಿ ಪಿಟೀಲು ಕಲಿತೆವು. ಆತನ ಕೈ ನನ್ನ ಕೈಗಿಂತ ನವುರಾದದ್ದು. ಆತನು ಅದನ್ನೇ ಸಾಧಕ ಮಾಡುತ್ತಿದ್ದಾನೆ, ಮ್ಯೂಸಿಕ್ ಟೀಚರ್ ಆದದ್ದರಿಂದ. ನನ್ನ ಅಭ್ಯಾಸ ಮೊಟಕು ಬಿದ್ದಿದೆ."

ಇದು ರಾಮಚಂದ್ರಾಚಾರ್ರ ಪರಿಚಯವನ್ನು ಮಾಡಿಕೊಡುತ್ತದೆ. ಅವರ ಅಣ್ಣಂದಿರು ಪುರೋಹಿತ ಕೃಷ್ಣಾಚಾರ್ರು. ಮಾಧ್ವರಲ್ಲಿ ಅವರ ಪೌರೋಹಿತ್ಯ.

ರಾಮಚಂದ್ರಾಚಾರ್ರು, ಮಧವಯ್ಯನೊಡನೆ ಸೇರಿ ನುಡಿಸುತ್ತಿದ್ದದ್ದುಂಟು. ಮಾಧವಯ್ಯ ಕಸುಬುದಾರ; ರಾಮಚಂದ್ರಾಚಾರ್ರು ಖುಷಿಗಾಗಿ ಕಲಿತವರು. ಆದರೂ ಅವರ ನುಡಿತದಲ್ಲಿಯೂ ರಸ ತುಂಬಿರುತ್ತಿತ್ತು. ಅವರಿಬ್ಬರಿಗೂ ಕಲ್ಪನ ಸ್ವರಪ್ರಯೋಗದಲ್ಲಿ ಸ್ಪರ್ಧೆಯಾಗುತ್ತಿದ್ದದ್ದೂ ಉಂಟು. ಒಬ್ಬರನ್ನೊಬ್ಬರು ಮೆಚ್ಚಿಕೊಳ್ಳುತ್ತಿದ್ದರು.

ರಾಮಚಂದ್ರಾಚಾರ್ರು ಹುಟ್ಟಿನಿಂದ ಕಟ್ಟುನಿಟ್ಟಾದ ಮಾಧ್ವರು. ಆದರೆ ಸ್ವಂತ ಇಷ್ಟದಿಂದ ಉದಾರಿಗಳು. ಪ್ರತಿ ಶನಿವಾರವೂ ಅವರ ರಾತ್ರಿಯ ಭೋಜನ ನಮ್ಮ ಮನೆಯಲ್ಲಿ. ಕಾರಣ ಈರುಳ್ಳಿ ಬೇಳೆಯ ಹುಳಿ. ಅವರೇಕಾಯಿ ಕಾಲದಲ್ಲಿ ಬಹುಶಃ ದಿನ ದಿನವೂ ನಮ್ಮ ಮನೆಯಲ್ಲಿ ಊಟ. ಏಕಾದಶಿಯ ದಿನ ನಮ್ಮಲ್ಲಿ ಫಲಾಹಾರ. ನಮ್ಮ ಅಜ್ಜ ಅವರನ್ನು ಕುರಿತು ತಮಾಷೆಗಾಗಿ ಹೇಳುತ್ತಿದ್ದದ್ದುಂಟು- “ಸ್ಮಾರ್ತರೂ ಆಗಾಗ ಕೆಲಸಕ್ಕೆ ಬರುತ್ತಾರಲ್ಲವೆ?” -ಎಂದು.

ರಾಮಚಂದ್ರಾಚಾರ್ರು ಒಳ್ಳೆಯ ಮನುಷ್ಯರು. ಅವರು ಸಾಹಿತ್ಯ ಪಾಠ ಹೇಳುತ್ತಿದ್ದದ್ದೂ ಉಂಟು. ಅವರು ಕುರ್ಚಿಯ ಮೇಲೆ ಕುಳಿತಾಗ ಬಲಗಾಲನ್ನು ಎಡಗಾಲ ಮೇಲೆ ಹಾಕಿ ಅವಸರವಸರವಾಗಿ ಅಲ್ಲಾಡಿಸುತ್ತಿದ್ದರು. ನಾನು ಅವರ ವಿದ್ಯಾರ್ಥಿಗಳಲ್ಲೊಬ್ಬ; “ಈಗ ಕಾಲಿನಿಂದ ಸ್ವರ ಪ್ರಯೋಗವಾಗುತ್ತಿದೆ” ಎಂದು ಹೇಳಿ ಪೆಟ್ಟು ತಿಂದದ್ದುಂಟು.

ವೆಂಕಟಪ್ಪ

ಈತ ಮೇಳದವನು. ಈತನನ್ನು "ಮಹಡಿ ವೆಂಕಟಪ್ಪ" ಎಂದು ಕರೆಯುವುದು ರೂಢಿ. ಆ ಊರಿನಲ್ಲಿ ಈತನ ಮನೆಯೊಂದೇ ಮಹಡಿಯ ಮನೆ. ಒಳ್ಳೆಯ ಅನುಕೂಲಸ್ಥ. ಆತನ ಬಳಿ ವಿದ್ಯೆ ಕಲಿಯಲು ಪಲಮನೇರು, ಮದನಪಲ್ಲಿ, ಪುಂಗನೂರು ಮೊದಲಾದ ಕಡೆಗಳಿಂದ ಜನ ಬರುತ್ತಿದ್ದರು, ಆತನು ಸ್ವಜಾತಿಯ ವಿದ್ಯಾರ್ಥಿಗಳಿಗೆ ಅನ್ನವಿಟ್ಟು ವಿದ್ಯೆ ಹೇಳಿಕೊಡುತ್ತಿದ್ದ.

ಆತನ ವೃತ್ತಿ ಮೂರು ವಿಧವಾದದ್ದು: (೧) ಮೇಳ ಅಥವಾ ಓಲಗ; (೨) ಪಿಟೀಲು; (೩) ವಪನ.

ಆದರೆ ಆತನು ಕ್ಷೌರಿಕ ವೃತ್ತಿಯನ್ನು ಹೆಚ್ಚಾಗಿ ಮಾಡುತ್ತಿರಲಿಲ್ಲ. ಗೊತ್ತಾದ ಮೂರು ನಾಲ್ಕು ಮನೆಗಳಿಗೆ ಮಾತ್ರ ಕ್ಷೌರ ಮಾಡುವುದಕ್ಕಾಗಿ ಹೋಗುತ್ತಿದ್ದ. (ಅದೂ ಎಡಗೈಯಿಂದ.)

ಆತನ ಮನೆ ನಮ್ಮ ಮನೆಯ ಹಿಂದುಗಡೆ. ಅದಕ್ಕೂ ನಮ್ಮ ಮನೆಗೂ ನಡುವೆ ಒಂದು ರಸ್ತೆ ಮಾತ್ರ, ಆದದ್ದರಿಂದ ಅಲ್ಲಿ ನಡೆಯುತ್ತಿದ್ದ ಸಂಗೀತ ಪಾಠ ಬಹುಮಟ್ಟಿಗೆ ನಮ್ಮ ಮನೆಯಲ್ಲಿ ನಡೆದಂತೆ ಆಗುತ್ತಿತ್ತು.

ಆತನ ಮನೆಯಲ್ಲಿ ಬೆಳಗಿನ ಜಾವ ನಾಲ್ಕೂವರೆ-ಐದು ಘಂಟೆಗೆ ಪಾಠ ಪ್ರಾರಂಭವಾಗುತ್ತಿತ್ತು. ನನಗೆ ಸಾಮಾನ್ಯವಾಗಿ ಎಚ್ಚರವಾಗುತ್ತಿದ್ದದ್ದು ಅಲ್ಲಿಯ ಸರಳವರಸೆ, ಜಂಟಿವರಸೆಗಳ ಪಾಠದಿಂದ.

> ಸಸ ರಿರಿ ಗಗ ಮಮ....
> ಸರಿಗ ರಿಗಮ ಗಮಪ....

ಇದಾದ ಮೇಲೆ ಅಲಂಕಾರಗಳು, ಪಿಳ್ಳಾರಿ ಗೀತೆಗಳು, ವರ್ಣ ಇತ್ಯಾದಿ. ಹೀಗೆ ನನಗೆ ಹತ್ತಾರು ಸಂಗೀತ ಪಾಠಗಳು ಕಿವಿಯಿಂದ ಪರಿಚಿತವಾದವು.

ವೆಂಕಟಪ್ಪನಿಗೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಕ್ರಮವಾಗಿ ಚಾಕರಿಯಿತ್ತು. ಆತ ಭಕ್ತನೂ ಹೌದು. ಆತನ ನಾದಸ್ವರ ಪ್ರತಿಭೆಯನ್ನು ಒಂದು ಮಠದ ಸ್ವಾಮಿಗಳು ಮೆಚ್ಚಿ ಆತನಿಗೆ ಬೆಳ್ಳಿಯಿಂದ ಓಲಗ ಮಾಡಿಸಿಕೊಟ್ಟಿದ್ದರು. ಆತ ಆ ಬೆಳ್ಳಿಯ ಮೇಳವನ್ನು

ಗೌರವಾರ್ಥವಾಗಿ ಹೊತ್ತಿರುತ್ತಿದ್ದ. ಊದುತ್ತಿದ್ದದ್ದು ತನ್ನ ಹಳೆಯ ಮರದ ಮೇಳವನ್ನೇ. ಅದೇಕೆಂದು ಕೇಳಿದರೆ "ಸ್ವಾಮಿ, ಅದರಲ್ಲಿ ಸ್ವರಶುದ್ಧಿ ಸಾಲದು, ನವುರಿಲ್ಲ, ಬೆಳ್ಳಿ ಕೆಲಸದವನು ಮೇಳಕ್ಕೆ ಬಂದರೆ ಇನ್ನೇನಾದೀತು?" -ಎನ್ನುತ್ತಿದ್ದ.

ಆತನು ಪಿಟೀಲು ನುಡಿಸಿದ್ದು ಮೇಳದಷ್ಟು ಹೆಚ್ಚಾಗಿ ಅಲ್ಲ. ಮಾಧವಯ್ಯ ರಾಮಚಂದ್ರಾಚಾರ್ರಷ್ಟೂ ಅಲ್ಲ. ಆದರೆ ತಿಂಗಳಿಗೆ ನಾಲ್ಕು ಸಾರಿಯಾದರೂ ಆತ ಸ್ನೇಹಿತರ ಸಂತೋಷಕ್ಕಾಗಿ ಪಿಟೀಲು ನುಡಿಸುತ್ತಿದ್ದ. ಒಳ್ಳೆಯ ಕೈ. ಮೇಳದ ಅಭ್ಯಾಸದಿಂದ ಆತನಿಗೆ ರಾಗವಿಸ್ತಾರದ ಮೇಲೆ ಹೆಚ್ಚು ಗಮನ. ಎಲ್ಲಿಯಾದರೂ ಆತನ ಮೇಳವೂ ಆತನಂಥ ಪಿಟೀಲು ವಾದನವೂ ನಡೆಯುವುದೆಂದು ಈ ಹೊತ್ತು ನನಗೆ ತಿಳಿದರೆ ನಾಲ್ಕಾರು ಮೈಲಿ ನಡೆದು ಹೋಗಿಯಾದರೂ ಕೇಳಿಯೇನು.

***

ಇಷ್ಟು ಹೇಳಿದ ಮೇಲೆ ಇನ್ನೊಂದು ಕಡೆಯ ಮಾತು. ಸೇತುಮಾಧವರಾಯರೂ ಮಾಧವಯ್ಯನವರೂ ರಾಮಚಂದ್ರಾಚಾರ್ರೂ ವೆಂಕಟಪ್ಪನೂ ಸಹ ದೇವರಪಾದ ಸೇರಿ ಕೆಲವು ವರ್ಷವಾದ ಮೇಲೆ ನಾನು ಒಂದು ಸಾರಿ ಮುಳಬಾಗಲಿಗೆ ಹೋದೆ. ಆಗ ಮಹಡಿ ವೆಂಕಟಪ್ಪನವರ ಮನೆಯವರು ಯಾರಿದ್ದಾರೆಂದು ವಿಚಾರಿಸಿದೆ. ಅವರ ಬಂಧು ಶಿಷ್ಯರೆಂದು ಕೆಲವರು ಬಂದರು. "ವೆಂಕಟಪ್ಪನವರ ಮೇಳ, ವೆಂಕಟಪ್ಪನವರ ಪಿಟೀಲು- ಇದನ್ನು ಕೊಂಚವಾದರೂ ಉಳಿಸಿದ್ದೀರಾ?" ಎಂದು ಕೇಳಿದೆ. ಅವರು-

"ಸ್ವಾಮಿ, ಅದನ್ನು ಈಗ ಯಾರು ಕೇಳುತ್ತಾರೆ?"

"ಅದು ಯಾಕೆ ಹಾಗೆ ಹೇಳುತ್ತೀರಿ? ಊರಿನಲ್ಲಿ ಎಷ್ಟೋ ಮಂದಿ ಸಾಹುಕಾರರಿದ್ದಾರಲ್ಲ? ಅವರ ಮನೆಗಳಲ್ಲಿ ಮದುವೆ ಮುಂಜಿ ನಡೆಯುತ್ತವಲ್ಲ?"

"ಸ್ವಾಮಿ, ಅವರಿಗೆ ಬೇಕಾದದ್ದು ಬ್ಯಾಂಡು-ಹಿತ್ತಾಳೆಯ ಡಬುಡಬ್ಬು-ತಮಟೆ.ಇದನ್ನು ಮಾಡದಿದ್ದರೆ ನಮಗೆ ಜೀವನವಿಲ್ಲ. ಈಗ ಜನಕ್ಕೆ ಬೇಕಾದದ್ದು ಸದ್ದು, ಸಂಗೀತವಲ್ಲ."

-ಇದು ನಮ್ಮ ನವನಾಗರಿಕತೆಗೆ ಸರಿಯಾದ ಹಣೆಯ ಬರಹ.

೫

ಮುಳಬಾಗಲಿನ ರಸಿಕಗೋಷ್ಠಿ

ಮುಳಬಾಗಲಿನ ರಸಿಕರಲ್ಲಿ ಮುನಿಸ್ವಾಮಿ ಆಚಾರ್ರು ಅಗ್ರಪಂಕ್ತಿಯಲ್ಲಿರತಕ್ಕವರು. ಅವರನ್ನು ಕರೆಯುತ್ತಿದ್ದದ್ದು ಗಟ್ಟನ್ನಗಾರಿ ಮುನಿಸ್ವಾಮಿ ಎಂದು. ಅವರು ಸ್ವರ್ಣಕಾರರು (ಅಕ್ಕಸಾಲಿ). ಅವರ ಪೂರ್ವಿಕರಲ್ಲಿ ಘಟ್ಟನ್ನ ಎಂಬವರು ಗಟ್ಟಿಗರಾಗಿ ಪ್ರಸಿದ್ಧರಾಗಿದ್ದಿರಬೇಕು.

ಮುನಿಸ್ವಾಮಯ್ಯನವರು ಸಂಗೀತ ಸಾಹಿತ್ಯಪ್ರಿಯರು; ಹಾಸ್ಯಶೀಲರು ಮತ್ತು ಉದಾರಿಗಳು. ಚಿನ್ನಬೆಳ್ಳಿ ಕೆಲಸದಲ್ಲಿ ಅವರು ಸಮರ್ಥರೆಂದು ಹೇಳಿಕೆಯಿತ್ತು. ಆದರೆ ಅವರು ಕೆಲಸ ಮಾಡಿದ್ದನ್ನು ನಾನು ಕಾಣೆ. ಅವರ ಮುಂದೆ ಒಂದು ಪಟ್ಟಡಿ ಇರುತ್ತಿದ್ದದ್ದು ನಿಜ. ಆದರೆ ಅವರ ಕಾಲವೆಲ್ಲ ಸಭಾ ಪ್ರಸಂಗದಲ್ಲಿ ಕಳೆದುಹೋಗುತ್ತಿತ್ತು. ಕೆಲಸ ಮಾಡುತ್ತಿದ್ದವರು ಅವರು ಸಾಕಿಕೊಂಡಿದ್ದ ಇಬ್ಬರು ಸೋದರಳಿಯಂದಿರು. ಮುನಿಸ್ವಾಮಯ್ಯನವರು ಅವರಿಗೆ ಹೀಗೆ ಮಾಡು ಎಂದು ತಿಳಿವಳಿಕೆ ಕೊಡುತ್ತ ಮೇಲ್ವಿಚಾರಣೆ ಮಾಡುತ್ತಿದ್ದರು. ಜನಕ್ಕೆ ಅವರಲ್ಲಿ ತುಂಬ ನಂಬಿಕೆ.

ಮುನಿಸ್ವಾಮಯ್ಯನವರ ಅಂಗಡಿಯೇ ಊರಿನ ರಸಿಕರಂಜನಿ ಸಭೆ. ಅದು ಪ್ರತಿ ದಿನವೂ ಬೆಳಿಗ್ಗೆ ಏಳೂವರೆ-ಎಂಟು ಘಂಟೆಗೆ ಉಪಕ್ರಮವಾಗಿ ಹನ್ನೊಂದು ಹನ್ನೊಂದೂವರೆಯವರೆಗೆ ನಡೆಯುತ್ತಿತ್ತು; ಮಧ್ಯಾಹ್ನ ಎರಡು-ಎರಡೂವರೆಯಿಂದ ಕತ್ತಲಾಗುವವರೆಗೆ. ಅದರಲ್ಲಿ ವೈದಿಕರು, ವಿದ್ವಾಂಸರು, ಉಪಾಧ್ಯಾಯರು ಸಂಗೀತಗಾರರು, ಬೇರೋಜುಗಾರರು, ಖುಷ್‌ಭಾಷ್ ಜನರು-ಎಲ್ಲ ಇರುತ್ತಿದ್ದರು.

ಊರಿನಲ್ಲಿ ಹಿಂದಿನ ದಿವಸ ನಡೆದಿದ್ದ ಸಂಗೀತಕಚೇರಿ, ಹರಿಕಥೆ, ದೇವಸ್ಥಾನದ ಉತ್ಸವ, ಅಗ್ರಹಾರದಲ್ಲಿ ನಡೆದ ಜಗಳ, ಯಾವುದೋ ಬೀದಿಯಲ್ಲಾದ ಮಾರಾಮಾರಿ, ಕೆಲವು ಸಂಸಾರಗಳ ರಾಜಕೀಯ, ಇನ್ನು ಕೆಲವುಗಳ ಮಧುರ ಪ್ರಸಂಗಗಳು, ಆಮೇಲೆ ತತ್ತ್ವ ವಿಚಾರ, ಮತ ಮತಾಂತರಗಳ ವಿಮರ್ಶೆ-ಇವೆಲ್ಲ ಅಲ್ಲಿ ಚರ್ಚೆಗೆ ಬರುತ್ತಿದ್ದವು. ಮುನಿ ಸ್ವಾಮಯ್ಯನವರು ಸ್ವತಃ ಹೆಚ್ಚು ಮಾತಿನವರಲ್ಲ. ಯಾರಾದರೂ ಮಾತನಾಡಿ ಮುಗಿದ

ಮೇಲೆ ಒಂದು ಮಾತಿನಲ್ಲಿ ಅಥವಾ ಎರಡು ಮಾತಿನಲ್ಲಿ ಟೀಕೆ ಹೇಳುತ್ತಿದ್ದರು. ಎಲ್ಲರೂ ನಗುತ್ತಿದ್ದರು.

ಒಂದು ಸಾರಿ ಒಬ್ಬ ಕ್ರಿಶ್ಚಿಯನ್ ಪಾದರಿಯೊಡನೆ ಕ್ರಿಸ್ತ ಮತ್ತು ಕೃಷ್ಣರ ಜೀವನ ಚರಿತ್ರೆಗಳನ್ನು ಕುರಿತು ವಾಗ್ವಾದ ನಡೆದಿತ್ತು. ಅದು ಶುದ್ಧ ವಿತಂಡವಾದ. ಅದನ್ನು ಆಗಾಗ ಹೇಳಿಕೊಂಡು ನಗುತ್ತಿದ್ದರು. ಈ ಮಾತುಕಥೆಗಳು ಸಾಮಾನ್ಯವಾಗಿ ತೆಲುಗು ಭಾಷೆಯಲ್ಲಿ ನಡೆಯುತ್ತಿದ್ದವು.

ಮುನಿಸ್ವಾಮಯ್ಯನವರು ಒಳ್ಳೆಯ ಜ್ಞಾನಸ್ಥರು. ಅವರಿಗೆ ಮೃದಂಗ ವಾದನದಲ್ಲಿ ಹೆಸರು ಬಂದಿತ್ತು. ಆದರೆ ಅವರ ಖಯಾಲಿ ಇದ್ದದ್ದು ತಬಲ ವಾದ್ಯದ ಮೇಲೆ. ಅವರು ಔತ್ತರೇಯರಂತೆ ಸೊಟ್ಟು ಸೊಟ್ಟು ರುಮಾಲು ಸುತ್ತಿ ತಬಲ ನುಡಿಸುತ್ತಿದ್ದರು. ಪಕ್ಕದಲ್ಲಿ ಶಿಷ್ಯ ನಟುವ ಸೀತಾರಾಮಯ್ಯನವರು ಇರುತ್ತಿದ್ದರು. ಮುನಿಸ್ವಾಮಯ್ಯನವರು ಸನ್ನೆ ಮಾಡಿದ ಕೂಡಲೆ ನಟುವ ಸೀತಾರಾಮಯ್ಯನವರು-

> ಥಾಥಾ ಕಿಟಕಿಟ ಥಕ್ಕಿಟ ಕಿಟಕಿಟ ॥
> ತದಗಿಣತೋಂ ॥ ತಳಂಗುತೋಂ ॥

ಹೀಗೆ ಶೊಲ್ಲುಕಟ್ಟುಗಳನ್ನು ಹೇಳುತ್ತಿದ್ದರು. ಅವರೆಲ್ಲಿಯಾದರೂ ತಪ್ಪಿದರೆ ಮುನಿಸ್ವಾಮಯ್ಯನವರ ಬಲಗೈ ಸೀತಾರಾಮಯ್ಯನವರ ಬೆನ್ನಿನ ಮೇಲೆ ಪ್ರಯೋಗವಾಗುತ್ತಿತ್ತು.

ಮುನಿಸ್ವಾಮಯ್ಯನವರು ಭಗವದ್ಭಕ್ತರು. ಸೋಮೇಶ್ವರನ ಗುಡಿಗೆ ಅವರು ಪ್ರತಿ ಸೋಮವಾರವೂ ಹೋಗುತ್ತಿದ್ದದ್ದಲ್ಲದೆ ಆಗಾಗ ಅಭಿಷೇಕ ದೀಪಾರಾಧನೆಗಳನ್ನು ಮಾಡಿಸುತ್ತಿದ್ದರು. ಆ ಭಕ್ತಿಯಿಂದ ಹುಟ್ಟಿದ ಗೀತೆ ಇದು. ರಾಗ ಶಂಕರಾಭರಣ ಎಂದು ನನ್ನ ಜ್ಞಾಪಕ.

> ಭಂ ಭಂ ಶಂಭೋ ಮಹಾದೇವ ॥
> ಶಂಭೋ ಶಂಭೋ ಮಹಾದೇವ ॥
> ಹೇ ಶಾಂಭವೀ ಮನೋಹರ
> ಸುಶಾಂಭವ ಪ್ರಿಯಾ ॥
> ಭೊಂ ಭೊಂ ಶಂಭೋ ಮಹಾದೇವ . . . ॥

ಈ ಹಾಡಿನಲ್ಲಿ "ಭಂ ಭಂ" ಎಂದರೆ ಏನೆಂದು ನಾನು ಕೇಳಿದೆ. ಮುನಿಸ್ವಾಮಯ್ಯನವರು "ಮಂಕೆ! ಅದು ಶಂಖದಿಂದ ಹೊರಡುವ ಶಬ್ದವಲ್ಲವೆ? ಶಿವಪೂಜೆಯ ಕಾಲದಲ್ಲಿ ಭೃಂಗಿ

ಮೊದಲಾದ ಗಣಾಧಿಪತಿಗಳು ಶಂಖ ಊದುತ್ತಾರೆ. ಅದರ ನಾದ ಪ್ರಣವ ಸಮಾನವಾದದ್ದು. ಪ್ರಣವವಾದರೋ ಮಹೇಶ್ವರನ ಹೆಸರು. ಅದೇ ಓಂಕಾರ. ಅದನ್ನು ಜ್ಞಾಪಕಕ್ಕೆ ತರುವುದಕ್ಕೋಸ್ಕರ-

ಭಂ ಭಂ ಶಂಭೋ ಮಹಾದೇವ ॥

ಹಾಡಿನ ಒಂದು ಪದದಲ್ಲಿ ಎರಡು ಭಾವಗಳು ಸೇರಿಕೊಂಡಿರುತ್ತವೆ: (೧) ಅಕ್ಷರ ಭಾವ, (೨) ಅರ್ಥಭಾವ. ಈ ಎರಡರಲ್ಲಿ ಸಂಗೀತಗಾರನಿಗೆ ಮೊದಲು ಬೇಕಾದದ್ದು ಅಕ್ಷರಭಾವ ಅಥವಾ ವರ್ಣಗುಣ. ಅಕ್ಷರದ ನಾದವು ಸಂಗೀತಕ್ಕೆ ಹೊಂದಿಕೊಳ್ಳುವುದಾಗಬೇಕು. ಶಬ್ದಾರ್ಥ ಕೊಂಚ ಸಾಮಾನ್ಯವಾದರೂ ಅವನಿಗೆ ಪರವೆಯಿಲ್ಲ. ಭಂ ಭಂ, ಶಂಭೋ, ಜಂಭಾರಿ, ಲಂಬೋದರ, ಅಂಬಿಕೇಶ, ಲಂಬಕೇಶಿ, ಬಿಂಬಾಧರ-ಈ ರೀತಿ. ಪ್ರಾಸದಿಂದಲೋ ಅಥವಾ ಪದಮೈತ್ರಿಯಿಂದಲೋ ಕಿವಿಗೆ ಸೊಗಸು ತೋರಬೇಕು. ಕಿವಿಯ ಮೆಚ್ಚಿಕೆ ಮೊದಲು; ಮನಸ್ಸಿನ ಮೆಚ್ಚಿಕೆ ಎರಡನೆಯದು.

ಮುನಿಸ್ವಾಮಯ್ಯನವರ ಇನ್ನೊಂದು ಕೃತಿ ಇದು:

ದೇವಾದಿದೇವ ಬ್ರೋವರಾ
ಭವಾನಿವಲ್ಲಭಾ ॥
ನಾವಾರು ಲೇರು ನೀನು ವಿನಾ
ಶಿವಾ ನಮಶ್ಶಿವಾ ॥

ಹೀಗೆ ಅನೇಕ ಕೀರ್ತನೆಗಳನ್ನು ರಚಿಸಿದ್ದರು ಮುನಿಸ್ವಾಮಯ್ಯನವರು. ಎಲ್ಲರಿಗೂ ಸ್ನೇಹಿತರಾಗಿ, ಸರಸಿಗಳಾಗಿ ನಗುನಗುತ್ತ ಆಯುಷ್ಯವನ್ನು ಕಳೆದರು.

ರಂಗಸ್ವಾಮಿದಾಸರು

ಇವರು ಜ್ಯೋತೀನಗರದ ಜಾತಿಯವರು. ಅವರ ಮನೆತನ ನಮ್ಮ ಊರಿನಲ್ಲಿ ತುಂಬ ಗಣ್ಯವಾದದ್ದು. ಅವರು ಐದಾರು ಜನ ಅಣ್ಣತಮ್ಮಂದಿರೆಂದು ನನ್ನ ಜ್ಞಾಪಕ. ಅವರಲ್ಲಿ ಹಿರಿಯರು ವೆಂಕಟರಾಯಪ್ಪ ಶೆಟ್ಟರು. ಊರಲ್ಲಿ ಅವರಿಗೆ ತುಂಬಾ ಗೌರವ. ಅವರ ತಮ್ಮಂದಿರು ಒಬ್ಬಾತ ಅನ್ನಯ್ಯ; ಒಬ್ಬಾತ ಜಯನ್ನ; ಇನ್ನೊಬ್ಬಾತ ರಂಗಸ್ವಾಮಪ್ಪ. ರಂಗಸ್ವಾಮಪ್ಪನವರು ತುಳಸೀ ರಾಮದಾಸರ ಶಿಷ್ಯರಾದರು.

ತುಳಸೀ ರಾಮದಾಸರೆಂಬವರು ಆ ಕಾಲದಲ್ಲಿ ಬಹು ಪ್ರಸಿದ್ಧರಾದವರು. ಅವರ ಭಜನೆಗೂ ಹರಿಕಥೆಗೂ ಜನ ಸಾವಿರಗಟ್ಟಲೆ ಬಂದು ಸೇರುತ್ತಿದ್ದರು. ಬೆಂಗಳೂರು ತುಳಸೀ ತೋಟದಲ್ಲಿರುವ ಶ್ರೀರಾಮದೇವರ ದೇವಾಲಯದ ಕಟ್ಟಡಕ್ಕೆ ಮೂಲಪ್ರೇರಕರಾದವರಲ್ಲಿ ತುಳಸೀ ರಾಮದಾಸರು ಒಬ್ಬರೆಂದು ನಾನು ಕೇಳಿದ್ದೇನೆ. ಬೆಂಗಳೂರು ಕಂಟೋನ್ಮೆಂಟಿನಲ್ಲಿ ತುಳಸೀ ರಾಮದಾಸರ ಹೆಸರಿನಲ್ಲಿ ಒಂದು ದೇವಾಲಯವೂ ಒಂದು ಭಜನೆ ಮಂದಿರವೂ ಒಂದು ವಿಶಾಲವಾದ ಕಲ್ಯಾಣಮಂದಿರವೂ ಇವೆ. ಈ ಕಲ್ಯಾಣಮಂದಿರ ಜನೋಪಯೋಗದಲ್ಲಿದೆ.

ತುಳಸೀ ರಾಮದಾಸರನ್ನು ನನ್ನ ಬಾಲ್ಯದಲ್ಲಿ ನಾನು ಕಂಡಿದ್ದೆ. ಅವರು ಆಗಾಗ ನಮ್ಮ ಊರಿಗೆ ಬರುತ್ತಿದ್ದರು. ಅವರನ್ನು ಕಾಣಲು ಅವರ ಬಿಡಾರಕ್ಕೆ ಹೋದಾಗ ನನ್ನನ್ನು ನನ್ನ ತಂದೆ ಕರೆದುಕೊಂಡು ಹೋಗುತ್ತಿದ್ದರು. ಆಗ ದಾಸರು ನನಗೆ ಒಂದು ದೊನ್ನೆಯಲ್ಲಿ ಕೊಬ್ಬರಿ ಸಕ್ಕರೆಯನ್ನೂ ಬಾಳೆಯ ಹಣ್ಣುಗಳನ್ನೂ ಕೊಡುತ್ತಿದ್ದದ್ದೂ ನಾನು ಮುಕ್ಕುತ್ತಿದ್ದದ್ದೂ ಜ್ಞಾಪಕದಲ್ಲಿದೆ. “ತಿಂಡಿಕಿ ಶೂರಂ” ಎಂದಷ್ಟೆ ನನ್ನನ್ನು ಕುರಿತ ನಮ್ಮ ಸೋದರತ್ತೆಯ ವರ್ಣನೆ? ಹರಿಕಥೆ ಕೇಳಲು ಕುಳಿತಾಗ ನಿದ್ರೆ ಬಂದುಬಿಡುತ್ತಿತ್ತು. ಆದರೆ ಜನ ಸಾವಿರಾರು ಮಂದಿ ಇದ್ದದ್ದನ್ನು ಮರೆಯಲಾರೆ. ಹರಿಕಥೆ ರಾತ್ರಿ ಹನ್ನೆರಡು ಒಂದು ಘಂಟೆಯವರೆಗೂ ನಡೆಯುತ್ತಿತ್ತಂತೆ. ಊರಿನ ಪಿಟೀಲು ವಿದ್ವಾಂಸರಿಗೂ ಮೃದಂಗ ವಿದ್ವಾಂಸರಿಗೂ ಅದು ವಿದ್ವತ್ ಪ್ರದರ್ಶನದ ಅವಕಾಶ.

ರಂಗಸ್ವಾಮಪ್ಪನವರು ತುಳಸೀರಾಮದಾಸರ ಪ್ರಭಾವದಿಂದ ದಾಸರಾದರೆಂದು ತೋರುತ್ತದೆ. ಅವರು ಉಪಪತ್ತಿಯಿದ್ದವರು; ಬಡತನದ ಕಾರಣದಿಂದ ವಿರಕ್ತರಾದವರಲ್ಲ. ಸ್ಫುರದ್ರೂಪಿಗಳೂ ಆಗಿದ್ದರು. ಅವರ ಭಕ್ತಿ ಅಂತರಂಗಜನಿತವಾದದ್ದೆಂದು ನಾನು ನಂಬಿಕೊಂಡಿದ್ದೇನೆ.

ಅವರು ತಿರುಪತಿಗೆ ಯಾತ್ರೆ ಹೋಗಿ ಬಂದು ಒಂದು ಸಣ್ಣ ಕೀರ್ತನೆಗಳ ಪುಸ್ತಕವನ್ನು ಪ್ರಕಟಪಡಿಸಿದರು. ಅದರಲ್ಲಿ ಮೊದಲನೆಯದು:

> ಗುರುಮಹರಾಜ್-ಗುರು ತುಳಸೀ
> ರಾಮದಾಸ ಸದ್ಗುರು ಮದ್ಗುರು ಶ್ರೀ ॥

ಇದನ್ನು ಬೇಹಾಗ್ ರಾಗದಲ್ಲಿ ಸೊಗಸಾಗಿ ಹಾಡುತ್ತಿದ್ದರು. ಇನ್ನೊಂದು:

> ಆನಂದ ನಿಲಯ-ನಿ-
> ನ್ನೇನೆಂದುಕಂದುನೋ

ಸಾನಂದಾದುಲುಕನ್ನ-
ಮರ್ಮಮದೇಮೋ ॥

ಹೀಗೆ ಪ್ರಾರಂಭವಾದ ಭಕ್ತಿ ಬರುಬರುತ್ತಾ ಹರಿಕಥೆಯಾಗಿ ತಿರುಗಿ ಕಡೆ ಕಡೆಗೆ ರಂಗಸ್ವಾಮಪ್ಪನವರು ದಾಸರಾಗಿಯೇ ಇದ್ದರೆಂದು ನಾನು ಕೇಳಿದ್ದೇನೆ.

೬

ಇಬ್ಬರು ಹರಿಕಥಾಕಾರರು

ಮುಳಬಾಗಲಿನಲ್ಲಿದ್ದ ಹರಿಕಥಾಕಾರರಲ್ಲಿ ಪ್ರಸಿದ್ಧರಾದವರು ಇಬ್ಬರು: (೧) ಶಾಮದಾಸರು, (೨) ಅಚ್ಚಪ್ಪದಾಸರು.

ಶಾಮದಾಸರು

ಶಾಮದಾಸರು ಆಗಮಿಕ ವಿದ್ವಾಂಸರಾದ ಕೃಷ್ಣಪ್ಪನವರ ಮಕ್ಕಳು. ಆಗಮಿಕ ಕೃಷ್ಣಪ್ಪನವರಿಗೂ ಸಾಹಿತ್ಯ ವಿದ್ವಾನ್ (ನತ್ತಿ) ವೆಂಕಟರಾಮಶಾಸ್ತ್ರಿಗಳಿಗೂ [1] ಆಪ್ತಸ್ನೇಹ. ಶಾಮದಾಸರು ವೆಂಕಟರಾಮಶಾಸ್ತ್ರಿಗಳಲ್ಲಿ ಆಂಧ್ರ ಸಾಹಿತ್ಯದಲ್ಲಿ ಶಿಷ್ಯರಾದರು. ವೆಂಕಟರಾಮ ಶಾಸ್ತ್ರಿಗಳ ಮಗ ವೆಂಕಟೇಶಯ್ಯನವರು ಪಿಟೀಲು ಅಭ್ಯಾಸ ಮಾಡುತ್ತಿದ್ದದ್ದರಿಂದ ಅವರ ಜೊತೆಯಲ್ಲಿ ಶಾಮದಾಸರು ಸಂಗೀತ ಕಲಿತರೆಂದು ತೋರುತ್ತದೆ. ಶಾಮದಾಸರು ಹರಿ ಕಥೆ ಮಾಡುತ್ತಿದ್ದದ್ದು ತೆಲುಗಿನಲ್ಲಿ. ಕಥೆಯ ಸಾಹಿತ್ಯವನ್ನು ವೆಂಕಟರಾಮಶಾಸ್ತ್ರಿಗಳವರು ಪರಿಷ್ಕಾರಪಡಿಸಿದ್ದರು. ಹೀಗೆ, ಕಥೆಯು ಕೇಳಲು ಸೊಗಸಾಗಿತ್ತು.

ಈ ಸಾಹಿತ್ಯಗುಣದ ಜೊತೆಗೆ ಸಂಗೀತದ ಜಮಾವಣೆಯೂ ಇರುತ್ತಿತ್ತು. ಮಾಧವಯ್ಯನವರು, ರಾಮಚಂದ್ರಾಚಾರ್ರು-ಇಬ್ಬರೂ ಪಿಟೀಲು ನುಡಿಸುತ್ತಿದ್ದರು. ಸೀತಾರಾಮಯ್ಯನವರ ಮೃದಂಗ. ಒಂದೊಂದು ಸಾರಿ ಗಟ್ಟನ್ನಗಾರಿ ಮುನಿಸ್ವಾಮಿಯವರ ತಬಲ. ಇದಿಷ್ಟೂ ಸೇರಿ ಜಮಾವಣೆ ಕಳೆಕಟ್ಟುತ್ತಿತ್ತು. ಜನ ಕುತೂಹಲದಿಂದ ಕೇಳುತ್ತಿದ್ದರು.

ಶಾಮದಾಸರಿಗೆ ಒಂದು ಸಲ ಕನಸಾಯಿತಂತೆ. ಕದರೀಪುರವೆಂಬ ಸ್ಥಳದಲ್ಲಿ ಒಂದು ನರಸಿಂಹಸ್ವಾಮಿಯ ವಿಗ್ರಹ ಪೂಜೆ ಪುರಸ್ಕಾರಗಳಿಲ್ಲದೆ ನಿಂತಿರುವುದಾಗಿಯೂ ಅದಕ್ಕೆ ಪೂಜೆ ನಡೆಯುವಂತೆ ಮಾಡಿದವರು ಪುಣ್ಯಕಟ್ಟಿಕೊಳ್ಳುವರೆಂದೂ ಒಬ್ಬ ಹರಿದಾಸನು ಆ ಕನಸಿನಲ್ಲಿ ತಿಳಿಸಿದನಂತೆ.

ಮಾರನೆಯ ದಿನವೇ ಆ ಕಾರ್ಯಕ್ಕೆ ಪ್ರಾರಂಭವಾಯಿತು.

ಶಾಮದಾಸರ ಮನೆಯ ಮುಂದೆ ಕೊಂಚ ಬಯಲಿತ್ತು. ಆ ಬಯಲಿನ ಅಂಚಿನಲ್ಲಿ ಆಗ್ನೇಯದ ಮೂಲೆಯಲ್ಲಿ ನೆಲ ಎತ್ತರವಾಗಿತ್ತು. ಅಲ್ಲೊಂದು ಬಂಡೆ. ಊರಿನವರು ಅದನ್ನು ಜಾರುವ ಬಂಡೆ ಎಂದು ಕರೆಯುತ್ತಿದ್ದರು. ನನ್ನ ತಂದೆ ಅಲ್ಲಿ ಜಾರುಬಂಡೆಯ ಆಟ ಆಡುತ್ತಿದ್ದರಂತೆ. ಶಾಮದಾಸರು ಆ ಬಯಲನ್ನು ಸರಕಾರದಿಂದ ಪಡೆದುಕೊಂಡು ತಗ್ಗನ್ನು ಭರ್ತಿಮಾಡಿಸಿ ಅದರ ಮೇಲೆ ಮೂರಂಕಣದ ದೇವಸ್ಥಾನವನ್ನು ಕಟ್ಟಿಸಿದರು. ಅಲ್ಲಿ ದೇವತಾ ಪ್ರತಿಷ್ಠೆಯೂ ಆಯಿತು. ಕದರೀಪುರದಿಂದ ನರಸಿಂಹಸ್ವಾಮಿಯ ಶಿಲಾ ಮೂರ್ತಿಯನ್ನು ತಂದು ವಿಜೃಂಭಣೆಯಿಂದ ಪ್ರತಿಷ್ಠಾಮಹೋತ್ಸವವನ್ನು ನಡಸಿದರು. ನನಗೆ ಅದು ಚೆನ್ನಾಗಿ ಜ್ಞಾಪಕವಿದೆ. ಆಮೇಲೆ ಅಲ್ಲಿ ಪ್ರತಿ ಸಂಜೆಯೂ ಭಜನೆ, ಪ್ರತಿ ಶನಿವಾರವೂ ಹರಿಕಥೆ ನಡೆಯುತ್ತಿದ್ದವು. ಕೆಲವು ವರ್ಷಗಳಾದ ಬಳಿಕ ಅದು ಏನಾಯಿತೋ ನಾನು ಕಾಣೆ.

ಅಚ್ಯುತದಾಸರು

ಅಚ್ಯುತದಾಸರನ್ನು ಅಚ್ಚಪ್ಪ ಎಂದು ಕರೆಯುವುದೇ ಊರಿನ ರೂಢಿ. ಇವರು ಬಡಗ ನಾಡು ಭಾಗವತ ಸಂಪ್ರದಾಯದವರು. ಆದರೆ ಅವರಲ್ಲಿ ಮತಾತಿಶಯದ ಹುಚ್ಚು ಎಳ್ಳಷ್ಟೂ ತೋರುತ್ತಿರಲಿಲ್ಲ.

ಅವರ ಕುಲವೃತ್ತಿ ಶಾನುಭೋಗಿಕೆ. ಕನ್ನಸಂದ್ರವೆಂಬ ಗ್ರಾಮಕ್ಕೆ ಅವರು ಶಾನುಭೋಗರು. ಅವರಿಗೆ ಸಂಗೀತದ ಪಾಠ ಯಾರಲ್ಲಿ ಆಯಿತೋ ನನಗೆ ತಿಳಿಯದು ಆದರೆ ಆ ಸಂಗತಿಯಲ್ಲಿ ವಿಶೇಷವೇನೂ ಇಲ್ಲ. ಆ ಕಾಲದಲ್ಲಿ ಪ್ರಾಯಶಃ ಎಲ್ಲ ದೊಡ್ಡ ದೊಡ್ಡ ಊರುಗಳಲ್ಲಿಯೂ ಸಂಗೀತ ವಿದ್ವಾಂಸರು ಒಬ್ಬರಿಬ್ಬರಿರುತ್ತಿದ್ದರು. ಸಂಗೀತ ಸಾಹಿತ್ಯ ರಸಿಕರು ಮೂರು ನಾಲ್ಕು ಮಂದಿಯಾದರೂ ಇರದಿದ್ದ ಊರು ಆಗ ಅಪರೂಪ. ಹೀಗೆ ಅಚ್ಚಪ್ಪನವರು ತಮ್ಮ ಸುತ್ತಮುತ್ತಲಿನ ವಾತಾವರಣದಿಂದಲೇ ಸಂಗೀತವನ್ನು ಗ್ರಹಿಸಿರಬೇಕು.

ಅವರಿಗಿದ್ದ ಮುಖ್ಯ ಉದ್ಯೋಗ ಗರ್ಲ್ಸ್ ಸ್ಕೂಲಿನ ಸಿಂಗಿಂಗ್ ಮಾಸ್ಟರ್ ಕೆಲಸ ಈ ಸಂಗೀತಬೋಧನ ಕಾರ್ಯವನ್ನು ಅವರು ಉತ್ಸಾಹದಿಂದ ನಡಸುತ್ತಿದ್ದರೂ, ಒಂದೊಂದು ವೇಳೆ ಸ್ಕೂಲ್ ಹೆಡ್‌ಮಾಸ್ಟರಿಗೂ ಅಚ್ಚಪ್ಪನವರಿಗೂ ತಕರಾರೇಳುತ್ತಿತ್ತು-ಪಾಠದ ವೇಳಾನಿಯಮದ ವಿಷಯದಲ್ಲಿ. ಹರಿಕಥೆ ಮಾಡುವ ಕೆಲಸಕ್ಕಾಗಿ ಅಚ್ಚಪ್ಪನವರು ಆಗಾಗ ಪರಸ್ಥಳ ಹೋಗಿಬಿಡುತ್ತಿದ್ದರು. ಅವರು ಊರಿನಲ್ಲಿಲ್ಲದಾಗ ತರಗತಿಯನ್ನು ನಿರ್ವಾಹ ಮಾಡುವುದು ಹೇಗೆ?

ಒಂದು ಸಾರಿ ಹೆಡ್‌ಮಾಸ್ಟರು ಈ ತಕರಾರನ್ನು ಇನ್‌ಸ್ಪೆಕ್ಟರಿಗೆ ಹೇಳಿಕೊಂಡರು. ಇನ್‌ಸ್ಪೆಕ್ಟರು ಅಚ್ಚಪ್ಪನವರನ್ನು ಕರಸಿ ಹೇಳಿದರು:

ಇ: "ಹೀಗೆ ವೇಳಾಕ್ರಮ ತಪ್ಪುತ್ತಿದ್ದರೆ ನಿಮ್ಮನ್ನು ಶಿಕ್ಷಿಸಬೇಕಾಗುತ್ತದೆ."

ಅ: "ಸ್ವಾಮಿ, ಈ ಕದರಿದಾಸನನ್ನು ಬರ್ತರ್ಫ್ ಸಸ್ಪೆಂಡ್ ಮಾಡಿದರೆ ಅದು ಯಾವ ಗೆಜೆಟ್ಟಿನಲ್ಲಿ ಬರುತ್ತದೆ? ದೊಡ್ಡ ದೊಡ್ಡ ಆಫೀಸರುಗಳನ್ನಾದರೂ ಹಾಗೆ ಮಾಡಿದರೆ ಪ್ರಸಿದ್ಧಿ ಬರುತ್ತದೆ."

ಇ: "ಏನಯ್ಯ ಹೀಗೆ ಮಾತನಾಡುತ್ತೀರಿ? ಚಾಕರಿಯ ಮೇಲೆ ಗಮನವಿಲ್ಲವೆ?"

ಅ: "ಸ್ವಾಮಿ, ನನ್ನ ಜೀವನ ಸೋರೆ ಬುರುಡೆಯಿಂದ ಆಗುತ್ತದೆ. ಇಲ್ಲಿ ತಾವು ಕೊಡುವ ಮಹಾ ಸಂಪತ್ತಿಗೋಸ್ಕರ ಈ ಬುರುಡೆಯನ್ನು ಬಿಸಾಡಲೆ?"

ಇಷ್ಟರಲ್ಲಿ ಹೆಡ್‌ಮಾಸ್ಟರೇ ತಾಳ್ಮೆ ತಂದುಕೊಂಡು ಸಮಾಧಾನದ ಮಾತನ್ನಾಡಿದರು. ಆಗ್ಗೆ ಸದ್ಯಕ್ಕೆ ಅದು ಉಪಶಮನವಾಯಿತು.

ಅಚ್ಚಪ್ಪನವರಿಗೆ ಅಧಿಕಾರ ಅಟ್ಟಹಾಸಗಳಲ್ಲಿ ಭಯವೂ ಗೌರವವೂ ಇರಲಿಲ್ಲ. ಸರಕಾರದ ಕೆಲಸವನ್ನು ಬಿಟ್ಟು ಹರಿಕಥಾಕಾಲಕ್ಷೇಪವೊಂದನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು.

ಅಚ್ಚಪ್ಪದಾಸರು ಹರಿಕಥೆ ಮಾಡುತ್ತಿದ್ದದ್ದು ಕನ್ನಡದಲ್ಲಿ. ಅವರ ಮನೆಮಾತು ಕನ್ನಡ. ಅದರ ಜೊತೆಗೆ ಅವರು ಹರಿಕಥಾಮೃತಸಾರ, ಕುಮಾರವ್ಯಾಸಭಾರತ, ಜೈಮಿನಿ ಭಾರತ-ಇವನ್ನೆಲ್ಲ ವ್ಯಾಸಂಗಮಾಡಿ ತಮಗೆ ಬೇಕಾದ ಪದ್ಯದ ಸರಕನ್ನು ಶೇಖರಮಾಡಿಕೊಂಡಿದ್ದರು. ಹರಿದಾಸರ ದೇವರನಾಮಗಳದಂತೂ ಅವರು ದೊಡ್ಡ ಭಂಡಾರವನ್ನೇ ಶೇಖರಿಸಿದ್ದರು.

ಅವರ ಕಥನಶೈಲಿ ಮನಸ್ಸನ್ನು ಹಿಡಿಯಬಲ್ಲದ್ದು. ಕಥಾಸಂದರ್ಭಕ್ಕೆ ಉಚಿತವಾದ ಮುಖಾಭಿನಯ ನೇತ್ರಾಭಿನಯಗಳು ಸೇರಿದ್ದವು. ಅವರ ಕಂಠಧ್ವನಿ ಕಂಚಿನ ಧ್ವನಿಯಂತೆ, ಬಹುಜನಪ್ರಿಯವಾದದ್ದು. ಆಳು ನೋಟಕ್ಕೆ ಪ್ರಶಾಂತ. ಸೌಮ್ಯಸ್ವಭಾವದವರಾಗಿ ದರ್ಶನೀಯರಾಗಿದ್ದರಿಂದ ಅವರ ಹರಿಕಥೆ ಕೇಳಲು ಬಹುಜನ ಸೇರುತ್ತಿದ್ದರು.

ಆತ ನೂರಾರು ದೇವರ ನಾಮಗಳನ್ನು-ಪುರಂದರದಾಸರದನ್ನು, ಜಗನ್ನಾಥದಾಸರದನ್ನು, ಕನಕದಾಸರದನ್ನು, ಶ್ರೀಪಾದರಾಜರದನ್ನು-ಚೆನ್ನಾಗಿ ಹೇಳುತ್ತಿದ್ದರು. ನಡು ನಡುವೆ ಒಳ್ಳೊಳ್ಳೆಯ ಗದ್ಯಗಳನ್ನೂ ದ್ವಿಪದಿಗಳನ್ನೂ ಸೇರಿಸುತ್ತಿದ್ದರು.

> ಅತಿ ಸಂಭ್ರಮದಲಿ ಸುಂದರೀ-
> ಭರ್ಜರೀ ।

-ಸುಭದ್ರೆ ಹೊರಟದ್ದಾಗಲಿ ಸತ್ಯಭಾಮೆ ಕೋಪಿಸಿಕೊಂಡದ್ದಾಗಲಿ ದ್ರೌಪದಿ ರೇಗಿದ್ದಾಗಲಿ-ಸಂದರ್ಭಕ್ಕೆ ತಕ್ಕಂತೆ ಈ ವಾಕ್ಯಗಳು ಹೊರಡುತ್ತಿದ್ದವು. "ಭರ್ಜರೀ" ಎಂದಾಗ ಮೃದಂಗದವನು ಮೃದಂಗವನ್ನು ಜೋರಾಗಿ ತಟ್ಟುವನು. ಇದು ಎಲ್ಲರಿಗೂ ವಿಸ್ಮಯ.

ಕಡೆಕಡೆಯ ದಿನಗಳಲ್ಲಿ ಅಚ್ಚಪ್ಪನವರು ಬೆಂಗಳೂರಿಗೆ ಬಂದು ಅಲ್ಲಿ ಹರಿಕಥೆ ಮಾಡಿ ಯಶಸ್ಸುಪಡೆದರು.

ಅವರದು ಸಂತೋಷಮಯವಾದ ಜೀವನ; ಮತ್ತು ಶುದ್ಧವಾದದ್ದು. ಅವರು ಭಗವದ್ಭಕ್ತಿಯ ಶಾಂತಿಯನ್ನು ಅನುಭವಿಸಿದ್ದವರು.

ಅಚ್ಚಪ್ಪದಾಸರ ಉಪಕಥೆಗಳು ಬಲು ಸೊಗಸು. ಕಥೆಯಲ್ಲಿ ಬರುವ ನಾನಾ ಪಾತ್ರಗಳನ್ನು ಅವರು ಆಯಾ ಸಂದರ್ಭಕ್ಕೆ ತಕ್ಕ ಮುಖಭಂಗಿಯಿಂದಲೂ ನೇತ್ರಾಭಿನಯದಿಂದಲೂ ಧ್ವನಿವಿಶೇಷದಿಂದಲೂ ಅನುಕರಿಸುವರು.

ದ್ರೌಪದೀ ಸ್ವಯಂವರದಲ್ಲಿ ರಾಜಾಧಿರಾಜರುಗಳು ಮತ್ಸ್ಯಯಂತ್ರವನ್ನು ಭೇದಿಸ ಹೊರಟು ಹತಾಶರಾಗಿ ಕುಳಿತಿದ್ದಾರೆ, ಅಥವಾ ಓಡಿಹೋಗಿದ್ದಾರೆ. ಕ್ಷತ್ರಿಯರ ಸರದಿ ಮುಗಿದ ಮೇಲೆ ಅಲ್ಲಿಯ ಬ್ರಾಹ್ಮಣ ಸಮೂಹದಲ್ಲಿದ್ದ ಒಬ್ಬಾತ ಮೇಲಕ್ಕೆದ್ದ. ಅವನು ಬ್ರಾಹ್ಮಣವೇಷದಲ್ಲಿದ್ದ ಅರ್ಜುನ. ಇದನ್ನು ತಿಳಿಯದ ಉಳಿದ ಬ್ರಾಹ್ಮಣರು ಅರ್ಜುನ ಬ್ರಾಹ್ಮಣನನ್ನು ತಡೆಯ ಹೊರಡುತ್ತಾರೆ, ಹೀಗೆ:

ಎದ್ದದ್ದೇನುಪಾಧ್ಯರೇ ॥
ತದ್ದಿನದೂಟವೆ ಮೇಲಕ್ಕೆದ್ದಿರಿ ।
ಎದ್ದದ್ದೇನುಪಾಧ್ಯರೇ ॥
ಸಜ್ಜಿಗೆಯಲ್ಲ ಹೋಳಿಗೆಯಲ್ಲ ।
ಉದ್ದಿನ ವಡೆ ಕಜ್ಜಾಯಗಳಲ್ಲ ॥
ಮಜ್ಜಿಗೆಪಳಿದ್ಯವು ಮೊದಲೇ ಅಲ್ಲ ।
ಗೊಜ್ಜೂಬಜ್ಜಿಯು ಕೂಡ ಇಲ್ಲ ॥
ಎದ್ದದ್ದೇನುಪಾಧ್ಯರೇ ನೀ- ।
ವೆದ್ದದ್ದೇನುಪಾಧ್ಯರೇ ॥

***

ಒಂದು ದಿವಸ ದಾಸರು ನಿತ್ಯಯಾತ್ರೆಗೆ ಹೋಗುತ್ತ ವಾಡಿಕೆಯಂತೆ ಒಂದು ಮನೆಯ ಮುಂದೆ ನಿಂತು "ಹರಯೇ ನಮಃ" ಎಂದರು. ಉತ್ತರ ಬರಲಿಲ್ಲ. ಇನ್ನೂ ಒಂದು ಸಲ ಕೂಗು ಹಾಕಿದರು. ಆಗಲೂ ಉತ್ತರದ ಚಿಹ್ನೆ ತೋರಲಿಲ್ಲ. ಆಗ ಮನೆಯ ಬಾಗಿಲ ಬಳಿ ನಿಂತು "ದಾರಿದ್ರಮ್ಮ ಮನ್ಯಾಗೆ?" ಎಂದು ಕೂಗಿದರು. ಆಗ ಒಬ್ಬಾಕೆ ಒಳಗಿನಿಂದ ಒಂದು "ಏನು ದಾಸರೆ, ನನ್ನನ್ನು 'ದಾರಿದ್ರಮ್ಮ' ಎನ್ನುತ್ತೀರಿ?" ಎಂದು ಕೋಪದಿಂದ ಕೇಳಿದಳು. ದಾಸರು ಹೇಳಿದರು: "ಹಾಗುಂಟೆ ತಾಯಿ? ನಿಮ್ಮನ್ನು ಎಂದಾದರೂ ಯಾರಾದರೂ ಹಾಂಗೆ ಅಂದಾರೆ?" ನಾನು 'ದಾರಿದ್ದೀರಮ್ಮಾ' ಎಂದು ಕೇಳಿದೆ. ಅವಸರದಲ್ಲಿ

ಕೇಳಿರಭೋದು. ಅದು ನಿಮ್ಮ ಕಿವಿಗೆ ತಪ್ಪು ಕೇಳಿಸಿರಭೋದು. ದಾಸರಾಯರೇ ಹಾಡಿದ್ದಾರೆ-

ದಾರಿದ್ದರೆ ಛಂದ-ಮನೆಗೆ ಆ-
ದಾರಿದ್ದರ ಛಂದ ॥
ಕುದುರೆಗೆ ಕಾಸ್ತಾರಿದ್ದರೆ ಛಂದ ॥
ಸೈನ್ಯಕೆ ಸರ್ದಾರಿದ್ದರೆ ಛಂದ ॥
ರಾಯಗೆ ಛೋಪ್ದಾರಿದ್ದರೆ ಛಂದ ।
ಚೆಲುವಗೆ ಚೆಲುದಾರಿದ್ದರೆ ಛಂದ ॥

ಚೆಲುವೆಗೆ ಚೆಲುವಿ ಹೆಂಡತಿಯಾಗಿರಬೇಕಮ್ಮ. 'ದಾರಾ' ಎಂದರೆ ಭಾರ್ಯೆ ಅಂತ. ಮನೆಗೆ ಅದಾರಿದ್ದರ ಇರಬೇಕು-ದಾರಿದ್ರ್ಯವಿಲ್ಲದೆ ಹೋಗಬೇಕು. ಧಂಡ್ಯಾಗಿ ಸಂಪತ್ತು ಇರಬೇಕು- ಅಂತಾರೆ ದಾಸರಾಯರು, ನಿಮ್ಮ ಮನಿ ಹಾಂಗೆ ಅದೆ ತಾಯಿ."

***

ಪ್ರಾಣೇಶಾಚಾರ್ರು ಹೆಂಡತೀನ ಯಾವಾಗಲೂ "ಹೇ ಪ್ರಾಣೀ" ಎಂದು ಸಂಬೋಧಿಸುತ್ತಿದ್ದರು. ಒಂದು ದಿವಸ ಆಕೆಯ ಬಳಗ ಮನೆಗೆ ಬಂದಿದ್ದಾಗ ಆಚಾರ್ರು "ಹೇ ಪ್ರಾಣೀ, ಈ ಸಾಮಾನು ತೊಗೋ" ಎಂದರು. ಆಕೆಗೆ ಆತ ತನ್ನನ್ನು ಹೀನಾಯ ಮಾಡಿದನೆಂದು ತೋರಿ, "ಯಾಕೆ ಅಂದ್ರೆ ನನ್ನ ಪ್ರಾಣಿ ಅಂಬೋದು? ನನ್ನ ಹೆಸರು ಪದ್ಮ" ಎಂದಳು.

ಹಾಂಗಾದರೆ ನಿನಗೆ ಪ್ರಾಣ ಇಲ್ಲೇನು?"

"ನನಗೂ ಪ್ರಾಣ ಅದೆ, ನಿಮಗೂ ಅದೆ."

"ಹಾಂಗನ್ನು. ಅದಕ್ಕಾಗಿಯೇವೇ ನಾನು ಪ್ರಾಣೇಶ. ನೀನು ಪ್ರಾಣೇಶಿ. ಮುದ್ದಿಗೆ ನೀನು ಪ್ರಾಣಿ. ಸರಿಯಾಯ್ತೋ ಇಲ್ಲೊ?"

ಇನ್ನು ಮ್ಯಾಲೆ ನನ್ನ ಹಾಂಗನ್ನ ಬ್ಯಾಡ್ರಿ."

"ಅಲ್ಲೇ, ಪ್ರಾಣೇಶ ಅಂದರೆ ದೇವರೇ, ಹುಚ್ಚಿ. ಮುಖ್ಯಪ್ರಾಣದೇವರು."

"ನಿಮಗೆ ಒಪ್ಪುತ್ತೆ ಆ ಹೆಸರು. ನೀವಿಟ್ಟುಕೊಳ್ಳಿ."

“ನೀಯೇನು ಕಡಮೀ ಅಂತ ತಿಳಕೊಂಡಿದ್ದೀ? ನೀನು ನಂಗೆ ಸಮಾನೇವೇ.”

***

ಒಬ್ಬ ಆಚಾರ್ರು ನಿತ್ಯಯಾತ್ರೆಗೆ ಹೋಗುತ್ತಿದ್ದರು. ಒಬ್ಬ ಗೃಹಸ್ಥರ ಮನೆಯೊಳಕ್ಕೆ ಹೋಗಿ “ಹರಯೇ ನಮಃ” ಎನ್ನುವರು ಮನೆಯ ಯಜಮಾನಿತಿ ಅಕ್ಕಿ ತಂದಾಗ “ಶುಭ ಮಸ್ತು” ಎಂದು ಆಶೀರ್ವಾದ ಮಾಡಿ, “ಏನು ತಾಯಿ ತಮ್ಮ ಹೆಸರು?” ಎನ್ನುವರು. ಆಕೆ “ಸೀತಾಬಾಯಿ” ಎನ್ನುವರು. ಅಚಾರ್ರು “ಬಹು ಸಂತೋಷ. ನನ್ನ ರಾಮಾಚಾರ್ರು ಅಂತಾರೆ” ಎನ್ನುವರು.

ಇನ್ನೊಂದು ಮನೆಯಾಕೆಯನ್ನು ಕೇಳಿದಾಗ ಆಕೆ “ರಾಧಾಬಾಯಿ” ಎನ್ನುವರು. ನಮ್ಮ ಆಚಾರ್ರು “ನನ್ನ ಹೆಸರು ಕೃಷ್ಣಾಚಾರ್ರು ಅಂತಾರೆ” ಎನ್ನುವರು.

ಮೂರನೆಯ ಮನೆಯಾಕೆ “ನನ್ನ ಹೆಸರು ಪದ್ಮಾವತೀಬಾಯಿ” ಎಂದರೆ ನಮ್ಮ ಆಚಾರ್ರು “ನನ್ನ ಶ್ರೀನಿವಾಸಾಚಾರ್ರು ಅಂತಾರೆ ಎನ್ನುವರು.

ಈ ಆಚಾರ್ರ ನವುರು ಜನಕ್ಕೆ ತಿಳಿದ ಮೇಲೆ ಅವರಿಗೆ ಊರಿನಲ್ಲಿ ತಕ್ಕದ್ದು ಆಗುತ್ತದೆ.

***

ದ್ವಾರಕಾ ಪಟ್ಟಣದಲ್ಲಿ ಒಬ್ಬ ದಾಸರಿದ್ದರು. ಅವರು ಪ್ರತಿದಿನವೂ ಜೋಳಿಗೆ ಹಾಕಿ ಹೊರಡುವರು. ಕೈಯಲ್ಲಿ ಸಾರಂಗಿ ವಾದ್ಯ. ಅದನ್ನು ನುಡಿಸಿಕೊಂಡು ಮನೆಮನೆಗೂ ಹೋಗುವರು.ಮನೆಯ ಮುಂದೆ ನಿಂತು ಹೀಗೆ ಹಾಡುವರು:

> ಸೋಬ್ ನಾರೀ ತಿಗಡೀ ಪಿಗಡೀ ।
> ಏಕ್ ನಾರೀ ಪತಿವ್ರತಾ ॥
> (‘ಸೋಬ್’ ಎಂದರೆ ಸಬ್ ಸರ್ವ.)

“ಲೋಕದಲ್ಲಿ ಎಲ್ಲ ಹೆಂಗಸರೂ ಹಾಗೆಹಾಗೆ; ಒಬ್ಬಳು ಮಾತ್ರ ಪತಿವ್ರತೆ.”

ಈ ಹಾಡನ್ನು ಕೇಳಿದ ಹೆಂಗಸು “ಯಾರು ಆ ಪತಿವ್ರತೆ?” ಎಂದು ಕೇಳುವರು. ದಾಸರು “ನೀವೇ ತಾಯಿ. ನಿಮ್ಮನ್ನು ಬಿಟ್ಟರೆ ಇನ್ನು ಯಾರಿದ್ದಾರೆ?” ಎನ್ನುವರು. ಆಕೆಗೆ ಸಂತೋಷವಾಗಿ ಇನ್ನೊಂದು ಹಿಡಿ ಅಕ್ಕಿ ಹಾಕುವಳು. ಹೀಗೆ ಆತ ಮನೆ ಮನೆಯಲ್ಲಿಯೂ ಅಕ್ಕಿ ಗಿಟ್ಟಿಸಿಕೊಳ್ಳುತ್ತಿದ್ದ.

ಈ ಸಮಾಚಾರವನ್ನು ಯಾರೋ ಒಬ್ಬರು ಶ್ರೀಕೃಷ್ಣಪರಮಾತ್ಮನಲ್ಲಿ ಹೇಳಿ ಆ ಮೋಸಗಾರನಿಗೆ ಏನಾದರೂ ಮಾಡಬೇಕೆಂದು ಹೇಳಿಕೊಂಡನಂತೆ. ಶ್ರೀಕೃಷ್ಣನು ಕೊಂಚ ನಸುನಕ್ಕು "ನೋಡೋಣ" ಎಂದನಂತೆ.

ಮಾರನೆಯ ದಿನ ದಾಸರು ಯಥಾಪ್ರಕಾರ "ಸೋಬ್ ನಾರೀ" ಹೇಳಿಕೊಂಡು ಅಕ್ಕಿ ಸಂಪಾದನೆ ಮಾಡಿಕೊಂಡು ಬಂದರು. ತಮ್ಮ ಮನೆಗೆ ಬಂದು ನೋಡಿದರು; ಕದ ಹಾಕಿತ್ತು. ಬಾಗಿಲ ಮುಂದೆ ನಿಂತು ನೋಡಿದಾಗ ಒಳಗಿನಿಂದ ಕಿಟಕಿಯಲ್ಲಿ ಯಾವನೋ ಗಂಡಸಿನ ಮುಖ ಕಾಣಿಸಿತು. ಆಗ ದಾಸರು ಹೇಳಿದರು:

ಸೋಬ್ ನಾರೀ ತಿಗಡೀ ಪಿಗಡೀ
ಏಕ್ ನಾರೀ ಪತಿವ್ರತಾ ॥
ಉನ್ಹೇಭೀ ತಿಗಡೀ ಪಿಗಡೀ
ಉನ್ಹೇಭೀ ತಿಗಡೀ ಪಿಗಡೀ ॥

ಆಗ ಒಳಗಿನಿಂದ ಶ್ರೀಕೃಷ್ಣನು ಹೊರಕ್ಕೆ ಬಂದು ಕಾಣಿಸಿಕೊಂಡ, ದಾಸರು ನಮಸ್ಕಾರ ಮಾಡಿ "ಕ್ಷಂತವ್ಯೋ ಮೇಽಪರಾಧಃ" ಎಂದು ಬೇಡಿದರು. ಶ್ರೀಕೃಷ್ಣಪರಮಾತ್ಮನು ಆತನಿಗೆ ಕ್ಷಮೆ ಕೊಟ್ಟು "ಇನ್ನು ಮುಂದೆ ಹೀಗೆ ಮಾಡಬೇಡ" ಎಂದು ಹೇಳಿದನಂತೆ.

***

ಇಂಥ ಕಥೆಗಳು ನಮ್ಮ ಅಚ್ಚಪ್ಪದಾಸರ ದಫ್ತರದಲ್ಲಿ ಲೆಕ್ಕವಿಲ್ಲದಷ್ಟು ಇದ್ದವು. ಕಥಾ ವಸ್ತುವಿಗಿಂತ ಸ್ವಾರಸ್ಯ ಕಥೆಯನ್ನು ಹೇಳುವ ರೀತಿ. ಧ್ವನಿಯ ಕೊಂಕು, ಕಣ್ಣಿನ ಸಂಜ್ಞೆ, ಕೈಯ ಅಭಿನಯ-ಇವೆಲ್ಲ ಸೇರಿ ಕೇಳುವವರ ಮನಸ್ಸನ್ನು ಹಿಡಿಯುತ್ತಿತ್ತು.

ಆಚ್ಯುತದಾಸರು ಅಂತರಂಗ ಭಕ್ತರು; ನಡತೆವಂತರು, ಮತ್ತು ಸನ್ಮಾನ್ಯರು. ಅಂಥ ಕಥಾಕಾರರನ್ನು ನಾನು ಕಂಡು ಎಷ್ಟೋ ವರ್ಷವಾಯಿತು. ಈಗ ಆ ಕಲೆ ಕ್ಷೀಣವಾಗುತ್ತಿದೆಯೋ ಏನೋ!

2

ರಾಮಶೇಷಯ್ಯನವರು

೧೯೦೪-೫ರ ಸುಮಾರಿನಲ್ಲಿ ಒಂದು ದಿನ ಬೆಳಗ್ಗೆ ಸುಮಾರು ೧೦ ಘಂಟೆಯ ಸಮಯದಲ್ಲಿ ನನ್ನ ಚಿಕ್ಕಜ್ಜಂದಿರು ಮನೆಯ ಮುಂದಿನ ಜಗಲಿಯ ಮೇಲೆ ಕುಳಿತು ಯಾರೊಡನೆಯೋ ಮಾತನಾಡುತ್ತಿದ್ದಾಗ ಒಬ್ಬ ಮನುಷ್ಯ ಅಲ್ಲಿಗೆ ಬಂದು ಕೊಂಚದೂರ ನಿಂತು ತೆಲುಗುಭಾಷೆಯಲ್ಲಿ ತಗ್ಗುಧ್ವನಿಯಲ್ಲಿ ಕೇಳಿದರು:

"ಈ ಹೊತ್ತು ನನಗೆ ತಮ್ಮಲ್ಲಿ ಭೋಜನಕ್ಕೆ ಅನುಕೂಲವುಂಟೆ?"

ಆತ ಸುಮಾರು ೫೦-೫೫ ವಯಸ್ಸಿನವರಿರಬಹುದು. ಕೈಯಲ್ಲಿ ಒಂದು ತಂಬಿಗೆ ಒಂದು ಬೊಂತೆಯನ್ನು ಹೊದೆದಿದ್ದ. ಷರಟು, ಬನಿಯನ್-ಇದು ಯಾವುದೂ ಇರಲಿಲ್ಲ. ಉಟ್ಟಿದ್ದದ್ದು ಒಂದು ಮಾಸಲು ಧೋತ್ರ. ಅದನ್ನು ಮಡಿಸಿ ಮುಂಡು ಸುತ್ತಿದ್ದ. ಆತನ ಕೈಯಲ್ಲಿ ಇನ್ನೊಂದು ಸಣ್ಣ ಬಟ್ಟೆ ಇತ್ತು. ತಲೆ ಸಂಪೂರ್ಣವಾಗಿ ಮುಂಡನವಾಗಿ ಎರಡುಮೂರು ದಿನಗಳ ಬೆಳೆಯಿತ್ತು.

ನನ್ನ ತಾತಂದಿರು ಕೇಳಿದರು:

"ನೀವು ಬ್ರಾಹ್ಮಣರೆ?"

"ಹೌದು."

"ಸ್ನಾನವಾಗಿದೆಯೋ, ಇಲ್ಲೇ ಮಾಡುತ್ತೀರೋ?"

"ನಾನು ಕುಂಟೆಗೆ ಹೋಗಿ ಸ್ನಾನಮಾಡಿ ಬರುತ್ತೇನೆ. ಅರ್ಧಘಂಟೆಯೊಳಗಾಗಿ ಬಂದರೆ ಆಗಬಹುದು ತಾನೆ?"

"ಆಗಬಹುದು."

ಸುಮಾರು ಹನ್ನೊಂದೂವರೆ ಘಂಟೆಗೆ ಭೋಜನಕ್ಕೆ ಕುಳಿತೆವು. ಆ ಬ್ರಾಹ್ಮಣ ಬಂದಿದ್ದ. ಆದರೆ ಕೊಂಚ ದೂರವಾಗಿ ಅಡ್ಡಪಂಕ್ತಿಯಲ್ಲಿ ಕುಳಿತಿದ್ದ. ಅಪರಿಚಿತನಾದದ್ದರಿಂದ ವಿಚಾರಮಾಡಿ ಸಹಪಂಕ್ತಿಗೆ ಸೇರಿಸಿಕೊಳ್ಳಬೇಕೆಂದು ನಮ್ಮ ತಾತನ ಉದ್ದೇಶವಿರಬಹುದು. ಅವರಲ್ಲಿ ಈ ಬಗೆಯ ಛಾನಸವಿತ್ತು.

ಭೋಜನ ಕಾಲದಲ್ಲಿ ಆತನನ್ನು ಯಾರೂ ಮಾತನಾಡಿಸಲಿಲ್ಲ ಆತನೂ ಯಾರನ್ನೂ ಮಾತನಾಡಿಸಲಿಲ್ಲ. ಮಿಕ್ಕವರಂತೆಯೇ ಆತನೂ ತೀರ್ಥ ಗಂಧಾಕ್ಷತೆಗಳನ್ನು ತೆಗೆದುಕೊಂಡ. ಮಿಕ್ಕವರಂತೆಯೇ ಬೊಟ್ಟಿಟ್ಟು ಆಪೋಶನ ತೆಗೆದುಕೊಂಡ. ಭೋಜನಾನಂತರ ದಕ್ಷಿಣೆ ತಾಂಬೂಲಗಳನ್ನು ತೆಗೆದುಕೊಂಡು ಹೊರಟುಹೋದ.

ಎರಡುಮೂರು ದಿವಸ ಕಳೆದ ಮೇಲೆ ಊರಿನಲ್ಲಿ ಅಲ್ಲಲ್ಲಿ ಮಾತು.

"ಸೋಮೇಶ್ವರ ದೇವಸ್ಥಾನದಲ್ಲಿ ರಾತ್ರಿ ಸರಿಹೊತ್ತಿನಲ್ಲಿ ದೇವತೆಗಳು ಬಂದು ಪೂಜೆ ಮಾಡುತ್ತಾರೆ. ಆಗ ಯಾರೋ ಹಾಡುತ್ತಾರೆ. ಅದನ್ನು-ಅವರು ಕೇಳಿದರಂತೆ; -ಇವರು ಕೇಳಿದರಂತೆ; ನಾನೂ ಕೇಳಿದೆ."

ಇದು ಎರಡುಮೂರು ದಿವಸ ನಡೆದ ಮೇಲೆ ಏನು ನಡೆಯುತ್ತಿದೆಯೋ ಪತ್ತೆ ಮಾಡಬೇಕೆಂದು ನಾಲ್ಕು ಜನ ನಿಶ್ಚಯಿಸಿದರು: ನನ್ನ ತಂದೆ, ವೆಂಕಟನಾರಣ ಭಟ್ಟರು, ಗಟ್ಟೆನ್ನಗಾರಿ ಮುನಿಸ್ವಾಮಿ, ಇನ್ನು ಯಾರೋ ಒಬ್ಬರು-ಬಹುಶಃ ಅಚ್ಚಪ್ಪದಾಸರು.

ಸೋಮೇಶ್ವರ ದೇವಸ್ಥಾನವಿರುವುದು ಮುಳಬಾಗಲು ಊರಿನ ಹೊರಗಡೆ. ಗುಡಿಯ ಸುತ್ತಮುತ್ತ ಸಮೀಪದಲ್ಲಿ ಮನೆಗಳಿಲ್ಲ. ಮೂವತ್ತು ನಲವತ್ತು ಗಜದಾಚೆ ಐದಾರು ಮನೆಗಳು, ಅಷ್ಟೆ. ದೇವಸ್ಥಾನ ಪುರಾತನವಾದದ್ದು, ವಿಸ್ತಾರವಾದದ್ದು. ಅದು ವಿದ್ಯುಚ್ಛಕ್ತಿಯ ಕಾಲವಲ್ಲ. ಆದದ್ದರಿಂದ ಗುಡಿಯ ಒಳಗೆ ದಟ್ಟವಾಗಿ ಹಬ್ಬಿದ ಕತ್ತಲೆ. ಸಾಮಾನ್ಯವಾಗಿ ಕಾರ್ತಿಕ ಮಾಸದ ದೀಪಾರಾಧನೆಯ ದಿನಗಳನ್ನು ಬಿಟ್ಟರೆ ರಾತ್ರಿ ಎಂಟು ಘಂಟೆಯ ಮೇಲೆ ಅಲ್ಲಿ ಜನ ಇರುತ್ತಿರಲಿಲ್ಲ.

ಇಂಥ ಜಾಗಕ್ಕೆ ರಾತ್ರಿಯ ಹೊತ್ತು ಹೋಗುವುದೆಂದರೆ ಹೆದರಿಕೆಯೇ. ಹಾವು ಚೇಳುಗಳ ಹೆದರಿಕೆ, ಅದಕ್ಕಿಂಥ ಹೆಚ್ಚಾಗಿ ಭೂತ ಪ್ರೇತಗಳ ಹೆದರಿಕೆ. ಇಂಥಾದ್ದರಲ್ಲಿ ನಮ್ಮ ವೆಂಕಟನಾರಾಯಣಭಟ್ಟರು ಮೊದಲಾದವರು ಮಾಡಿದ್ದು ಒಂದು ಸಾಹಸದ ಕಾರ್ಯವೆಂದು ಆ ಊರಿನ ಜನರ ಭಾವನೆ.

ನಮ್ಮ ಪತ್ತೇದಾರರು ಸದ್ದು ಮಾಡದೆ, ದೀಪ ಹಿಡಿಯದೆ ಮೆಲ್ಲಮೆಲ್ಲನೆ ಮಹಾದ್ವಾರದಿಂದ ಗುಡಿಯೊಳಕ್ಕೆ ಹೋದರು. ರಾತ್ರಿ ಹನ್ನೆರಡು ಘಂಟೆ ಇರಬಹುದು. ಮುಖ ಮಂಟಪದಲ್ಲಿ ನಿಂತಾಗ ಹಾಡು ಕೇಳಬರುತ್ತಿತ್ತು. ಅವರು ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಪಿಸುಮಾತಿನಲ್ಲಿ "ಏನೋ ಇದೆ" "ಏನೋ ಇದೆ" ಎಂದುಕೊಂಡು ಮೆಲ್ಲನೆ ಮುಂದಕ್ಕೆ ಸಾಗಿದರು. ಸ್ವಾಮಿಯ ಗುಡಿಯ ಮುಂಭಾಗದಿಂದ, ಅದರ ಉತ್ತರಪಾರ್ಶ್ವದಲ್ಲಿರುವ ಅಮ್ಮನವರ ಗುಡಿಯ ಮುಂಭಾಗದಿಂದ ಆ ಸ್ವರ ಕೇಳಿಬರುತ್ತಿತ್ತು. ಇವರು ಆ ಕಂಭಗಳಮರೆಯಲ್ಲಿ ನಿಂತು ಕೇಳಿದರು. ಪ್ರಸನ್ನ ಪಾರ್ವತಿದೇವಿ ಅಮ್ಮನವರ ಗುಡಿಯಲ್ಲಿ ದೀಪ ಉರಿಯುತ್ತಿತ್ತು. ಗಾಯಕನು ಅಮ್ಮನವರ ಎದುರಿನ ಮುಖಮಂಟಪದಲ್ಲಿ ಕುಳಿತು ತನ್ನ ಮನೋಭಾವಗಳನ್ನು ಕೈಯಿಂದ ತೋರಿಸುತ್ತ ಹಾಡುತ್ತಿದ್ದ. ಬಹುಶಃ ಕೇದಾರಗೌಳರಾಗವೆಂದು ನನಗೆ ಕೇಳಿದವರು ತಿಳಿಸಿದರು.

ಆ ಗಾಯಕನು ನಮ್ಮ ಮನೆಗೆ ಭೋಜನಕ್ಕೆ ಬಂದಿದ್ದ ಮನುಷ್ಯ.

ಮೂರುನಾಲ್ಕು ದಿನಗಳೊಳಗಾಗಿ ನಮ್ಮ ಪತ್ತೆದಾರರು ಕಂಡುಹಿಡಿದಿದ್ದ ಸಂಗತಿಯ ವಾರ್ತೆ ಊರಲ್ಲಿ ಹರಡಿತು. ಯಾರೋ ಆತನನ್ನು ಕಾಣಬೇಕೆಂದು ಹೊರಟರು. ಹೆಸರು ಕೇಳಿದ್ದಕ್ಕೆ "ರಾಮಶೇಷಯ್ಯ" ಎಂದು ಉತ್ತರ ಹೇಳಿದನಂತೆ. ಊರು ಯಾವುದು ಎಂದದ್ದಕ್ಕೆ "ಎಲ್ಲಿದ್ದರೆ ಅದೇ" ಎಂದನಂತೆ.

ಆಮೇಲೆ-ಮರುದಿವಸವೇ ಆತ ಊರು ಬಿಟ್ಟಿದ್ದ. ಎಲ್ಲಿ ಹೋದನೋ ಯಾರಿಗೂ ತಿಳಿಯದು. ಆತ ಉಳಿದುಕೊಂಡಿದ್ದದ್ದು ಸೋಮೇಶ್ವರ ದೇವಸ್ಥಾನದ ಬಳಿಯ ಯಾವುದೋ ಪಾಳು ಮಂಟಪದಲ್ಲಿ; ಎಲ್ಲಿಯೋ ಊಟ. ಹೀಗೆ ಯಾದೃಚ್ಛಿಕನಾಗಿದ್ದ ಆತ.

ಅನಿಕೇತಃ ಸ್ಥಿರಮತಿಃ ॥

ಆಮೇಲೆ ಕೆಲವು ದಿನ ಆತನ ಸಂಗೀತದ ಕೊಂಡಾಟ ಊರಿನಲ್ಲಿ ನಡೆಯಿತು ಎಲ್ಲರಿಗೂ ಆಶ್ಚರ್ಯ.

***

೧೯೦೯-೭ರಲ್ಲಿ ಶೃಂಗೇರಿ ಜಗದ್ಗುರುಗಳವರು ಬೆಂಗಳೂರಿಗೆ ದಯಮಾಡಿಸಿದರು. ಒಂದು ದಿನ ಚಾಮರಾಜಪೇಟೆಯ ಶ್ರೀರಾಮೇಶ್ವರ ದೇವಾಲಯದಲ್ಲಿ ಅವರಿಗೆ ಭಿಕ್ಷೆ. ತೀರ್ಥಪ್ರಸಾದಾದಿಗಳಿಗಾಗಿ ಸಾವಿರಾರು ಮಂದಿ ಸೇರಿದ್ದರು. ಆ ದೊಡ್ಡ ಗುಂಪಿನಲ್ಲಿ ರಾಮಶೇಷಯ್ಯನವರಿದ್ದರು. ನಾನು ಅವರನ್ನು ಹತ್ತು ಗಜ ದೂರದಿಂದ ಕಂಡು ಕೂಗಿದೆ:

“ರಾಮಶೇಷಯ್ಯಗಾರು.,,”

ಅವರು ಬೆಚ್ಚಿಬಿದ್ದವರಂತಾಗಿ ನನ್ನ ಕಡೆಗೆ ತಿರುಗಿದರು.

“ಎವರು?ಎವರು?”

ನಾನು ಹತ್ತಿರ ಹೋಗಿ ಮುಳಬಾಗಲಿನ ವಿಷಯ ಪ್ರಸ್ತಾವಿಸಿದೆ. ಅವರು ನಕ್ಕು “ಸರಿ ಸರಿ” ಎನ್ನುತ್ತಾ ಅಲ್ಲಿಂದ ಅವಸರವಸರವಾಗಿ ಹೊರಟು ಹೋದರು. ಎಲ್ಲಿ ಹೋದರೋ ಏನೋ.

***

ಆ ರಾತ್ರಿ ಅವರು ಶ್ರೀಪಾರ್ವತೀದೇವಿ ಅಮ್ಮನವರ ಮುಂದೆ ಹಾಡುತ್ತಿದ್ದ ಕಾಲದಲ್ಲಿ ಕಾಣಬಂದ ಆರ್ತಧ್ವನಿಯಿಂದಲೂ ಆ ಸಾಹಿತ್ಯದ ದೈನ್ಯಭಾವದಿಂದಲೂ ಆ ರಾಗವಿನ್ಯಾಸದ ತೀವ್ರಕೋಮಲನಾದದಿಂದಲೂ ರಾಮಶೇಷಯ್ಯನವರ ಮನಸ್ಸಿನಲ್ಲಿ ಯಾವುದೋ ಒಂದು ದುಃಖ, ಯಾವುದೋ ಹೇಳಲಾಗದ ಸಂಕಟ ಹುದುಗಿಕೊಂಡಿದ್ದಿರಬೇಕೆಂದು ವೆಂಕಟನಾರಣ ಭಟ್ಟರು ಮೊದಲಾದವರು ಅನುಮಾನಿಸಿದರು.

ರಾಮಶೇಷಯ್ಯನವರು ತಮ್ಮ ಸಂಸಾರತಾಪದ ನಡುವೆ ಸಂಗೀತದ ಒಂದು ಶೀತಲ ದ್ವೀಪವನ್ನು ಕಂಡುಕೊಂಡಿದ್ದರು. ಇದು ಸಂಗೀತದ ಪರಮ ಸಿದ್ಧಿ.

೮

ಮೈಸೂರಿನ ಸಂಗೀತ ಖ್ಯಾತಿ

೧೯೨೫-೨೬ರ ಸುಮಾರಿನಲ್ಲಿ ಒಂದು ರಾಜಕೀಯ ವ್ಯಾಸಂಗಕ್ಕಾಗಿ ನಾನು ದೆಹಲಿಗೆ ಹೋಗಿದ್ದೆ, ಇಂಡಿಯದ ದೇಶೀಯ ಸಂಸ್ಥಾನಗಳ ಪರಿಸ್ಥಿತಿ, ಅವುಗಳ ಭವಿಷ್ಯ-ಇದನ್ನು ಕುರಿತು ತಿಳಿವಳಿಕೆ ಪಡೆಯುವುದಕ್ಕಾಗಿ. ಸಂಸ್ಥಾನಗಳ ಸೈನ್ಯ ಸಿಬ್ಬಂದಿಗಳ ಏರ್ಪಾಟನ್ನು ವಿವರವಾಗಿ ತಿಳಿದುಕೊಳ್ಳಬೇಕೆಂದು ಕ್ಯಾಪ್ಟನ್ ಅಜಬ್‌ಖಾನ್ ಎಂಬವರನ್ನು ಕಂಡೆ. ಅಜಬ್‌ಖಾನರು ಪಂಜಾಬಿನವರು. ಮೊದಲನೆಯ ಮಹಾಯುದ್ಧದಲ್ಲಿ (೧೯೧೪-೧೮) ಒಂದು ಸೇನಾದಳದ ನಾಯಕರಾಗಿ ಮೆಹನತ್ತು ಮಾಡಿದವರು. ಅವರು ಅಂದಿನ ರಾಜ್ಯ ಸಭೆಯ ಸದಸ್ಯರಾಗಿ ಅಂದಿನ ಸರಕಾರದಿಂದ ನಿಯಮಿತರಾಗಿದ್ದವರು. ಅವರಿಂದ ನನಗೆ ಬೇಕಾಗಿದ್ದ ವಿವರಣೆಗಳು ಪ್ರಮಾಣಭೂತವಾಗಿ ತಿಳಿದುಬಂದಾವೆಂದು ರೈಟ್ ಆನರಬಲ್ ವಿ. ಎಸ್.ಶ್ರೀನಿವಾಸಶಾಸ್ತ್ರಿಗಳವರು ನನಗೆ ಸಲಹೆಕೊಟ್ಟು ಕ್ಯಾಪ್ಟನ್ ಅಜಬ್‌ಖಾನರವರಿಗೆ ಒಂದು ಪರಿಚಯ ಪತ್ರವನ್ನು ಬರೆದುಕೊಟ್ಟಿದ್ದರು. ಅಜಬ್‌ಖಾನರು ಆ ಪತ್ರವನ್ನು ನೋಡಿ ಸಂತೋಷ ಸೂಚಿಸಿ ಮಾರನೆಯದಿನ ಬೆಳಿಗ್ಗೆ ನಾವಿಬ್ಬರೂ ಅವರು ಬಿಡಾರ ಮಾಡಿಕೊಂಡಿದ್ದ ಮೆಯಿಡನ್ ಹೊಟೇಲಿನಲ್ಲಿ ಅವರ ಕೋಣೆಯಲ್ಲಿ ಸೇರಬಹುದೆಂದು ಸಲಹೆ ಕೊಟ್ಟರು.

ನಾನು ಅದರಂತೆ ಅಲ್ಲಿಗೆ ಹೋದಾಗ ಅಜಬ್‌ಖಾನರವರು ನನ್ನನ್ನು ಸ್ವಾಗತಿಸಿ, "ಬನ್ನಿ, ಬೆಳಗಿನ ಫಲಾಹಾರ ಮುಗಿಸಿಕೊಂಡು ಬರೋಣ. ಆಮೇಲೆ ವಿರಾಮದಲ್ಲಿ ಮಾತುಕಥೆ." ಎಂದರು. ನಾನು ಅಲ್ಲಿ ಉಪಾಹಾರ ಮಾಡತಕ್ಕವನಲ್ಲವೆಂದು ಕ್ಷಮೆ ಬೇಡಿದಾಗ, ಅವರು "ಆದರೇನು? ನಾನೂ ನನ್ನ ಇತರ ಸ್ನೇಹಿತರೂ ಉಪಾಹಾರಮಾಡುತ್ತಿರುವಾಗ ನೀವು ನನ್ನ ಪಕ್ಕದಲ್ಲಿ ಕುಳಿತು ಸಂಭಾಷಣೆಯಲ್ಲಿ ಸೇರಬಹುದಲ್ಲ?" ಎಂದರು.

ಶೇಷಣ್ಣನವರ ಖ್ಯಾತಿ

ಈ ಮಾತು ನಡೆದದ್ದು ಅಜಬ್‌ಖಾನರ ಕೊಠಡಿಯ ಹೊಸ್ತಿಲ ಮುಂದುಗಡೆ. ನಾವು ಮಾತನಾಡುತ್ತಿದ್ದಂತೆ ಪಕ್ಕದ ಕೊಠಡಿಯಿಂದ ಒಬ್ಬ ದೊಡ್ಡ ಮನುಷ್ಯರು ಹೊರಕ್ಕೆ ಬಂದು

ಖಾನ್‌ಸಾಹೇಬರಿಗೆ ಸಲಾಂ ಹೇಳಿದರು. ಖಾನ್‌ಸಾಹೇಬರು ನನ್ನನ್ನು ಅವರಿಗೆ ಪರಿಚಯ ಮಾಡಿಕೊಟ್ಟರು.

“ಇವರು ಸರ್ ಹರಿಚಂದ್ರ ವಿಷನ್‌ರಾಯ್, ಸಿಂಧೂ ಪ್ರಾಂತದವರು. ಅನೇಕ ಗಿರಣಿಗಳ ಮಾಲಿಕರು. ನೀವು ತಿಳಿದುಕೊಳ್ಳಬೇಕಾದವರು.”

ಹಾಗೆಯೆ ನಾನು ಬೆಂಗಳೂರಿನವನೆಂದು ರಾಯ್‌ರವರಿಗೆ ತಿಳಿಸಿದರು. ರಾಯ್‌ರವರು ನನ್ನ ಕಡೆಗೆ ತಿರುಗಿ ಕೇಳಿದರು:

ರಾಯ್: “ಬೆಂಗಳೂರು-ಬೆಂಗಳೂರು ಮೈಸೂರು ದೇಶವಲ್ಲವೆ?”

ನಾನು: “ಹೌದು. ಬೆಂಗಳೂರು ಮೈಸೂರು ಸಂಸ್ಥಾನದ ಸರಕಾರದ ಕೇಂದ್ರ ಪಟ್ಟಣ. ಮೈಸೂರು ಪಟ್ಟಣವು ಮಹಾರಾಜರ ವಾಸಸ್ಥಾನ, ಆದದ್ದರಿಂದ ಮುಖ್ಯ ರಾಜಧಾನಿ.”

ರಾಯ್: “ಮೈಸೂರಿನಲ್ಲಿ ಶೇಷಣ್ಣ ಎಂಬ ಸಂಗೀತಗಾರರಿದ್ದಾರಲ್ಲವೆ? ಅವರನ್ನು ನೀವು ಬಲ್ಲಿರಾ?”

ನಾನು: “ಹೌದು. ಶೇಷಣ್ಣನವರನ್ನು ನಾನು ಕೊಂಚ ಕೊಂಚ ಬಲ್ಲೆ. ಅವರು ನನಗಿಂತ ಎಲ್ಲ ವಿಷಯಗಳಲ್ಲೂ ದೊಡ್ಡವರು-ಬಹಳ ದೊಡ್ಡವರು. ಅವರನ್ನು ನಾನು ಬಲ್ಲೆನೆಂದು ಹೇಳಿದರೆ ಸಾಹಸವಾದೀತು.”

ರಾಯ್: “ಅವರು ನಿಮಗೆ ತಿಳಿದಿದ್ದರೆ ನನಗೆ ನಿಮ್ಮಿಂದ ಒಂದು ಉಪಕಾರವಾಗಬೇಕಲ್ಲ?”

ನಾನು: “ಅಪ್ಪಣೆಯಾಗಲಿ. ನನ್ನಿಂದ ನಡೆಯುವುದಾದರೆ ಸಂತೋಷದಿಂದ ಮಾಡಿಯೇನು.”

ರಾಯ್: “ಶೇಷಣ್ಣನವರ ವೀಣಾವಾದನವನ್ನು ನಾನು ಬೊಂಬಾಯಿಯಲ್ಲಿ ಮೂರು ನಾಲ್ಕು ಸಲ ಕೇಳಿದ್ದೇನೆ. ಈಗ ಇನ್ನೊಂದು ಸಾರಿ ಕೇಳಬೇಕೆಂದು ಆಸೆಯಾಗುತ್ತಿದೆ. ನನಗೆ ವಯಸ್ಸು ಎಂಬತ್ತಾಗಿದೆ. ಆದದ್ದರಿಂದ ಮೈಸೂರಿನಷ್ಟು ದೂರ ಪ್ರಯಾಣ ಮಾಡುವ ಧೈರ್ಯವಿಲ್ಲ. ಅವರು ಬೊಂಬಾಯಿಗೆ ದಯಮಾಡುವುದಾದರೆ ಅವರ ಪ್ರಯಾಣದ ಎಲ್ಲ ಖರ್ಚುವೆಚ್ಚಗಳನ್ನೂ ನಾನು ನೋಡಿಕೊಳ್ಳುತ್ತೇನೆ. ನಾನು ಬದುಕಿರುವಷ್ಟರೊಳಗಾಗಿ ಒಂದು ಸಾರಿ ಆ ವೀಣೆ ಕೇಳಬೇಕೆಂದು ಆಸೆ.”

ಇದರಿಂದ ನನಗಾದ ಹೆಮ್ಮೆಯನ್ನು ಹೇಗೆ ಮಾತುಗಳಿಂದ ತಿಳಿಸಬಹುದು? ಇಂಡಿಯ ದೇಶಕ್ಕೆ ವಿದೇಶಗಳಲ್ಲಿ "ಗಾಂಧಿಯ ದೇಶ" ಎಂದು ಹೆಸರು ಬಂದಂತೆ ಮೈಸೂರಿಗೆ ಇತರ ಪ್ರಾಂತಗಳಲ್ಲಿ "ಶೇಷಣ್ಣನವರ ದೇಶ" ಎಂಬ ಹೆಸರು ಬಂದಿತ್ತು.

ಈ ಉಪಾಖ್ಯಾನವನ್ನು ಇಲ್ಲಿ ಹೇಳುವುದರ ಉದ್ದೇಶ ಮೈಸೂರಿಗೆ ಒಂದಾನೊಂದು ಕಾಲದಲ್ಲಿದ್ದ ಸಂಗೀತ ಪ್ರಸಿದ್ಧಿಯನ್ನು ತೋರಿಸುವುದು.

ದಕ್ಷಿಣ ಇಂಡಿಯದಲ್ಲಿ ಸಂಗೀತಕ್ಕಾಗಿ ಹೆಸರಾಂತ ಸ್ಥಳಗಳಲ್ಲಿ ಮೈಸೂರಿನದು ಅಗ್ರಸ್ಥಾನವಾಗಿತ್ತೆನ್ನಬಹುದು. ಅಥವಾ ತಂಜಾವೂರಿಗೆ ಮೈಸೂರು ಸಮಾನವಾದದ್ದೆಂದಾದರೂ ಹೇಳಬಹುದು.

ಶೇಷಣ್ಣನವರ ಕಾಲಕ್ಕೆ ಹಿಂದೆಯೇ ಆ ಕೀರ್ತಿ ಪ್ರಾರಂಭವಾಗಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರವರು ಸಂಗೀತಶಾಸ್ತ್ರ ಸಂಪ್ರದಾಯಗಳಲ್ಲಿ ನಿಶಿತ ಯೋಗ್ಯತೆ ಪಡೆದಿದ್ದ ವಿದ್ವಾಂಸರು. ಅವರು ಸ್ವತಃ ಕೆಲವು ಗೇಯ ಕೃತಿಗಳನ್ನು ರಚಿಸಿದ್ದದ್ದಲ್ಲದೆ ಬಹು ಮಂದಿ ಸಂಗೀತ ವಿದ್ವಾಂಸರಿಗೆ ವಿಶಾಲವಾಗಿ ಆಶ್ರಯಕೊಟ್ಟಿದ್ದವರು. ಆ ವಿದ್ವಾಂಸರುಗಳಲ್ಲಿ ಮುಖ್ಯರಾದವರು ಸಾಂಬಯ್ಯ, ಸದಾಶಿವರಾವ್, ಶಿವರಾಮಯ್ಯ, ಪದ್ಮನಾಭಯ್ಯ ಮೊದಲಾದವರು. ಈ ಮಹನೀಯರಲ್ಲಿ ಬಹುಮಂದಿಯ ಹೆಸರುಗಳು ಹೆಸರು ಮಾತ್ರವಾಗಿ ನಿಂತಿವೆ. ಅವರ ಜೀವಿತ ಸಂಗತಿಗಳು ಎಲ್ಲಿಯೂ ಲಿಖಿತವಾಗಿಲ್ಲ.

ಸಂಗೀತದ ವಿಷಯದಲ್ಲಿ ಬೆಂಗಳೂರು ಎಂದೂ ಮೈಸೂರಿನಷ್ಟು ಪ್ರಸಿದ್ಧವಾಗಿದ್ದದ್ದಲ್ಲ. ಮೈಸೂರಿನ ಹೆಚ್ಚು ಪ್ರಸಿದ್ಧಿಗೆ ಕಾರಣ ಅಲ್ಲಿಯ ವಿದ್ವದ್ಬಾಹುಳ್ಯ. ಅದಕ್ಕೆ ಕಾರಣ ಅಲ್ಲಿಯ ರಾಜಾಶ್ರಯ.

ಪ್ರಜಾರಾಜ್ಯದಲ್ಲಿ ಸಂಗೀತ ಸಾಹಿತ್ಯ ಶಿಲ್ಪಾದಿ ಕಲೆಗಳಿಗೆ ಪ್ರೋತ್ಸಾಹ ಕಡಮೆಯೆಂದು ಹೇಳುವುದುಂಟು. ಅದು ಹಾಗಲ್ಲ ಎನ್ನುವುದೂ ಉಂಟು. ಯೂರೋಪ್, ಅಮೆರಿಕ ದೇಶಗಳಲ್ಲಿ ವರ್ಣಚಿತ್ರಕಲೆ, ಮ್ಯೂಸಿಯಮುಗಳು, ವಿಗ್ರಹಶಿಲ್ಪ, ವರ್ಣಚಿತ್ರಲೇಖನ, ನಾಟಕಾಭಿನಯ, ಸಂಗೀತ-ಇವೆಲ್ಲಕ್ಕೂ ಯಥೇಷ್ಟವಾಗಿ ಆಶ್ರಯ ದೊರಕುತ್ತಿದೆಯೆಂದು ಕೆಲವರು ದೃಷ್ಟಾಂತಗಳ ಕಡೆ ಕೈತೋರಿಸುತ್ತಾರೆ.

ಉಪಭೋಗ ಸಾಧನ

ಇಲ್ಲಿ ವಿಚಾರ ಮಾಡಬೇಕಾದ ಅಂಶ ಒಂದಿರುವಂತೆ ತೋರುತ್ತದೆ. ಪಾಶ್ಚಾತ್ಯ ದೇಶಗಳ ಸಾಮಾನ್ಯ ಜನರು ದೇಹ ಜೀವನದ ಭೋಗವಿಲಾಸಗಳಲ್ಲಿ ಹೆಚ್ಚು ಆಸಕ್ತಿ ಉಳ್ಳವರು. ಅವರ ಎಣಿಕೆಯಲ್ಲಿ ಕಲೆಯೆಂಬುದೂ ಒಂದು ಉಪಭೋಗಸಾಮಗ್ರಿ. ಸಂಜೆ ಎಲ್ಲಿಯಾದರೂ ಹಾಯಾಗಿ ಕುಳಿತು ಕಾಲ ಕಳೆಯಬೇಕು. ಕಾರ್ಖಾನೆಗಳಲ್ಲಿಯೂ ಕಾರ್ಯಾಲಯಗಳಲ್ಲಿಯೂ ಎಂಟು ಹತ್ತು ಘಂಟೆ ದುಡಿದು ಶ್ರಮಪಟ್ಟವರ ಮನಸ್ಸಿಗೆ ಕೊಂಚ ಉಲ್ಲಾಸ ಬೇಕಾಗುತ್ತದೆ. ಸಂಗೀತ, ನರ್ತನ, ವರ್ಣಚಿತ್ರ, ಇದಕ್ಕಾಗಿ ಜನ ಸಾಯಂಕಾಲ ಚೊಕ್ಕಟವಾದ ಉಡುಪು ಧರಿಸಿ ನಾಟಕ ಶಾಲೆಗಳಿಗೂ ಸಂಗೀತಶಾಲೆಗಳಿಗೂ ಹೋಗುತ್ತಾರೆ. ಅಲ್ಲಿ ಜಾಸ್ (Jazz) ಮೊದಲಾದ ರೀತಿಯ ಅಬ್ಬರದ ಸಂಗೀತವೂ ಕುಣಿತವೂ ಅವರಿಗೆ ಕಾಲಕ್ಷೇಪ ಸಾಧಕವಾಗುತ್ತದೆ. ಕಾಲಕ್ಷೇಪವೆಂದರೆ ಹೊತ್ತು ಕಳೆಯುವುದು-ಬೇಸರ ಮರೆಯುವಂತೆ ಹೊತ್ತು ಕಳೆಯುವುದು. ಇದರಲ್ಲಿ ದೋಷವೇನೂ ಇಲ್ಲ. ಇದು ಬಹುಮಂದಿಗೆ ಅವಶ್ಯವಾದ ಒಂದು ಕಾರ್ಯಕ್ರಮವೇ. ದೇಹಕ್ಕೆ ಭೋಜನ ಹೇಗೋ ಮನಸ್ಸಿಗೆ ವಿನೋದ ಹಾಗೆ.

ಭೋಜನದಲ್ಲಿ, ಗುಣಸೋಪಾನಗಳು ಉಂಟಷ್ಟೆ. ಒಂದು ಹಂತದಲ್ಲಿ ಹಸಿವು ತೀರಿದರೆ ತೃಪ್ತರಾಗುವವರು ಇದ್ದಾರೆ. ಅವರಿಗೆ ಬೇಕಾದದ್ದು ಮುಖ್ಯವಾಗಿ ಗಾತ್ರ-ಪರಿಮಾಣ. ಅವರಿಗೆ ವಿವಿಧ ರುಚಿಗಳು ಬೇಡವೆಂದಲ್ಲ. ಆದರೆ ರುಚಿಗಿಂತ ಮುಖ್ಯವಾದದ್ದು ಗಾತ್ರ ಬಾಹುಳ್ಯ. ಸೋಪಾನದ ಮೇಲು ಹಂತದಲ್ಲಿರುವವರಿಗಾದರೋ ಗಾತ್ರಕ್ಕಿಂತ ರಸವು ಮುಖ್ಯ. ಅವರು ರುಚಿ ನೋಡುವುದು ಒಂದೆರಡು ಚಮಚಗಳಷ್ಟನ್ನು ಮಾತ್ರ. ಆದರೆ ಆ ಸ್ವಲ್ಪದಲ್ಲಿ ಏಲಕ್ಕಿಯ ಘಮಲು ಇರಬೇಕು, ಕೇಸರಿ ಇರಬೇಕು, ಪಚ್ಚ ಕರ್ಪೂರವಿರಬೇಕು. ಭೋಜನ ಕಾಲದಲ್ಲಿ ಹೂವು ಗಂಧ ಊದುಕಡ್ಡಿಗಳ ಪರಿಮಳವಿರಬೇಕು. ಒಳ್ಳೆಯ ಸಂಗೀತವೂ ಬೇಕು. ಬ್ರಾಹ್ಮಣಭೋಜನದ ಕಾಲದಲ್ಲಿ ವೇದಸೂಕ್ತಗಳನ್ನೂ ಶ್ರೀಮದ್ರಾಮಾಯಣಾದಿ ಸತ್ಕಾವ್ಯಗಳನ್ನೂ ಶ್ಲೋಕಗಳನ್ನೂ ಹೇಳುವುದು ವಾಡಿಕೆ.

ಹಿಟ್ಟು ಅಂಬಲಿಯ ಊಟವು ಹೊಟ್ಟೆಯನ್ನು ತುಂಬಿಸಿ ಹಸಿವನ್ನು ಹೋಗಲಾಡಿಸುತ್ತದೆ. ದೇಹದೃಷ್ಟಿಯಿಂದ ರಸಿಕ ಭೋಜನವು ಮಾಡುವ ಕಾರ್ಯವೂ ಅಷ್ಟೆ. ಆದರೆ ರಸಿಕ ಭೋಜನದಲ್ಲಿ ಎರಡು ಕ್ರಿಯೆಗಳು ನಡೆಯುತ್ತವೆ: ದೇಹಪೋಷಣೆಯ ಜೊತೆಗೆ ಮಾನಸೋಲ್ಲಾಸ ಸೇರುತ್ತದೆ. ಮನಸ್ಸು ಉಲ್ಲಾಸದಿಂದ ನವಚೈತನ್ಯವನ್ನು ಪಡೆಯುತ್ತದೆ.

ಜೀವತಾರಕ

ಕಲೆಯ ಕಾರ್ಯವೂ ಹಾಗೆಯೇ ಎರಡು ದರ್ಜೆಗಳುಳ್ಳದ್ದು-ಮೂರು ದರ್ಜೆಗಳುಳ್ಳದ್ದು ಎಂದು ಹೇಳಬಹುದು. ಅದು ಮೊದಲು ಕಾಲಕ್ಷೇಪ ವಿನೋದಕ್ಕೆ ಸಾಧನವಾಗುತ್ತದೆ. ಆಮೇಲೆ ಅದು ಮನೋರಂಜಕವೂ ಆಗುತ್ತದೆ. ಮನೋವಿಕಾಸವಾದ ಮೇಲೆ ಅದು ಜೀವಚೋದಕವೂ ಆಗಬಹುದು. ಜೀವಚೋದಕವಾಗುವುದೆಂದರೆ ಮನಸ್ಸನ್ನು ತಾತ್ಕಾಲಿಕ ವ್ಯಾಪಾರದಿಂದ ಇನ್ನೂ ಗಂಭೀರವಾದ ವಿಚಾರಕ್ಕೆ ತಿರುಗಿಸುವುದು. ರಾಮಾಯಣವನ್ನೂ ಭಾರತವನ್ನೂ ಕೇಳಿದವರು ಕಥಾಸಂವಿಧಾನದಿಂದ ಸಂತೋಷಪಡಬಹುದು. ವರ್ಣನೆ ಸಂಭಾಷಣೆಗಳಿಂದ ಉಲ್ಲಾಸಿತರಾಗಬಹುದು. ಹಾಗೆ ಉಲ್ಲಾಸಪಟ್ಟ ಮನಸ್ಸು ಜೀವಿತದ ಗಂಭೀರ ಪ್ರಶ್ನೆಗಳಿಗೆ ತಿರುಗಲೂಬಹುದು. ತ್ಯಾಗರಾಜರ ಕೀರ್ತನೆಗಳನ್ನು ಕೇಳಿದ ಮೇಲೆ ಕಿವಿಯಲ್ಲಿ ನಿಶ್ಯಬ್ದವಾದ ಮೇಲೂ ಮನಸ್ಸಿನ ಅಂತರಾಳದಲ್ಲಿ ಒಂದು ಧ್ವನಿ ಕೇಳಬರುತ್ತದೆ. ಅದು ಜೀವ ತಾರಕವಾದ ಧ್ವನಿ.

ಪ್ರಜಾಯುಗದಲ್ಲಿ

ಪ್ರಜಾರಾಜ್ಯದಲ್ಲಿ ಈ ದರ್ಜೆಯ ಕಲೆಗೆ ಪುರಸ್ಕಾರವುಂಟೋ? ಪಾಶ್ಚಾತ್ಯರಲ್ಲಿ ಕಲೆ ಈ ಮೇಲ್ಮಟ್ಟವನ್ನು ಮುಟ್ಟಿಲ್ಲವೆಂದು ಹೇಳಲಾಗದು. ರೋಮ್ ಪಟ್ಟಣದಲ್ಲಿರುವ ಪೋಪ್ ಗುರುವಿನ ಮಠಕ್ಕೆ ಸೇರಿದ ಪ್ರಾರ್ಥನಾ ಮಂದಿರಗಳಲ್ಲಿ ಲಿಯೊನಾರ್ಡೊ-ಡ-ವಿಂಚಿ, ಮೈಕೆಲ್‌ಏಂಜಲೊ ಮೊದಲಾದವರು ಯೇಸುಕ್ರಿಸ್ತನ ಮತ್ತು ಆತನ ಭಕ್ತ ಪರಂಪರೆಯ ಜೀವನ ಸಂದರ್ಭಗಳನ್ನು ಕಣ್ಣಿಗೆ ಕಟ್ಟಿದಂತೆ ವರ್ಣಚಿತ್ರಗಳಲ್ಲಿ ಉಲ್ಲೇಖಿಸಿದ್ದಾರಂತೆ. ಹಾಗೆಯೇ ಕಾರ್ಡಿನಲ್ ನ್ಯೂಮನ್ ಮೊದಲಾದ ಸಾಧುಸಂತರು ಕೀರ್ತನೆಗಳನ್ನು ಹಾಡಿದ್ದಾರೆ. ಈಚಿನ ಕಾಲದಲ್ಲಿ ಎಪ್‌ಸ್ಟೀನ್ ಮೊದಲಾದ ವಿಗ್ರಹಶಿಲ್ಪಿಗಳು ಜೀವಸ್ಪರ್ಶಿಯಾದ ಗಂಭೀರ ಭಾವಗಳನ್ನು ಚಿತ್ರಿಸಿದ್ದಾರೆಂದು ಕೇಳಿದ್ದೇನೆ. ಬೀಥೋವನ್ (Beethvoen), ಬಾಖ್ (Bach) ಮೊದಲಾದವರ ಗಾನಧಾರೆಯು ಸಮುದ್ರ ಘೋಷದಂತೆ ಅದ್ಭುತರಸೋತ್ಪಾದಕವಾಗಿ, ಕರುಣರಸೋತ್ಪಾದಕವಾಗಿ, ವೀರರಸೋತ್ಪಾದಕವಾಗಿ ಹರಿಯುತ್ತದಂತೆ, ಏವಂ ಚ ಕಲೆಯಲ್ಲಿ, ಜೀವಸ್ಪರ್ಶಿಯಾದ ಒಂದು ತರಗತಿ ಯೂರೋಪಿನಲ್ಲಿಯೂ ಉಂಟೆಂಬುದನ್ನು ನಾವು ಒಪ್ಪಬೇಕು. ಅಂಥ ಜೀವಸ್ಪರ್ಶಿಯಾದ ಕಲೆಗೆ ಪ್ರಜಾಪ್ರಧಾನಯುಗದಲ್ಲಿ ಮನ್ನಣೆಯುಂಟೆ?-ಎಂಬುದು ನಮ್ಮ ಈಗಿನ ಪ್ರಶ್ನೆ.

ಒಂದು ಸಾಮಾನ್ಯ ಮಟ್ಟದ ಕಲೆಗೆ ಮನ್ನಣೆಯುಂಟೆಂಬುದು ನಿಸ್ಸಂದೇಹವಾದ ಮಾತು. ಬೀದಿಯಲ್ಲಿ ತಮಟೆಯ ಸದ್ದು ಹೊರಟರೆ ಅಡಿಗೆ ಮನೆಯಲ್ಲಿರುವವರೂ ಈಚೆಗೆ ಬರುತ್ತಾರೆ. “ಲಾರಲ್ಲಪ್ಪ, ಲಾರಲ್ಲಪ್ಪ” ಅಥವಾ “ಸಿ-ಏ-ಟಿ ಕ್ಯಾಟ್-ಕ್ಯಾಟ್ ಮಾನೆ ಬಿಲ್ಲೀ” -ಇಂಥ ಹಾಡುಗಳು ರೇಡಿಯೋದಿಂದಲೊ ಗ್ರಾಮಫೋನಿನಿಂದಲೋ ಹೊರಟರೆ ಮನೆಮಕ್ಕಳೆಲ್ಲ ಕಿವಿಯಗಲಿಸಿಕೊಂಡು ಕೂಡುತ್ತಾರೆ. ಹೋಟೆಲ್, ಸಿನಿಮಾ ಮಂದಿರಗಳ ಮುಂದೆ ಇರಿಸುವ ಬೊಂಬೆಗಳನ್ನು ನೋಡುವುದಕ್ಕೂ ಅಲ್ಲಿ ಕೇಳಿಬರುವ ಹಾಡುಗಳನ್ನು ಕೇಳುವುದಕ್ಕೂ ಯುವಜನರು ತಂಡೋಪತಂಡವಾಗಿ ಸೇರುತ್ತಾರೆ. ಇದೆಲ್ಲ ಕಲೆಯ ಒಂದು ಮಟ್ಟ: ಇಂದ್ರಿಯಕ್ಕೆ ಆಪ್ಯಾಯನ ಮಾಡಬಲ್ಲದ್ದು. ಇದಕ್ಕಿಂತ ಉನ್ನತವಾದ ಮಟ್ಟದ ಕಲೆಯನ್ನು ಮನ್ನಣೆ ಮಾಡುವವರೆಷ್ಟು ಜನ?

ಸಂಸ್ಕಾರ ಅವಶ್ಯ

ಮೇಲ್ಮಟ್ಟದ ಕಲೆಯ ಸ್ವಾರಸ್ಯವನ್ನು ಕಾಣುವುದಕ್ಕೆ ಅಷ್ಟಿಷ್ಟು ಸಂಸ್ಕಾರವಿರಬೇಕು. ಅಂಥ ಸಂಸ್ಕಾರ ನಮ್ಮ ಸಾಮಾನ್ಯ ಜನದಲ್ಲಿ ಇರುತ್ತದೆಯೆ? ಪುರಾತನ ಗ್ರೀಸಿನಲ್ಲಿ, ಅಥೆನ್ಸ್ ಪಟ್ಟಣದಲ್ಲಿ, ಪ್ರಜಾಸಾಮಾನ್ಯವು ಸಂಸ್ಕಾರ ಸಂಪನ್ನವಾಗಿತ್ತೆಂದು ಚರಿತ್ರಕಾರರು ಊಹಿಸಿದ್ದಾರೆ. ಅರಿಸ್ಟಾಫನೀಸ್, ಐಸ್ಕಿಲಸ್ ಮೊದಲಾದ ಮಹಾಕವಿಗಳ ನಾಟಕಗಳನ್ನು ಪ್ರದರ್ಶನ ಮಾಡುವಾಗ ಅಥೆನ್ಸ್ ಮಹಾಜನರು ಆ ನಾಟಕಗಳ ಯೋಗ್ಯತಾ ತಾರತಮ್ಯವನ್ನು ನಿರ್ಣಯಿಸಬಲ್ಲವರಾಗಿದ್ದರಂತೆ. ಅದು ಹೇಗೋ! ನಮ್ಮ ದೇಶದಲ್ಲಿ ಈ ಹೊತ್ತಂತೂ ಸಾಮಾನ್ಯ ಜನರ ಸಂಸ್ಕೃತಿ ಆ ಮಟ್ಟದ್ದೆನ್ನಲಾಗದು. ನಮ್ಮಲ್ಲಿ ವಿದ್ಯಾವಂತರೆನ್ನಿಸಿಕೊಂಡವರೂ ರಬಾರಬಿ ರಂಗುಗಳನ್ನೂ ದಪ್ಪ ದಪ್ಪ ಮಾತುಗಳನ್ನೂ ಗಟ್ಟಿ ಗಟ್ಟಿ ಅರಚಾಟಗಳನ್ನೂ ಕಲೆಯೆಂದು ಭ್ರಮಿಸುತ್ತಾರೆ. ಒಂದು ಮದುವೆಯಲ್ಲಿ ಲಗ್ನದ ವೇಳೆ ಮುಗಿದು ತಾಂಬೂಲ ವಿನಿಯೋಗವಾದ ಬಳಿಕ ಕೊಂಚ ತಡವಾಗಿ ಅಲ್ಲಿಗೆ ಬಂದ ಒಬ್ಬ ಅತಿಥಿಗಳು “ಏನು? ಶುಭಸೂಚಕವಾದ ಸದ್ದುಗಳೇನೂ (Auspicious noises) ಕೇಳಬರುತ್ತಿಲ್ಲವಲ್ಲ?” ಎಂದು ಕೇಳಿದರಂತೆ. ಅವರ ಮನಸ್ಸಿನಲ್ಲಿ ಇದ್ದದ್ದು ಹಾಡುಗಳು ಎಂದು. ಬಹುಶಃ ಅಲ್ಲಿಯ ಮೇಳವೂ ಹಾಡುಗಳೂ ಆ ವರ್ಣನೆಗೆ ತಕ್ಕಂತೆ ಇದ್ದವೋ ಏನೋ!

ಇದರಿಂದ ತೋರುವುದೇನೆಂದರೆ ಉನ್ನತ ಅಂತಸ್ತಿನ ಕಲೆಯನ್ನು ಪುರಸ್ಕರಿಸುವಷ್ಟು ಮನಸ್ಸಂಸ್ಕಾರವನ್ನು ನಮ್ಮ ಸಾಮಾನ್ಯ ಜನತೆ ಪಡೆದಿಲ್ಲವೆಂದು. ಈ ಸಿದ್ಧಾಂತದಿಂದ ಹೊರಡುವ ಸಂಗತಿ ಏನೆಂದರೆ ಅತ್ಯುತ್ತಮವಾದ ಕಲೆಗೆ ರಾಜರ ಆಶ್ರಯವೂ ಅವಶ್ಯವೆಂಬುದು. ಇಂಥ ನಿರ್ವ್ಯಾಜವಾದ, ಉದಾರವಾದ ಆಶ್ರಯವನ್ನು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರವರು ಯೋಗ್ಯತಾ ಪರೀಕ್ಷೆಯನ್ನು ಮಾಡಿ ವಿದ್ವಾಂಸರಿಗೆ ಕೊಡುತ್ತಿದ್ದರು. ಅದರಿಂದ ಮೈಸೂರು ಸಂಸ್ಥಾನದ ವಿದ್ವತ್ಪ್ರಶಸ್ತಿ ಬೆಳೆಯಿತು.

ವ್ಯಾಪಾರ ಬುದ್ಧಿ

ಈಗ ಪ್ರಜಾರಾಜ್ಯದಲ್ಲಿ ರಾಜಮಹಾರಾಜರು ನಿರ್ನಾಮವಾಗಿ ಜಮೀನುದಾರರೂ ಶ್ರೀಮಂತರೂ ನಿರ್ಗತಿಕರಾಗಿರುವುದರಿಂದ ಕಲೆಗೆ ಸಿಕ್ಕುತ್ತಿರುವ ಪ್ರೋತ್ಸಾಹ ಅತ್ಯುತ್ತಮ ದರ್ಜೆಯ ಕಲೆಗೆ ಪೋಷಕವಾಗಲಾರದು. ಯಾವುದು ಜನರ ಮನಸ್ಸನ್ನು ಹಿಡಿದೀತೋ ಅದಕ್ಕೆ ಈಗ ಬೆಲೆ. ಯಾವ ಕಲೆಯಿಂದ ವ್ಯಾಪಾರಕ್ಕೆ ಗಿರಾಕಿ ಹೆಚ್ಚೀತೋ ಅದೇ ಕಲೆ. ಹಿಂದಿನ ಕಾಲದಲ್ಲಿ ಗಿಡ್ಡಾಜೆಟ್ಟಿ ಎಂಬಾತನಿದ್ದನಂತೆ. ಆತ ಹಣವಂತ. ಆದರೆ ಲೋಭಿ. ಯಾಚನೆಗಾಗಿ ಬಂದ ಬ್ರಾಹ್ಮಣರನ್ನು ಬೈದು ಅಟ್ಟಿಬಿಡುತ್ತಿದ್ದನಂತೆ. ಒಂದಾನೊಂದು ದಿನ ಒಬ್ಬ ಯಾಚಕ ಹಠಮಾಡಿಕೊಂಡು ಆತನಲ್ಲಿಗೆ ಹೋದನಂತೆ-ಕಾಸು ಕೀಳಲೇ ಕೀಳಬೇಕೆಂದು. ಆತನಿಗೆ ಜಟ್ಟಪ್ಪನವರು ಒಂದು ಸವಾಲು ಹಾಕಿದರು: “ನೀವು ನನ್ನ ಮೇಲೆ ಮಂತ್ರ ಹೇಳಿದರೆ ಒಂದು ರೂಪಾಯಿ ಕೊಡುತ್ತೇನೆ” ಎಂದು. ಆ ಬಡ ಬ್ರಾಹ್ಮಣ “ಓಹೋ, ಅದಕ್ಕೇನು-ಈಗಲೇ ಹೇಳುತ್ತೇನೆ” ಎಂದು ಆರಂಭಿಸಿದ:

> ಕುಬ್ಜೋ ಮಲ್ಲಾಖ್ಯಃ ।
> ಮಲ್ಲಾಖ್ಯೋ ಬ್ರಾಹ್ಮಣಾನ್ ।
> ಬ್ರಾಹ್ಮಣಾನ್ ಬಾಧತೇ ॥

ಹೀಗೆಂದು ಉದಾತ್ತಾನುದಾತ್ತಾದಿಸ್ವರ ಸಹಿತವಾಗಿ ಕ್ರಮ ಜಟೆಗಳನ್ನು ಹೇಳಿದನಂತೆ- “ಕುಬ್ಜೋ ಮಲ್ಲಾಖ್ಯೋ ಮಲ್ಲಾಖ್ಯಃ ಕುಬ್ಜಃ” ಈ ರೀತಿಯಾಗಿ ಗಿಡ್ಡಾಜೆಟ್ಟಿ ಇದರಿಂದ ಪ್ರಸನ್ನನಾಗಿ ದಕ್ಷಿಣೆ ತಾಂಬೂಲಗಳನ್ನು ಕೊಟ್ಟನಂತೆ.

ಇಂಥಾದ್ದು Commercial Art. ನಿಜವಾದ ಕಲೆಗೆ ಇನ್ನು ಮುಂದೆ ನಮ್ಮ ದೇಶದಲ್ಲಿ ಎಲ್ಲಿಂದ ಪ್ರೋತ್ಸಾಹ ಬಂದೀತೋ ಈಗ ಯಾರೂ ಹೇಳಲಾಗದು. ಭರ್ತೃಹರಿಯ ಮಾತು ಹೀಗಿದೆ:

> ಬೋದ್ಧಾರೋ ಮತ್ಸರಗ್ರಸ್ತಾಃ
> ಪ್ರಭವಃ ಸ್ಮಯದೊಷಿತಾಃ ।
> ಅಬೋಧೋಪಹತಾಶ್ಚಾನ್ಯೇ
> ಜೀರ್ಣಮಂಗೇ ಸುಭಾಷಿತಮ್ ॥

“ಯಾರು ಇತರರಿಗೆ ತಿಳಿವಳಿಕೆ ಕೊಡಬಲ್ಲ ಶಕ್ತಿಯುಳ್ಳ ವಿದ್ವಾಂಸರೋ ಅವರಲ್ಲಿ ಪರಸ್ಪರ ಅಸೂಯೆ, ಕಚ್ಚಾಟ. ರಾಜ ಶ್ರೀಮಂತರುಗಳೋ ಎಂದರೆ, ಅವರು ಮದಾಂಧರು; ಅವರಿಗೆ ಏನೂ ಬೇಕಿಲ್ಲ. ಮಿಕ್ಕ ಸಾಮಾನ್ಯ ಜನರಾದರೋ ಅಜ್ಞಾನದಲ್ಲಿ ಮುಳುಗಿದ್ದಾರೆ. ಹೀಗೆ ಸಾಹಿತ್ಯವೂ ಸಂಗೀತವೂ ತತ್ತದುಪಾಸಕರಲ್ಲಿಯೇ ಕರಗಿ ನಶಿಸಬೇಕಾಗಿದೆ.”

ಬೆಂಗಳೂರಿನ ಧುರೀಣರು

ಇಷ್ಟು ಪ್ರಸಂಗದ ಉದ್ದೇಶ ನಮ್ಮ ರಾಜಮಹಾರಾಜರು ಮಾಡುತ್ತಿದ್ದ ಅವ್ಯಾಜವಾದ, ಧಾರಾಳವಾದ ಕಲಾಪರಿಪೋಷಣೆಯನ್ನು ವಾಚಕರ ಗಮನಕ್ಕೆ ತರುವುದು.

ಬೆಂಗಳೂರಿನಲ್ಲಿ ರಾಜಾಶ್ರಯವಿಲ್ಲದಿದ್ದದ್ದರಿಂದ ಇಲ್ಲಿ ಸಂಗೀತ ಕಲೆಗೆ ದೊರೆತ ಆಶ್ರಯ ಮಿತವಾಗಿಯೇ ಇತ್ತು.

ಆದರೂ ಇಲ್ಲಿಯ ಸಂಗೀತ ಪ್ರಪಂಚ ಸರ್ವಶೂನ್ಯವಾಗೇನೂ ಇರಲಿಲ್ಲ. ಬಹು ಮಂದಿಯಲ್ಲದಿದ್ದರೂ ಕೆಲಮಂದಿಯಾದರೂ ಒಳ್ಳೆಯ ವಿದ್ವಾಂಸರಿದ್ದರು. ಅವರಲ್ಲಿ ನನಗೆ ಪರಿಚಿತರಾಗಿದ್ದವರು:

(೧) ಕೆಂಪೇಗೌಡರು, (೨) ದಕ್ಷಿಣಾಮೂರ್ತಿ ಶಾಸ್ತ್ರಿಗಳು, (೩) ಸುಬ್ಬರಾಮಾಚಾರ್ಯರು, (೪) ಕರೂರು ಕೃಷ್ಣರಾಯರು, (೫) ಅನಂತ ಶಾಸ್ತ್ರಿಗಳು, (೬) ವೈಣಿಕ ಐಯ್ಯಂಗಾರ್ಯರು, (೭) ರುದ್ರಪಟ್ಟಣದ ವೆಂಕಟರಾಮಯ್ಯನವರು, (೮) ವೀಣೆ ಗೋಪಾಲರಾಯರು, (೯) ಪಿಟೀಲು ತಾಯಪ್ಪನವರು, (೧೦) ಪಿಟೀಲು ಪುಟ್ಟಪ್ಪನವರು, (೧೧) ಅಲಸೂರಿನ ಮುನಿವೆಂಕಟಪ್ಪನವರು, (೧೨) ನಾಗಭೂಷಣಂ, (೧೩) ಮುನಿವೆಂಕಟದಾಸಯ್ಯ-ಇವರು ಮುಖ್ಯರಾದವರು.

ಸುಬ್ಬರಾಯಾಚಾರ್ಯರನ್ನು ನಾನು ಕೇಳಿದ್ದು ಒಂದೆರಡು ಸಾರಿ ಮಾತ್ರ. ಅವರು ವೃತ್ತಿಯಲ್ಲಿ ಸ್ವರ್ಣಕಾರರು ಸಂಗೀತಗಾರರಲ್ಲಿ ಕೆಲವರು ಆತನನ್ನು "ಕಳ್ಳ ಗಂಟಲಿನವನು" ಎಂದು ತೆಗಳುತ್ತಿದ್ದರು. ಆದರೆ ಅದು ಅಸೂಯೆಯ ಮಾತಿರಬಹುದು.

ಸುಬ್ಬರಾಯಾಚಾರ್ಯರು "ಅಕ್ಕಯ್ಯ ಲಿಂಗಾವಿಭೋ" ಎಂಬ ಶಂಕರಾಭರಣ ರಾಗದ ಕೀರ್ತನೆ ಹಾಡಿದ್ದನ್ನು ನಾನು ಕೇಳಿದ್ದೇನೆ. ಅದು ಮುತ್ತುಸ್ವಾಮಿ ದೀಕ್ಷಿತರ ಕೃತಿ, ಸಂಸ್ಕೃತ ಭಾಷೆಯದು; ಕೊಂಚ ಕಷ್ಟವಾದದ್ದೆಂದು ನನ್ನ ಅಭಿಪ್ರಾಯ. ಹಾಡಿಕೆ ಕೇಳಿದರೆ ಅದ್ಭುತದ ಅನುಭವವಾಗಿ ರೋಮಾಂಚವುಂಟಾಗುವುದೆಂಬುದಕ್ಕೆ ನನ್ನ ಅಂದಿನ ಅನುಭವ ಒಂದು ದೃಷ್ಟಾಂತ. ಸುಬ್ಬರಾಯಾಚಾರ್ಯರು ಅದಕ್ಕೆ ಸ್ವರ ಸಂಯೋಜನೆ ಮಾಡಿದ್ದೂ ನೆರವಲು ಸೇರಿಸಿದ್ದೂ ಅಪೂರ್ವವಾದ ಕಲ್ಪನಾಶಕ್ತಿಯನ್ನು ತೋರಿಸಿತೆಂದು ಕೆಲಮಂದಿ ಹೇಳಿದ್ದನ್ನು ನಾನು ಕೇಳಿದ್ದೇನೆ.

ಕರೂರು ಕೃಷ್ಣರಾಯರ ಹಾಡಿಕೆಯನ್ನು ನಾನು ಕೇಳಿದ್ದು ಸಂಗೀತ ಕಛೇರಿಯಲ್ಲಲ್ಲ, ಅವರ ಮನೆಯಲ್ಲಿ. ಅವರದು ಒಳ್ಳೆಯ ಶಾರೀರವಾಗಿದ್ದಿರಬೇಕು. ನಾನು ಕಂಡಾಗ ಅವರು ಮುಪ್ಪಿಗೆ ಬರುತ್ತಿದ್ದರು. ಶಾರೀರ ಶಕ್ತಿ ತಗ್ಗಿತ್ತು. ಆದರೂ ಅವರ ರಾಗಕುಶಲತೆ ಕಾಣಬರುತ್ತಿತ್ತು. ಅವರದು ಒಳ್ಳೆಯ ಜ್ಞಾನ.

ಕೃಷ್ಣರಾಯರು ಮಾಧ್ವಬ್ರಾಹ್ಮಣರು. ಭಕ್ತಿವಂತರು ಆಚಾರಶೀಲರೂ ಹೌದು. ಅವರ ಶಿಷ್ಯರು ಅನೇಕರು. ಅವರಲ್ಲಿ ಕೆಲವರು ಈಗಲೂ ಪ್ರವರ್ಧಮಾನರಾಗಿದ್ದಾರೆ. ಕರೂರು ಕೃಷ್ಣರಾಯರು ದೊಡ್ಡ ಸಂಗೀತ ವಿದ್ವಾಂಸರು.

ಕೃಷ್ಣರಾಯರು ಸರಳ ಸ್ವಭಾವದವರು. ಪಾಠ ಹೇಳುವುದರಲ್ಲಿ ದಕ್ಷರು.

ಕೆಂಪೇಗೌಡರು, ದಕ್ಷಿಣಾಮೂರ್ತಿ ಶಾಸ್ತ್ರಿಗಳು ಮೊದಲಾದವರನ್ನು ಬೇರೆಯಾಗಿ ಪ್ರಸ್ತಾವಿಸುವುದಾಗುತ್ತದೆ.

ಬೆಂಗಳೂರಿನ ಗಾಯಕ ವಿದ್ವಾಂಸರ ಪ್ರಸ್ತಾವಕ್ಕೆ ಮೊದಲು ಬೆಂಗಳೂರಿಗಿಂತ ಸಂಗೀತಕ್ಕೆ ಪ್ರಸಿದ್ಧವಾದ ಮೈಸೂರು ರಾಜಧಾನಿಯ ವಿದ್ವಾಂಸರುಗಳನ್ನು ಕುರಿತು ಪ್ರಸ್ತಾವಿಸುವುದು ಯುಕ್ತವಾಗಿದೆ. ಸಂಗೀತದ ಪ್ರಖ್ಯಾತಿ ಹಿಂದೆ ಒಂದು ಕಾಲದಲ್ಲಾದರೂ ಹೆಚ್ಚಾಗಿ ಬೆಳೆದಿದ್ದದ್ದು ಮೈಸೂರಿನ ವಿಷಯದಲ್ಲಿ. ಅಲ್ಲಿಯ ವಿದ್ವಾಂಸರಲ್ಲಿ ಮುಖ್ಯಮುಖ್ಯರಾದವರ ಪ್ರಸಿದ್ಧಿ ಮೈಸೂರು ರಾಜ್ಯದ ಹೊರಗಡೆಯೂ ವಿಸ್ತಾರವಾಗಿ ಹರಡಿತ್ತು. ಅವರನ್ನು ನೋಡೋಣ. ಅವರಲ್ಲಿ ಮುಖ್ಯರು:

1. ವೀಣೆ ಸಾಂಬಯ್ಯನವರು
2. ವೀಣೆ ಶೇಷಣ್ಣನವರು
3. ಭಕ್ಷಿ ಸುಬ್ಬಣ್ಣನವರು
4. ಬಿಡಾರಂ ಕೃಷ್ಣಪ್ಪನವರು
5. ಕೆ. ವಾಸುದೇವಾಚಾರ್ಯರು

೯

ಮೈಸೂರಿನ ಮೂವರು ವೈಣಿಕರು

ವೀಣೆ ಸಾಂಬಯ್ಯನವರು

ವೀಣೆ ಸಾಂಬಯ್ಯನವರು ಮಹಾ ಪ್ರವೀಣರಾಗಿದ್ದದ್ದು ಮಾತ್ರವಲ್ಲದೆ ಆಚಾರ ಶೀಲರೂ ನೇಮಿಷ್ಠರೂ ಆಗಿದ್ದರು. ಅವರಿಗೆ ಜ್ಯೋತಿಷವೂ ವೈದ್ಯವೂ ತಿಳಿದಿದ್ದವು. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅವರಲ್ಲಿ ತುಂಬಾ ವಿಶ್ವಾಸ ಮತ್ತು ಗೌರವ. ತಮ್ಮ ಆಪ್ತಾಲೋಚನೆಗಳನ್ನು ಸಾಂಬಯ್ಯನವರಲ್ಲಿ ಹೇಳಿಕೊಂಡು ಸಲಹೆ ಕೇಳುತ್ತಿದ್ದರು. ಇದರಿಂದ ಆಸ್ಥಾನ ವಿದ್ವಾಂಸರಲ್ಲಿ ಕೆಲವರಿಗಾದರೂ ಅಸೂಯೆ ಬಂದದ್ದು ಸ್ವಾಭಾವಿಕ ತಾನೆ?

ಶುಕ್ರವಾರ ಶುಕ್ರವಾರವೂ ಅಂಬಾವಿಲಾಸದ ತೊಟ್ಟಿಯಲ್ಲಿ ಸಾಂಬಯ್ಯನವರ ವೀಣೆಯ ಸೇವೆ ನಡೆಯುತ್ತಿತ್ತು. ಒಂದು ಶುಕ್ರವಾರ ಸಾಂಬಯ್ಯನವರ ಕೈ ಅದ್ಭುತವಾಗಿ ನಡೆಯಿತು. ಮಹಾರಾಜರಿಗೆ ತುಂಬ ಸಂತೋಷವಾಗಿ ಅವರು ಶಾಲು ತೋಡಾಗಳನ್ನು ಸಾಂಬಯ್ಯನವರಿಗೆ ತೊಡಿಸಿದರು. ಕಛೇರಿ ಮುಗಿದು ಬರಖಾಸ್ತಾದ ಮೇಲೆ ಮಹಾರಾಜರು ಮೂರು ನಾಲ್ಕು ಮಂದಿ ಆಪ್ತರ ಕಡೆ ತಿರುಗಿ “ಈಹೊತ್ತು ಏನು ಆವೇಶ ಬಂದಿತ್ತು ಸಾಂಬಯ್ಯನಿಗೆ! ಎಷ್ಟು ಅದ್ಭುತವಾಗಿ ನುಡಿಸಿದ! ಇಂಥಾದ್ದು ನಾನು ಕೇಳಿ ಎಷ್ಟು ವರ್ಷವಾಗಿತ್ತು!” ಎಂದರು.

ಸಭಿಕರಲ್ಲೊಬ್ಬಾತ “ಸಾಂಬಯ್ಯ ಎಲ್ಲ ಸರಿಯೆ, ಒಂದು ಚಾಳಿ ಬಿಟ್ಟುಬಿಟ್ಟರೆ ಆದೀತು” ಎಂದ.

“ಏನದು?”

“ಸಭಾಮರ್ಯಾದೆಯೇ ಗೊತ್ತಿಲ್ಲವಲ್ಲ ಆತನಿಗೆ! ಮಹಾಸನ್ನಿಧಾನದಲ್ಲಿ ಇರುವಾಗ ಮೀಸೆ ತಿರುವುತ್ತಾನಲ್ಲ?”

ಸಾಂಬಯ್ಯನವರು ವೀಣೆ ನುಡಿಸುವಾಗ ತಂತಿಯನ್ನು ಬೆರಳಿನಿಂದ ಮೀಟಿ, ವರೇಕು (ಅನುರಣನ) ಬರುವಾಗ ಒಂದು ಕ್ಷಣ ಕೈಗೆ ಬಿಡುವಾಗುತ್ತಿತ್ತಷ್ಟೆ? ಆ ಬಿಡುವಿನಲ್ಲಿ ಬೆರಳು ಮೀಸೆಯ ಮೇಲೆ ಹೋಗುತ್ತಿತ್ತು. ಆ ಮೀಸೆ ಹುಲುಸಾಗಿ ಬೆಳೆದಿದ್ದದ್ದು; ಭರ್ಜರಿಯಾಗಿತ್ತು. ಅದನ್ನು ಸವರುವುದು ಅವರಿಗೆ ಬಹುಕಾಲದ ಅಭ್ಯಾಸದ ಪ್ರಭಾವ. ಅದರಲ್ಲಿ ಅರ್ಥವೇನೂ ಇರಲಿಲ್ಲ. ಇತರ ವಿದ್ವಾಂಸರು ಅದು ಗರ್ವವೆಂದು ಅರ್ಥ ಕಟ್ಟಿದರು.

ಮಹಾರಾಜರು ಉದಾಸೀನರಾಗಿ ಮುಗಳ್ನಗೆ ನಕ್ಕು, “ಅದೇನೋ ಒಂದು ಅಭ್ಯಾಸ. ಅದನ್ನು ಗಮನಿಸತಕ್ಕದ್ದಲ್ಲ” ಎಂದರು. ಕ್ಷುದ್ರ ವಿದ್ವಾಂಸರ ಪ್ರಯತ್ನ ಹೀಗೆ ವಿಫಲವಾಯಿತು.

ಒಂದೆರಡು ತಿಂಗಳ ನಂತರ ಮತ್ತೆ ಶುಕ್ರವಾರದ ಕಛೇರಿ ನಡೆದಾಗ ಸಾಂಬಯ್ಯನವರ ಪ್ರವೀಣತೆ ಮತ್ತೊಂದು ಸಾರಿ ಸೊಗಯಿಸಿತು. ಆಗ ಮಹಾರಾಜರು ಸಂತೋಷಪಟ್ಟು ಮತ್ತೊಂದು ಸಾರಿ ಬಾಯಿತುಂಬ ಸಾಂಬಯ್ಯನವರನ್ನು ಹೊಗಳಿದರು. ಈಗ ಇನ್ನೊಬ್ಬ ವಿದ್ವಾಂಸರು ಬೇರೆ ಉಪಾಯ ತೆಗೆದರು. ಅವರೆಂದರು:

“ಸಾಂಬಯ್ಯನವರ ದೈವಭಕ್ತಿ ಚಿತ್ತಕ್ಕೆ ವೇದ್ಯವಾದ ಸಂಗತಿ. ಆತನ ಮನಸ್ಸಿನಲ್ಲಿ ಬಹುದಿನದಿಂದ ಒಂದು ಹಂಬಲಿಕೆ ಉಳಿದಿದೆ.”

ಮಹಾರಾಜರು: “ಏನದು?”

“ಆತ ಬಹುಕಾಲದಿಂದ ದೇವೀಯಾಗ ಮಾಡಬೇಕೆಂದು ಅಂದುಕೊಳ್ಳುತ್ತಿದ್ದಾನೆ. ಆತ ಚಾಮುಂಡೇಶ್ವರಿಯ ಅವಿಚ್ಛಿನ್ನಭಕ್ತ.”

“ಆಗಬಹುದಲ್ಲ? ಅದಕ್ಕೇನು ಕಷ್ಟ? ಬೇಕಾದ ಸಾಮಾನು ಸೌಕರ್ಯಗಳನ್ನು ಒದಗಿಸೋಣ. ಮೋತಿಖಾನೆಯವರಿಗೆ ಹೇಳುವುದಾಗುತ್ತದೆ. ನೀವು ಜೋಯಿಸರನ್ನ ಕೇಳಿ ಲಗ್ನ ಗೊತ್ತುಮಾಡಿ ಸಾಂಬಯ್ಯನವರನ್ನು ಸಿದ್ಧಮಾಡಿಕೊಳ್ಳುವಂತೆ ಹೇಳಿ.”

ಎಲ್ಲವೂ ಮಹಾರಾಜರ ಮಾತಿನಂತೆ ನಡೆಯಿತು. ಲಗ್ನ ಗೊತ್ತಾಯಿತು. ಸಾಂಬಯ್ಯನವರ ಮನೆಯ ಮುಂದೆ ಚಪ್ಪರ ಮಂಟಪಗಳು ಸಿದ್ಧವಾದವು. ಗೊತ್ತಾದ ಕಾರ್ಯ ಕ್ರಮದ ಮೇರೆಗೆ ಯಾಗದ ದಿನದ ಹಿಂದಿನ ಸಂಜೆ ಸಾಂಬಯ್ಯನವರ ಮನೆಯ ಮುಂದೆ ಓಲಗ ಬೆಳಗಿತು. ವೈದಿಕರು ಬಂದು ಅಂಕುರಾರ್ಪಣ ಮಾಡಿಸಿದರು. ಋತ್ವಿಗ್ವರಣವೂ ಆಯಿತು. ಸಾಂಬಯ್ಯನವರೂ ಅವರ ಧರ್ಮಪತ್ನಿಯೂ ಸಂತೋಷ ಸಂಭ್ರಮದಲ್ಲಿದ್ದರು.

ಯಾಗಕ್ಕೆ ಗೊತ್ತಾದ ದಿವಸ ಬೆಳಿಗ್ಗೆ ಸಾಂಬಯ್ಯನವರಿಗೂ ಅವರ ಧರ್ಮಪತ್ನಿಗೂ ಅಭ್ಯಂಜನವಾಯಿತು. ಬ್ರಾಹ್ಮಣಸುವಾಸಿನಿಯರು ತಕ್ಕಷ್ಟು ಬಂದಿದ್ದರು. ಮಂಗಳ ಸ್ನಾನವಾದ ಮೇಲೆ ಸಾಂಬಯ್ಯನವರಿಗೆ ದೀಕ್ಷಾಕಾರ್ಯದ ಅಂಗವಾಗಿ ನಡೆಯಬೇಕಾಗಿದ್ದ ಕ್ಷೌರಕಲ್ಯಾಣ ನಡೆಯಿತು. ಅನಂತರ ಅವರು ಸ್ನಾನಕ್ಕಾಗಿ ಬಚ್ಚಲ ಮನೆಗೆ ಹೋದರು. ಬೆಳಗ್ಗೆ ಅಲ್ಲಿದ್ದ ಪರಿಚಾರಕರು ಅಲ್ಲಿರಲಿಲ್ಲ. ಕೂಗಿದರು. ಜವಾಬಿಲ್ಲ. ಹೊರಕ್ಕೆ ಬಂದು ನಡುಮನೆಯಲ್ಲಿ ನೋಡಿದರು.ಯಾರೂ ಇರಲಿಲ್ಲ. ಎಲ್ಲಿ ಬಿದ್ದಿದ್ದ ಅಕ್ಕಿ ಬೇಳೆ ರಾಶಿ ಅಲ್ಲಿ ಹಾಗೇಯೇ ಬಿದ್ದಿತ್ತು. ಅರ್ಧ ಅರ್ಧ ಹಚ್ಚಿದ್ದ ತರಕಾರಿ ಹಚ್ಚುವವರಿಲ್ಲದೆ ಹಾಗೆಯೇ ಬಿದ್ದಿತ್ತು. ಪಾಕಶಾಲೆಯಲ್ಲಿ ಯಾರೂ ಇರಲಿಲ್ಲ. ಹೊರಗೆ ಮೇಳದವರೂ ಇರಲಿಲ್ಲ. ಸಾಂಬಯ್ಯನವರ ಕುಟುಂಬ ಒಬ್ಬರ ಹೊರತು ಇನ್ನಾರ ಸುಳಿವೂ ಅಲ್ಲಿಲ್ಲ. ಚಪ್ಪರ ಮಂಟಪಗಳು ಖಾಲಿಯಾಗಿ ನಿಂತಿದ್ದವು. ಸಾಂಬಯ್ಯನವರಿಗೆ ಆಶ್ಚರ್ಯವಾಯಿತು. ಏನೂ ಅರ್ಥವಾಗಲಿಲ್ಲ. ಯಾರನ್ನಾದರೂ ಕೇಳೋಣವೆಂದರೆ ಅಲ್ಲಿ ತಿಳಿದವರೊಬ್ಬರೂ ಇರಲಿಲ್ಲ. ಆಗ ಬೀದಿಯಲ್ಲಿ ಹೋಗುತ್ತಿದ್ದ ಗುರುತಾದವನೊಬ್ಬನನ್ನು ಕರೆದು ಸಂದರ್ಭವನ್ನು ತಿಳಿಸಿ ಅದರ ಮರ್ಮವೇನಿರಬಹುದೆಂದು ಕೇಳಿದರು.

ಆತ: "ಆಗಬೇಕಾಗಿದ್ದ ಕಾರ್ಯ ಆಯಿತು ಸ್ವಾಮಿ. ಆದ್ದರಿಂದಲೇ ಎಲ್ಲರೂ ಹೊರಟುಹೋದರು."

ಕಾ: "ಅದೇನು ಕಾರ್ಯ?"

ಆತ: "ನಿಮ್ಮ ಮೀಸೆ ಬೋಳಿಸಬೇಕಾಗಿದ್ದದ್ದು."

ಸಾಂಬಯ್ಯನವರಿಗೆ ತುಂಬಾ ಆಗ್ರಹ ಬಂತು. ಸ್ವಾಭಾವಿಕವಾಗಿಯೇ ಅವರು ಕೋಪಿಷ್ಠರು. ಇನ್ನು ಇಂಥ ಘಟನೆ ನಡೆದ ಮೇಲೆ ಹೇಳಬೇಕೆ? ತಮ್ಮ ವೀಣೆಯನ್ನು ಹೆಗಲ ಮೇಲೇರಿಸಿದರು; ಕೈಯಲ್ಲಿ ಒಂದು ತಂಬಿಗೆ; ಹೆಂಡತಿಯನ್ನು ಸದ್ಯದ ಉಪಯೋಗದ ಬಟ್ಟೆಗಳನ್ನು ಹೊತ್ತು ತಾರೆಂದರು; ಶ್ರೀರಂಗಪಟ್ಟಣಕ್ಕೆ ನಡೆದರು. ಆ ಹೊತ್ತಿನ ಸ್ನಾನ ಭೋಜನಗಳು ಅಲ್ಲಿ.

ಇಷ್ಟರೊಳಗಾಗಿ ವರ್ತಮಾನ ಮಹಾರಾಜರ ಕಿವಿ ಮುಟ್ಟಿತು. ಅವರು ಕ್ಷುದ್ರ ವಿದ್ವಾಂಸರು ಮಾಡಿದ ಕುಹಕಕ್ಕಾಗಿ ತುಂಬಾ ನೊಂದುಕೊಂಡರು. ಹೇಗಾದರೂ ಸಾಂಬಯ್ಯನವರನ್ನು ಹಿಂದಿರುಗಿಸಿ ಕರೆತರಬೇಕೆಂದು ಆಪ್ತಜನರನ್ನು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಆಗ ಸಾಂಬಯ್ಯನವರು ರಾಜಭೃತ್ಯರನ್ನು ಕುರಿತು ಹೇಳಿದರಂತೆ:

“ಇನ್ನು ಮೇಲೆ ಈ ಸಾಂಬನು ವೀಣೆ ನುಡಿಸುವುದು ಆ ಸಾಂಬನು ಕೇಳುವುದಕ್ಕೋಸ್ಕರ. ಯಾವ ಮನುಷ್ಯನಿಗಾಗಿಯೂ ಈ ಸಾಂಬನು ತಲೆತಗ್ಗಿಸುವವನಲ್ಲ. ಮಹಾರಾಜರಿಗೆ ನನ್ನಲ್ಲಿ ಅಭಿಮಾನವುಂಟು. ಆದರೆ ಅವರ ಆಸ್ಥಾನ ಹಾಗಿಲ್ಲ. ನಾನು ತಿರುಪತಿಗೆ ಹೊರಟಿದ್ದೇನೆ. ಅಲ್ಲಿ ಮೂರು ತಿಂಗಳ ಕಾಲ ಇದ್ದು ದೇವರ ಸನ್ನಿಧಿಯಲ್ಲಿ ಪ್ರತಿ ದಿನವೂ ನನ್ನ ಸೇವೆ ಸಲ್ಲಿಸುತ್ತೇನೆ. ಆಮೇಲೆ ಕಾಳಹಸ್ತಿಗೆ ಹೋಗುತ್ತೇನೆ. ಈ ವೀಣೆಯನ್ನು ಕೇಳಬೇಕೆನ್ನುವವರು ಅಲ್ಲಿ ದೇವರ ಸನ್ನಿಧಿಗೆ ಬರಲಿ.”

ನಮ್ಮ ದೇಶದಲ್ಲಿ ಬಹುಮಂದಿ ಸಾರ್ವಜನಿಕ ಕಾರ್ಯಕ್ಕೆಂದು ಹೊರಡುವವರ ಪಾಡು ಇಂಥಾದ್ದು. ಗುಡಿಗೆ ಗೋಪುರ ಕಟ್ಟೋಣವೆಂದರೆ ಎಲ್ಲರೂ “ಭೇಷ್” ಎನ್ನುತ್ತಾರೆ. ಪಾಠಶಾಲೆ ನಡಸೋಣವೆಂದರೆ “ಅದು ಬಹಳ ಅವಶ್ಯ” ಎನ್ನುತ್ತಾರೆ. ಭುಜತಟ್ಟುತ್ತಾರೆ. ಪ್ರೋತ್ಸಾಹ ಹೇಳುತ್ತಾರೆ. ಪ್ರೋತ್ಸಾಹಿತನಾದ ಬೇಕೂಫನು ಮುಂದೆ ಬಂದರೆ ಎಲ್ಲರೂ ಅವನನ್ನು ಮುಂದಕ್ಕೆ ತಳ್ಳಿ ತಮ್ಮಷ್ಟಕ್ಕೆ ತಾವು ಹಿಂದೆ ಸರಿದು “ನಾವು ಆಹೊತ್ತೇ ಹೇಳಲಿಲ್ಲವೆ-ಇದು ಹುಚ್ಚು ಪ್ರಯತ್ನ ಎಂದು?” ಎಂದು ಮಾತಾಡಿಕೊಳ್ಳುತ್ತಾ ತಮ್ಮ ಬುದ್ಧಿವಂತಿಕೆಯನ್ನು ತಾವೇ ಮೆಚ್ಚಿಕೊಳ್ಳುತ್ತಾರೆ.

ವೀಣೆ ಶೇಷಣ್ಣನವರು

ಶೇಷಣ್ಣನವರ ಸಮಕಾಲೀನರ ಪೈಕಿ ಹಿರಿಯರಾಗಿದ್ದವರಲ್ಲಿ ಕೆಲವರ ಮುಖದ ಪಕ್ಕನೋಟಗಳು ಮೈಸೂರು ವಾಸುದೇವಾಚಾರ್ಯರ ನೆನಪಿನ ಗ್ರಂಥಗಳಲ್ಲಿ ಚಿತ್ರಿತವಾಗಿವೆ. ಆ ಚಿತ್ರಗಳು ಮನೋಹರವಾಗಿ ಎಂಥ ಉದಾರತೆಯ ಕಾಲ ಅದು, ಎಂಥ ಶಾಸ್ತ್ರಸ್ಪರ್ಧೆ ಮತ್ತು ಎಂಥ ನಿಷ್ಕಲ್ಮಷವಾದ ಸ್ನೇಹ-ಎಂಬುದನ್ನು ಮನಸ್ಸಿಗೆ ಭಾಸ ಮಾಡಿಸುತ್ತವೆ.

ಶೇಷಣ್ಣನವರು ಆ ಸಂಪ್ರದಾಯದಲ್ಲಿ ಇದ್ದವರು. ಅವರ ಮನೆಗೆ ಬಂದ ವಿದ್ವಾಂಸರು ಬರಿಗೈಯಿಂದ ಹಿಂದಿರುಗಿದ್ದಿಲ್ಲ. ಕಡ ತಂದಾದರೂ ಶೇಷಣ್ಣನವರು ವಿದ್ವಾಂಸರಿಗೆ ಬಹುಮಾನ ಮಾಡಬೇಕು. ಇದು ಅವರ ಪದ್ಧತಿ. ಅವರ ಮನೆಯಲ್ಲಿ ಸಂಗೀತ ಕಛೇರಿ ರಾಮೋತ್ಸವ ಕಾಲದಲ್ಲಿಯೂ ಇತರ ದಿನಗಳಲ್ಲಿಯೂ ಪದೇ ಪದೇ ನಡೆಯುತ್ತಿತ್ತು. ಅದರ ಗೋಡೆಗಳು ರಬ್ಬರಿನಂತೆ ಹಿಗ್ಗುವ ಹಾಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಎಂದು ಹೋದವರಿಗೆ ಅನ್ನಿಸುತ್ತಿತ್ತು. ಸ್ಕೂಲು ಕಾಲೇಜು ವಿದ್ಯಾರ್ಥಿಗಳು ಅಲ್ಲಿ ಬಿಟ್ಟಿಯಾಗಿ ರಾಜಾಸ್ಥಾನದ ಸಂಗೀತವನ್ನು ಕೇಳಿ ಬರುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಶೇಷಣ್ಣನವರಿಗೆ ತುಂಬಾ ಪ್ರೀತಿ. ಮಹಾರಾಜಾ ಕಾಲೇಜಿನಲ್ಲಾಗಲಿ ಹಾಸ್ಟಲಿನಲ್ಲಾಗಲಿ ವಾರ್ಷಿಕೋತ್ಸವ ಗಣೇಶೋತ್ಸವಗಳು ನಡೆದಾಗ ಶೇಷಣ್ಣನವರನ್ನು ಕರೆದರೆ ಅದು ತಮಗೊಂದು ದೊಡ್ಡ ಯೋಗವೆಂಬಂತೆ ಭಾವಿಸಿ ಬಂದು ಎರಡು ಮೂರು ಘಂಟೆಗಳ ಕಾಲ ನುಡಿಸುತ್ತಿದ್ದರು. ಅವರು ಒಂದು ಸಾರಿ ಯಾವುದೋ ಸಮಾರಂಭದಲ್ಲಿ “ಎಂದುಕು ಪೆದ್ದಲ” ಎಂಬ ತ್ಯಾಗರಾಜರ ಕೀರ್ತನೆಯನ್ನು ಸುಮಾರು ಒಂದು ಘಂಟೆ ಕಾಲ ವಿಸ್ತಾರ ಮಾಡಿ ನುಡಿಸಿದ್ದೂ ಸಭಿಕರು ಅದಕ್ಕೆ ಪರವಶರಾಗಿ ಚಿತ್ರದ ಪ್ರತಿಮೆಗಳಂತೆ ಕುಳಿತು ಕೇಳಿದ್ದೂ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆಗ ಅಲ್ಲಿದ್ದ ಬಿಡಾರಂ ಕೃಷ್ಣಪ್ಪನವರೂ ಚಿಕ್ಕರಾಮರಾಯರೂ ಅಂದಿನ ಶಂಕರಾಭರಣವನ್ನು ತಾವು ಹಿಂದೆಂದೂ ಕೇಳಿರಲಿಲ್ಲವೆಂದೂ ಅದು ಇತರರಿಗೆ ಅಸಾಧ್ಯವೆಂದೂ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು.

ಶೇಷಣ್ಣನವರು ಕಛೇರಿಗಳಿಗೆ ಹೋದ ಕಡೆಯೆಲ್ಲ ಕೃಷ್ಣಪ್ಪನವರೂ ವಾಸುದೇವಾಚಾರ್ಯರೂ ಚಿಕ್ಕರಾಮರಾಯರೂ ಸಾಮಾನ್ಯವಾಗಿ ಜೊತೆಯಲ್ಲಿರುತ್ತಿದ್ದರು. ಅವರೆಲ್ಲರೂ ಮಹಾವಿದ್ವಾಂಸರು. ಅವರ ಪರಸ್ಪರ ಸ್ನೇಹವೂ ನಿರ್ಮತ್ಸರತೆಯೂ ನೋಡುವವರ ಕಣ್ಮನಗಳಿಗೆ ನಿರ್ಮಲವಾದ ಸಂತೋಷವನ್ನು ಕೊಡುತ್ತಿದ್ದವು.

***

ಬೆಂಗಳೂರಿನ ಚಾಮರಾಜಪೇಟೆಯ ಐದನೆಯ ಬೀದಿಯ ಮೊದಲ ಮನೆ ಹಳಗೇರಿ ವ್ಯಾಸರಾಯರದು. ಅವರ ಮಗ ನರಸಿಂಗರಾಯರು ಕೊಳಲು ಅಭ್ಯಾಸ ಮಾಡಿದ್ದರು. ನರಸಿಂಗರಾಯರು ತಮ್ಮ ವಿನಯ ಸೌಜನ್ಯಗಳಿಂದಲೂ ವಾದ್ಯನೈಪುಣಿಯಿಂದಲೂ ಬಹು ಮಂದಿಗೆ ಪ್ರಿಯರಾಗಿದ್ದರು. ಆತನ ಮದುವೆಗೆ ಶೇಷಣ್ಣನವರು ಮೈಸೂರಿನಿಂದ ಬಂದು ಅವರ ಮನೆಯಲ್ಲಿ ಇಳಿದುಕೊಂಡಿದ್ದರು. ಮದುವೆಯ ಮಾರನೆಯ ದಿನ ಸಂಜೆ ಐದು ಘಂಟೆಯ ವೇಳೆಗೆ ಅಲ್ಲಿ ಒಂದು ಮಿತ್ರಗೋಷ್ಠಿ ಸೇರಿತ್ತು. ಮದುವಣಿಗ ನರಸಿಂಗರಾಯರು ಮನೆಯೊಳಗಿನಿಂದ ವೀಣೆಯನ್ನು ಚಪ್ಪರದೊಳಕ್ಕೆ ತಂದು ಶೇಷಣ್ಣನವರ ಮುಂದೆ ಇರಿಸಿದರು. ಶೇಷಣ್ಣನವರು “ಏನು ಉದ್ದೇಶ?” ಎಂದು ಕೇಳಿದರು. ನರಸಿಂಗರಾಯರು “ಇಷ್ಟು ಮಂದಿ ಸ್ನೇಹಿತರು ಬಂದಿದ್ದಾರೆ ಕೇಳಬೇಕೆಂದು. ತಾವು ವೀಣೆಯನ್ನು ನುಡಿಸಬೇಕು” ಎಂದರು. ಶೇಷಣ್ಣನವರು “ನೀನೇ ನುಡಿಸಯ್ಯಾ ನರಸಿಂಗು; ನಾನು ಬಂದಿರುವುದು ನಿನ್ನನ್ನೂ ನಿನ್ನ ಹೆಂಡತಿಯನ್ನೂ ನೋಡುವುದಕ್ಕೆ. ಆಮೇಲೆ ನಿನ್ನ ಕೊಳಲನ್ನು ಕೇಳುವುದಕ್ಕೆ” ಎಂದರು. ವೀಣೆಯನ್ನು ಮುಟ್ಟಲಿಲ್ಲ, ಮುಟ್ಟುವ ಸೂಚನೆಯನ್ನೂ ತೋರಿಸಲಿಲ್ಲ. ನರಸಿಂಗರಾಯರು ನಿರುಪಾಯರಾಗಿ ಕೊಳಲು ಹಿಡಿದು ಕುಳಿತರು. ಶೇಷಣ್ಣನವರು ಅವರ ಪಕ್ಕದಲ್ಲಿ ಕುಳಿತು ತಾಳ ಹಾಕುತ್ತಾ “ಭೇಷ್ ಭೇಷ್” ಎನ್ನುತ್ತಿದ್ದರು. ನಮಗೆಲ್ಲ ಇದು ವಿಸ್ಮಯವನ್ನು ಉಂಟುಮಾಡಿದ್ದಕ್ಕಿಂತ ಹೆಚ್ಚಾಗಿ ಗೌರವ ಬುದ್ಧಿಯನ್ನುಂಟು ಮಾಡಿತು. ಅಂಥ ಮಹಾಪ್ರಸಿದ್ಧರು ಆ ತರುಣನಿಗೆ ಪ್ರೋತ್ಸಾಹ ಕೊಡುತ್ತಿದ್ದ ರೀತಿ ಶೇಷಣ್ಣನವರ ದೊಡ್ಡತನಕ್ಕೆ ನಿದರ್ಶನ.

***

೧೯೨೩-೨೪ ರಲ್ಲಿ ಮೈಸೂರಿನ ವಸಂತಮಹಲ್ ಅರಮನೆಯಲ್ಲಿ ಒಂದು ರಾತ್ರಿ ಶೇಷಣ್ಣನವರ ಕಛೇರಿ. ರೈಟ್ ಆನರಬಲ್ ವಿ.ಎಸ್. ಶ್ರೀನಿವಾಸಶಾಸ್ತ್ರಿಗಳ ಸಂತೋಷಕ್ಕಾಗಿ ಶೇಷಣ್ಣನವರು ವರ್ಣ ನುಡಿಸಿದ ಬಳಿಕ ನನ್ನ ಕಡೆ ತಿರುಗಿ “ಯಾವ ರಾಗ ನುಡಿಸೋಣ?” ಎಂದು ಕೇಳಿದರು. ನಾನು “ಸಾವೇರಿ” ಎಂದೆ. ಅದು ಶ್ರೀನಿವಾಸಶಾಸ್ತ್ರಿಗಳಿಗೆ ತುಂಬ ಪ್ರಿಯವಾಗಿದ್ದ ರಾಗಗಳಲ್ಲೊಂದು. ಆಲಾಪನೆ ಮಾಡಿ ಒಂದು ಕೀರ್ತನೆ ನುಡಿಸುವ ವೇಳೆಗೆ ರಾತ್ರಿ ಒಂಭತ್ತೂ ಮುಕ್ಕಾಲು ಘಂಟೆಯಾಗಿತ್ತು. ಆಮೇಲೆ ಮತ್ತೆ ನನ್ನ ಕಡೆ ತಿರುಗಿ ಪ್ರಶ್ನೆಮಾಡುವಂತೆ ಮುಖ ಸೂಚನೆ ಮಾಡಿದರು. ನಾನು

“ಮಾಕೇಲರಾ-ವಿಚಾರಮು”

ಎಂದು ಸೂಚಿಸಿದೆ. ಬಿಡಾರಂ ಕೃಷ್ಣಪ್ಪನವರು “ಬಹು ಸರಿಯಾಗಿದೆ. ಮಹಾಪ್ರಭುಗಳು ನಮಗೆ ಅನ್ನ ಬಟ್ಟೆ ಕೊಡುತ್ತಾರೆ. ನಮಗೆ ಯಾಕೆ ಬೇರೆ ವಿಚಾರ!-ಬೇಕಾದದ್ದು ಹಾಡಿ ಕೊಂಡಿರುವುದನ್ನು ಬಿಟ್ಟು?-” ಎಂದರು. ಎಲ್ಲರೂ ನಕ್ಕರು. ಆ ಕೀರ್ತನೆಯೂ ಆಯಿತು. ಶೇಷಣ್ಣನವರು ಮತ್ತೆ ನನ್ನ ಕಡೆ ತಿರುಗಿ ನೋಡಿದರು. ಆಗ ನಡೆಯಿತು ಒಂದು ಸ್ವಾರಸ್ಯದ ಪ್ರಸಂಗ.

ಅರಮನೆಯ ಪರವಾಗಿ ಒಬ್ಬ ದೊಡ್ಡ ಅಧಿಕಾರಸ್ಥರು ಅಲ್ಲಿದ್ದರು. ಅವರು “ಮಾಕೇಲರಾ ವಿಚಾರಮು” ಮುಗಿದ ಕೂಡಲೆ ತಮ್ಮ ಸ್ಥಳದಿಂದ ಎದ್ದು ಒಂದು ಪಕ್ಕದ ಕೊಠಡಿಯೊಳಕ್ಕೆ ಹೋಗಿ ಅದರ ಬಾಗಿಲಿನಲ್ಲಿ ನಿಂತು ನನಗೆ ಕೈಸನ್ನೆ ಮಾಡಿದರು. ನಾನು ಎದ್ದು ಅಲ್ಲಿಗೆ ಹೋದಮೇಲೆ ನನ್ನನ್ನೂ ಕೊಠಡಿಯೊಳಗಿನಿಂದ ಇನ್ನೊಂದು ಕೊಠಡಿಗೆ ಕರೆದು ಕೊಂಡು ಹೋಗಿ ಏಕಾಂತದಲ್ಲಿ (ತಮಿಳು ಭಾಷೆಯಲ್ಲಿ) ಹೀಗೆ ಹೇಳಿದರು;

“ಎನ್ನಾ ವೋಯ್-ಅವರು ಕೇಳುತ್ತಲೇ ಇದ್ದಾರೆ. ನೀನು ಹೊಸ ಹೊಸದು ಹೇಳುತ್ತಲೇ ಇದ್ದೀ. ಇದು ಯಾವಾಗ ಮುಗಿಯುವುದು? ರಾತ್ರಿ ಹತ್ತಾಯಿತಲ್ಲ?”

ನಾನು: “ಸಂಗೀತ ಕೇಳುವವರಿಗೆ ಹತ್ತುಘಂಟೆ ಏನೂ ಹೆಚ್ಚು ಹೊತ್ತಲ್ಲ. ನಮಗೆ ಇಂಥ ಸಂಗೀತ ಯಾವ ಕಾಲಕ್ಕೆ ದೊರೆತೀತು! ಈಗ ದೊರೆತಿದೆ. ಶೇಷಣ್ಣನವರು (Mood) ಮನೋಧರ್ಮದಲ್ಲಿದ್ದಾರೆ. ಅವರಾಗಿ ಉತ್ಸಾಹದಿಂದ “ನಿಮಗೆ ಏನು ಬೇಕು?” ಎಂದು ಕೇಳಿದಾಗ ಬೇಕೆನಿಸಿದ್ದನ್ನು ಹೇಳದೆ ಹೋದರೆ ನಷ್ಟ ನಮಗೆ ತಾನೆ?”

ಆ ಅಧಿಕಾರಸ್ಥರು: “ಹಾಗಾದರೆ ನಿನಗೆ ಒಂದು ಸಂಗತಿ ಹೇಳುತ್ತೇನೆ. ಅದನ್ನು ನೀನು ಯಾರೊಡನೆಯೂ ಹೇಳಬಾರದು. ಹೇಳುವುದಿಲ್ಲವೆಂದು ನನಗೆ ಭರವಸೆಕೊಟ್ಟರೆ ಆ ಮೇಲೆ ಹೇಳುತ್ತೇನೆ. ಅದು ಬಹಳ ಸ್ವಾರಸ್ಯವಾದ ಸಂಗತಿ.”

ನಾನು ಉತ್ತರ ಕ್ಷಣದಲ್ಲಿಯೇ ಕೈಯಮೇಲೆ ಕೈಹಾಕಿ ಭಾಷೆಕೊಟ್ಟೆ. ಅವರು ಹೇಳಿದರು:

“ನಾನು ಮದರಾಸಿನಲ್ಲಿ ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಪಾರ್ಥಸಾರಥಿಸ್ವಾಮಿ ಸಭೆಯಲ್ಲಿ ಒಂದು ಸಂಗೀತ ಕಛೇರಿ ನಡೆಯಿತು. ಅದು ಶರಭಶಾಸ್ತ್ರಿಗಳೆಂಬವರಾರೋ ಇದ್ದರಲ್ಲ-ಕೊಳಲು ನುಡಿಸುವವರು-ಅವರ ಕಛೇರಿ. ಅವರು ಆಗ್ಗೆ ಮಹಾಪ್ರಸಿದ್ಧರಾಗಿದ್ದರು. ನನಗೆ ಮದರಾಸಿನಲ್ಲಿ ತಿಳಿದಿದ್ದ ಎಲ್ಲರೂ ಉತ್ಸಾಹಭರಿತರಾಗಿದ್ದರು. ಶರಭಶಾಸ್ತ್ರಿಗಳ ಕಛೇರಿಗೆ ಹೋಗಬೇಕು ಎಂದು ಅವರು ಪಡುತ್ತಿದ್ದ ಆತುರವನ್ನು ನೋಡಿ ನಾನೂ ಒಂದು ಟಿಕೆಟ್ ತೆಗೆದುಕೊಂಡು ಅಲ್ಲಿಗೆ ಹೋದೆ. ಸಭಾಮಂದಿರ ಕಿಕ್ಕಿರಿಯುವಂತಿತ್ತು. ನಾವು ಕೆಲಮಂದಿ ವಿದ್ಯಾರ್ಥಿಗಳು ಗೊತ್ತಾಗಿದ್ದ ವೇಳೆಗೆ ಅರ್ಧ ಘಂಟೆ ಮುಂಚೆಯೇ ಹೋಗಿ ಮುಂದು

ಮುಂದಿನ ಸಾಲುಗಳಲ್ಲಿ ಕುಳಿತೆವು. ಹೊತ್ತಿಗೆ ಸರಿಯಾಗಿ ಶರಭಶಾಸ್ತ್ರಿಗಳು ಬಂದರು. ಅವರು ಕುರುಡರಾಗಿದ್ದರಂತೆ. ಆದರೂ ಅವರು ಹೊಸ್ತಿಲು ದಾಟಿದೊಡನೆಯೇ ಎಲ್ಲರೂ ಎದ್ದುನಿಂತು ಕೈಮುಗಿದರು. ಶಾಸ್ತ್ರಿಗಳು ಕುಳಿತುಕೊಂಡೊಡನೆಯೇ ವೇಣುವಾದನ ಉಪಕ್ರಮಿಸಿತು. ಹದಿನೈದು ಇಪ್ಪತ್ತು ನಿಮಿಷ ಏನೇನೋ ನುಡಿಸಿದರು. ನಾನು ತಾಳ್ಮೆಯಿಂದ ಕುಳಿತಿದ್ದೆ. ಈ ಪಕ್ಕ ಆ ಪಕ್ಕದಲ್ಲಿದ್ದವರೆಲ್ಲ ಮೆಚ್ಚಿಕೊಂಡಂತೆ ತೋರಿತು. ಆದರೆ ನನಗೆ ಏನೂ ಆಗಲಿಲ್ಲ. ಶರಭಶಾಸ್ತ್ರಿಗಳು ಆಮೇಲೆ ಇನ್ನೊಂದು ವಿದ್ಯೆ ತೆಗೆದರು. ಒಂದು ನಿಮಿಷ ಮೇಲುಗಡೆ ಗಟ್ಟಿಯಾಗಿಯೂ ಮರುನಿಮಿಷ ಕೆಳಗಡೆ ಮೆಲ್ಲಗೂ ಶಬ್ದ ಹೊರಡಿಸುತ್ತಿದ್ದಾಗ ನಾನು ಇಂಗ್ಲಿಷಿನಲ್ಲಿ 'Louder please' (ಇನ್ನೂ ಗಟ್ಟಿಯಾಗಿ) ಎಂದು ಕೂಗಿದೆ. ಅದೇನಾಯಿತೋ ಆಗ ನೋಡಯ್ಯ. ನಾಲ್ಕೈದು ಜನ ಯಾರೋ ಬಂದು ನನ್ನ ತುಟಿಗಳೆರಡನ್ನೂ ಅದುಮಿ ಹಿಡಿದು ನನ್ನನ್ನು ಹೊರಕ್ಕೆ ಹೊತ್ತುಕೊಂಡುಹೋಗಿ ಕೆಡವಿ 'ಹೋಗು' ಎಂದು ಬೆನ್ನಿನ ಮೇಲೆ ಗುದ್ದಿದರು. ಆಮೇಲೆ ಅದೇನೆಂದು ವಿಚಾರಿಸಿದೆ. ಅದು ತಗ್ಗಿನ ಸ್ಥಾಯಿ ಎಂಬುದಂತೆ. ಅವರೋಹಣ ಎಂಬುದಂತೆ. ಅದು ಬಹು ಸೊಗಸಂತೆ. ಆ ಸೊಗಸಿನ ಅನುಭವಕ್ಕೆ ನಾನು ಭಂಗಮಾಡಿದೆನೆಂದು ನನಗೆ ಆಯಿತು ಉಚ್ಚಾಟನೆ. ಇಂಥ ಸಂಗೀತಪ್ರಜ್ಞೆ ನನ್ನದು. ಇಂಥವನನ್ನು ನೀನು ಇಲ್ಲಿ ಕಟ್ಟಿ ಹಾಕಿ ಕೂಡಿಸಬೇಕೆಂದಿದ್ದೀಯಲ್ಲ!"

ನಾನು: "ಕಟ್ಟಿಹಾಕಿಲ್ಲ. ನಿಮ್ಮ ಸಂತೋಷದಂತೆ ಆಗಬಹುದು."

ಅವರು: "ನನಗೆ ನಿದ್ರೆ ಬರುತ್ತಿದೆ."

ನಾನು: "ಮನೆಗೆ ದಯಮಾಡಿಸಬಹುದಲ್ಲ?"

ಅವರು: "ನಾಳೆ ಮಿರ್ಜಾ ಸಾಹೇಬರಿಗೋ ಹುಜೂರರಿಗೋ ತಿಳಿದರೆ?"

ನಾನು: "ನಾನು ಮಿರ್ಜಾ ಸಾಹೇಬರಿಗೆ ಸಂಗತಿ ಅರಿಕೆ ಮಾಡುತ್ತೇನೆ. ಜವಾಬ್ದಾರಿ ನನ್ನದಾಗಲಿ. ಯಾವ ದೂರೂ ಯಾರ ಮೇಲೂ ಬರುವುದಿಲ್ಲ."

ಅದರಂತೆ ನಡೆಯಿತು. ನಾವು ಇನ್ನೂ ಒಂದು ಘಂಟೆಯಕಾಲ, ಸುಮಾರು ಹನ್ನೊಂದು ಘಂಟೆಯವರೆಗೆ ಶೇಷಣ್ಣನವರ ಕಛೇರಿಯನ್ನು ಕೇಳಿದೆವು. ಶ್ರೀನಿವಾಸಶಾಸ್ತ್ರಿಗಳು ಪಟ್ಟ ಆನಂದವನ್ನು ನನ್ನ ಯಾವ ಮಾತುಗಳೂ ತಿಳಿಸಲಾರವು.

***

ಬೆಂಗಳೂರಿನ ಪ್ರಸಿದ್ಧ ಸಂಗೀತ ವಿದ್ವಾಂಸರು ಅನಂತಶಾಸ್ತ್ರಿಗಳು ಒಂದು ದಿನ ಅವರ ಮಿತ್ರರಾದ ಎನ್. ನರಸಿಂಹಮೂರ್ತಿಯವರನ್ನೂ ನನ್ನನ್ನೂ ಮಾರನೆಯ ದಿನ ಬೆಳಗ್ಗೆ ಎಂಟು ಘಂಟೆಗೆ ಸರಿಯಾಗಿ ಚಿಕ್ಕಪೇಟೆಯ ಉಡುಪಿ ಹೋಟೆಲಿನಲ್ಲಿ ಹಾಜರಿರತಕ್ಕದೆಂದು ಆಜ್ಞೆ ಮಾಡಿದರು. ನಾನು “ಏಕೆ?” ಎಂದು ಕೇಳಿದೆ. ಅವರು ನಾನು ಹೇಳಿದ್ದಕ್ಕೆ, ಹೇಳಿದ ಮಾತನ್ನು ಕೇಳಬೇಕು” ಎಂದರು.

ಮಾರನೆಯ ಬೆಳಗ್ಗೆ ನರಸಿಂಹಮೂರ್ತಿಯೂ ನಾನೂ ಅಲ್ಲಿಗೆ ಹೋದೆವು. ಹೊಟ್ಟೆ ಬಿರಿಯುವಂತೆ ಉಪಾಹಾರವಾಯಿತು. ಆಮೇಲೆ ಅನಂತಶಾಸ್ತ್ರಿಗಳು ನಮ್ಮನ್ನು ಮಹಡಿಯ ಮೇಲೆ ಹೋಗತಕ್ಕದ್ದೆಂದು ಹೇಳಿದರು. ಅಲ್ಲಿ ಒಂದು ಸಾಮಾನ್ಯವಾದ ಕೋಣೆಯಲ್ಲಿ ಒಂದು ಸಣ್ಣ ಸಭೆ ಸೇರಿತ್ತು. ವೀಣೆಯ ಗೋಪಾಲರಾಯರು, ಪಿಟೀಲು ವಿದ್ವಾನ್ ತಾಯಪ್ಪನವರು, ಪಿಟೀಲು ವಿದ್ವಾನ್ ಪುಟ್ಟು, ವಿದ್ವಾನ್ ದಕ್ಷಿಣಾಮೂರ್ತಿಶಾಸ್ತ್ರಿಗಳು, ಕರೂರು ಕೃಷ್ಣರಾಯರು, ಇನ್ನು ನಾಲ್ಕೈದು ಮಂದಿ ಇತರರು; ಅವರ ಜೊತೆಗೆ ನರಸಿಂಹಮೂರ್ತಿ ಮತ್ತು ನಾನು. ಆಗ ವೀಣೆ ಶೇಷಣ್ಣನವರು ದಯಮಾಡಿಸಿದರು. ಅವರು ಕುಳಿತುಕೊಂಡೊಡನೆಯೇ ಅನಂತಶಾಸ್ತ್ರಿಗಳು ಕೊಠಡಿಯ ಬಾಗಿಲನ್ನು ಮುಚ್ಚಿದರು. ಶೇಷಣ್ಣನವರ ವೀಣೆ ಪ್ರಾರಂಭವಾಯಿತು. ಆಗ ಘಂಟೆ ಸುಮಾರು ಒಂಭತ್ತಿರಬಹುದು. ಮತ್ತೆ ಬಾಗಿಲು ತೆಗೆದು ನಾವು ಹೊರಡಲು ಎದ್ದಾಗ ಘಂಟೆ ಒಂದಾಗಿತ್ತು. ಅಂದಿನ ಕಲ್ಯಾಣಿ ಅದ್ಭುತವಾಗಿತ್ತೆಂದು ಅಲ್ಲಿದ್ದ ವಿದ್ವಾಂಸರೆಲ್ಲ ಏಕವಾಕ್ಯದಿಂದ ನುಡಿದರು. ಶೇಷಣ್ಣನವರು ವೀಣೆಯ ದಂಡಿಗೆಯ ಮೇಲ್ಭಾಗವನ್ನು ಆಗಾಗ ಕೊಂಚ ಕೊಂಚ ಮೇಲಕ್ಕೆತ್ತಿ, ಕಿವಿಯನ್ನು ತಂತಿಗಳ ಸಮೀಪದಲ್ಲಿ ಹಿಡಿದು “ಆ? ಬೇಕು ಅಂದಾಗ ಬರುವುದಿಲ್ಲ; ಯಾವಾಗ ಯಾವಾಗಲೋ ಬರುತ್ತದೆ!” ಎಂದು ಪ್ರತಿಭಾದೇವಿಯ ಆಗಮನವನ್ನು ಸ್ವಾಗತಿಸಿ ಹಿಗ್ಗುತ್ತಿದ್ದರು. ಅದೇ ಯೋಗಸಮಾಧಿ. ಅದೇ ನಾದದ ದಿವ್ಯದರ್ಶನ.

ಸುಬ್ಬಣ್ಣನವರು

ಭಕ್ಷಿ ಸುಬ್ಬಣ್ಣನವರು ಶೇಷಣ್ಣನವರಿಗೆ ಅತ್ಯಂತ ಸಮೀಪದ ಬಂಧುಗಳು. ಶೇಷಣ್ಣನವರಂತೆಯೇ ಪ್ರವೀಣರು. ಆದರೆ ಶೇಷಣ್ಣನವರು ಪರಸ್ಥಳ ಸಂಚಾರಕ್ಕೂ ಸಭಾರಂಜನೆಗಾಗಿ ಪ್ರಯಾಸಪಡುವುದಕ್ಕೂ ಸಿದ್ಧರಾಗಿದಂತೆ ಸುಬ್ಬಣ್ಣನವರಿರಲಿಲ್ಲ. ಸುಬ್ಬಣ್ಣನವರು ಬಡವರಲ್ಲ; ಆಗರ್ಭ ಶ್ರೀಮಂತರು. ಭೋಗಪುರುಷರು. ಅವರು ಒಂದು ಫರ್ಲಾಂಗಿನ ಆಚೆ ಬರುತ್ತಿದ್ದಾಗಲೇ ಅವರ ವಸ್ತ್ರಾಲಂಕಾರಗಳ ಪುನಗು ಜವ್ವಾಜಿಗಳ ಪರಿಮಳ ಬೀಸಿ ಬರುತ್ತಿತ್ತು. ಅವರ ಜೇಬಿನಲ್ಲಿ ಯಾವಾಗಲೂ ಒಂದೆರಡು ಗೇಣುದ್ದದ ಮಲ್ಲಿಗೆಯ ಸರ. ಮೊಗ್ಗು ಮುಪ್ಪಾಗ ಪಾಲು ಮಾತ್ರ ಅರಳಿದ್ದಾಗಿರಬೇಕು. ಕಟ್ಟುವ ಮುಂಚೆ ಅದರ ಮೇಲೆ ಪನ್ನೀರು ಚಿಮುಕಿಸಿರಬೇಕು. ಹೂ ಕಟ್ಟುವ ನಾರನ್ನು ಪುನುಗಿನಲ್ಲಿ ತೀಡಿರಬೇಕು. ಇದು ಅವರ ಠೀವಿ.

ಯಾವಾಗಲೂ ನಗುತ್ತಿರುವ ಪ್ರಣಯಸೂಚಿಯಾದ ಮುಖ. ಸೊಗಸಾದ ಸರಿಗೆಯ ರುಮಾಲು, ಸೊಗಸಾದ ಶಲ್ಯ. ರತ್ನಖಚಿತವಾದ ನಶ್ಯದ ಡಬ್ಬಿ.

ಅವರು ಪ್ರತಿದಿನ ಬೆಳಗ್ಗೆ ಐದು ಘಂಟೆಯ ವೇಳೆಗೆ ಎದ್ದು ನಂಜನಗೂಡು ರಸ್ತೆಯಲ್ಲಿ ಹೊರಟು ಎದುರಿಗೆ ಬರುತ್ತಿದ್ದ ವೀಳೆಯದೆಲೆ ಬುಟ್ಟಿಯವರನ್ನು ನಿಲ್ಲಿಸುವರು. ಆ ಬುಟ್ಟಿಗಳಲ್ಲಿದ್ದ ಚಿಗುರಾದ ಎಲೆ ಎಲೆಯನ್ನೂ ಅಜಮಾಯಿಷಿ ಮಾಡಿ ಗಂಡಲೆಗಳನ್ನು ಬೇರೆಯಿರಿಸಿಕೊಳ್ಳುವರು. ಎಲೆಗಳಲ್ಲಿ ಗಂಡೆಲೆ ಯಾವುದು, ಹೆಣ್ಣೆಲೆ ಯಾವುದು- ಎಂಬುದರ ನಿಶ್ಚಯ ಇತರರಿಗೆ ತಿಳಿದದ್ದಲ್ಲ. ಸುಬ್ಬಣ್ಣನವರು ಹೇಗೋ ಆ ಮರ್ಮವನ್ನು ತಿಳಿದು ನೂರು ನೂರಿಪ್ಪತ್ತು ಎಲೆಗಳನ್ನು ತೆಗಿದಿರಿಸಿಕೊಂಡು ಅಷ್ಟಕ್ಕೆ ಮೂರು ರೂಪಾಯಿಯನ್ನೋ ನಾಲ್ಕು ರೂಪಾಯಿಯನ್ನೋ ಅವರು ಕೇಳಿದಷ್ಟನ್ನು ಕೊಡುತ್ತಿದ್ದರು.

ಬೆಳಗ್ಗೆ ಅತ್ತರು ಬಳಿದುಕೊಂಡು ಸಾವಕಾಶವಾಗಿ ಸ್ನಾನ. ಅನಂತರ ಲಘುವಾಗಿ ಉಪಾಹಾರ. ಆಮೇಲೆ ಪಾಠ.

ಈ ಪಾಠಕಾಲದಲ್ಲಂತೂ ಸುಬ್ಬಣ್ಣನವರು ಮಹಾ ತಪಸ್ವಿ. ಅವರು ಹೇಳಿಕೊಡುತ್ತಿದ್ದದ್ದು ಸಾಮಾನ್ಯವಾಗಿ ಒಂದು ವರ್ಣವನ್ನು ಅಥವಾ ಒಂದು ಕೃತಿಯನ್ನು. ಅದನ್ನು ಎರಡು ಘಂಟೆಗಳ ಕಾಲ ತಾವು ವೀಣೆಯಲ್ಲಿ ನುಡಿಸಿ ಶಿಷ್ಯರಿಗೆ ಅಭ್ಯಾಸ ಮಾಡಿಸುತ್ತಿದ್ದರು. ಆಗ ಮಾತ್ರ ನಿರ್ದಾಕ್ಷಿಣ್ಯ. ಖಡಾಖಂಡಿತ. ಒಂದು ರವೆಯಷ್ಟು ತಪ್ಪನ್ನೂ ಸಹಿಸರು. ಬಹು

ಪರಿಷ್ಕಾರವಾದ ಪಾಠ. ಅದು ಸಾಮಾನ್ಯವಾಗಿ ಹನ್ನೊಂದು ಹನ್ನೊಂದೂವರೆ ಘಂಟೆ ಸುಮಾರಿಗೆ ಮುಗಿಯುವುದು. ಆಮೇಲೆ ಭೋಜನ-ಮೃಷ್ಟಾನ್ನ ಭೋಜನ, ಅತಿಥಿ ಮಿತ್ರರೊಡನೆ ಸಹಪಂಕ್ತಿ ಭೋಜನ, ಅನಂತರ ತಾಂಬೂಲ ಇತ್ಯಾದಿ.

ಸಂಜೆಯ ಕಛೇರಿಗೆ ಬರಬೇಕೆಂದು ಯಾರಾದರೂ ಕರೆದರೆ ಬಹುಮಟ್ಟಿಗೆ "ಅಷ್ಟು ಹೊತ್ತಿನಲ್ಲಿ ಹೇಗಪ್ಪಾ?" ಎನ್ನುವರು. ತೀರಾ ಅಪರೂಪವಾಗಿ ಖುಷಿ ಬಂದಾಗ ಸಂಜೆಯ ಕಛೇರಿಗೆ ಒಪ್ಪುವರು. ಅವರ ಇಂಥ ಒಂದು ಕಛೇರಿಯಲ್ಲಿ "ಕನಿಕರಮೂಂಚಿ ಕಾವಗರಾದಾ: ಗರುಡ ಗಮನ ನಾತೋವಾದಾ" -ಈ ಪಂಚಮರಾಗದ ಕೀರ್ತನೆಯನ್ನು ಕೇಳಿದ ಯೋಗ ನನ್ನದು. ಅಂಥ ರಾಗವಿನ್ಯಾಸ "ನ ಭೂತೋ ನ ಭವಿಷ್ಯತಿ."

ಸುಬ್ಬಣ್ಣನವರ ರಸಿಕತೆಯೂ ಔದಾರ್ಯವೂ ವೆಚ್ಚ ಮಾಡಿಸಿದ್ದನ್ನು ಉಳಿಸಿಕೊಂಡಿದ್ದಿದ್ದರೆ ಅದೊಂದು ಜಹಗೀರಿಯಾಗುತ್ತಿತ್ತು.

೧೦

ಬಿಡಾರಂ ಕೃಷ್ಣಪ್ಪನವರು

ಜನನ: ೧-೬-೧೮೬೬. ಅಂತ್ಯ: ೨೯-೭-೧೯೩೧

ಸುಮಾರು ೧೯೧೫ರಲ್ಲಿ ಯಾವುದೋ ಕೆಲಸಕ್ಕಾಗಿ ನಾನು ಮೈಸೂರಿಗೆ ಹೋಗಿದ್ದೆ. ಆಗ ಅರಮನೆಯ ಕಂಟ್ರೋಲರಾಗಿದ್ದ ಬಲ್ಲಾಳಚರು ರಾಮಕೃಷ್ಣರಾಯರು ನಾನು ಮೈಸೂರಿನಲ್ಲಿರುವ ಸಂಗತಿಯನ್ನು ತಿಳಿದು ನನಗೆ ಹೇಳಿಕಳುಹಿಸಿದರು :

ರಾ: "ನಾಳೆ ಸಂಜೆ ಇಲ್ಲಿಗೆ ನೀನು ಊಟಕ್ಕೆ ಬರಬೇಕು. ನಿನ್ನ ಹತ್ತಿರ ಕೊಂಚ ಕೆಲಸವಿದೆ."

ನಾನು: "ನಾಳೆ ಮಧ್ಯಾಹ್ನ ನಾನು ಬೆಂಗಳೂರಿಗೆ ಹೊರಡತಕ್ಕವನು."

ರಾ: "ಅದು ಆಗಲಾರದು. ನಾಳಿದ್ದು ಹೋಗು. ಈಗ ತಕರಾರು ಮಾಡಬೇಡ."

ಹಿರಿಯರ ಮಾತನ್ನು ಮೀರಬಾರದೆಂದು ಒಪ್ಪಿಕೊಂಡು ಅದರಂತೆ ಮಾರನೆಯ ದಿನ ಸಂಜೆ ಸುಮಾರು ಆರು ಘಂಟೆಯ ವೇಳೆಗೆ ಅವರಿದ್ದ ಶ್ರೀರಾಮ ಮಂದಿರಕ್ಕೆ ಹೋದೆ. ಆ ಕಟ್ಟಡ ಹಾರ್ಡ್‌ವಿಕ್ ಕಾಲೇಜಿನ ಎದುರಿಗಿತ್ತು. ಶ್ರೀರಾಮಮಂದಿರ ವಿಶಾಲವಾದದ್ದು. ಅಲ್ಲಿ ಒಂದರ್ಧ ಘಂಟೆಯ ಹೊತ್ತು ಆ ಮಾತು ಈ ಮಾತು ನಡೆಯಿತು. ರಾಮಕೃಷ್ಣರಾಯರು ಹಳೆಯಕಾಲದ ಕಥೆಗಳನ್ನು ಬಲ್ಲವರು. ವಿನೋದವಾಗಿ ಮಾತನಾಡುವರು. ಗುಣಪಕ್ಷ ಪಾತಿಗಳು ಸ್ನೇಹತತ್ಪರರು. ಅವರಲ್ಲಿ ವಿದ್ವದಭಿಮಾನ ತುಂಬ ಇತ್ತು, - ವಿದ್ವಾಂಸರುಗಳು ನಾಲ್ಕಾರು ಮಂದಿ ಅವರಲ್ಲಿ ಮಾತುಕಥೆಗೆ ಬರುತ್ತಿದ್ದರು.

ಸ್ವಲ್ಪಕಾಲ ಮಾತುಕಥೆ ನಡೆದ ಮೇಲೆ ನಾನು ಕೇಳಿದೆ:

"ಕೆಲಸವಿದೆ ಎಂದು ಹೇಳಿದಿರಲ್ಲಾ-ಏನು ಅಪ್ಪಣೆಯಾಗಬೇಕು."

ಆ ಕೂಡಲೆ ಅಲ್ಲಿದ್ದ ಇಬ್ಬರು ವೈದಿಕರು ಎದ್ದು ನಿಂತು ಕೈಯಲ್ಲಿ ಮಂತ್ರಾಕ್ಷತೆ ಹಿಡಿದು ಒಂದು ಆಶೀರ್ವಾದ ಮಂತ್ರವನ್ನು ಹೇಳಿದರು. ರಾಮಕೃಷ್ಣರಾಯರು ಒಂದು ಪುಸ್ತಕಗಳ ಗಂಟನ್ನು ನನ್ನ ಮುಂದಿರಿಸಿದರು.

“ಇದನ್ನು ನೀನು ತೆಗೆದುಕೊಳ್ಳಬೇಕು. ಇದು ಮೊದಲನೆಯ ಕೆಲಸ. ಎರಡನೆಯ ಕೆಲಸ ಬೇರೆಯಿದೆ.”

ನಾನು ಗಂಟುಬಿಚ್ಚಿ ನೋಡಿದೆ. ಅದು ಶ್ರೀಮದ್ರಾಮಾಯಣದ ನಾಲ್ಕು ಸಂಪುಟಗಳು. ಪರಮಾನಂದವಾಯಿತು. ರಾಮಕೃಷ್ಣರಾಯರು ನನಗೆ ಹೇಳಿದರು:

“ಇದನ್ನು ನೀನು ನಿತ್ಯಪಾರಾಯಣಕ್ಕೆ ಇಟ್ಟುಕೋ. ಒಳ್ಳೆಯ ಪಾಠಾಂತರಗಳನ್ನು ಸೇರಿಸಿ ಪಂಡಿತರಿಂದ ಶೋಧನೆ ಮಾಡಿಸಿದ್ದಾಗಿದೆ. ಇದು ಖಾವಂದರ ಅಪ್ಪಣೆಯಂತೆ ಆಗಿರುವ ಕೆಲಸ. ನಿನಗೆ ಒಂದು ಸಮಗ್ರ ಗ್ರಂಥ ಕೊಡಬೇಕೆಂದು ಆಜ್ಞೆಯಾಗಿದೆ.”

ಅದಕ್ಕೆ ಮುಂಚೆ ನನ್ನಲ್ಲಿದ್ದದ್ದು ನನ್ನ ತಂದೆ ತಾತಂದಿರು ಉಪಯೋಗಿಸುತ್ತಿದ್ದ ತೆಲುಗಕ್ಷರದ ಪ್ರತಿ-ದೊಡ್ಡ ಆಕಾರದ್ದು. ಈಗ ರಾಮಕೃಷ್ಣರಾಯರು ಕೊಟ್ಟದ್ದು ಕೈಗೆ ಅಡಕವಾಗುವ ಆಕಾರದ್ದು. ಇದೂ ತೆಲುಗಕ್ಷರದ್ದೇ. ಆದರೆ ಕಾಗದ ಹಿಂದಿನದಕ್ಕಿಂತ ಒಳ್ಳೆಯದು, ಮುದ್ರಣವೂ ಸ್ಫುಟವಾದದ್ದು.

ಇದಾದಮೇಲೆ ನಾನು ಕೇಳಿದೆ:

ನಾನು: “ಇಷ್ಟೇನೆ ಕೆಲಸ?”

ರಾ: “ಭೋಜನ ಎರಡನೆಯ ಅಂಶ.”

ಪುಷ್ಕಳವಾಗಿ ಭೋಜನವಾಯಿತು. ಆಮೇಲೆ ನಾನು ಕೇಳಿದೆ:

ನಾನು: “ಅನಂತರ?”

ರಾ: “ಈಗ ನನ್ನ ಜೊತೆಯಲ್ಲಿ ಟೌನ್‌ಹಾಲಿಗೆ ಬರತಕ್ಕದ್ದು.”

ಅವರ ಜೊತೆಯಲ್ಲಿ ಟೌನ್‌ಹಾಲಿಗೆ ಹೋದೆ. ಅಲ್ಲಿ ಸೀತಾಕಲ್ಯಾಣ ನಾಟಕ. ಅದರಲ್ಲಿ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು ದಶರಥನ ಪಾತ್ರವನ್ನು ವಹಿಸಿದ್ದರು. ರಾಮಕೃಷ್ಣರಾಯರು ಕೇಳಿದರು:

ರಾ: “ಏನಪ್ಪಾ-ಈಗ ಏನು ಹೇಳುತ್ತೀ?”

ನಾನು: “ಕಿವಿಗೂ ಕಣ್ಣಿಗೂ ಮನಸ್ಸಿಗೂ ಮೂರಕ್ಕೂ ಸಂತೋಷವಾಯಿತು.”

ರಾಮಕೃಷ್ಣರಾಯರು ಕಡೆಯವರೆಗೂ, ಸುಮಾರು ಒಂದು ಘಂಟೆಯ ಹೊತ್ತು ಸ್ತಬ್ಧರಾಗಿ ಕುಳಿತಿದ್ದರು. ಮಧ್ಯೆ ಮಧ್ಯೆ ಕರವಸ್ತ್ರದಿಂದ ಕಣ್ಣೊರಸಿಕೊಳ್ಳುತ್ತಿದ್ದರು.

ಆ ನಾಟಕದ ಸಾಹಿತ್ಯ ಯಾರ ರಚನೆಯೋ ನಾನು ವಿಚಾರಿಸಲಿಲ್ಲ. ಅದು ಯಾರೋ ಅನುಭವಶಾಲಿಗಳಾದ ವಿದ್ವಾಂಸರ ರಚನೆಯೆಂದು ನನಗನ್ನಿಸಿತು. ಗದ್ಯವೂ ಪದ್ಯಗಳೂ ಹಾಡುಗಳೂ ಸೊಗಸಾದ ತಿಳಿಗನ್ನಡದಲ್ಲಿದ್ದವು. ಹಾಡುಗಳ ರಾಗಯೋಜನೆಯೂ ಧಾಟಿಯೂ ಉಚಿತವಾಗಿದ್ದವು. ಆ ನಾಟಕದ ಲಿಖಿತಪ್ರತಿಯನ್ನು ಸಂಪಾದಿಸಿ ಅಚ್ಚು ಮಾಡಿಸಿದರೆ ಕನ್ನಡ ಸಂಗೀತ ಸಾಹಿತ್ಯಗಳಲ್ಲಿ ವಿಶ್ವಾಸವುಳ್ಳವರಿಗೆ ಉಪಕಾರವಾದೀತು.

ಅಂದು ನಾಟಕ ಕಥೆಗೆ ತಕ್ಕಂತೆ ಯಾವುದೋ ಪ್ರಸಂಗದಲ್ಲಿ ದಶರಥನು ಶ್ರೀರಾಮ ಚಂದ್ರನನ್ನು ಸಂಬೋಧಿಸಿದಾಗ ಕೃಷ್ಣಪ್ಪನವರು "ಮೋಹನರಾಮ" ಎಂಬ ಹಾಡನ್ನು ಮೋಹನರಾಗದಲ್ಲಿ ಹಾಡಿದರು. ಆ ಹಾಡು ತ್ಯಾಗರಾಜರ "ಮೋಹನ ರಾಮ" ಎಂಬ ತೆಲುಗು ಕೃತಿಯ ಕನ್ನಡ ಛಾಯೆ ಎಂದು ನನಗೆ ತೋರಿತು. ಸಂಗೀತಕ್ಕೆ ಒಂದು ಭಾಷೆಯ ನಿಯಮವುಂಟೆ? ಅಂದು ಕೃಷ್ಣಪ್ಪನವರು ಹಾಡಿದ ಹಾಡಿನಲ್ಲಿ ಕನ್ನಡ ಮಾತುಗಳು ಇದ್ದದ್ದೇನೋ ಸರಿ. ಆದರೆ ಭಾಷಾತೀತವಾದದ್ದು, ದಿವ್ಯಭಾಷಾರೂಪವಾದದ್ದು ಅವರ ಹಾಡಿಕೆ.

ಇದಕ್ಕೆ ಮುಂಚೆಯೇ ನಾನು ಕೃಷ್ಣಪ್ಪನವರ ಹಾಡಿಕೆಯನ್ನು ಬೆಂಗಳೂರಿನಲ್ಲಿ ಕೇಳಿದ್ದೆ-೧೯೧೦ರ ಸುಮಾರಿನಲ್ಲಿ ಚಿಕ್ಕಪೇಟೆಯಲ್ಲಿ ಸಾಹೂಜಿಯವರ ಮಹಡಿಯ ಮೇಲೆ ಆಗ ಸನ್ಮಾರ್ಗಪ್ರವರ್ತಕ ಸಭೆಯವರು ರಾಮೋತ್ಸವ ನಡಸುತ್ತಿದ್ದರು. ಕೃಷ್ಣಪ್ಪನವರು ಹಾಡಿದ್ದು ಬಹುಶಃ ಆ ಸಮಾರಂಭದಲ್ಲಿ ಎಂದು ನನ್ನ ಜ್ಞಾಪಕ. ಅವರ ಹಾಡು ಬೆಂಗಳೂರಿಗೇ ಒಂದು ಆವೇಶವನ್ನುಂಟುಮಾಡಿತು. ಎಲ್ಲಿ ಹೋದರೂ ಅವರ ಸಂಗೀತದ ಪ್ರಶಂಸೆಯೇ. ಆಮೇಲೆ ನಾನು ಕೃಷ್ಣಪ್ಪನವರ ಕಛೇರಿಗಳನ್ನು ಹತ್ತಾರು ಸಾರಿ ಕೇಳಿದ್ದೇನೆ. ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಕೃಷ್ಣಪ್ಪನವರನ್ನು ಪ್ರಾರ್ಥಿಸಿಕೊಂಡೆವು, ಅದು ಕನ್ನಡ ಕೃತಿಗಳ ಕಛೇರಿಯೇ ಆಗಬೇಕೆಂದು. ಅವರು ಸಂತೋಷಿಸಿ ಒಪ್ಪಿದರು:

"ಅದೇನಂತೆ ಕಷ್ಟ! ಒಂದಲ್ಲದಿದ್ದರೆ ನಾಲ್ಕು ಕಛೇರಿ ಮಾಡೋಣ." ಆಗ ಅವರು ಹಾಡಿದ ಯದುಕುಲಕಾಂಭೋಜಿರಾಗದ

> ಸಾರಿದೆನೋ ನಿನ್ನ-ವೆಂಕಟರನ್ನ
> ನೀರಜನಯನ-ನಿರ್ಮಲಗುಣಪೂರ್ಣ ॥

ಎಂಬ ಅತ್ಯಂತ ಮನೋಹರವಾದ ಶ್ರೀವಾದಿರಾಜಸ್ವಾಮಿಗಳ ದೇವರನಾಮ ಮೂವತ್ತೈದು ಮೂತ್ತಾರು ವರ್ಷಗಳಾದ ಮೇಲೂ ನನ್ನ ಕಿವಿಯಲ್ಲಿ ಈಗ ತಾನೆ ಹಾಡಿದ್ದೆಂಬಂತೆ ಹೊಸದಾಗಿ ನಿಂತಿದೆ. ಹಾಗೆಯೇ

ಕಂಡು ಕಂಡು ನೀ ಎನ್ನ
ಕೈ ಬಿಡುವರೇ ರಂಗ ॥

ಅದಾದಮೇಲೆ ಕೃಷ್ಣಪ್ಪನವರು ಕನ್ನಡದಲ್ಲಿಯೇ ಪಲ್ಲವಿಯನ್ನೂ ಹಾಡಿದರು.

ನೀನ್ಯಾಕೋ ನಿನ್ನ ಹಂಗ್ಯಾಕೊ ॥

-ಇದನ್ನು ಕಾನಡಾ ರಾಗದಲ್ಲಿ ಹಾಡಿ ವಿಸ್ತರಿಸಿದರು. ಆಮೇಲೆ ಬೆಂಗಳೂರಿನಲ್ಲಿ ನಾಲ್ಕಾರು ವರ್ಷ ಕಾಲ ಯಾರಮನೆಗೆ ಹೋದರೂ ಎಲ್ಲರ ಬಾಯಲ್ಲೂ ಅದೇ ಹಾಡು.

ಮನೋಭಾವದ ಸಂಗೀತವೆಂದರೆ ಕೃಷ್ಣಪ್ಪನವರ ಸಂಗೀತ. ಸ್ವಾನುಭವದ ಸಂಗೀತವೆಂದರೆ ಕೃಷ್ಣಪ್ಪನವರ ಸಂಗೀತ.

ಅವರ ಆಕಾರ ಸುಂದರವಾದದ್ದು. ಮುಖ ಕಾಂತಿಸಂಪನ್ನವಾದದ್ದು. ದೇಹದ ವರ್ಣದಂಥದಂತಾದ್ದು. ಅವರ ಶಾರೀರವಂತೂ ಗಾಂಧರ್ವ ಶಾರೀರವೆಂದೇ ಹೇಳಬೇಕು. ಗಾಂಧರ್ವ ಶಾರೀರವನ್ನು ನಾವು ಅರಿಯೆವು. ಅದು ಸರ್ವೋತ್ತಮವಾದದ್ದೆಂದು ಓದಿ ಕೇಳಿದ್ದೇವೆ. ಮನುಷ್ಯಲೋಕದಲ್ಲಿ ಆ ವಿಶೇಷಣವನ್ನು ಅನ್ವಯಿಸಬಹುದಾದದ್ದು ಕೃಷ್ಣಪ್ಪನವರಿಗೇ ಎಂದು ಅವರ ಗಾಯನವನ್ನು ಕೇಳಿರುವವರೆಲ್ಲ ಏಕಕಂಠದಿಂದ ಹೇಳಿಯಾರು.

ಕೃಷ್ಣಪ್ಪನವರ ಮನೆತನ ಯಕ್ಷಗಾನಕ್ಕೆ ಪ್ರಸಿದ್ಧವಾದದ್ದಂತೆ. ಅವರು ಸಂಗೀತದಲ್ಲಿ ಶಿಕ್ಷಣ ಪಡೆದದ್ದು ಮೈಸೂರಿನಲ್ಲಿ. ಶ್ರುತಿಶುದ್ಧವಾದ ಹಾಡಿಕೆಯೆಂದರೆ ಅವರದ್ದು.

ಕಾಲಕ್ರಮದಲ್ಲಿ ಕೃಷ್ಣಪ್ಪನವರ ಗಾನಕೀರ್ತಿ ದಕ್ಷಿಣ ದೇಶದಲ್ಲೆಲ್ಲ ಹರಡಿತು. ಮದರಾಸಿನವರೂ ತಂಜಾವೂರಿನವರೂ ತಲೆದೂಗಿ ಅವರನ್ನು ಬಹುಮಾನಿಸಿದರು.

ಕೃಷ್ಣಪ್ಪನವರು ಪರಮಭಕ್ತರು. ಅವರು ಸ್ಥಾಪಿಸಿದ ಶ್ರೀಸೀತಾರಾಮಮಂದಿರ ಅವರ ಭಕ್ತಿಗೆ ನಿದರ್ಶನವಾಗಿದೆ. ಅದರ ಕಟ್ಟಡಕ್ಕಾಗಿ ಅವರು ಎಷ್ಟು ಶ್ರಮಪಟ್ಟರು, ಎಷ್ಟು ಕಡೆ ತಿರುಗಿದರು, ಯಾರ್ಯಾರನ್ನು ಅನುಸರಿಸಿದರು-ಎಂಬುದನ್ನು ನಾನು ಕೊಂಚ ಕೊಂಚ ಬಲ್ಲೆ.

ಒಂದು ಸಾರಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ನಡೆಯುತ್ತಿದ್ದ ಕಾಲದಲ್ಲಿ ಸಭಿಕರ ಬಿಡಾರಕ್ಕೆ ಬಂದು ಕೃಷ್ಣಪ್ಪನವರು ಇವರನ್ನು ಅವರನ್ನು ಉದ್ದೇಶಿಸಿ ಹುಡುಕಾಡಿದ್ದನ್ನು ನಾನು ಒಂದು ದಿನ ಕಂಡು ಕೇಳಿದೆ:

ನಾನು: "ಇದೇನು ಪ್ರಯಾಸ ನಿಮಗೆ? ದೇಹಕ್ಕೆ ಹೀಗೆ ಆಯಾಸಪಡಿಸಿದರೆ ಶಾರೀರವೇನಾದೀತು? ಮನೋಧರ್ಮ ಹೇಗಿದ್ದೀತು? ಎಲ್ಲ ಚೆದರಿಹೋಗದೆ?"

ಕೃ: "ನಾನು ಇನ್ನೇನು ಮಾಡಲಿ? ರಾಮನು ಇದನ್ನು ನನ್ನ ತಲೆಗೆ ಗಂಟುಹಾಕಿ ಏನೇನೋ ಪರೀಕ್ಷೆ ನಡಸುತ್ತಿದ್ದಾನೆ. ನಡಸಲಿ. ಅವನ ಸಂತೋಷ ಹೇಗಿದ್ದರೆ ಹಾಗೆ ನಡೆಯಲಿ."

ಹೀಗೆ ಹೇಳಿ ನಿಟ್ಟುಸಿರುಬಿಟ್ಟರು.

ಕೃಷ್ಣಪ್ಪನವರು ಸಂತೋಷಚಿತ್ತರು. ಅಲ್ಪಸಂತೃಪ್ತರು. ಅವರ ಶಿಷ್ಯ ಸಂಪತ್ತು ಹೇರಳವಾಗಿತ್ತು. ಅವರಲ್ಲಿ ಹೆಸರಾದವರು ಸಂಗೀತರತ್ನ ಚೌಡಯ್ಯನವರು; ಮತ್ತು ಪ್ರಸಿದ್ಧರಾದ ಆಂಧ್ರ-ಸಂಸ್ಕೃತ ವಿದ್ವಾಂಸರು ರಾಳ್ಲಪಳ್ಳಿ ಅನಂತಕೃಷ್ಣಶರ್ಮರವರು.

೧೧

ಮೈಸೂರು ವಾಸುದೇವಾಚಾರ್ಯರು

['ವಾಗ್ಗೇಯಕಾರ ವಾಸುದೇವಾಚಾರ್ಯ' [1] ಎಂಬ ಪುಸ್ತಕದಲ್ಲಿ ನನಗೆ ಆಚಾರ್ಯರ ವಿಷಯದಲ್ಲಿರುವ ಭಕ್ತಿಗೌರವಗಳನ್ನು ತಿಳಿಸುವ ಪ್ರಬಂಧ ಒಂದಿದೆ. ಅದು ಆಚಾರ್ಯರ ಮೊಮ್ಮಕ್ಕಳು ಶ್ರೀ ಎಸ್. ಕೃಷ್ಣಮೂರ್ತಿ, ಎಂ.ಎ., ಅವರು ಸಂಪಾದಿಸಿದ ಗ್ರಂಥ. ಕೆಲಮಂದಿ ಪ್ರಸಿದ್ಧ ವಿದ್ವದ್ರಸಿಕರು ಸಮರ್ಪಿಸಿದ ಕಾಣಿಕೆಗಳೂ ಆ ಸಂಕಲನದಲ್ಲಿವೆ. ಆಚಾರ್ಯರ 'ನಾ ಕಂಡ ಕಲಾವಿದರು' ಎಂಬ ಸುಂದರ ಕೃತಿಗೆ ನಾನು ಬರೆದ ಮುನ್ನುಡಿಯಲ್ಲಿಯೂ ನನ್ನ ಅಂತರಂಗದ ಭಾವವನ್ನು ವ್ಯಕ್ತಪಡಿಸಲು ಅವಕಾಶ ದೊರೆಯಿತು. ಆಚಾರ್ಯರ ಇನ್ನೊಂದು ಗ್ರಂಥ 'ನೆನಪುಗಳು'. ಅದೂ ಬಹು ಸ್ವಾರಸ್ಯವುಳ್ಳದ್ದು.

ಈಗ ಇಲ್ಲಿ ಕೊಟ್ಟಿರುವ ಉಪನ್ಯಾಸವು ತಾ ॥ ೨೬-೯-೧೯೬೨ರಲ್ಲಿ ಬೆಂಗಳೂರು ಆಕಾಶವಾಣಿಯ ಕೃಪೆಯಿಂದ ಪ್ರಸಾರವಾದದ್ದು.]

ಮನುಷ್ಯಹೃದಯದ ಒಂದು ಭಾವವು ಕಿವಿಗೆ ಸುಖಮಾಡುವ ನಾದರೂಪದಲ್ಲಿ ಹರಿದುಬಂದರೆ ಅದು ಸಂಗೀತವೆನಿಸುತ್ತದೆ. ವಾಸುದೇವಾಚಾರ್ಯರದು ಅಂಥ ಭಾವ ಸಂಗೀತ. ಅವರಿಗೆ ಸಂಗೀತವಿದ್ಯೆ ಕುಲವೃತ್ತಿಯಾಗಿ ಬಂದದ್ದಲ್ಲ. ಅದು ಅವರು ಸ್ವಂತ ಇಷ್ಟದಿಂದ-ಮನೆಯ ಹಿರಿಯರ ಇಷ್ಟಕ್ಕೆ ವಿರೋಧವಾಗಿ-ಸಂಪಾದಿಸಿಕೊಂಡ ಭಾಗ್ಯ. ಆ ಸಂಗೀತಪ್ರೇಮಕ್ಕೆ ಮೂಲವಾಗಿದ್ದದ್ದು ಒಂದು ಹೃದಯಗುಣ. ಆ ಗುಣದಲ್ಲಿ ಎರಡಂಶ ಬೆರೆತಿದ್ದವು: ಒಂದು ಜನದ ಮನೋಭಾವವನ್ನು ಅರಿತುಕೊಳ್ಳುವ ಮನಸ್ಸೂಕ್ಷ್ಮತೆ, ಇನ್ನೊಂದು ಆ ಭಾವದಲ್ಲಿ ಸಹಕರಿಸುವ ಸ್ನೇಹವೃತ್ತಿ. ಹೀಗೆ ಅವರು ತಮಗೆ ಸೇರಿದವರೊಡನೆ ಭಾವಸಹಧರ್ಮಿಯಾಗುತ್ತಿದ್ದರು. ಇದಕ್ಕೆ ಅನೇಕ ನಿದರ್ಶನಗಳನ್ನು ನಾನು ಕಂಡಿದ್ದೇನೆ. ಒಂದನ್ನು ಈಗ ಅರಿಕೆಮಾಡಬಹುದು.

ಒಂದು ದಿವಸ ಮಧ್ಯಾಹ್ನಾನಂತರ ಸುಮಾರು ಮೂರು ಘಂಟೆಗೆ ವೇಳೆಗೆ ಆಚಾರ್ಯರು ನನ್ನ ಮನೆಗೆ ಬಂದರು. ಕುಶಲಪ್ರಶ್ನೆಯಾದ ಮೇಲೆ ಕೇಳಿದೆ:

ನಾನು: "ಆಚಾರ್‍ರು ಈ ಬಿಸಿಲಿನಲ್ಲಿ ದಯಮಾಡಿಸೋಣವಾಯಿತಲ್ಲ?"

ಆ: “ಪರೀಕ್ಷೆ ಮಾಡುವುದಕ್ಕೆ ಬಂದಿದ್ದಾರೆ ಆಚಾರ್ರು. ಅವರಿಗೆ ಇಲ್ಲಿ ಬರಿಯ ಮಾತಿನ ಮರ್ಯಾದೆಯೋ ನಿಜವಾದ ವಿಶ್ವಾಸವೋ-ನೋಡೋಣ!”

ನಾನು: “ಇನ್ನೂ ಪರೀಕ್ಷೆಯೆ?”

ಆ: “ಹಾಗಾದರೆ ಆಚಾರ್ರು ಕರೆದಕಡೆಗೆ ನೀವು ಬರಲು ಅಡ್ಡಿಯಿಲ್ಲ ತಾನೆ?”

ನಾನು: “ಸಂದೇಹವೆಲ್ಲಿ?”

ಆ: “ವಿಚಾರಮಾಡಿ ಹೇಳೋಣವಾಗಲಿ. ರಾತ್ರಿ ಕತ್ತಲಾದ ಮೇಲೆ ಚಿಕ್ಕಪೇಟೆಯ ಹಿಂದಿನ ಗಲ್ಲಿಗಳಲ್ಲಿ ಬರಬೇಕಾಗುತ್ತದೆ. ಆಲೋಚನೆ ಮಾಡೋಣವಾಗಲಿ.”

ನಾನು: “ಏನೂ ಪರವಾಯಿಲ್ಲ. ಆಚಾರ್ರು ಎಲ್ಲಿ ಎಷ್ಟು ಹೊತ್ತಿನಲ್ಲಿದ್ದರೆ ನಾನು ಅಲ್ಲಿ ಅಷ್ಟುಹೊತ್ತಿಗೆ ಸಿದ್ಧ!”

ಹೀಗಾದ ಒಪ್ಪದಂದದ ಮೇರೆಗೆ ಆ ರಾತ್ರಿ ಚಿಕ್ಕಪೇಟೆಯಲ್ಲಿ ಗುರುತು ಹೇಳಿದ್ದ ಕಡೆ ಒಬ್ಬ ಆಸಾಮಿ ನನಗಾಗಿ ಕಾದಿದ್ದ. ನಾನು ಆತನ ಹಿಂದೆ ನಡೆದು ಒಂದು ಸಂದಿಯಲ್ಲಿ ಒಂದು ಮನೆ ಸೇರಿದ್ದಾಯಿತು. ಅದು ಹಳೆ ಕಾಲದ ಮಣ್ಣುಮಾಳಿಗೆ. ಚಾವಣಿ ಕೈಗೆ ಎಟಕುವಂತಿತ್ತು. ಅಲ್ಲಿ ಹತ್ತು ಹನ್ನೆರಡು ಮಂದಿಯ ಒಂದು ಗೋಷ್ಠಿ ಸೇರಿತ್ತು. ಸುಮಾರು ಒಂಭತ್ತು ಘಂಟೆಗೆ ಆಚಾರ್ಯರ ಹಾಡಿಕೆ ಪ್ರಾರಂಭವಾಗಿ ಹನ್ನೆರಡರವರೆಗೆ ನಡೆಯಿತು. ಪಿಟೀಲು ಮೃದಂಗಗಳ ಕೆಲಸ ಮಿತವಾಗಿತ್ತು. ಆಚಾರ್ಯರು ಬೇಗಡೆ, ಕಾಂಭೋಜಿ, ಶಂಕರಾಭರಣಗಳನ್ನು ವಿಸ್ತರಿಸಿ ಹಾಡಿದರು. ಭಾವಪುಷ್ಟವಾದ ರಾಗ ವಿನ್ಯಾಸ ಆಚಾರ್ಯರಲ್ಲಿದ್ದ ಅತಿಶಯ.

ಕಡೆಯಲ್ಲಿ ನಾನು “ಈ ಹೊತ್ತು ಯಾವ ಗಂಧರ್ವ, ಯಾವ ವಿದ್ಯಾಧರ ಇಲ್ಲಿ ಅವತಾರ ಮಾಡಿದ್ದ?” ಎಂದೆ. ಆಚಾರ್ಯರು, ಅಲ್ಲಿ ಕಂಬಕ್ಕೊರಗಿಕೊಂಡು ಹಾಸಿಗೆಯ ಮೇಲೆ ಕುಳಿತು ತಲೆದೂಗುತ್ತ ಅಚ್ಚುಕಟ್ಟಾಗಿ ತಾಳ ಹಾಕುತ್ತಿದ್ದ ಒಬ್ಬ ವೃದ್ಧರ ಕಡೆ ಕೈತೋರಿಸಿ, “ಎಲ್ಲ ಅವರ ಪ್ರಸಾದ” ಎಂದರು.

ವಾಸುದೇವಾಚಾರ್ಯರು ಬಾಲ್ಯದಲ್ಲಿ ಈ ಮುದುಕರ ಮನೆಯಲ್ಲಿ ಆಗಾಗ ಊಟ ಮಾಡಿ ಆದರಣೆ ಪಡೆದಿದ್ದರಂತೆ. ಪುಸಕ್ತ-ಸಂದರ್ಭಕ್ಕೆ ಹಿಂದಿನ ದಿವಸ ಆಚಾರ್ಯರು ಆ ವೃದ್ಧರನ್ನು ಕಂಡಿದ್ದಾಗ ಅವರು “ವಾಸು, ಇನ್ನು ನಾನು ನಿನ್ನ ಸಂಗೀತ ಕೇಳುವುದೆಲ್ಲಪ್ಪ? ವಯಸ್ಸು ಎಂಭತ್ತೈದಾಯಿತು. ಕಛೇರಿಗೆ ಬಂದು ಕುಳಿತಿರಲಾರೆ?” ಎಂದು

ಪೇಚಾಡಿದರಂತೆ. ಆಚಾರ್ಯರು “ನೀವು ನನ್ನ ಕಛೇರಿಗೆ ಬರಬೇಕೆ? ನೀವಿರುವ ಕಡೆಯೇ ನನ್ನ ಕಛೇರಿ ನಡೆಯಲಾರದೆ?” ಎಂದು ಉತ್ತರ ಹೇಳಿದರಂತೆ. ಇದು ಆ ರಾತ್ರಿಯ ದಿವ್ಯಗಾನದ ಅಂತರಂಗ.

ವಾಸುದೇವಾಚಾರ್ಯರು ಭಾವಜೀವಿ. ಮಹಾಕಾವ್ಯವ್ಯಾಸಂಗದಿಂದ ಅವರಿಗೆ ಭಾವ ಸಂಸ್ಕಾರವಾಗಿತ್ತು. ಆ ಭಾವರಸ ಅವರ ಸಂಗೀತದಲ್ಲಿ ನಾದ ಪ್ರವಾಹವಾಯಿತು. ವರ್ಣ ಹಾಡಿದರೂ ಅದರಲ್ಲಿ ಭಾವವೈಖರಿ ಎದ್ದು ಕಾಣುತ್ತಿತ್ತು. ಅದು ಸತ್ಕಾವ್ಯಸಹೋದರ. ಅದು ಭಗವದ್ಧ್ಯಾನಕ್ಕೆ ಆಪ್ತಮಿತ್ರ.

ಅನುಬಂಧ
ವಾಸುದೇವಾಚಾರ್ಯರ ಶ್ಲೋಕಗಾಯನ

ಒಂದು ದಿನ ನನ್ನ ಮನೆಯಲ್ಲಿ ಮಾತನಾಡುತ್ತಿದ್ದಾಗ ಕಾವ್ಯದ ವಿಷಯ ಬಂದಿತು. ಸ್ತೋತ್ರಪದ್ಯಗಳಲ್ಲಿ ಎಂಥ ಸೊಗಸಾದ ಕಾವ್ಯ ಅಡಗಿಕೊಂಡಿರುತ್ತದೆ! ಇದು ವಿಚಾರ. ಇದಕ್ಕೆ ದೃಷ್ಟಾಂತ ಕೊಡಬೇಕೆಂದು ನಾನು “ಓಂಕಾರ ಪಂಜರಶುಕೀಂ” ಇತ್ಯಾದಿಯಾದ ಶ್ಯಾಮಲಾ ನವರತ್ನ ಮಾಲಿಕೆಯ ಹೆಸರನ್ನು ಹೇಳಿದೆ. ಆ ಹೆಸರನ್ನು ಹೇಳಿ ಆ ಸ್ತೋತ್ರದಲ್ಲಿಯ ಪದ್ಯಗಳನ್ನು ನೀರಾಗವಾಗಿ ಮಂತ್ರ ಹೇಳುವಂತೆ

ಸರಿಗಮಪದನಿಸ ತಾಂ

ಎಂದೆ.

ಆಚಾರ್ಯರು “ಅಯ್ಯೊ! ಅಯ್ಯೊ!” ಎನ್ನುತ್ತಾ ಹಣೆ ಚಚ್ಚಿಕೊಂಡರು. ನಾನು “ಅದೇನು? ಎಂದೆ. ಅವರು ಕೈಯೆತ್ತಿ ನನ್ನ ಕಡೆ ತಿವಿಯುವಂತೆ ತೋರಿಸುತ್ತ “ಅದು ಮಾಯಾಮಾಳವಗೌಳವೆಂಬುದು ತಮಗೆ ಮರೆತುಹೋಯಿತೆ? ಸಂಪೂರ್ಣ ರಾಗ! ಅದಕ್ಕೆ ಈ ಗತಿ ತರೋಣವಾಯಿತಲ್ಲ!” ಎಂದರು. ಆಚಾರ್ಯರು ಈ ಶ್ಲೋಕದ ಒಂಭತ್ತು ಆರ್ಯಾಗೀತಿಗಳಿಗೂ ಒಂಭತ್ತು ಬೇರೆಬೇರೆ ರಾಗಗಳಲ್ಲಿ ಸ್ವರಸಂಯೋಜನೆ ಮಾಡಿದ್ದಾರೆ. ಮಧ್ಯಮಾವತಿಯಿಂದ ಪ್ರಾರಂಭವೆಂದು ನನ್ನ ಜ್ಞಾಪಕ.

ವಾಸುದೇವಾಚಾರ್ಯರದು ಬಹುದೂರ ಹರಡುವ ಧ್ವನಿಯಲ್ಲ. ಮೂವತ್ತು ನಲವತ್ತು ಮಂದಿಗೆ ಹೆಚ್ಚಿಲ್ಲದೆ ಕುಳಿತು ಸಾವಧಾನವಾಗಿ ಕೇಳುವುದಾದರೆ ಅವರದು

ಪರವಶಕಾರಿಯಾದ ಸಂಗೀತ.

***

೧೯೦೭ರ ಸುಮಾರಿನಲ್ಲಿ ಶೃಂಗೇರಿಯ ಜಗದ್ಗುರುಗಳು ಬೆಂಗಳೂರಿಗೆ ದಯಮಾಡಿಸಿದ್ದ ಕಾರಣದಿಂದಲೋ ಹೇಗೋ ಆ ದಿನಗಳಲ್ಲಿ ಸ್ವಾಮಿಗಳವರ ವಿಷಯದಲ್ಲಿ ಮಹಾ ಜನರ ಉತ್ಸಾಹ ತುಂಬಿತ್ತು. ಆ ವರ್ಷದ ರಾಮೋತ್ಸವಗಳು ಬಹು ವಿಜೃಂಭಣೆಯಿಂದ ನಡೆದವು. ಚಿಕ್ಕಪೇಟೆಯಲ್ಲಿ ಸಾಹುಜಿಯವರ ಮಹಡಿಯಮೇಲೆ ಸನ್ಮಾರ್ಗಪ್ರವರ್ತನ ಸಭೆಯವರು ನಡಸುತ್ತಿದ್ದ ರಾಮೋತ್ಸವದಲ್ಲಿ ವಿದ್ವಾನ್ ವಾಸುದೇವಾಚಾರ್ಯರ ಕಛೇರಿ ಏರ್ಪಾಟಾಗಿತ್ತು. ಆ ಕಛೇರಿಯಲ್ಲಿ ವಾಸುದೇವಾಚಾರ್ಯರು

ಶಂಕರ ಗುರುವರ ಮಹಿಮಾ
ಸುತರಾಮತಿತರತಿ ವಾನಸಸೀಮಾಮ್

-ಈ ನವರತ್ನ ರಾಗಮಾಲಿಕೆಯನ್ನು ಹಾಡಿದರು. ಆ ಹಾಡಿಕೆ ಬೆಂಗಳೂರು ರಸಿಕ ಪ್ರಪಂಚವನ್ನು ಸೂರೆಗೊಂಡಿತು. ಆಗ ಎಲ್ಲಿ ಹೋದರೂ ಆ ಹಾಡಿಕೆಯ ಪ್ರಶಂಸೆಯೇ. ಯಾರನ್ನು ನೋಡಿದರೂ "ಅದೇನು ಕಲ್ಯಾಣಿ!" "ಅದೇನು ಮೋಹನ!" -ಇದೇ ಮಾತು. ನನಗಂತೂ ರೋಮಾಂಚನ ಮಾಡಿಸಿದ ಆರ್ಯಾಗೀತಿಯೆಂದರೆ

ಶ್ರೀ ಚಂದ್ರಮೌಲಿ ಚರಣಾ-
(ಅಂ) ಭೋಜದ್ವಯ ಬಂಭರಾಯಿತಸ್ವಾಂತಾನ್ ।
ಭಯ ಭಕ್ತಿಭರಿತಭಾವೋ
ಭಗವತ್ಪಾದಾನ್ ವಿಭಾವಯೇ ಹೃದಯೇ ॥

ಇದನ್ನು ಕೇದಾರರಾಗದಲ್ಲಿ ಹಾಡಿದರು. ಅದ್ಭುತವಾಗಿತ್ತು ಆ ಕೇದಾರರಾಗ ವಿನ್ಯಾಸ. ಅದರಲ್ಲಿ "ಅಂಭೋಜದ್ವಯ" "ಬಂಭರಾಯಿತ" -ಈ ಮಾತುಗಳನ್ನು ನುಡಿಯುವ ವೇಳೆಗೆ ಪಿಟೀಲಿನವರ ಕೈವಾಡವೂ ಅತ್ಯಂತ ಮನೋಹರವಾಗಿತ್ತು. ಬಂಭರ ಎಂದರೆ ದುಂಬಿ. ಪಿಟೀಲಿನ ನಾದ ದುಂಬಿಯ ಝೇಂಕಾರವನ್ನು ಅನುಕರಿಸಿದಂತಿತ್ತು.

ವಾಸುದೇವಾಚಾರ್ಯರ ಶ್ಲೋಕಗಾಯನದ ಸೊಗಸು ಅತಿಶಯವಾದದ್ದು. ಅದು ಗಾಯಕರಲ್ಲಿ ಅಷ್ಟು ಹೆಚ್ಚಾಗಿ ದೊರೆಯುವುದು ಅಸಾಧ್ಯವೆನಿಸುತ್ತದೆ. ಆ ಸೊಗಸಿನ ಹುಟ್ಟು ಅವರ ಸಂಸ್ಕೃತ ಸಾಹಿತ್ಯ ಪರಿಶ್ರಮದಿಂದ ಬಂದದ್ದು. ಅವರ ಸಂಸ್ಕೃತ ಪದೋಚ್ಚಾರಣೆ ಅಕ್ಷರಜ್ಞಾನದಿಂದ ಬಲಪಟ್ಟದ್ದು. ಅವರು ಪ್ರತಿಯೊಂದು ಸಂಸ್ಕೃತಪದದ ಭಾವವನ್ನೂ

ಅಕ್ಷರಭಾವವನ್ನೂ ಸಹ ಸ್ವತಃ ಅನುಭವಿಸಿ ನುಡಿಯುತ್ತಿದ್ದರು. ಅಕ್ಷರ ಅಕ್ಷರದಲ್ಲಿಯೂ ಗಮಕ; ಅಕ್ಷರ ಅಕ್ಷರಕ್ಕೂ ನಡುವೆ ಗಮಕ.

ನನ್ನ ಒಬ್ಬ ಮದರಾಸು ಸ್ನೇಹಿತರಿಗೂ ನನಗೂ ಒಂದು ತಕರಾರು ಬಂದಿತ್ತು. ಅವರು ದೊಡ್ಡ ವಕೀಲರು. ಸಂಸ್ಕೃತವನ್ನು ಶಾಸ್ತ್ರವತ್ತಾಗಿ ಕಲಿತಿದ್ದವರು; ಮತ್ತು ಸಂಗೀತದಲ್ಲಿಯೂ ಅಭಿರುಚಿಯುಳ್ಳವರು. ಅವರು ಒಂದು ಸಾರಿ ನನ್ನೊಡನೆ ಮಾತನಾಡುತ್ತಿದ್ದಾಗ ಹೇಳಿದರು:

ಅವರು: "ಸಂಗೀತದವರು ಸಂಸ್ಕೃತಕ್ಕೆ ಕೈಹಾಕಬಾರದಯ್ಯ."

ನಾನು: "ಅದೇಕೆ?"

ಅವರು: "ಸಂಸ್ಕೃತವನ್ನು ನೀವು ಹಾಳುಮಾಡಿಬಿಡುತ್ತೀರಿ. ಅಕ್ಷರಗಳನ್ನು ಹಿಗ್ಗಾಮುಗ್ಗಾ ಎಳೆದು ವಿರೂಪಮಾಡಿಬಿಡುತ್ತೀರಿ.

> ಶ್ರೀ ಬಾಲಸುಬ್ರಹ್ಮಣ್ಯಾ
> ಗಚ್ಛಾಗ್ರಗಣ್ಯಾ

ಇದು ನಿಮ್ಮ ಹಾಡಿಕೆ. ಅಲ್ಲಿ ನಿಮ್ಮ ಉದ್ದೇಶ 'ಗಚ್ಛ' ಎಂದೇ 'ಆಗಚ್ಛ?' ಎಂದೇ? ನೋಡಿದೆಯಾ ನಿಮ್ಮ ಅಭಾಸವನ್ನು?"

ಕೆಲವು ದಿನ ಕಳೆದಮೇಲೆ ಆ ಸ್ನೇಹಿತರು ಬೆಂಗಳೂರಿಗೆ ಬಂದಿದ್ದಾಗ ನಾನು ಅವರ ಮುಂದೆ ವಾಸುದೇವಾಚಾರ್ಯರು ಹಾಡಬೇಕೆಂದು ಬೇಡಿಕೊಂಡೆ. ಆಚಾರ್ಯರ ಸಂಸ್ಕೃತ ಗೀತಗಳ ಹಾಡಿಕೆಯನ್ನು ಕೇಳಿದಾಗ ನನ್ನ ಸ್ನೇಹಿತರು ತಮ್ಮ ಹಳೆಯ ಅಭಿಪ್ರಾಯವನ್ನು ಸಂಪೂರ್ಣವಾಗಿ ತೊರೆದು. "ಸಂಗೀತಕ್ಕೆ ತಕ್ಕ ಭಾಷೆಯೆಂದರೆ ಸಂಸ್ಕೃತ" ಎಂದು ಹೇಳಲಾರಂಭಿಸಿದರು.

ಇದು ವಾಸುದೇವಾಚಾರ್ಯರ ವಿಶೇಷ. ಸಂಸ್ಕೃತದ ಅಕ್ಷರ ಸ್ವಭಾವಗ್ರಹಣ, ಶಬ್ದ ಸ್ವರೂಪಗ್ರಹಣ, ಅದರ ಯಥಾವತ್ತಾದ ಪುನರುತ್ಪಾದನ-ಇದು ಸಂಸ್ಕೃತ ಸಾಹಿತ್ಯ ಪಾಂಡಿತ್ಯದಿಂದ ವಾಸುದೇವಾಚಾರ್ಯರಿಗೆ ಬಂದಿದ್ದ ವೈಶಿಷ್ಟ್ಯ.

ಒಂದು ದಿನ ಮಧ್ಯಾಹ್ನ ನಾನು ಮೈಸೂರಿನಲ್ಲಿ ವಾಸುದೇವಾಚಾರ್ಯರ ಮನೆಗೆ ಹೋದೆ. ಆಗ ನನಗೆ ಹೆಚ್ಚು ಪುರಸತ್ತಿರಲಿಲ್ಲ. ಸುಮ್ಮನೆ ಒಮ್ಮೆ ಕೈಮುಗಿದು ಕುಶಲ ಪ್ರಶ್ನೆಮಾಡಿ ಬರಬೇಕೆಂಬುದು ನನ್ನ ಸಂಕಲ್ಪ. ಆದರೆ ಆಗ ಅವರು ಮನೆಯಲ್ಲಿರಲಿಲ್ಲ. ಆ

ಸಮೀಪದಲ್ಲಿಯೇ ಒಬ್ಬ ಸ್ನೇಹಿತರ ಮನೆಯಲ್ಲಿ ಅವರಿದ್ದಂತೆಯೂ ಅಲ್ಲಿಯೇ ಅವರ ದರ್ಶನಮಾಡಿ ಬರಬಹುದೆಂದೂ ಅಲ್ಲಿ ಯಾರೋ ಸಲಹೆಕೊಟ್ಟರು. ಅದರಂತೆ ನಾನು ಅಲ್ಲಿಗೆ ಹೋದೆ. ಅಲ್ಲಿ ಅವರೂ ಅವರ ಪಕ್ಕದಲ್ಲಿ ಒಬ್ಬ ಸ್ನೇಹಿತರೂ ಕುಳಿತು ಏನೋ ಮಾತನಾಡುತ್ತ ನಗುತ್ತಿದ್ದರು. ವಾಸುದೇವಾಚಾರ್ಯರದು ಹಾಸ್ಯಪ್ರವೃತ್ತಿ. ಎಲ್ಲಿ ಬಂದರೂ ಏನಾದರೊಂದು ಕುಚೋದ್ಯಮಾಡುವರು. ಮಾತಿನಲ್ಲಿ ಶ್ಲೇಷೆಯಿಡುವರು. ಅಥವಾ ಒಗಟುಹಾಕುವರು. ಅವರ ಮುಖದಮೇಲೆ ನಗು ಕಾಣುತ್ತಿರಲಿಲ್ಲ. ಮೇಲೆ ಬಹಳ ಸೀರಿಯಸ್ (Serious) ಆಗಿ ಕಾಣುತ್ತಿದ್ದರು. ತುಟಿಗಳ ಹಿಂದೆ ನಗು ನಲಿದಾಡುತ್ತಿತ್ತು.

ನನ್ನನ್ನು ನೋಡಿದ ಕೂಡಲೆ ಆಚಾರ್ಯರು ಸ್ನೇಹಿತರ ಕಡೆ ಬೆಟ್ಟು ತೋರಿಸಿ ಹೇಳಿದರು.

ಆ: “ಇವರು ನನ್ನ ಪರಮ ಶತ್ರುಗಳು.”

ನಾನು: “ಶತ್ರುಗಳೊಡನೆ ಇಷ್ಟು ಸರಸವೆ?”

ಆ: “ಏನು ಮಾಡೋದು, ಸಂದರ್ಭ ಹಾಗೆ ಬಂದದೆ. ಅವರು ಪ್ರಭುಸ್ಥಾನದಲ್ಲಿದ್ದಾರೆ.”

ನಾನು: “ಸ್ವಲ್ಪ ವಿವರಣೆಯಾಗಬೇಕು.”

ಆ: “ಇವರು ದ್ವಿವೇದಿ ಗುಂಡಾವಧಾನಿಗಳು. ವೇದ ನಮಗೆಲ್ಲ ಪ್ರಭುವಲ್ಲವೆ? ‘ಯದ್ವೇದಾತ್ಪ್ರಭು ಸಂಮಿತಾತ್’ [2] ಎಂದು ಹೇಳಿಲ್ಲವೆ?”

ನಾನು: “ಅವರು ಶತ್ರುಗಳಾದದ್ದು ಹೇಗೆ?”

ಆ: “ಇವರು ನನ್ನ ಬಾಯಲ್ಲಿ ಮಣ್ಣು ಹಾಕಬೇಕು ಎಂದಿದ್ದರು ಸ್ವಾಮಿ. ಇವರೂ ನಾನೂ ಬಾಲ್ಯದಲ್ಲಿ ಸಂಸ್ಕೃತ ಪಾಠಶಾಲೆಯಲ್ಲಿ ಸಹಾಧ್ಯಾಯಿಗಳು. ಇಬ್ಬರೂ ಸಾಹಿತ್ಯ ಪಾಠ ಮಾಡುತ್ತಿದ್ದೆವು. ಆಗ ಸರಕಾರ ಒಂದು ಹೊಸ ಏರ್ಪಾಟುಮಾಡಿತು. ಸಾಹಿತ್ಯದ ಜೊತೆಗೆ ವೇದವನ್ನೋ ಸಂಗೀತವನ್ನೋ ಸೇರಿಸಿಕೊಳ್ಳುವವರಿಗೆ ಒಂದಷ್ಟು ಕಾಲಕ್ಷೇಪ (Scholarship) ಅಂತ. ಆಗ ಆ ಕಾಲಕ್ಷೇಪಕ್ಕೆ ನಾವಿಬ್ಬರೂ ಅರ್ಜಿ ಹಾಕಿದೆವು: ಇಬ್ಬರೂ ಸಂಗೀತ ಕಲಿಯುವ ಉತ್ಸಾಹದಿಂದ. ಅದನ್ನು ನೋಡಿ ನಮ್ಮ ಉಪಾಧ್ಯಾಯರು ಹೇಳಿದರು: ‘ಇಬ್ಬರೂ ಸಂಗೀತಕ್ಕೇ ಹಾಕಬೇಡಿ; ಒಬ್ಬರು ಸಂಗೀತ, ಒಬ್ಬರು ವೇದ ಆಗಬಹುದು’ ಎಂದು. ಈ ಶಾಸ್ತ್ರಿ ಮೊಂಡುಬಿದ್ದು ತಾವೂ ಸಂಗೀತಕ್ಕೆ ಬರಬೇಕೆಂದು ಹಟ ಹಿಡಿದರು. ನನಗಾದರೋ ವೇದದ ಗಂಧವೇ ಇರಲಿಲ್ಲ; ಸಂಗೀತದ ಖಯಾಲಿ ಕೊಂಚ ಇತ್ತು. ನಾವಿಬ್ಬರೂ ಸ್ನೇಹಿತರು, ನಮ್ಮ ನಮ್ಮಲ್ಲಿ ಪೈಪೋಟಿ ಬೇಡ-ಎಂದು ಎಷ್ಟು

ಹೇಳಿದರೂ ಈತ ಒಪ್ಪಲಿಲ್ಲ. ಕಡೆಗೆ ಒಬ್ಬ ಸ್ನೇಹಿತರು ಒಂದು ತೀರ್ಮಾನ ಹೇಳಿದರು: ಇಬ್ಬರ ಹೆಸರುಗಳನ್ನು ಎರಡು ಬೇರೆ ಬೇರೆ ಚೀಟಿಯಲ್ಲಿ ಬರೆಯತಕ್ಕದ್ದು. ಹಾಗೆಯೇ ಸಂಗೀತ ವೇದ ಎಂಬ ಮಾತುಗಳನ್ನು ಬರೆಯತಕ್ಕದ್ದು. ನಾಲ್ಕು ಚೀಟಿಗಳನ್ನೂ ಬರಹ ಮೇಲೆ ಕಾಣದಂತೆ ಮಡಿಸಿ ಆಮೇಲೆ ಪಾಠಶಾಲೆಯ ವಿದ್ಯಾಗಣಪತಿಯ ಪಾದದಲ್ಲಿಟ್ಟು ಮಂಗಳಾರತಿ ಮಾಡಿಸಿ ಚೀಟಿ ತೆಗೆಯತಕ್ಕದ್ದು. ಚೀಟಿಯಲ್ಲಿ ಹೇಗೆ ಬಂದರೆ ಹಾಗೆ ನಡೆಯತಕ್ಕದ್ದು. ಇದಕ್ಕೊಪ್ಪಿದರು ಈ ಮಹಾನುಭಾವರು. ಅದರಂತೆ ಮಹಾಗಣಪತಿ ಮಂಗಳಾರತಿಯಾದ ಬಳಿಕ ಶಾಸ್ತ್ರಿಗಳು ಒಂದು ಕಡೆಯ ಚೀಟಿಯನ್ನೆತ್ತಿದರು. ಅದರಲ್ಲಿ ಬಂತು ನನ್ನ ಹೆಸರು. ಇನ್ನೊಂದು ಕಡೆಯ ಚೀಟಿಯೊಂದನ್ನೆತ್ತಿದರು. ಅದರಲ್ಲಿತ್ತು ಸಂಗೀತವೆಂದು. ನನ್ನ ಅದೃಷ್ಟಕ್ಕೆ ಮಹಾಗಣಪತಿಯ ಅಪ್ಪಣೆ ದೊರೆಯಿತು. ಅದು ದೊಡ್ಡದಲ್ಲ ಸ್ವಾಮಿ. ಈ ಮಹಾನುಭಾವರು ಗಣಪತಿಗಾದರೂ ವಿಧೇಯರಾದರಲ್ಲ! ಅದರಿಂದ ನನ್ನ ಬಾಯಿಗೆ ಅನ್ನ ಸಿಕ್ಕುವಂತಾಯಿತು. ಇವರಿಗೇನು ಸ್ವಾಮಿ ಅದರಿಂದ ಕಡಮೆಯಾದದ್ದು? ಘನಪಾಠಿಗಳು, ದ್ವಿವೇದಿಗಳು. ವೇದರತ್ನ ಎಂದು ಪ್ರಭುಗಳವರಿಂದ ಬಿರುದು ತೆಗೆದುಕೊಂಡಿದ್ದಾರೆ."

ಹೀಗೆ ಮಾತು ನಡೆಯಿತು. ಮಹಾನುಭಾವರಾದ ಗುಂಡಾವಧಾನಿಗಳು ಪ್ರಪುಲ್ಲವದನರಾಗಿ ಸಂತೋಷಗೊಂಡರು.

೧೨

ದಕ್ಷಿಣಾಮೂರ್ತಿ ಶಾಸ್ತ್ರಿಗಳು

ದಕ್ಷಿಣಾಮೂರ್ತಿ ಶಾಸ್ತ್ರಿಗಳು ಕೊಳ್ಳೆಗಾಲದವರು. ಹುಟ್ಟಿನಿಂದ ವೈದಿಕರು, ವೇದಾಧ್ಯಯನ ಮಾಡಿದ್ದವರು. ಸಂಸ್ಕೃತ ಕಾವ್ಯವ್ಯಾಸಂಗವನ್ನೂ ಮಾಡಿದ್ದರು. ಆದದ್ದರಿಂದ ಸಂಸ್ಕೃತ ಪದಗಳನ್ನು ಹೇಳುವಾಗ ಅಕ್ಷರೋಚ್ಚಾರಣೆಯೂ ಪದವಿಭಾಗ ಕ್ರಮವೂ ಸ್ಫುಟವಾಗಿ ಬರುತ್ತಿದ್ದವು.

ಆಕಾರದಲ್ಲಿ ಗಿಡ್ಡು, ಒಳ್ಳೆಯ ದಂತದ ಮೈಬಣ್ಣ. ತಮಿಳು ತೆಲಗು ಭಾಷೆಗಳ ಪರಿಚಯವೂ ಚೆನ್ನಾಗಿತ್ತು.

ಸಂಗೀತ ಇವರಿಗೆ ಕುಲವಿದ್ಯೆಯಾಗಿತ್ತಂತೆ. ಅವರ ಅಣ್ಣಂದಿರ ಮಕ್ಕಳು ಅರುಣಾಚಲ ಶಾಸ್ತ್ರಿಗಳೆಂಬವರು ಹಾಡಿದ್ದನ್ನು ನಾನು ಕೇಳಿದ್ದೇನೆ. ಶಾಸ್ತ್ರಸಮ್ಮತವಾದ ಹಾಡುಗಾರಿಕೆ.

ದಕ್ಷಿಣಾಮೂರ್ತಿ ಶಾಸ್ತ್ರಿಗಳು ಹತ್ತು ಮಂದಿ ಗೃಹಸ್ಥರ ಮನೆಗಳಲ್ಲಿ ಸಂಗೀತಪಾಠ ಹೇಳಿ ಜೀವಿಕೆ ಸಂಪಾದಿಸುತ್ತಿದ್ದರು. ಅವರ ಶಿಷ್ಯರಲ್ಲಿ ಒಬ್ಬಾತ ನನ್ನ ಬಂಧು ಎಂ. ವೆಂಕಪ್ಪಯ್ಯನವರು.

ಶಾಸ್ತ್ರಿಗಳಿಗೆ ಕಷ್ಟವಾದ ಕೀರ್ತನೆಗಳನ್ನು ಹಾಡುವುದರಲ್ಲಿ ಬಹಳ ಇಷ್ಟ. ಸಾಮಾನ್ಯವಾಗಿ ಮುತ್ತುಸ್ವಾಮಿ ದೀಕ್ಷಿತರ ಕೀರ್ತನೆಗಳನ್ನು ಆರಿಸಿಕೊಳ್ಳುತ್ತಿದ್ದರು. ಅವರಿಗೆ ತುಂಬ ಪ್ರಿಯವಾದದ್ದು ಆನಂದ ಭೈರವಿ ರಾಗದ "ತ್ಯಾಗರಾಜಯೋಗ ವೈಭವಂ-ಸಮಾಶ್ರಯಾಮಿ."

ತ್ಯಾಗರಾಜಯೋಗವೈಭವಂ!
ಅಗರಾಜಯೋಗವೈಭವಂ!
ರಾಜಯೋಗವೈಭವಂ!
ವೈಭವಂ ।
ಭವಂ ।
ವಂ ॥

ಆಗಿನ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ವಿನಾಯಕ ಚತುರ್ಥಿಯ ದಿನ ಸಂಜೆ ದಕ್ಷಿಣಾಮೂರ್ತಿ ಶಾಸ್ತ್ರಿಗಳ ಕಛೇರಿ ವರ್ಷೇ ವರ್ಷೇ ಪದ್ಧತಿಯಾಗಿ ನಡೆಯುತ್ತಿತ್ತು. ಅವರು ಒಂದು ಸಾರಿ ಬರಿಯ ಸಂಗೀತ ಕಛೇರಿ ಇಡುವರು: ಒಂದು ಸಾರಿ ಹರಿಕಥೆ ಮಾಡುವರು- ಖುಷಿ ಬಂದಂತೆ. ಆಗ ಪ್ರಸಿದ್ಧವಾದ ಕಾಂಭೋಜಿ ವರ್ಣ ವೀಣೆ ಕುಪ್ಪಯ್ಯನವರ

ಕೊನಿಯಾಡಿದ ನಾಪೈ. . .

ಇದನ್ನು ಹಾಡಿಯೇ ಹಾಡುವರು. ಈಚೆಗೆ ಇದನ್ನು ಯಾವ ಘನ ವಿದ್ವಾಂಸರೂ ಹಾಡಿದ್ದನ್ನು ನಾನು ಕೇಳಿಲ್ಲ. ನಾನು ಒಂದು ಸಾರಿ ಶಾಸ್ತ್ರಿಗಳನ್ನು ಕೇಳಿದೆ. "ನೀವು ಏಕೆ ಈ ಕಷ್ಟವಾದ ಕೃತಿಗಳನ್ನು ಎತ್ತುತ್ತೀರಿ-ಅದೂ ಗಣೇಶನ ಹಬ್ಬದ ದಿನ? ಹೊಟ್ಟೆಯ ತುಂಬ ಕಡುಬು ತುಂಬಿರುತ್ತದೆ, ಶ್ವಾಸ ಒತ್ತುತ್ತದೆ. ಆಕಾರ ವ್ಯಂಜನೆ ತುಂಬಾ ಶ್ರಮವಾಗುತ್ತದಲ್ಲ?" ಎಂದೆ. ಅವರು ನಕ್ಕು "ನನ್ನನ್ನು ಹೆಣ್ಣುಮಕ್ಕಳ ಹಾಡು ಹಾಡೆಂದು ಹೇಳುತ್ತೀಯೇನು?" ಎಂದರು. ಅವರ ಸ್ವಭಾವ ಕೊಂಚ ಗಂಡುತನದ್ದು-ಎಂದರೆ ಕಷ್ಟವಾದದ್ದನ್ನು ಹಿಡಿದು ನಿರ್ವಾಹ ಮಾಡಬೇಕೆಂಬ ಹಠವುಳ್ಳದ್ದು.

ದಕ್ಷಿಣಾಮೂರ್ತಿ ಶಾಸ್ತ್ರಿಗಳನ್ನು ಮೆಚ್ಚಿಸುವಂತೆ ಹಾಡುವುದು ದೊಡ್ಡ ದೊಡ್ಡ ಸಾಧನಬಲವುಳ್ಳ ವಿದ್ವಾಂಸರಿಗೆ ಮಾತ್ರವೇ ಸಾಧ್ಯ. ಅವರು ಸಭೆಯಲ್ಲಿ ಕುಳಿತರೆ ಸಾಮಾನ್ಯ ಸಂಗೀತಗಾರರು ಹೆದರುತ್ತಿದ್ದರು.

ಆರ್ಕಾಟ್ ಶ್ರೀನಿವಾಸಾಚಾರ್ಯರು ದಕ್ಷಿಣಾಮೂರ್ತಿ ಶಾಸ್ತ್ರಿಗಳವರಲ್ಲಿ ತುಂಬ ಗೌರವವಿಟ್ಟಿದ್ದದಲ್ಲದೆ ಅವರು ಬೆಂಗಳೂರಿನಲ್ಲಿ ನೆಲಸಿದ್ದಾಗ ವರ್ಷಕ್ಕೆ ಮೂರು ನಾಲ್ಕು ತಿಂಗಳ ಕಾಲ ವಾರಕ್ಕೊಂದು ಸಲ ದಕ್ಷಿಣಾಮೂರ್ತಿ ಶಾಸ್ತ್ರಿಗಳ ಕಛೇರಿಯನ್ನು ತಮ್ಮ ಮನೆಯಲ್ಲಿ ಏರ್ಪಡಿಸಿ ಸಂತೋಷಪಡುತ್ತಿದ್ದರು.

ಶಾಸ್ತ್ರಿಗಳೇನೋ ಖಂಡಿತವಾದಿಗಳೇ, ಆದರೆ ತುಂಬಾ ನಮ್ರರು, ವಿನಯಶೀಲರು, ಮತ್ತು ಸರಸಿಗಳು. ಒಂದು ದಿನ ಶೇಷಣ್ಣನವರ ವೀಣೆ ಕಛೇರಿ ನಡೆದು ಮುಗಿಯುವ ಹತ್ತಿರಕ್ಕೆ ಬಂದಿತ್ತು. ಆಗ ಶೇಷಣ್ಣನವರು ಸಭಿಕರ ಕಡೆ ತಿರುಗಿ ನಗುತ್ತ "ಯಾರಾದರೂ ಏನಾದರೂ ಕೇಳಬೇಕೆಂದರೆ ಬಂದಷ್ಟು ತೋರಿಸುತ್ತೇನೆ" ಎಂದರು. ಸಭಿಕರಲ್ಲೊಬ್ಬರು ಚಿಕ್ಕ ವಯಸ್ಸಿನವರು ಮೆಲು ಧ್ವನಿಯಿಂದ "ನಾಯಕಿ ಅಪ್ಪಣೆಯಾಗಬೇಕು" ಎಂದರು. ದಕ್ಷಿಣಾಮೂರ್ತಿ ಶಾಸ್ತ್ರಿಗಳು ಗಟಿಯಾಗಿ "ಶೇಷಣ್ಣನವರ ನಾಯಕಿ ಯಾರಿಗೆ ಬೇಡ?" ಎಂದರು. ಎಲ್ಲರಿಗೂ ವಿನೋದವಾಯಿತು. ಶೇಷಣ್ಣನವರು ಸಂತೋಷದಿಂದ ನಾಯಕಿ ನುಡಿಸಿದರು.

ದಕ್ಷಿಣಾಮೂರ್ತಿ ಶಾಸ್ತ್ರಿಗಳು ನಡತೆಯಲ್ಲಿ ಪರಿಶುದ್ಧರು. ಕರ್ಮಠರು. ಪ್ರತಿದಿನವೂ ರುದ್ರಾಭಿಷೇಕ ಮಾಡುತ್ತಿದ್ದರು. ಸೋಮಸೋಮವಾರ ಏಕಾದಶವಾರ ರುದ್ರಾಭಿಷೇಕ. ಆಚಾರವ್ಯವಹಾರಗಳಲ್ಲಿ ಸಂಪ್ರದಾಯಸ್ಥರು. ಬಡತನವೆಂದು ದೀನರಾದವರಲ್ಲ.

ದಕ್ಷಿಣಾಮೂರ್ತಿ ಶಾಸ್ತ್ರಿಗಳಿಗಿದ್ದ ದೊಡ್ಡ ಆಶ್ರಯ ಮಾಡರ್ನ್ ಹಿಂದೂ ಹೊಟೇಲಿನ ಮಾಲೀಕರಾದ ಕೆ.ಟಿ. ಅಪ್ಪಣ್ಣನವರದು. ಅವರಿಬ್ಬರೂ ಕೊಳ್ಳೆಗಾಲದವರು. ಅವರು ಬೇರೆ ಬೇರೆ ಬ್ರಾಹ್ಮಣ ಪಂಗಡಗಳಿಗೆ ಸೇರಿದ್ದರೂ ಒಂದು ಮನೆಯವರಂತಿದ್ದರು. ಅಪ್ಪಣ್ಣನವರಿಂದ ಶಾಸ್ತ್ರಿಗಳವರಿಗೆ ಆದ ಸಹಾಯ ಅಷ್ಟಿಷ್ಟಲ್ಲ. ಅಪ್ಪಣ್ಣನವರು ಪರಮೋದಾರಿಗಳು, ಭಗವದ್ಭಕ್ತರು. ಅವರು ಶಾಸ್ತ್ರಿಗಳ ಎಲ್ಲ ಆವಶ್ಯಕತೆಗಳನ್ನೂ ತಾವಾಗಿ ಕಂಡುಕೊಂಡು, ಶಾಸ್ತ್ರಿಗಳು ಯಾವುದಕ್ಕೂ ಕೊರತೆ ಪಡದಂತೆ ನೋಡಿಕೊಳ್ಳುತ್ತಿದ್ದರು.

ಶಾಸ್ತ್ರಿಗಳವರಲ್ಲಿ ವಿನೋದಪ್ರವೃತ್ತಿ ಇತ್ತು. ಒಂದು ದಿನ ಚಿಕ್ಕಪೇಟೆಯಲ್ಲಿ ಒಂದು ಕಟ್ಟು ವೀಳ್ಯದೆಲೆ ಕೈಯಲ್ಲಿ ಹಿಡಿದುಕೊಂಡು ಒಬ್ಬ ಸ್ನೇಹಿತರ ಅಂಗಡಿಗೆ ಬಂದರು. ಆ ಸ್ನೇಹಿತರು "ಏನು ಶಾಸ್ತ್ರಿಗಳೆ, ಹೋಗಿ ಹೋಗಿ ಮುದಿ ಎಲೆ ತಂದಿದ್ದೀರಿ?" ಎಂದರು.

ಶಾಸ್ತ್ರಿಗಳು: "ಎಲ್ಲ ಎಲೆಗಳೂ ಮುದಿಯಲ್ಲಪ್ಪ. ಕೆಲವು ಚಿಗುರೆಲೆ ಇದೆ, ಅದು ನನಗಾಗುತ್ತದೆ. ಕೊಂಚ ಕೊಂಚ ಬಲಿತ ಎಲೆ ಒಂದಷ್ಟಿದೆ. ಅದನ್ನು ನಮ್ಮ ಮಗು ಹಾಕಿ ಕೊಳ್ಳುತ್ತಾಳೆ. ಮಿಕ್ಕದ್ದನ್ನು ಮನೆಯಲ್ಲಿರುವ ಮುದುಕಿ ಮೇಯುತ್ತಾಳೆ."

ಸ್ನೇಹಿತರು: "ಈ ಮಾತನ್ನು ನಿಮ್ಮ ಮನೆಯಲ್ಲಿ ಹೇಳಲೊ?"

ಶಾಸ್ತ್ರಿಗಳು: "ಹೇಳಿ, ಅದಕ್ಕೇನಂತೆ. ತಕ್ಕ ಜವಾಬು ಬರುತ್ತದೆ. ನಾನು ಇಷ್ಟಕ್ಕೂ ವೈದಿಕ. ಋಷಿಪಂಚಮಿ ಮುಗಿದು ಎಷ್ಟೋ ಕಾಲವಾಯಿತು."

೧೩

ಅನಂತಶಾಸ್ತ್ರಿಗಳು

ಅನಂತಶಾಸ್ತ್ರಿಗಳು ಬೆಂಗಳೂರಿನಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಸಂಗೀತ ವಿದ್ವಾಂಸರಲ್ಲಿ ಒಬ್ಬರು. ಪಾಠ ಹೇಳುವುದರಲ್ಲಿ, ಹಾಡುವುದರಲ್ಲಿ ಇವರದು ಗಂಡುವಾಣಿ. ನಾನು ಅವರ ಹಾಡಿಕೆಯನ್ನು ಮೊದಲು ಕೇಳಿದ್ದು ೧೯೦೦ಳರಲ್ಲಿ. ಆಗ ಅವರು ಯುವಕರು. ಅಂದಿನ ಕಛೇರಿಯಲ್ಲಿ ಬಹುಮಂದಿ ಹಳೆಯ ವಿದ್ವಾಂಸರು ಸೇರಿದ್ದರು. ಶಾಸ್ತ್ರಿಗಳು ಟಾಕ್‌ಟೀಕಾಗಿ ಬಟ್ಟೆ ಧರಿಸಿದ್ದರು. ತಲೆಯ ಮೇಲೆ ಫೆಲ್ಟ್ ಟೋಪಿ. ಸರಿಗೆಯ ಶಲ್ಯ. ಒಳ್ಳೆಯ ಕೋಟು. ಸರಿಗೆಯಂಚಿನ ಧೋತ್ರ. ಅಂದು ಮದುವೆ ಮನೆಯ ಸಂಗೀತ. ಶಾಸ್ತ್ರಿಗಳು "ವಾತಾಪಿಗಣಪತಿಂ" ಎಂಬ ಪ್ರಸಿದ್ಧ ಕೀರ್ತನೆಯಿಂದ ಪ್ರಾರಂಭಿಸಿದರು. ಮೊದಲ ಕ್ಷಣದಿಂದಲೇ ಜಮಾವಣೆ ಸೊಗಸಾಗಿತ್ತು. ರಾಗಾಲಾಪನೆ, ಕೀರ್ತನೆ, ಸ್ವರಸಂಯೋಜನೆ-ಎಲ್ಲ ತುಂಬಾ ಬಿಕ್ಕಟ್ಟಿನಿಂದ ಬಂದಿತ್ತು. ಅದು ಅವರ ಮೊದಮೊದಲನೆಯ ಕಛೇರಿ ಎಂದು ತೋರುತ್ತದೆ. ಬಂದಿದ್ದವರೆಲ್ಲ ಅದನ್ನು ಕೊಂಡಾಡಿ ಅದೊಂದು ಸಂಗೀತಪ್ರಪಂಚದಲ್ಲಿ ಕಾಣಿಸಿಕೊಂಡ ನೂತನ ನಕ್ಷತ್ರ ಎಂಬಂತೆ ಮಾತನಾಡಿಕೊಂಡರು.

ಅನಂತಶಾಸ್ತ್ರಿಗಳು ಬೆಂಗಳೂರಿನಲ್ಲಿ ಹುಟ್ಟಿದವರು, ಮುಲಕನಾಡು ಬ್ರಾಹ್ಮಣರು. ಅವರ ಪೂರ್ವಿಕರ ಮನೆ ಬಳೆಪೇಟೆಯ ನರಸಿಂಹಸ್ವಾಮಿ ದೇವಸ್ಥಾನದ ಸಮೀಪದಲ್ಲೆಲ್ಲೋ ಇತ್ತು. ಅವರ ಅಣ್ಣಂದಿರಾದ ಅನ್ನದಾನಶಾಸ್ತ್ರಿಗಳೂ ಸಂಗೀತ ವಿದ್ವಾಂಸರು. ಯಾವುದೋ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು.

ಅನಂತಶಾಸ್ತ್ರಿಗಳ ಗುರುಗಳು ಸೇಲಂ ನರಸಯ್ಯನವರು. ಇವರು ಆ ಕಾಲದ ಮಹಾ ವಿದ್ವತ್ಪಂಕ್ತಿಗೆ ಸೇರಿದವರು. ಅನಂತಶಾಸ್ತ್ರಿಗಳಿಗೆ ಪಲ್ಲವಿ ಶೇಷಯ್ಯನವರಲ್ಲಿಯೂ ಕೆಲಕಾಲ ಪಾಠವಾಗಿತ್ತು.

ನಾನು ಒಂದು ಸಲ ಬೌರಿಂಗ್‌ಪೇಟೆಯಿಂದ ಬೆಂಗಳೂರಿಗೆ ರೈಲಿನಲ್ಲಿ ಬಂದೆ. ಸುಮಾರು ಮೂರು ಘಂಟೆಗಳ ಪ್ರಯಾಣ. ಆಗ ನಾನಿದ್ದ ಕಂಪಾರ್ಟ್‌ಮೆಂಟಿನಲ್ಲಿ ಕುಳಿತಿದ್ದವರು ಇನ್ನೊಬ್ಬರೇ ಒಬ್ಬರು. ಆದರೆ ಅವರು ಯಾರೆಂಬುದು ನನಗೆ ತಿಳಿದಿರಲಿಲ್ಲ. ಅವರು ದಾರಿಯುದ್ದಕ್ಕೂ ಬೆರಳುಗಳಿಂದ ತಾಳ ಹಾಕುತ್ತ ಬಂದರು. ನನಗೆ ಅದು

ಸೋಜಿಗವೆನಿಸಿತು. ರೈಲುಗಾಡಿ ಕಟ್, ಕಟಕಟಕಟ್ ಎಂದು ಸದ್ದು ಮಾಡುತ್ತಿದ್ದದ್ದನ್ನು ಅವರು ಅನುಸರಿಸಿ ತಾಳ ಎಣಿಕೆ ಮಾಡುತ್ತಿದ್ದರು.

ಕಂಟೋನ್ಮೆಂಟ್ ಸ್ಟೇಷನ್ನಿಗೆ ಬಂದಾಗ ಅವರು ಗಾಡಿಯಿಂದ ಇಳಿದರು. ಅವರನ್ನು ನೋಡುವುದಕ್ಕಾಗಿ ಐದಾರು ಮಂದಿ ಬಂದಿದ್ದರು-ಹೂವಿನಹಾರ ನಿಂಬೇಹಣ್ಣುಗಳ ಸಮೇತವಾಗಿ. ಅವರೆಲ್ಲ ಕಾಲುಮುಟ್ಟಿ ನಮಸ್ಕಾರ ಮಾಡಿದರು. ಅವರಲ್ಲಿ ಒಬ್ಬರು ನನಗೆ ಪರಿಚಿತರಾದವರು. ಅವರನ್ನು ನಾನು ವಿಚಾರಿಸಿದಾಗ ಅವರು "ನಿಮಗೆ ತಿಳಿಯದೆ ಇವರು-ಪಲ್ಲವಿ ಶೇಷಯ್ಯನವರು?" ಎಂದರು. ನಾನು ಅವರ ಕೀರ್ತಿಯನ್ನು ಕೇಳಿದ್ದೆ. ಅವರ ಸಂಗೀತ ಕೇಳುವ ಅವಕಾಶ ನನಗೆ ದೊರೆಯಲಿಲ್ಲ.

'ಸ್ವರಸಿಂಹ ಕುಟ್ಟಿ'

ಅನಂತಶಾಸ್ತ್ರಿಗಳ ಜಾಡು ಅದೇ ಜಾತಿಯದು. ತಾಳಗತಿಗೂ ಸ್ವರಸಂಯೋಜನೆಗೂ ಹೆಚ್ಚು ಅನುಕೂಲಿಸುವ ಕೃತಿಗಳನ್ನೇ ಅವರು ಆರಿಸಿಕೊಳ್ಳುತ್ತಿದ್ದುದು. ಅವರಿಗೆ ಪ್ರಿಯವಾದ ಕೃತಿಗಳಲ್ಲೊಂದು:

> ಎದುಟಿ ನಿಲಿಚಿತೇ
> ನೀದಿ ಸೊಮ್ಮುಲೇಮಿ ಬೋವುರಾ ॥
> ತರಾನ ದೊರಕನಿ
> ಪರಾಕು ನಾ ಯೆಡ-
> ನು ರಾಮ ಜೇಸಿತೆ
> ಸುರಾಸುರಲು ಮೆ- ।
> ತ್ತುರಾ ಯಿಪುಡು ಯೀ
> ಹರಾಮಿತನ ಮೇ-
> ಲರಾ ಭಕ್ತ ತ್ಯಾಗ-
> ಗರಾಜನುತ ನಾ ॥

ಇದರಲ್ಲಿ ಪ್ರಾಸಾಕ್ಷರಗಳ ಜರ್ಬುದಾರಿ, ಲಯವಿನ್ಯಾಸ, ಶಂಕರಾಭರಣ ರಾಗದ ಜೋರು- ಇವೆಲ್ಲ ಅವರಿಗೆ ತುಂಬ ಇಷ್ಟವಾದದ್ದು. ತಾಳ ಹಾಕುವಾಗ ಆ ತಾಳದ ಪೆಟ್ಟು ಈ ಕಾಲದ ಹುಡುಗರ ತೊಡೆಯ ಮೇಲೇನಾದರೂ ಬಿದ್ದಿದ್ದರೆ ಚರ್ಮ ಕಿತ್ತುಹೋಗುತ್ತಿತ್ತೆಂದು

ತೋರುತ್ತದೆ. ಅವರ ಉತ್ಸಾಹವನ್ನೂ ಮುಖದ ಮೇಲಿನ ತೇಜಸ್ಸನ್ನೂ ನೋಡಿದರೆ ಅವರ ಆನಂದ ಹೇಗೆ ಹರಿದುಬರುತ್ತಿತ್ತೆಂಬುದು ವ್ಯಕ್ತವಾಗುತ್ತಿತ್ತು.

ಅವರು ತುಂಬ ಉತ್ಸಾಹದಿಂದ ಹಾಡುತ್ತಿದ್ದ ಇನ್ನೊಂದು ಕೀರ್ತನೆ ದೇವಗಾಂಧಾರಿರಾಗದ "ಕ್ಷೀರಸಾಗರ ಶಯನ."

ಹೀಗೆ ಅವರ ವಿದ್ವತ್ತೆ ಹೆಚ್ಚಾಗಿ ಕಾಣುತ್ತಿದ್ದದ್ದರಿಂದ ಅವರಿಗೆ "ಸ್ವರಸಿಂಹ ಕುಟ್ಟಿ" ಎಂದು ಹೆಸರು ಬಂದಿತ್ತು. ಆ ಬಿರುದನ್ನು ಶೃಂಗೇರಿ ಜಗದ್ಗುರುಗಳವರು ಕೊಟ್ಟರೆಂದು ಒಂದು ಹೇಳಿಕೆಯುಂಟು. ಅದು ಯಾರೋ ತಮಿಳು ವಿದ್ವಾಂಸರುಗಳು ಕೊಟ್ಟಿರಬಹುದೆಂಬುದು ಇನ್ನೊಂದು ಹೇಳಿಕೆ.

ಅನಂತಶಾಸ್ತ್ರಿಗಳು ಪತ್ನೀವಿಯೋಗವಾದ ಮೇಲೆ ಚಿಕ್ಕಪೇಟೆಯ ಉಡುಪಿ ಹೊಟೇಲಿನ ಮೇಲುಗಡೆ ಒಂದು ಕೊಠಡಿ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದರು. ಕೆಲವು ಕಾಲವಾದ ಮೇಲೆ ಉತ್ತರಾದಿ ಮಠದ ಕಟ್ಟಡದ ಮಹಡಿಯ ಒಂದು ಕೊಠಡಿಯಲ್ಲಿ ಸಂಗೀತ ಪಾಠಶಾಲೆಯೊಂದನ್ನು ಪ್ರಾರಂಭಿಸಿದರು. ಆ ಸಂಬಂಧದಲ್ಲಿ ಅವರ ಹಿಂದಿನ ಉಪಾಧ್ಯಾಯರಾಗಿದ್ದ ಕೆ.ಎ.ಕೃಷ್ಣಸ್ವಾಮಿಅಯ್ಯರ್ ಅವರನ್ನು [1] ನೋಡುವುದಕ್ಕಾಗಿ ಬಸವನಗುಡಿಯಲ್ಲಿ ಅವರ ಮನೆಗೆ ಬಂದರು. ಆ ಸಂಜೆ ನಾನು ಅಲ್ಲಿದ್ದೆ, ಇನ್ನೂ ಇಬ್ಬರು ಮೂವರಿದ್ದರು. ಕೃಷ್ಣಸ್ವಾಮಿಅಯ್ಯರ್ ಅವರು ತೆಲುಗಿನಲ್ಲಿ "ಎಲಾ ಅನಂತು, ನಿನ್ನ ಸಂಗೀತ ನಾನು ಕೇಳಿ ಎಷ್ಟು ದಿನವಾಯಿತಯ್ಯ? ಯಾವಾಗ ಕೇಳುವುದು?" ಎಂದರು. ಅನಂತಶಾಸ್ತ್ರಿಗಳು "ಯಾವಾಗ ಬೇಕೆಂದರೆ ಆವಾಗ. ನಿಮ್ಮ ಶಿಷ್ಯ ನಾನು. ನಿಮ್ಮ ಆಜ್ಞೆಗೆ ಕಾದಿದ್ದೇನೆ" ಎಂದರು. ಕೃಷ್ಣಸ್ವಾಮಿ ಅಯ್ಯರ್‌ರವರು "ಈಹೊತ್ತಾಗಬಹುದೋ?" ಎಂದರು. ಶಾಸ್ತ್ರಿಗಳು "ಈಗಲೇ ಆಗಬಹುದು" ಎಂದರು.

ಈ ಮಾತುಕತೆಯನ್ನು ಮನೆಯೊಳಗಿಂದಲೇ ಕೇಳುತ್ತಿದ್ದ ಕೃಷ್ಣಸ್ವಾಮಿಅಯ್ಯರ್‌ರವರ ಹೆಂಡತಿ ಸುಬ್ಬಮ್ಮನವರು ಅಲ್ಲಿಗೆ ಬಂದು "ಭೋಜನಕ್ಕೆ ಎಲ್ಲಾ ಸಿದ್ಧವಾಗಿದೆ. ಊಟ ಮುಗಿಸಿಕೊಂಡು ಕುಳಿತರೆ ಅನುಕೂಲ" ಎಂದರು. ಅದರಂತೆ ಅಲ್ಲಿದ್ದ ಆರೇಳು ಮಂದಿ ಅಲ್ಲಿಯೇ ಭೋಜನಮಾಡಿ ಹಾಲಿನಲ್ಲಿ ಕುಳಿತೆವು.

‘ಸಂಗೀತ-ಮೃಷ್ಟಾನ್ನ’

ಕೃಷ್ಣಸ್ವಾಮಿ ಅಯ್ಯರ್‌ರವರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಕರಾಗಿದ್ದರು. ಆಮೇಲೆ ಹೈಸ್ಕೂಲುಗಳ ಹೆಡ್ ಮಾಸ್ಟರಾಗಿದ್ದರು. ಅವರು ಸಂಗೀತ ಪ್ರಿಯರು. ಸ್ವತಃ ಪಿಟೀಲು ನುಡಿಸುತ್ತಿದ್ದರು. ಅವರೇ ಆ ದಿನ ಪಿಟೀಲು ಹಿಡಿದು ಕುಳಿತರು. ಘಂಟೆ ಎಂಟೂವರೆ ಆಗಿದ್ದಿರಬಹುದು. ಅನಂತಶಾಸ್ತ್ರಿಗಳು “ಯಾವ ರಾಗ ಹಾಡಲಿ?” ಎಂದು ಕೇಳಿದರು. ಕೃಷ್ಣಸ್ವಾಮಿ ಅಯ್ಯರ್‌ರವರು ಕೇದಾರಗೌಳ ಎಂದು ಸೂಚಿಸಿದರು. ಆ ರಾಗ, ಅದರಲ್ಲೊಂದು ಕೀರ್ತನೆ, ಆ ಕೀರ್ತನೆಯ ನೆವದಲ್ಲಿ ಕಲ್ಪನ ಸ್ವರಗಳ ರಭಸ, ಇದೆಲ್ಲ ಆಗಿ ಮುಗಿಯುವ ವೇಳೆಗೆ ಹನ್ನೊಂದೂವರೆ ಘಂಟೆ ಆಗಿತ್ತು. ಕೃಷ್ಣಸ್ವಾಮಿ ಅಯ್ಯರ್‌ರವರು “ಈಹೊತ್ತು ಕೇಳಿದ್ದು ಸಂಗೀತ. ಮೃಷ್ಟಾನ್ನ ಸಂತರ್ಪಣೆ ಮಾಡಿಸಿದೆ ನಮಗೆಲ್ಲ” -ಎಂದರು.

ವಿನೋದಪ್ರಿಯತೆ

ಅನಂತಶಾಸ್ತ್ರಿಗಳು ಕೊಂಚ ತಮಾಷೆಗಾರರು. ಸ್ವಾಭಾವಿಕವಾಗಿ ಅವರು ಕೋಪಿಷ್ಠರೂ ಕಟುಭಾಷಿಗಳೂ ಆಗಿದ್ದದ್ದರಿಂದ ಅವರ ತಮಾಷೆ ಮತ್ತೂ ಸೊಗಯಿಸುತ್ತಿತ್ತು. ಅವರದು ಘನವಾದ ಮೀಸೆ. ಒಂದೊಂದು ಮೀಸೆಯನ್ನು ತೊಳೆಯಲು ಒಂದೊಂದು ಬಿಂದಿಗೆ ನೀರು ಖರ್ಚಾಗುತ್ತಿತ್ತು. ಇಂಥಾದ್ದನ್ನು ನಾವು ಹಾಸ್ಯ ಮಾಡುತ್ತಿದ್ದೆವು.

ಒಂದು ದಿನ ಸಂಜೆ ನಾಲ್ಕೈದು ಘಂಟೆ ಇರಬಹುದು. ನಾನು ಅವರ ಸಂಗೀತ ಪಾಠ ಶಾಲೆಗೆ ಹೋದೆ. ಆಗ ಅಲ್ಲಿ ಒಬ್ಬ ಹೆಸರುವಾಸಿಯಾದ ಪಿಟೀಲು ವಿದ್ವಾಂಸರಿದ್ದರು. ಅವರಿಗೂ ಅನಂತಶಾಸ್ತ್ರಿಗಳಿಗೂ ತಾಳದ ಲೆಕ್ಕಾಚಾರದ ವಿಷಯದಲ್ಲಿ ತಕರಾರು ಹುಟ್ಟಿಕೊಂಡಿತ್ತು. ಆ ವಾಗ್ವಾದ ನಡೆಯುತ್ತಿದ್ದಾಗ ಇನ್ನೊಬ್ಬ ಸ್ನೇಹಿತರು ಅಲ್ಲಿಗೆ ಬಂದರು. ಅವರೂ ಅನಂತಶಾಸ್ತ್ರಿಗಳ ಶಿಷ್ಯರು. ಅವರು ಸೆಂಟ್ರಲ್ ಕಾಲೇಜಿನಲ್ಲಿ ಫಿಸಿಕ್ಸ್ ಪಾಠ ಹೇಳುತ್ತಿದ್ದವರು. ಅವರಿಗೆ ಗಣಿತಶಾಸ್ತ್ರವೂ ಸ್ವಾಧೀನದಲ್ಲಿತ್ತು. ಇವರನ್ನು ರಾಯರು ಎಂದು ಕರೆಯೋಣ.

ರಾಯರು ಹೊಸ್ತಿಲು ದಾಟಿ ಒಳಕ್ಕೆ ಬಂದ ಕೂಡಲೆ ಶಾಸ್ತ್ರಿಗಳು ಅವರನ್ನು ಕುರಿತು "ಹದಿನೆಂಟೂವರೆಯನ್ನು ಏಳೂವರೆಯಿಂದ ಭಾಗಿಸಿದರೆ ಒಂದು ಆವರ್ತಕ್ಕೆ ಎಷ್ಟು ಬರುತ್ತದೆ?" (ಸಂಖ್ಯೆ ಬೇರೆ ಇದ್ದಿರಬಹುದು) -ಎಂದು ಕೇಳಿದರು. ರಾಯರು ಉತ್ತರ ಕ್ಷಣದಲ್ಲಿಯೇ ಜವಾಬು ಹೇಳಿದರು. ಅನಂತಶಾಸ್ತ್ರಿಗಳು "ರಾಯರೆ, ನೀವು ಹಾಗೆಯೆ ನಿಂತಿರಿ. ಕಾಲುಗಳನ್ನು ಸ್ವಲ್ಪ ಅಗಲ ಮಾಡಿ" ಎಂದು, ಆ ಪಿಟೀಲು ವಿದ್ವಾಂಸರ ಕಡೆತಿರುಗಿ "ನೀನು ಏಳೋ-ಅವರ ಕಾಲ ಕೆಳಗೆ ಮೂರು ಸಲ ದೂರು. ನಿನಗೆ ಬುದ್ಧಿ ಬರುತ್ತದೆ" ಎಂದರು.

ಇಂಥಾದ್ದು ಅನಂತಶಾಸ್ತ್ರಿಗಳ ವಿನೋದ.

ಸ್ನೇಹತತ್ಪರತೆ

ತುಂಬ ಒಳ್ಳೆಯವರು ಅನಂತಶಾಸ್ತ್ರಿಗಳು. ಬೆಣ್ಣೆಯಂಥ ಮನಸ್ಸು. ಸ್ನೇಹತತ್ಪರರು.

ಪ್ರಸಿದ್ಧರಾದ ದಕ್ಷಿಣಾಮೂರ್ತಿ ಶಾಸ್ತ್ರಿಗಳ ಮನೆಯಲ್ಲಿ ಒಂದು ಮದುವೆ ನಡೆಯಿತು. ಅದರ ಮಾರನೆಯ ದಿನ ಮಧ್ಯಾಹ್ನ ಮೂರು ನಾಲ್ಕು ಘಂಟೆಯ ವೇಳೆಗೆ ಅನಂತಶಾಸ್ತ್ರಿಗಳು ಅಲ್ಲಿಗೆ ಬಂದು ದಕ್ಷಿಣಾ ಮೂರ್ತಿಶಾಸ್ತ್ರಿಗಳನ್ನು ಕುರಿತು “ಈ ಹೊತ್ತು ಸಂಜೆ ಯಾರದು ಕಛೇರಿ?” -ಎಂದರು. ದಕ್ಷಿಣಾಮೂರ್ತಿಶಾಸ್ತ್ರಿಗಳು “ನಾನು ಅದನ್ನು ಯೋಚಿಸಿಲ್ಲಪ್ಪ. ಸಂಭಾವನೆ ಕೊಡುವುದಕ್ಕೆ ಶಕ್ತಿ ಇಲ್ಲ. ಬಿಟ್ಟಿ ಚಾಕರಿ ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ಆದದ್ದರಿಂದ ಸುಮ್ಮನೆ ಇದ್ದೇನೆ” ಎಂದರು. ಅನಂತಶಾಸ್ತ್ರಿಗಳು ಕೂಡಲೆ ದಕ್ಷಿಣಾಮೂರ್ತಿಶಾಸ್ತ್ರಿಗಳ ಎರಡು ಪಾದಗಳನ್ನೂ ಹಿಡಿದುಕೊಂಡು “ನಾನು ಬದುಕಿರುವವರೆಗೂ ನೀವು ಹೀಗೆ ಮಾತನಾಡಬಾರದು. ನಿಮಗೆ ಮಾಡುವ ಸೇವೆ ಬಿಟ್ಟಿ ಚಾಕರಿಯೆ? ಈ ವಿಷಯವನ್ನು ನನ್ನ ಏರ್ಪಾಟಿಗೆ ಬಿಡಬೇಕು” ಎಂದು ವಾದಿಸಿ ತಮ್ಮ ಸ್ನೇಹಿತರಾದ ಪಿಟೀಲು ಮೃದಂಗ ವಿದ್ವಾಂಸರಿಗೆ ಹೇಳಿಕಳುಹಿಸಿ ಆ ಮದುವೆ ಮನೆಯಲ್ಲಿ ಒಂದು ಭರ್ಜರಿ ಸಂಗೀತ ಮಾಡಿಸಿದರು. ಇದು ಅನಂತಶಾಸ್ತ್ರಿಗಳ ಮನಸ್ಸನ್ನು ತೋರಿಸುತ್ತದೆ.

೧೪

ಬೆಂಗಳೂರಿನ ಇಬ್ಬರು ಸಂಗೀತ ರಸಿಕರು

ದುಷ್ಟಬುದ್ಧಿ ಸೂರಪ್ಪ

ಸೂರಪ್ಪನವರು ಸರಕಾರದ ಮುದ್ರಣಾಲಯದಲ್ಲಿ ಗುಮಾಸ್ತರಾಗಿದ್ದರು. ಇದು ಆತನನ್ನು ಕುರಿತ ಸಂಗತಿಗಳಲ್ಲಿ ಕಡೆಯದಾಗಿ ಹೇಳಬಹುದಾದದ್ದು. ಮೊದಲನೆಯದಾಗಿ ಹೇಳಬೇಕಾದ ಮಾತು ಆತ ಸಾಧು ಸಜ್ಜನರಲ್ಲಿ ಗಣ್ಯನಾಗತಕ್ಕವನೆಂಬುದು.

ಅಕ್ಕಿಪೇಟೆಯಲ್ಲಿ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯವಿದೆಯಷ್ಟೆ? ಅದರ ಪಕ್ಕದಲ್ಲಿ ಶ್ರೀ ಲಕ್ಷ್ಮೀನೃಸಿಂಹ ಭಜನ ಮಂದಿರ. ಆ ಸಂಸ್ಥೆಯ ಆಶ್ರಯದಾತರು ಆ ಪ್ರದೇಶದಲ್ಲೇ ಇರುವ ಒಬ್ಬ ಸಾಹುಕಾರರೆಂದು ಕೇಳಿದ್ದೇನೆ. ಆ ಭಜನ ಮಂದಿರದ ಕಾರ್ಯನೇತೃ ಸೂರಪ್ಪನವರು.

ಶನಿವಾರ ಸಂಜೆ ಆ ಮಂದಿರದಿಂದ ಭಜನೆ ಮೆರವಣಿಗೆ ಹೊರಟಿದ್ದು ಚಿಕ್ಕಪೇಟೆಯ ಶ್ರೀ ಕಾಶಿ ವಿಶ್ವೇಶ್ವರ ದೇವಸ್ಥಾನದಲ್ಲಿದ್ದವರಿಗೆ ಕೇಳಿಬರುತ್ತಿತ್ತು-ಸೂರಪ್ಪನವರ ಧ್ವನಿಯ ಪ್ರಭಾವದಿಂದ.

ಸೂರಪ್ಪನವರಿಗೆ ಸಂಗೀತಶಾಸ್ತ್ರದ ಮುಖ್ಯಮುಖ್ಯಾಂಶಗಳು ಪರಿಚಯವಾಗಿದ್ದವು. ಅವರ ಕಂಠಧ್ವನಿ ಹಾಡಿ ಹಾಡಿ ಪಕ್ವವಾಗಿತ್ತು. ಒಂದು ಕೀರ್ತನೆಯನ್ನೇ ಆಗಲಿ ಶ್ಲೋಕವನ್ನೇ ಆಗಲಿ ಸೂರಪ್ಪ ಹಾಡಲಾರಂಭಿಸಿದರೆ ಎಲ್ಲರ ಕಿವಿಗಳೂ ಅಗಲವಾಗಿ ತದೇಕನಿಷ್ಠವಾಗುತ್ತಿದ್ದವು. ಅವರ ಅಕ್ಷರೋಚ್ಚಾರಣೆ ಅಷ್ಟು ಸ್ಫುಟವಾಗಿರುತ್ತಿತ್ತು. ಅವರ ರಾಗ ವಿನ್ಯಾಸವು ಪೂರ್ಣ ಭಾವಾಭಿವ್ಯಂಜಕವಾಗಿರುತ್ತಿತ್ತು.

ಸಂತರ್ಪಣೆ ಮೊದಲಾದ ಉತ್ಸವಗಳ ಕಾಲದಲ್ಲಿ ಸೂರಪ್ಪನವರು ಹಾಜರಿದ್ದರೆ ಸಮಾರಂಭಕ್ಕೆ ಕಳೆಯೇರುತ್ತಿತ್ತು. ಸೂರಪ್ಪನವರು ಬಂದವರಿಗೆ ಎಲೆ ಹಾಕುವರು, ಬಡಿಸುವರು, ಉಪಚಾರ ಹೇಳುವರು. ಮಧ್ಯೆ ಮಧ್ಯೆ ಯಾರಾದರೂ ಅವರನ್ನು ಒಂದು ಶ್ಲೋಕ ಬೇಕೆಂದು ಕೇಳುವರು. ಇಬ್ಬರು ಮೂವರು ಹಾಗೆ ಕೇಳಿದ ಮೇಲೆ ಅವರು

ರಾಮಕರ್ಣಾಮೃತದಿಂದಲೋ ಶಿವಾನಂದಲಹರಿಯಿಂದಲೋ ಒಂದು ಸೊಗಸಾದ ಶ್ಲೋಕ ಹೇಳುತ್ತಿದ್ದರು. ಊಟ ಮಾಡುತ್ತಿದ್ದವರು "ನಮಗೆ ಈ ಭಕ್ಷ್ಯಭೋಜ್ಯಗಳಿಗಿಂತ ಮಿಗಿಲಾದದ್ದು ಈ ಶ್ಲೋಕ" ಎನ್ನುವರು. ಸೂರಪ್ಪನವರು ಭಜನೋಪಯುಕ್ತವಾದ ಸ್ತೋತ್ರಗಳನ್ನೂ ಹಾಡುಗಳನ್ನೂ ಸಂಗ್ರಹಮಾಡಿ ಅಚ್ಚುಮಾಡಿಸಿದರು-ವಾಜಪೇಯದವರ ಮುದ್ರಣಾಲಯದಲ್ಲಿ ನಾನು ಅದನ್ನು ನೋಡಿದ್ದೇನೆ.

ಸೂರಪ್ಪನವರ ಹಾಡಿನ ಪ್ರಭಾವದಿಂದ ಇನ್ನೂ ಅನೇಕ ಭಜನ ಮಂದಿರಗಳು ಹುಟ್ಟಿಕೊಂಡವು.

ಸೂರಪ್ಪನವರು ದಯಾಶೀಲರು, ಯಾರು ಕಷ್ಟದಲ್ಲಿದ್ದಾರೆಂದು ತಿಳಿದರೂ, ಯಾರೂ ಅಸಹಾಯರಾಗಿದ್ದಾರೆಂದು ತಿಳಿದರೂ ಸೂರಪ್ಪನವರು ಆ ಕೂಡಲೆ ಸಿದ್ಧವಾಗಿ ಬರುತ್ತಿದ್ದರು. ಅವರಿಗೆ ಯಾವ ಕೆಲಸವೂ ತಮ್ಮ ದರ್ಜೆಗೆ ಕೆಳಗಿನದೆನಿಸುತ್ತಿರಲಿಲ್ಲ. ಕಸ ತೆಗೆಯುವುದು, ಎಂಜಲು ತೆಗೆಯುವುದು ಮೊದಲಾದ ಯಾವ ಕೆಲಸವನ್ನಾದರೂ ಸಂತೋಷದಿಂದ ಮಾಡುತ್ತಿದ್ದರು. ಅವರ ಆಕಾರ ಎತ್ತರ, ದೊಡ್ಡ ಮುಖ, ಅಗಲವಾದ ಕಣ್ಣುಗಳು. ಯಾವಾಗಲೂ ನಗುಮುಖ. ವಿನಯವೋ-ಅವರ ಹೃದಯದಾಳದಿಂದ ಹೊಮ್ಮುತ್ತಿತ್ತು. ಯಾರು ಗುರುತು ಹಿಡಿದು ಮಾತನಾಡಿಸಿದರೂ ತಲೆ ಬಗ್ಗಿಸಿ ಎರಡು ಕೈಗಳಿಂದಲೂ ಪ್ರತಿನಮಸ್ಕಾರ ಮಾಡುತ್ತಿದ್ದರು.

ನನ್ನ ಪ್ರಿಯಮಿತ್ರರಾದ ಸನ್ಮಾನ್ಯರಾದ ಡಾ ॥ ಗುಂಡಣ್ಣನವರಿಗೆ ಸೂರಪ್ಪನವರಲ್ಲಿ ತುಂಬ ಸ್ನೇಹ. ಸೂರಪ್ಪನವರನ್ನು ಕಂಡಾಗಲೆಲ್ಲ "ಏನಯ್ಯಾ ದುಷ್ಟಬುದ್ಧಿ" ಎನ್ನುವರು. ಒಂದು ಸಾರಿ ನಾನು ಗುಂಡಣ್ಣನವರನ್ನು ವಿಚಾರಿಸಿದೆ-ಆ ನಾಮಧೇಯದ ಚರಿತ್ರೆಯನ್ನು ಕುರಿತು. ಗುಂಡಣ್ಣ ಹೇಳಿದ್ದು ಹೀಗೆ:

"ಈ ಸೂರಪ್ಪ ಚಿಕ್ಕವಯಸ್ಸಿನಿಂದ ಸಂಗೀತದ ಖಯಾಲಿ ಮನುಷ್ಯ. ಹುಡುಗನಾಗಿದ್ದಾಗ ಈತನನ್ನು ಒಂದು ನಾಟಕದ ಕಂಪೆನಿಯವರು ಸೇರಿಸಿಕೊಂಡಿದ್ದರು. ಅವರು ಚಂದ್ರಹಾಸ ನಾಟಕವನ್ನು ಆಡಿದಾಗ ಅದರಲ್ಲಿ ಸೂರಪ್ಪ ದುಷ್ಟಬುದ್ಧಿಯ ಪಾತ್ರವನ್ನು ಮಾಡಿದ: ಬಹು ಚೆನ್ನಾಗಿ ಮಾಡಿದ. ಆ ನಾಟಕವನ್ನು ಪದೇ ಪದೇ ಆಡಿದರು. ಸಲ ಸಲವೂ ಸೂರಪ್ಪನದೇ ಪ್ರಶಂಸೆ. ಹೀಗೆ ದುಷ್ಟಬುದ್ಧಿಯ ಪಾತ್ರದಿಂದ ಈತ ಪ್ರಸಿದ್ಧನಾದ. ಪ್ರಪಂಚದ ಗತಿ ಚಿತ್ರವಿಚಿತ್ರವಾದದ್ದು. ಯಾವ ವಿಷಯದಲ್ಲಿಯೂ ದುಷ್ಟನಲ್ಲದ ಸೂರಪ್ಪನ ಹಣೆಗೆ ದುಷ್ಟಬುದ್ಧಿಯ ಪಟ್ಟ ಕಟ್ಟಿತು!"

ಸೂರಪ್ಪನವರು ದುಷ್ಟತನವಿಲ್ಲದ್ದು ಮಾತ್ರವಲ್ಲ, ಸೌಜನ್ಯ ತುಂಬಿದ್ದವರು. ಅವರ ಮುಖ್ಯ ನೀತಿಗುಣವೆಂದರೆ ದಯೆ, ಕನಿಕರ. ಅವರ ಕಣ್ಣುಗಳಲ್ಲಿ ಯಾವಾಗಲೂ ಕನಿಕರ ಕಾಣುತ್ತಿತ್ತು.

ದೊಡ್ಡ ಗುಣವಿರುವುದು ಉನ್ನತ ಪೀಠಸ್ಥರಲ್ಲಿ ಮಾತ್ರವಲ್ಲ, ಪ್ರಸಿದ್ಧರಾದವರಲ್ಲಿ ಮಾತ್ರವಲ್ಲ. ಅತಿ ಸಾಮಾನ್ಯರಾದವರಲ್ಲಿಯೂ ಬಡವರಲ್ಲಿಯೂ ದುರ್ಬಲರಾದವರಲ್ಲಿಯೂ ದೊಡ್ಡತನಕ್ಕೆ ಸ್ಥಾನವುಂಟು. ನಮ್ಮ ಸೂರಪ್ಪನವರ ಜೀವನ ಅದಕ್ಕೆ ನಿದರ್ಶನ.

ಸೂರಪ್ಪನವರು ಕಡೆಯವರೆಗೂ ಬಾಡಿಗೆಯ ಮನೆಯಲ್ಲಿಯೇ ಇದ್ದರು. ಅವರಿಗೆ ಮಕ್ಕಳಿರಲಿಲ್ಲವೆಂದು ತೋರುತ್ತದೆ. ಅವರು ಬಡತನವನ್ನರಿತವರು, ಆದದ್ದರಿಂದ ಬಡವರಿಗೆ ಸ್ನೇಹಿತರಾಗಿದ್ದರು.

ವಾಮನಜಯಂತಿ ವೆಂಕೋಬರಾಯರು

೧೯೦೫-೧೦ರಲ್ಲಿ ಬೆಂಗಳೂರಿನಲ್ಲಿ ರಸಿಕಗೋಷ್ಠಿಯಲ್ಲಿ ಗಣ್ಯರಾಗಿದ್ದವರು ವಾಮನ ಜಯಂತಿ ವೆಂಕೋಬರಾಯರು.

ಅವರ ಕೆಲಸವಿದ್ದದ್ದು ಸೆಕ್ರೆಟೇರಿಯಟಿನಲ್ಲಿಯೋ ಅಥವಾ ಸರಕಾರದ ಯಾವುದೋ ಇಲಾಖೆಯಲ್ಲಿಯೋ-ಸಾಮಾನ್ಯ ಗುಮಾಸ್ತರಾಗಿ.

ಆಕಾರದಲ್ಲಿ ಎತ್ತರವಿಲ್ಲ, ತೆಳುವು. ಕಂದುಬಣ್ಣ, ತೆಳುವಾದ ಮುಖ, ಅದರಲ್ಲಿ ಹೊಳಹೊಳಪಿನ ಕಣ್ಣು. ಹುಲುಸಾಗಿ ಬೆಳೆದು ತುಟಿಯ ಮೇಲಕ್ಕೆ ಬಾಗಿದ ಮೀಸೆ. ಮುಖದ ಮೇಲೆ ಸರ್ವದಾ ನಗು. ಔತ್ತರೇಯ ರೀತಿಯಲ್ಲಿ ಕೋರೆ ರುಮಾಲು ಸುತ್ತಿರುತ್ತಿದ್ದರು. ದೇಶಸ್ಥ ಬ್ರಾಹ್ಮಣರೆಂದು ತೋರುತ್ತದೆ. ಮೈ ಹಗುರವಾಗಿದ್ದದ್ದರಿಂದ ಹಾರುವುದು ಸುಲಭವಾಗಿತ್ತು.

ಸಂಗೀತ ಕಛೇರಿಯಲ್ಲಿ ಗಾಯಕನು "ವೆಂಕೋಬರಾಯರು ಬಂದಿದ್ದಾರೋ?" ಎಂದು ಮೆಲ್ಲಗೆ ವಿಚಾರಿಸುವುದು ಪದ್ಧತಿ. ತಾತ್ಪರ್ಯವೇನೆಂದರೆ, ಒಂದು ಕಡೆ ಸಂತೋಷ, ಒಂದು ಕಡೆ ಭಯ. ತಮ್ಮ ಮೆಹನತ್ತನ್ನು ಆದರಿಸಲು ತಕ್ಕ ವಿದ್ವದ್ಯೋಗ್ಯತೆಯುಳ್ಳ ರಸಿಕರು ಇದ್ದಾರಲ್ಲ ಎಂಬ ಸಂತೋಷ; ತಾಳ ತಪ್ಪಿದರೆ ಬಲಿ ಹಾಕುತ್ತಾರಲ್ಲ ಎಂಬ ಭಯ.

ವೆಂಕೋಬರಾಯರನ್ನು ಕಂಡೊಡನೆಯೇ ಗಾಯಕನು ಅವರನ್ನು ಕರೆದು ತನ್ನೆದುರಿಗೆ ಕುಳ್ಳಿರಿಸಿಕೊಳ್ಳುವನು. ಸಾಮಾನ್ಯವಾದ ಆಲಾಪನೆ, ರಾಗ ವಿನ್ಯಾಸ ನಡೆಯುತ್ತಿದ್ದ ಕಾಲದಲ್ಲಿ ರಾಯರು ಕುತೂಹಲದಿಂದ ಕೇಳುವರು, "ಭಲಾ" ಎನ್ನುವರು, ತಲೆ ತೂಗುವರು. ಗಾಯಕನು ಸ್ವರಸಂಯೋಜನೆ ಉಪಕ್ರಮಿಸಿದಾಗ ರಾಯರಿಗೆ ಕಾವೇರುವುದು, ಮೊದಲು ಒಂದು ಕೈ ಬೆರಳುಗಳಿಂದ ತಾಳಗತಿ ತೋರಿಸುವರು. ಬರುಬರುತ್ತ ಎರಡು ಕೈಗಳೂ ಸೇರುವುವು ಚಿಟಿಕಿಯ ತಾಳದಲ್ಲಿ. ಪಲ್ಲವಿ ಪ್ರಾರಂಭವಾದ ಮೇಲೆ ಕಿರು ಬೆರಳಿಗೆ ಕಿರು ಬೆರಳು, ನಡು ಬೆರಳಿಗೆ ನಡು ಬೆರಳು, ತರ್ಜನಿಗೆ ತರ್ಜನಿ-ಈ ರೀತಿಯಾಗಿ ಸೇರಿಕೊಂಡು "ಥಾ ಥಾ ಥಾ" ಎಂದು ಹೊರಡುವುದು. ಆವೇಶ ಬೆಳೆದಂತೆಲ್ಲ ರಾಯರ ಮೈಯೊಟ್ಟು ಹಾರುವುದು. ಅವರ ಬಾಯಲ್ಲಿ "ಥಾ ತಕಿಟ ಥಾ." "ಝೋಂತಕ ಝೋಂಕ ಝೋಂ" "ತಕಿಟ ತಕಿಟ ಝೋಂ" -ಈ ರೀತಿಯಲ್ಲಿ ಶೊಲ್ಲುಕಟ್ಟುಗಳು ಹೊರಡುವುವು. ರಾಯರ ಆ ಪಕ್ಕ ಈ ಪಕ್ಕ ಕುಳಿತಿದ್ದವರು ಸ್ಥಳ ಬಿಡುವರು. ಒಂದು ಅರ್ಧವೃತ್ತಾಕಾರದಲ್ಲಿ ರಾಯರ

ದೇಹ ಚಲಿಸತೊಡಗುವುದು- ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಸಂಚರಿಸತೊಡಗುವರು. ರಾಯರು ಎಲ್ಲವನ್ನೂ ಮರೆತು ತಮ್ಮನ್ನೂ ಮರೆತು ಗಾಯಕನಿಗೂ ಮೃದಂಗ ವಿದ್ವಾಂಸನಿಗೂ ತಾಳದ ತೀವ್ರಗತಿ ಚಿತ್ರಗತಿ ಅತಿ ವಿಚಿತ್ರಗತಿಗಳನ್ನು ತೋರಿಸುವರು. ಮೃದಂಗದಾತನು ಬೆರಗಾಗಿ ಬೆಪ್ಪನಾಗುವನು. ಸಭಿಕರು ಚಕಿತರಾಗುವರು.

ತಾಳಾವೇಶ ಇಲ್ಲದಿದ್ದಾಗ ವೆಂಕೋಬರಾಯರು ಹಸುಮಗು, ವಿನಯಶೀಲರು, ಪ್ರೀತಿಯಿಂದ ಮಾತನಾಡುವರು- "ಸ್ನೇಹವೆಂದರೆ ಇದು" ಎನಿಸುವಂತೆ ನಡೆಯುವರು.

ತಾವೂ ಭಗವಂತನಿಗೆ ಒಂದು ಸಂಗೀತ ಸೇವೆ ನಡಸಬೇಕೆಂದು ಅವರಿಗೆ ಆಸೆ. ರಾಮಜಯಂತಿ, ಕೃಷ್ಣಜಯಂತಿಗಳನ್ನು ನಡಸಲು ಸಾವಿರಾರು ಮಂದಿ ಇದ್ದಾರೆ. ನೃಸಿಂಹಜಯಂತಿ ನಡಸುವವರೂ ಇದ್ದಾರೆ. ಅಂಥ ಕಾಲದಲ್ಲಿ ಒಳ್ಳೊಳ್ಳೆಯ ಸಂಗೀತಗಾರರು ಬೇರೆ ಕಡೆ ಹಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ವಾಮನಜಯಂತಿ ಬಹುಜನ ಆಚರಿಸುವ ಉತ್ಸವವಲ್ಲ. ಆಗ ಸಂಗೀತಗಾರರೂ ಬಿಡುವಾಗಿರುತ್ತಾರೆ. ಬಡವರಾದ ತಮಗೆ ಅದೇ ಸರಿಯಾದ ಕಾಲವೆಂದು ವೆಂಕೋಬರಾಯರು ವಾಮನಜಯಂತಿಯನ್ನು ಹಿಡಿದರು. ವಾಮನಜಯಂತಿ ವರ್ಷ ವರ್ಷವೂ ಭಾದ್ರಪದ ಮಾಸದಲ್ಲಿ ಬರುತ್ತದೆ. ಆ ಕಾಲದ ಪ್ರಸಿದ್ಧ ವಿದ್ವಾಂಸರು ವೆಂಕೋಬರಾಯರಿಗೆ ಸ್ನೇಹಿತರಾಗಿದ್ದದ್ದರಿಂದ ಅವರು ಅಲ್ಲಿ ಸಂತೋಷದಿಂದ ಹಾಡುತ್ತಿದ್ದರು.

ಒಂದು ವರ್ಷ ವಾಮನ ಜಯಂತಿಯಲ್ಲಿ ವಾಸುದೇವಾಚಾರ್ಯರ ಸಂಗೀತ. ಆ ಹೊತ್ತು ಅವರು ಒಂದು ಶ್ಲೋಕವನ್ನು ಹಾಡಿದರು:

> ಅಜಿನದಂಡ ಕಮಂಡಲು ಮೇಖಲಾ
> ರುಚಿರಪಾವನ ವಾಮನಮೂರ್ತಯೇ ।
> ಮಿತಜಗತ್ತ್ರಿತಯಾಯ ಚಿತಾರಯೇ
> ನಿಗಮವಾಕ್ಪಟವೇ ವಟವೇ ನಮಃ ॥ [1]

ಆಚಾರ್ಯರು ಸಾವೇರಿ ರಾಗದಲ್ಲಿ ವಿಳಂಬಕಾಲದಲ್ಲಿ ಪ್ರಾರಂಭ ಮಾಡಿದರೆಂದು ನನ್ನ ಜ್ಞಾಪಕ.

ಅ-ಜಿ-ನ ದಂऽऽ-ಡ

ವೆಂಕೋಬರಾಯರು ಇದಕ್ಕೆ ಅಕ್ಷರ ತಾಳ ಪ್ರಾರಂಭಿಸಿದರು. ಆಚಾರ್ಯರಿಗೆ ರೋಮಾಂಚನವಾಯಿತು. ಆ ಸಭೆಯಲ್ಲಿದ್ದ ದಕ್ಷಿಣಾಮೂರ್ತಿಶಾಸ್ತ್ರಿಗಳು, ಅನಂತಶಾಸ್ತ್ರಿಗಳು ಮೊದಲಾದ ದಿಗ್ದಂತಿಗಳು ಅಹಾ, ಆಹಾ-ಎನ್ನುತ್ತಿದ್ದರು.

ವೆಂಕೋಬರಾಯರಿಗೆ ಬರುತ್ತಿದ್ದ ಸಂಬಳ ಬಹುಶಃ ಐವತ್ತು ಅರುವತ್ತು ರೂಪಾಯಿಗಳಷ್ಟಿರಬಹುದು. ಅವರ ಅಂತರಂಗದಲ್ಲಿದ್ದ ಉಲ್ಲಾಸ ಕೋಟಿ ಕೋಟಿ ರೂಪಾಯಿ ಬಾಳ ತಕ್ಕದ್ದು. ಅದೇ ಬಡವರ ಭಾಗ್ಯ.

೧೫

ಗಾಯಕ ಕೆಂಪೇಗೌಡರು

ಇವರ ಪರಿಚಯ ನನಗಿದ್ದದ್ದು ಬಹು ಕೊಂಚ-ಸುಮಾರು ಎರಡು ಮೂರು ಘಂಟೆಗಳ ಕಾಲದ್ದು.

ಕೆಂಪೇಗೌಡರು ಕೊಯಮತ್ತೂರು ಪ್ರಾಂತ್ಯದವರು. ಅವರಿಗೆ ಸಂಗೀತದ ಹುಚ್ಚು ಹೇಗೆ ಬಂತೋ ಹೇಳುವವರಿಲ್ಲ. ಅವರು ಬಾಲ್ಯ ಕಳೆದ ಮೇಲೆ ತಂಜಾವೂರು ಜಿಲ್ಲೆಯ ತಿರುವಾಯೂರಿನಲ್ಲಿ ಪ್ರಸಿದ್ಧರಾಗಿದ್ದ ಪಟ್ನಂ ಸುಬ್ರಹ್ಮಣ್ಯಯ್ಯರ್‌ರವರಲ್ಲಿ ಶಿಷ್ಯರಾಗಿದ್ದರು. ಅಲ್ಲಿ ಮೈಸೂರಿನ ವಿದ್ವಾನ್ ವಾಸುದೇವಾಚಾರ್ಯರ ಸಹಪಾಠಿಗಳಾಗಿದ್ದರು. ಅವರ ಕಡೆಕಡೆಯ ದಿನಗಳಲ್ಲಿ ಬೆಂಗಳೂರು-ಬನ್ನೇರುಘಟ್ಟ ದಾರಿಯಲ್ಲಿರುವ ಜಿಗಣಿ ಎಂಬ ಗ್ರಾಮದಲ್ಲಿ ರಾಮೇಗೌಡರೆಂಬವರ ಮನೆಯಲ್ಲಿ ಇದ್ದರೆಂದು ಕೇಳಿದ್ದೇನೆ.

ಈಗ್ಗೆ ಅರುವತ್ತು ವರ್ಷಗಳ ಹಿಂದೆ ನನ್ನ ಹಿರಿಯ ಬಂಧುಗಳೊಬ್ಬರು ಎಂ.ವೆಂಕಪ್ಪಯ್ಯ ಎಂಬುವರು ಬೆಂಗಳೂರಿನಲ್ಲಿದ್ದರು. ಅವರು ದಂಡಿನ ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯರ್‌ರವರ ಹೈಸ್ಕೂಲಿನಲ್ಲಿ ಇಂಗ್ಲಿಷ್ ಮೇಷ್ಟರಾಗಿದ್ದರು. ಅವರಿಗೆ ಸಂಗೀತ ಸಾಹಿತ್ಯಗಳಲ್ಲಿ ಸ್ವಾಭಾವಿಕವಾದ ಕುತೂಹಲ. ಇಂಗ್ಲಿಷಿನಲ್ಲಿ ಗೋಲ್ಡ್ ಸ್ಮಿತ್, ಅಡಿಸನ್-ಇವರ ಪ್ರಬಂಧಗಳು ಅವರಿಗೆ ಪ್ರಿಯವಾಗಿದ್ದವು. ಅವರ ಗ್ರಂಥಗಳ ಅನೇಕ ಭಾಗಗಳನ್ನು ನೆನಪಿನಿಂದ ಹೇಳುತ್ತಿದ್ದರು. ಹಾಗೇಯೇ ಅವರ ಷೇಕ್‌ಸ್ಪಿಯರ್ ಉತ್ಸಾಹ. ಆ ಮಹಾಕವಿಯ ನಾಟಕಗಳನ್ನು ನಾಲ್ಕಾರು ಸಲ ಓದಿದ್ದರು. ಇದಕ್ಕೆ ಸರಿತೂಗುವಷ್ಟು ಉತ್ಸಾಹ ಅವರಿಗಿದ್ದದ್ದು ಸಂಗೀತದ ವಿಷಯದಲ್ಲಿ. ಎಲ್ಲಿ ಒಳ್ಳೆಯ ಸಂಗೀತವೆಂದರೂ ಹೋಗುವರು-ನನ್ನನ್ನೂ ಜೊತೆಗೆ ಕರೆದುಕೊಂಡು ಹೋಗುವರು. ಅಷ್ಟೇ ಅಲ್ಲದೆ ಅವರಿಗೆ ದಕ್ಷಿಣಾಮೂರ್ತಿಶಾಸ್ತ್ರಿಗಳವರಲ್ಲಿ ಕ್ರಮವಾಗಿ ಸಂಗೀತ ಪಾಠವಾಗಿತ್ತು. ಒಳ್ಳೆಯ ಕಂಠಶುದ್ಧಿ ಇದ್ದದ್ದರಿಂದ ಅವರ ಹಾಡಿಕೆ ಶ್ರಾವ್ಯವಾಗಿತ್ತು. ಅವರು ಸಭೆಗಳಲ್ಲಿ ಹಾಡುತ್ತಿದ್ದವರಲ್ಲ. ಆತ್ಮಸಂತೋಷಕ್ಕಾಗಿ, ಆತ್ಮೀಯರ ಸಂತೋಷಕ್ಕಾಗಿ ಸಣ್ಣ ಕೊಠಡಿಗಳಲ್ಲಿ ತಮ್ಮಷ್ಟಕ್ಕೆ ತಾವೇ, ಪಕ್ಕವಾದ್ಯಗಳೊಂದೂ ಇಲ್ಲದೆ, ಹಾಡುತ್ತಿದ್ದರು. ಅವರು ವಾಸವಿದ್ದದ್ದು ಚಿಕ್ಕಪೇಟೆಯ ಬೇತಿಂಗ್‌ಘಾಟ್ ಗಲ್ಲಿಯಲ್ಲಿ-ವಾಜಪೇಯಂ ಮನೆತನಕ್ಕೆ

ಸೇರಿದ್ದ ಒಂದಾನೊಂದು ಕಟ್ಟಡದಲ್ಲಿ. ಆ ಕಟ್ಟಡದಲ್ಲಿ ಐದಾರು ಕುಟುಂಬಗಳು ವಾಸವಿದ್ದಂತೆ ನನ್ನ ಜ್ಞಾಪಕ. ಅದರ ಪೈಕಿ ವೆಂಕಪ್ಪಯ್ಯನವರದೂ ಒಂದು.

ವೆಂಕಪ್ಪಯ್ಯನವರಿಗೆ ಮಕ್ಕಳಿರಲಿಲ್ಲ. ಎರಡು ಮೂರು ಆಗಿ ಹೋಗಿದ್ದವು. ನನ್ನ ಹೆಂಡತಿ ಅವರ ಸೋದರ ಸೊಸೆಯಾದದ್ದರಿಂದ ಅವರಿಗೆ ನನ್ನಲ್ಲಿ ಅತಿಶಯವಾದ ಮಮತೆ. ಬೇಸಿಗೆಯಲ್ಲಿ, ಆಗಾಗ ನಾನು ಅವರ ಜೊತೆಯಲ್ಲಿ ಊಟ ಮಾಡಬೇಕು, ಅವರೊಡನೆ ಕಾಲ ಕಳೆಯಬೇಕು. ಒಂದಾನೊಂದು ದಿನ ಹಾಗೆ ನಾನು ಅವರೊಡನೆ ಇದ್ದೇನೆ. ರಾತ್ರಿ ಮಾಳಿಗೆಯ ಮೇಲೆ ಹಾಸಿಗೆ ಹಾಸಿಕೊಂಡು ಸೆಕೆಯಾಗಿದ್ದದ್ದರಿಂದ ಏನೋ ಹರಟುತ್ತ ಕುಳಿತಿದ್ದೇನೆ. ಮನೆಯ ತಲೆಬಾಗಿಲ ಹೊರಗಡೆಯಿಂದ ಯಾರೋ ಬಾಗಿಲು ತಟ್ಟಿದಂತೆ ಸದ್ದಾಯಿತು. ವೆಂಕಪ್ಪಯ್ಯನವರು "ಯಾರದು?" ಎಂದರು. ಪುನಃ ಬಾಗಿಲು ತಟ್ಟಿದರು. "ಯಾರಯ್ಯಾ ಅದು?" ಮತ್ತೆ ಬಾಗಿಲು ತಟ್ಟಿದರು. ವೆಂಕಪ್ಪಯ್ಯ ಕೆಳಗಿಳಿದು ತಲೆ ಬಾಗಿಲು ತೆಗೆದರು. ಅಲ್ಲಿದ್ದವರು ಕೆಂಪೇಗೌಡರು. ಈತನನ್ನು ನೋಡುತ್ತಲೇ (ತಮಿಳಿನಲ್ಲಿ) "ವೆಂಕಪ್ಪಾ, ಕುಡು ಎಟ್ಟಣಾ" (ಎಂಟಾಣೆ ಕೊಡು) ಎಂದರು. ವೆಂಕಪ್ಪಯ್ಯ ತಮಿಳಿನಲ್ಲಿಯೇ ಕೇಳಿದರು:

ವೆಂಕಪ್ಪಯ್ಯ: "ಯಾಕೆ ಎಂಟಾಣೆ?"

ಕೆಂ: "ತಿಳಿಯದೋ ನಿನಗೆ? ನನ್ನನ್ನು ಹೊಸದಾಗಿ ನೋಡುತ್ತಿದ್ದೀಯೋ ಈ ಹೊತ್ತು?"

ವೆಂ:(ನಕ್ಕು) "ಸಂಗೀತ ಯಾವಾಗಲಯ್ಯಾ ಕೇಳುವುದು?"

ಕೆಂ: "ಸಂಗೀತಕ್ಕೇನು ಕಷ್ಟ? ಎಂಟಾಣೆ ಕೊಡು. ಹೋಗಿ ಮತ್ತೆ ಬರುತ್ತೇನೆ."

ವೆಂ: "ಎಂಟಾಣೆಗೇನು ಕಷ್ಟ, ತೆಗೆದುಕೋ. ಹಾಡಿನ ಮೇಲೆ ಇನ್ನೂ ಬೇಕಾದ್ದು ಕೊಟ್ಟೇನು."

ಹಾಗೆ ಹೇಳಿ ತಮ್ಮ ನಶ್ಯದ ಡಬ್ಬಿಯಿಂದ ಎರಡು ಪಾವಲಿ ತೆಗೆದು ಆತನ ಕೈಯಲ್ಲಿಟ್ಟರು.

ಆಮೇಲೆ ನಾವಿಬ್ಬರೂ ನಮ್ಮ ಹಾಸಿಗೆಗಳ ಮೇಲೆ ಅರ್ಧಮರ್ಧ ನಿರೀಕ್ಷಿಸಿಕೊಂಡು ಕುಳಿತೆವು. ಅರ್ಧ ಘಂಟೆಯಾದ ಮೇಲೆ ಕೆಂಪೇಗೌಡರು ಬಂದರು. ನಮ್ಮಿಬ್ಬರ ನಡುವೆ ಕುಳಿತು ಒಂದೆರಡು ನಿಮಿಷ ಆ ಮಾತು ಈ ಮಾತು ಆಡಿ "ಯಾವ ರಾಗ ಬೇಕು?" ಎಂದರು. ವೆಂಕಪ್ಪಯ್ಯ "ನಿನ್ನ ಖುಷಿ" ಎಂದರು. ಕೆಂಪೇಗೌಡರು ಒಂದು ಕ್ಷಣ ಯೋಚಿಸಿ ಆನಂದ ಭೈರವಿ ಆಲಾಪನೆಗೆ ಪ್ರಾರಂಭ ಮಾಡಿದರು. ಆಗ ಘಂಟೆ ರಾತ್ರಿ ಸುಮಾರು ಒಂಭತ್ತೂವರೆ. ಸೊಗಸಾದ ಬೆಳದಿಂಗಳು. ಆತ ರಾಗಾಲಾಪನೆ ಮಾಡಿ

“ಹಿಮಾಚಲತನಯ ಬ್ರೋಚುಟಕಿದಿ ಸಮಯಮು” ಎಂಬ ಕೃತಿಯನ್ನು ಹಾಡಿ ಮುಗಿಸಿದ. ಅಲ್ಲಿಯವರೆಗೂ ವೆಂಕಪ್ಪಯ್ಯ, ನಾನು ಈ ಲೋಕದಲ್ಲಿದ್ದಂತಿರಲಿಲ್ಲ. ಹೊತ್ತಿನ ಯೋಚನೆ ನಮಗೆ ಬರಲಿಲ್ಲ. ಮುಗಿದಾಗ ಗಡಿಯಾರ ನೋಡಿದರೆ ಹನ್ನೆರಡು ಕಳೆದುಹೋಗಿತ್ತು. ಆ ಆನಂದ ಭೈರವಿ ಕೇಳಿದ ಮೇಲೆ ಪುನಃ ಅಂಥದನ್ನು ನಾನು ಕೇಳಿಯೇನೆಂಬ ನಿರೀಕ್ಷೆಯೇ ಇಲ್ಲ. ಎಷ್ಟೋ ಆನಂದ ಭೈರವಿಗಳನ್ನು ಕೇಳಿದ್ದೇನೆ. ಬಹಳ ಒಳ್ಳೆಯವುಗಳನ್ನು ಕೇಳಿದ್ದೇನೆ. ಕೆಂಪೇಗೌಡರ ವಾಣಿಯೇ ಬೇರೆ.

ಎರಡು ಮೂರು ವರ್ಷಗಳಾದ ಮೇಲೆ ಒಂದು ದಿನ ಬೆಳಗ್ಗೆ ಸುಮಾರು ಹತ್ತು ಘಂಟೆಯಲ್ಲಿ ಯಾರೋ ಒಬ್ಬರು “ಸಿದ್ದಿಕಟ್ಟೆಯ ರಸ್ತೆಯಲ್ಲಿ ಕೆಂಪೇಗೌಡರು ಹಾಡುತ್ತಿದ್ದಾರೆ” ಎಂದು ಇನ್ನು ಯಾರಿಗೋ ಹೇಳಿದ್ದು ನನ್ನ ಕಿವಿಗೆ ಬಿತ್ತು. ನಾನು “ಎಲ್ಲಿ?ಯಾವಾಗ?” ಎಂದು ಕೇಳಿದೆ. “ಬೆಂಕಿನವಾಬರ ಬೀದಿಯಲ್ಲೆಲ್ಲೋ” ಎಂದು ಹೇಳಿ ಅವರು ಹೊರಟು ಹೋದರು. ನಾನು ಬೆಂಕಿ ನವಾಬರ ಬೀದಿಗೆ ಹೋದೆ. ಅಷ್ಟು ಹೊತ್ತಿಗೆ ಗೌಡರು ಅಲ್ಲಿಂದ ಹೊರಟುಹೋಗಿದ್ದರು. ಅದರ ಕಥೆ ಹೀಗೆ: ಕೆಂಪೇಗೌಡರು ಅಂದು ಬೆಳಗ್ಗೆ ಒಂಭತ್ತು ಘಂಟೆ ಸುಮಾರಿನಲ್ಲಿ ಅಲ್ಲಿ ಒಂದು ಅಂಗಡಿಗೆ ಹೋಗಿ ಏನೋ ಕೇಳಿದರಂತೆ. ಅಂಗಡಿಯಾತ ಅವರ ಸ್ನೇಹಿತ. ಆತ ಹೇಳಿದನಂತೆ “ಕೆಂಪೇಗೌಡರೆ, ನಿಮ್ಮ ಪ್ರಸಿದ್ಧಿ ಜೋರಾಗಿದೆ, ನಿಮ್ಮ ಹಾಡಿಕೆಯನ್ನು ಎಲ್ಲರೂ ಕೊಂಡಾಡುತ್ತಾರೆ. ಅದನ್ನು ಕೇಳುವ ಯೋಗ ನನ್ನ ಹಣೆಯಲ್ಲಿ ಬರೆದಿಲ್ಲ.”

ಗೌಡರು: ಅದು ಯಾಕೆ?”

ಅಂಗಡಿಯಾತ: “ನೋಡಿ-ಸಂಗೀತಸಭೆಗಳೆಲ್ಲ ಆಗುವುದು ಸಾಯಂಕಾಲ. ಅದೇ ನನ್ನ ಗಿರಾಕಿಗಳ ಹೊತ್ತು. ಆಗ ನಾನು ಇಲ್ಲಿ ಇಲ್ಲದೆ ಹೋದರೆ ನನ್ನ ಜೀವನ ಹೇಗೆ?”

ಗೌಡರು: “ನೀನು ಯಾಕಯ್ಯ ಅಲ್ಲಿಗೆ ಬರಬೇಕು? ನಾನೇ ಇಲ್ಲಿಗೆ ಬಂದಿದ್ದೇನಲ್ಲ, ಏನು ಬೇಕು ಕೇಳು?”

ಅಂಗಡಿಯಾತ: “ನೀವು ಏನು ಹಾಡಿದರೂ ಅದು ನಮ್ಮ ಭಾಗ್ಯ.”

ಗೌಡರು ಅಂಗಡಿಯಲ್ಲಿದ್ದ ಒಂದು ಧಾನ್ಯದ ಮೂಟೆಯ ಮೇಲೆ ಕುಳಿತು ಸಾವೇರಿ ರಾಗದಲ್ಲಿ ಹಾಡಿದರಂತೆ. ಬೀದಿಯಲ್ಲಿ ಜನ ಗುಂಪು ಸೇರಿದರು. ಈ ಕೊನೆಯಿಂದ ಆ ಕೊನೆಯವರೆಗೂ ಸ್ತಬ್ದರಾಗಿ ನಿಂತು ಮೋಹಿತರಾದರು-ಸುಮಾರು ಒಂದೂವರೆ ಘಂಟೆಯ ಕಾಲ. ಆ ಹೊತ್ತು ನಾನು ದುರದೃಷ್ಟಶಾಲಿ ಎಂದುಕೊಂಡೆ. ಅವರ ಧ್ವನಿಯನ್ನು ಕೇಳುವ ಯೋಗ ನನಗೆ ದೊರೆಯಲಿಲ್ಲ.

ಅವರ ಶಿಷ್ಯರೊಬ್ಬರು ರಾಮಸ್ವಾಮಿ ಪಿಳ್ಳೈ ಎಂಬುವರು ನನಗೆ ಸ್ನೇಹಿತರಾದರು. ಅವರು ಪಿ.ಡಬ್ಲ್ಯು. ಇಲಾಖೆಯಲ್ಲಿ ಸಣ್ಣ ಗುಮಾಸ್ತೆಯಾಗಿದ್ದರು. ಅವರ ಶಾರೀರ ಕೆಂಪೇಗೌಡರ ಶಾರೀರದಂತೆ ದೊಡ್ಡ ಮಟ್ಟದ್ದಲ್ಲ. ಸಣ್ಣ ಮಟ್ಟದಲ್ಲಿ ಅದು ಕೋಮಲವಾಗಿತ್ತು. ನಾನು ಲತಾಂಗಿ ರಾಗವನ್ನು ಮೊದಲು ಕೇಳಿದ್ದು ಆತನ ಬಾಯಿಂದ. ಹಂಸ ಧ್ವನಿಯನ್ನೂ ಆತ ಹಾಡಿ ನನ್ನ ಕೃತಜ್ಞತೆಯನ್ನು ಸಂಪಾದಿಸಿಕೊಂಡ.

ಪಲ್ಲವಿ

ಒಂದಾನೊಂದು ದಿನ ಕೆಂಪೇಗೌಡರೊಡನೆ ಸ್ನೇಹಿತರು ಮಾತನಾಡುತ್ತಿದ್ದಾಗ ಸಂಗೀತದಲ್ಲಿ ಪಲ್ಲವಿ ಹಾಡಿಕೆಯ ಪ್ರಸ್ತಾಪ ಬಂತು. ದಕ್ಷಿಣ ದೇಶದ ಯಾರೋ ಒಬ್ಬ ವಿದ್ವಾಂಸರು ಪಲ್ಲವಿ ಹಾಡಿದ್ದನ್ನು ಕುರಿತು ಒಬ್ಬರು ಪ್ರಶಂಸೆ ಮಾಡಿದರು. ಆಗ ಕೆಂಪೇಗೌಡರು ಆ ವಿದ್ವಾಂಸರ ಪಾಂಡಿತ್ಯ-ಸಾಧನೆಗಳ ವಿಷಯದಲ್ಲಿ ಉದಾರತೆಯಿಂದ ಮಾತನಾಡಿದರು. ಮತ್ತು ಪಲ್ಲವಿಯ ಕ್ರಮವನ್ನು ಕೊಂಚ ವಿಸ್ತಾರವಾಗಿ ತಿಳಿಯಪಡಿಸಿದರು. ಪಲ್ಲವಿಯಲ್ಲಿ ಮುಖ್ಯವಾದದ್ದು ಸಾಹಿತ್ಯವಲ್ಲ. ಈ ಮಾತುಗಳಲ್ಲಿ ಮಹಾದೊಡ್ಡ ಭಾವವೇನೂ ಇರಬೇಕಾಗಿಲ್ಲ. ತಾಳಕ್ಕೆ ಅಕ್ಷರ ಹೊಂದಬೇಕು. ವಿದ್ವಾಂಸನು ಅಕ್ಷರಗಳಿಗೆ ತಾಳವನ್ನು ಹೊಂದಿಸಿಕೊಳ್ಳುತ್ತಾನೆ. ಪಲ್ಲವಿಯ ವಿಷಯ ಏನು ಬೇಕಾದರೂ ಆಗಬಹುದು. ಉದಾಹರಣೆ:

(ತೋಡಿ ರಾಗ:)
ತ-ರೀ-ಕೆ-ರೇ
ಕೆ-ರೇ-ಏ-ರೀ
ಏ-ರೀ-ಮೇ-ಲೆ
ಕು-ರೀ-ಮ-ರೀ
ಬ-ರು-ತಿ-ದೆ

ಅಲ್ಲಿ ಕುಳಿತಿದ್ದಂತೆಯೇ ಆ ಕ್ಷಣವೇ ಇದನ್ನು ರಚನೆ ಮಾಡಿ ಸುಮಾರು ಒಂದು ಘಂಟೆ ಹಾಡಿದರು ಕೆಂಪೇಗೌಡರು.

ಕೆಂಪೇಗೌಡರ ವಿದ್ವತ್ತೂ ಗಾನಪ್ರತಿಭೆಯೂ ಪ್ರಶಂಸೆಗೆ ತಕ್ಕವು. ಅವೆರಡಕ್ಕಿಂತ ಮಿಗಿಲಾದದ್ದು ಅವರ ಶಾರೀರದ ಮಾಧುರ್ಯ. ಯಾವ ಸ್ಥಾಯಿಯಲ್ಲಿ ಹಾಡಲಿ, ಕೊಂಚವೂ ಪ್ರಯಾಸ ಕಾಣದೆ ಹರಿದುಬರುತ್ತಿತ್ತು ಅವರ ನಾದಧಾರೆ. ಚಿನ್ನದ

ಉಂಡೆಯಿಂದ ಅಕ್ಕಸಾಲಿಗನು ತಂತಿ ಎಳೆದಾಗ ಹೇಗೆ ಬರುತ್ತದೋ ಹಾಗೆ ಕಾಂತಿಗೂಡಿ ಬರುತ್ತಿತ್ತು ಆತನ ಕಂಠದಿಂದ ಗಾನಧಾರೆ.

ಅನುಬಂಧ

[ಮೇಲಣ ಲೇಖನವು "ಸುಧಾ" ವಾರಪತ್ರಿಕೆಯಲ್ಲಿ ಪ್ರಕಟವಾದ ಮೇಲೆ ಪ್ರಸಿದ್ಧ ಜನನಾಯಕರಾದ ಶ್ರೀಮಾನ್ ಎಚ್.ಕೆ.ವೀರಣ್ಣಗೌಡರವರು ಕೆಂಪೇಗೌಡರನ್ನು ಕುರಿತು ಹಲವು ವಿವರಗಳನ್ನು ತಿಳಿಸಿ ನನಗೆ ಪತ್ರ ಬರೆದು ಉಪಕಾರಮಾಡಿದರು. ಶ್ರೀಮಾನ್ ವೀರಣ್ಣಗೌಡರು ಕೆಂಪೇಗೌಡರ ಪರಿಚಯಭಾಗ್ಯ ಪಡೆದಿದ್ದವರು. ಅವರ ಪತ್ರವನ್ನು ಇಲ್ಲಿ ಕೃತಜ್ಞತಾಪೂರ್ವಕವಾಗಿ ಉದ್ಧರಿಸಿದ್ದೇನೆ.]

". . . ಶ್ರೀ ಕೆಂಪೇಗೌಡರು ಕೊಯಮತ್ತೂರು ಕಡೆಯವರಲ್ಲ; ಚನ್ನಪಟ್ಟಣ ತಾಲ್ಲೂಕು ನಾಗವಾರ ಗ್ರಾಮದವರು. ಇವರಿಗೆ ಲಗ್ನವಾಗಿ ಒಂದು ಗಂಡುಮಗು ಸಹ ಆಗಿತ್ತೆಂದು ಕೇಳಿದ್ದೇನೆ. ಸ್ವಲ್ಪಕಾಲದಲ್ಲಿಯೇ ಹೆಂಡತಿ, ಮಗು ತೀರಿಹೋದದ್ದರಿಂದ ಇವರು ವೈರಾಗ್ಯಹೊಂದಿ, ಸಂಗೀತದ ಗೀಳಿದ್ದದ್ದರಿಂದ ಸ್ವಸ್ಥಳ ಬಿಟ್ಟು ಗುರಿಯಿಲ್ಲದೆ ಹೊರಹೊರಟರು. ಇವರ ಸಂಗೀತ ಗುರುಗಳಾರೆಂಬುದು ತಿಳಿಯದು. ಆದರೂ ಕೊಯಮತ್ತೂರು ಕಡೆ ಬಹಳ ಕಾಲ ಇದ್ದು ಸಂಗೀತ ವಿದ್ಯಾಪಾರಂಗತರಾದರೆಂದು ಕೇಳಿದ್ದೇನೆ. ಆಗ ಕೊಳ್ಳೆಗಾಲದಲ್ಲಿದ್ದ ಒಬ್ಬ ವೇಶ್ಯೆಯ ಬಳಿ ಇವರ ಸಂಗೀತ ವಿದ್ಯಾಭ್ಯಾಸ ನಡೆಯಿತೆಂದು ಕೇಳಿದ್ದೇನೆ.

"ಶ್ರೀ ಕೆಂಪೇಗೌಡರು ಮೈಸೂರಿಗೆ ಹಿಂತಿರುಗುವ ವೇಳೆಗೆ ಇವರ ಕೀರ್ತಿ ಹರಡಿತ್ತು. ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಆಸ್ಥಾನದಲ್ಲಿ ಇವರಿಗೆ ಸ್ಥಾನ ಲಭ್ಯವಾಗಿತ್ತು. ಮಹಾರಾಜರು ಇವರ ಗಾಯನಕ್ಕೆ ಮನಸೋತು ಯಥೇಷ್ಟವಾಗಿ ಪಾರಿತೋಷಕಗಳನ್ನೂ ಬಹುಮಾನಗಳನ್ನೂ ಆಗಿಂದಾಗ್ಗೆ ದಯಪಾಲಿಸುತ್ತಿದ್ದರೆಂದು ಶ್ರೀ ಕೆಂಪೇಗೌಡರೇ ನನಗೆ ಒಮ್ಮೆ ಹೇಳಿದರು. ಆದರೆ ಆಗ ಇವರ ಕುಡಿತದ ಚಪಲ ಅತಿಯಾಗಿತ್ತಂತೆ. ಒಂದಾನೊಂದು ದಿನ ಇವರು ಪಾನಮಾಡಿಯೇ ಮಹಾರಾಜರ ಸನ್ನಿಧಾನದಲ್ಲಿ ಹಾಡಿದರಂತೆ. ಅಂತಹ ಸಮಯ ಕಾದಿದ್ದ ಇತರ ರಾಜಾಸ್ಥಾನದ ಗಾಯನ ವಿದ್ವಾಂಸರು ಶ್ರೀ ಕೆಂಪೇಗೌಡರ ಬಗೆಗೆ ಮಹಾರಾಜರಲ್ಲಿ ಕೆಟ್ಟ ಮಾತುಗಳನ್ನಾಡಿ ಶ್ರೀ ಕೆಂಪೇಗೌಡರ ವಿಷಯದಲ್ಲಿ ಮಹಾರಾಜರಿಗೆ ಜುಗುಪ್ಸೆಯಾಗುವಂತೆ ಮಾಡಿದರು. ಪರಿಣಾಮವಾಗಿ ಶ್ರೀ ಕೆಂಪೇಗೌಡರು ಆಸ್ಥಾನಕ್ಕೆ ಹೋಗುವ ಅವಕಾಶ ತಪ್ಪಿತು.

“ಶ್ರೀ ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ದೇಶಾಟನೆ ಮಾಡುತ್ತಿದ್ದಾಗ ಶ್ರೀ ಕೆಂಪೇಗೌಡರು ಹಲವಾರು ತಿಂಗಳು ಶ್ರೀ ಸ್ವಾಮಿಗಳ ಜೊತೆಯಲ್ಲಿದ್ದುಕೊಂಡು ಅಸ್ಸಾಮಿನ ಗಿರಿಕಂದರಗಳಲ್ಲಿ ಗಾಯನಮಾಡಿ ಶ್ರೀ ಸ್ವಾಮಿಗಳನ್ನು ತಲ್ಲೀನರಾಗಿ ಮಾಡುತ್ತಿದ್ದರೆಂದು ಶ್ರೀ ಗೌಡರಿಂದಲೇ ಕೇಳಿದ್ದೇನೆ. ಶ್ರೀ ಸ್ವಾಮಿಗಳು ಶ್ರೀ ಗೌಡರ ವಿಷಯದಲ್ಲಿ ಸುಪ್ರೀತರಾಗಿ, ತಾವು ಹೊದೆಯುತ್ತಿದ್ದ ಕಾವಿ ನಿಲುವಂಗಿಯೊಂದನ್ನು ಶ್ರೀ ಗೌಡರಿಗೆ ಕೊಟ್ಟಿದ್ದರು. ಅದನ್ನು ಅವರು ಪ್ರಾಣಪದಕದಂತೆ ತಮ್ಮ ಬಳಿ ಇರಿಸಿಕೊಂಡಿದ್ದದ್ದನ್ನು ನಾನು ನೋಡಿದ್ದೇನೆ.

“ಕೇವಲ ಶ್ರೀ ಕೆಂಪೇಗೌಡರ ಕೀರ್ತಿಯನ್ನು ಮಾತ್ರ ಕೇಳಿದ್ದ ನಾನು ಸುಮಾರು ಐವತ್ತು ವರ್ಷಗಳ ಹಿಂದೆ ಅವರ ಪರಿಚಯಲಾಭ ಪಡೆದೆ. ಆಗ ನಾನು ಚನ್ನಪಟ್ಟಣದಲ್ಲಿದ್ದೆ. ಹೇಗೋ ಶ್ರೀ ಕೆಂಪೇಗೌಡರು ನನ್ನ ಬಳಿಗೆ ಬಂದು ನಾನಿರುವಲ್ಲೇ ಆಶ್ರಯಪಡೆದರು. ಮಂಗಳವಾರಪೇಟೆ ಶ್ರೀ ಪುಟ್ಟಶಾಮಿಗೌಡರ ಮನೆಯಿಂದ ಅವರಿಗೆ ಊಟ ತಿಂಡಿಗಳನ್ನು ಕಾಲಕಾಲಕ್ಕೆ ಕಳುಹಿಸುವ ವ್ಯವಸ್ಥೆಯಾಗಿತ್ತು. ಎಷ್ಟೋ ದಿನಗಳು ಶ್ರೀ ಕೆಂಪೇಗೌಡರು ತಮ್ಮ ಸಂಗೀತದಿಂದ ಶ್ರೀ ಪುಟ್ಟಶಾಮಿಗೌಡರು ಹಾಗೂ ನಾನು ಮೈಮರೆಯುವಂತೆ ಮಾಡುತ್ತಿದ್ದರು.

“ಶ್ರೀ ಕೆಂಪೇಗೌಡರಿಗೆ ಇದ್ದ ಚಾಳಿಯೆಂದರೆ ಪಾನ. ಅಷ್ಟು ಹೊರತು ಅವರು ವೈರಾಗಿಗಳು. ತಮ್ಮ ಪತ್ನಿ ಮರಣಹೊಂದಿದ ಮೇಲೆ ಪರಸ್ತ್ರೀಯರನ್ನು ಮುಟ್ಟಿದವರಲ್ಲ. ಅವರು ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿದ್ದ ವೇಳೆ ಸಂಗೀತಪಾರಂಗತೆಯರೆನಿಸಿಕೊಂಡಿದ್ದ ಅನೇಕ ಮಂದಿ ವೇಶ್ಯೆಯರು ಅವರ ವಶವರ್ತಿಗಳಾಗಲು ತವಕಪಡುತ್ತಿದ್ದರಂತೆ. ಅವರೆಲ್ಲರನ್ನೂ ಶ್ರೀ ಗೌಡರು ತಮ್ಮ ಒಡಹುಟ್ಟಿದವರಂತೆ ಕಾಣುತ್ತಿದ್ದರೆಂದು ಕೇಳಿದ್ದೇನೆ.

“ಶ್ರೀ ಗೌಡರು ಎರಡು ಮೂರು ತಿಂಗಳು ನನ್ನಲ್ಲೇ ಉಳಿದಿದ್ದು, ಹಲ್ಲು ಕಟ್ಟಿಸಿಕೊಂಡು ಬರುವುದಾಗಿ ಹೇಳಿ ಬೆಂಗಳೂರಿಗೆ ಹೋದರು. ಮತ್ತೆ ಅವರು ನನಗೆ ದೊರೆಯಲಿಲ್ಲ."

೧೬

ಚಿಂತಲಪಲ್ಲಿ ವೆಂಕಟರಾಯರು

ಜನನ: ೧೮೭೫ ಅಂತ್ಯ: ೬-೬-೧೯೬೯

ಸಂಗೀತರತ್ನ ಚಿಂತಲಪಲ್ಲಿ ವೆಂಕಟರಾಯರು ಹಳೆಯ ಕಾಲದ ಹುಲಿ. ಸಂಗೀತಗಾರನ ವಿಷಯದಲ್ಲಿ ಹುಲಿಯ ಉಪಮಾನ ಕೊಡುವುದರ ಔಚಿತ್ಯ ವಿವಾದಾಸ್ಪದವಾದರೂ ಧೈರ್ಯ ಶೌರ್ಯಗಳನ್ನು ತಿಳಿಸಲು ಹುಲಿಯ ಹೆಸರು ಪ್ರಶಸ್ತವಾದದ್ದು. ಅಂಥಾದ್ದು ವೆಂಕಟರಾಯರ ಎದೆಗಾರಿಕೆ. ಅವರು ಸಂಗೀತದಲ್ಲಿ ಮಹಾವಿದ್ವತ್ಪಂಕ್ತಿಗೆ ಸೇರಿದವರು. ಅವರಿಗೆ ಆಗಿದ್ದ ಶಾಸ್ತ್ರಸಂಸ್ಕಾರ ಬಹುದೊಡ್ಡ ಮಟ್ಟದ್ದು. ಶಾಸ್ತ್ರ ತಮಗೆ ಸ್ವಾಧೀನವಾಗಿ ಮನಸ್ಸು ಲವಲವಿಕೆಯುಳ್ಳದ್ದಾದಾಗ, ನುಗ್ಗುವ ಹುಮ್ಮಸ್ಸುಂಟಾಗುತ್ತದೆ. ತೊಂಭತ್ತು ವಯಸ್ಸು ಕಳೆದಮೇಲೂ ವೆಂಕಟರಾಯರಿಗೆ ಅಂಥ ಹುಮ್ಮಸ್ಸಿತ್ತು.

ಅವರ ತಮ್ಮಂದಿರು ವೆಂಕಟಾಚಲಯ್ಯನವರೆಂಬವರಿದ್ದರು. ಅಣ್ಣ ತಮ್ಮಂದಿರಿಬ್ಬರೂ ಒಟ್ಟಿಗೆ ಹಾಡುತ್ತಿದ್ದದ್ದುಂಟು. ಈಗ ನನಗೆ ಜ್ಞಾಪಕದಲ್ಲಿರುವುದು ಸುಮಾರು ನಲವತ್ತಾರು ನಲವತ್ತೇಳು ವರ್ಷಗಳ ಹಿಂದಿನ ಸಂಗತಿ. ಅಣ್ಣತಮ್ಮಂದಿರಿಬ್ಬರೂ ಸೇರಿ ಹಾಡಿದ್ದು

> ಎನ್ನಗಾ-ಮನಸುಕು ರಾನಿ
> ಪನ್ನಗಶಾಯಿ ಸೊಗಸು

-ಎಂಬ ನೀಲಾಂಬರಿ ರಾಗದ ತ್ಯಾಗರಾಜರ ಕೃತಿ. ಅದನ್ನು ಹಾಡುತ್ತಿದ್ದವರ ಕಣ್ಣಿನಲ್ಲಿ ಕಂಬನಿ. ಕೇಳುವವರ ಕಣ್ಣಿನಲ್ಲಿ ಉಕ್ಕಿ ಉಕ್ಕಿ ಬರುತ್ತಿತ್ತು ಕಂಬನಿ. ಅದು ಸಂಗೀತಾನುಭವದ ಸೀಮಾರೇಖೆ.

ಭಗವಾನ್ ಶಂಕರಾಚಾರ್ಯರ ಪರಮಸುಂದರವಾದ ಸ್ತೋತ್ರದಲ್ಲಿ ಜಗಜ್ಜನನಿಯಾದ ಗೌರಿದೇವಿಯ ಚಿತ್ರ ಮನನೀಯವಾಗಿದೆ:

> ನಖಮುಖಮುಖರಿತವೀಣಾ-
> ನಾದರಸಾಸ್ವಾದನವರಸೋಲ್ಲಾಸಮ್ ।

ವೀಣಾವಾದನವೇಲಾ
ಕಂಪಿತಶಿರಸಂ ನಮಾಮಿ ಮಾತಂಗೀಮ್ ॥

ತನ್ನ ಬೆರಳುಗಳಿಂದ ವೀಣೆ ನುಡಿಸುತ್ತ, ಆ ನಾದಮಾಧುರ್ಯವನ್ನು ತಾನೇ ಅನುಭವಿಸಿಕೊಂಡು ಸಂತೋಷಭರಿತಳಾಗಿದ್ದಳಂತೆ ತಾಯಿ ಲಲಿತಾಂಬಿಕೆ. ಆ ಸಂತೋಷದಲ್ಲಿ ತನ್ನನ್ನು ತಾನು ಮರೆತುಕೊಂಡು, ಬೇರೊಬ್ಬರು ನುಡಿಸಿದ ಸೊಗಸಿಗೆ ಹೇಗೋ ಹಾಗೆ ತಲೆದೂಗುತ್ತಿದ್ದಳಂತೆ.

ಇದು ಸ್ವಾನುಭವದ ಮಾತು. ಇಂಥಾದ್ದು ಸಂಗೀತದಲ್ಲಿ ಸ್ವಾನುಭವ. ವೆಂಕಟರಾಯರ ಸಂಗೀತಪರವಶತೆ ಈ ಜಾತಿಯದು.

***

ಒಂದು ದಿನ ಸಂಜೆ ನಾನೂ ನನ್ನ ಸ್ನೇಹಿತರು ಸಿ.ಕೃಷ್ಣರಾಯರೂ ವಾಯುಸೇವನೆಗೆಂದು ಲಾಲ್‌ಬಾಗ್ ಕಡೆ ಹೋಗುತ್ತಿದ್ದೆವು. ಲಾಲ್‌ಬಾಗ್ ಪೋರ್ಟ್ ರೋಡಿನಲ್ಲಿರುವ ಗುಡಿಯ ಮುಂದೆ ವೆಂಕಟರಾಯರು ಯಾರೊಡನೆಯೋ ಮಾತನಾಡುತ್ತ ನಿಂತಿದ್ದರು. ನಾನು ಕೃಷ್ಣರಾಯರಿಗೆ ಹೇಳಿದೆ: "ಈ ವೆಂಕಟರಾಯರನ್ನು ಈಹೊತ್ತು ಹಿಡಿದು ಕೊಂಡುಹೋಗಬೇಕಲ್ಲಾ!"

ಕೃಷ್ಣರಾಯರು ಕಾರನ್ನು ಹಿಂದಕ್ಕೆ ಮಾಡಿದರು. ವೆಂಕಟರಾಯರು ನಿಂತಿದ್ದಲ್ಲಿಗೆ ಹೋಗಿ ಅವರನ್ನು ಕಾರಿನಲ್ಲಿ ಕೂಡಬೇಕೆಂದು ಹೇಳಿದೆವು.

ವೆಂ: "ಈಗ ಹೇಗೆ ಸ್ವಾಮಿ ಬರುವುದು? ಆ ಸ್ನೇಹಿತರೊಡನೆ ರಾಮೋತ್ಸವದ ಮಾತನ್ನಾಡುತ್ತಿದ್ದೆ."

ನಾನು: "ನಾವೂ ಉತ್ಸವಕ್ಕೇ ನಿಮ್ಮನ್ನು ಕರೆಯುತ್ತಿರುವುದು."

ಹೀಗೆ ಬಲಾತ್ಕಾರಮಾಡಿ ಅವರನ್ನು ಗಾಡಿಯಲ್ಲಿ ಕೂಡಿಸಿಕೊಂಡು ಲಾಲ್‌ಬಾಗಿಗೆ ಹೋಗಿ ಇಷ್ಟವಾದದ್ದನ್ನು ಹೊಟ್ಟೆಯ ತುಂಬ ಮೇದೆವು. ಅನಂತರ ಕಾರಿನಲ್ಲಿ ಕುಳಿತು ವಿಜಯ ಕಾಲೇಜ್ ಆಫ್ ಮ್ಯೂಸಿಕ್‌ಗೆ ಬಂದೆವು. ಆ ಕಾಲೇಜಿನ ಪ್ರಿನ್ಸಿಪಾಲರಾದ ನಾರಾಯಣಸ್ವಾಮಿ ಭಾಗವತರಿಗೆ ಅತ್ಯಾನಂದವಾಯಿತು. "ಅಯ್ಯೊ ವೆಂಕಟರಾಯಪ್ಪ!" ಎಂದು ಅವರೂ "ಅಯ್ಯೊ ನಾರಾಯಣಸ್ವಾಮಿ" ಎಂದು ಇವರೂ ಒಬ್ಬರನ್ನೊಬ್ಬರು ತಬ್ಬಿಕೊಂಡರು. ಆ ಬಳಿಕ:

ನಾ: "ವೆಂಕಟರಾಯಪ್ಪ, ನಿನ್ನ ಮುಖಾರಿ ಕೇಳಿ ಎಷ್ಟು ದಿವಸವಾಯಿತು!"

ವೆಂ: "ನಾರಾಯಣಸ್ವಾಮಿ, ನಿನ್ನ ಪಿಟೀಲು ಕೇಳಿ ಎಷ್ಟು ವರ್ಷವಾಯಿತೋ!"

ಆಗ ಹಾಡಿಕೆಗೆ ಕುಳಿತರು. ವೆಂಕಟರಾಯರು ಮುಖಾರಿ ರಾಗದ 'ಕ್ಷೀಣಮ್ಮೈ' ಕೃತಿಯನ್ನು ಹಾಡಿದರು. ನಾರಾಯಣಸ್ವಾಮಿ ಭಾಗವತರು ಪಿಟೀಲು ಹಿಡಿದು ಸಹಕರಿಸಿದರು. ಎಷ್ಟುಹೊತ್ತು ಈ ಸಂತೋಷದಲ್ಲಿದ್ದೆವೋ-ಆಗ ನಾವು ಹೊತ್ತು ನೋಡಲಿಲ್ಲ. ಎರಡು ಘಂಟೆಗೆ ಕಡಮೆಯಿಲ್ಲದೆ ಮುಖಾರಿ ರಾಗದ ಸ್ವರೂಪದ ಅನುಭವ ನಮಗಾಯಿತು. ಸಾಮಾನ್ಯವಾಗಿ ಶೋಕರಸ ಪ್ರಧಾನವೆಂದು ಹೇಳುವ ಆ ಮುಖಾರಿಯಲ್ಲಿ ಎಷ್ಟು ಸುಂದರವಾದ ಒನಪುಗಳು! ಎಂಥೆಂಥ ಒಯ್ಯಾರಗಳು! ಇದನ್ನು ವೆಂಕಟರಾಯರ ರಾಗ ವಿನ್ಯಾಸದಿಂದ ನಾವು ಅನುಭವಿಸಿದೆವು.

***

ಕೆಲವು ವರ್ಷಗಳ ಹಿಂದೆ ಒಂದು ಸಂಗೀತ ವಿದ್ವತ್ಸಮ್ಮೇಳನ ನಡೆಯಿತು. ವಿದ್ವಾನ್ ಟಿ.ಚೌಡಯ್ಯನವರು ಅದರ ಸಂಚಾಲಕರು. ಅದು ಮೊದಲ ದಿನ ವಿದ್ವಾನ್ ಕೆ.ವಾಸುದೇವಾಚಾರ್ಯರನ್ನು ಗೌರವಿಸಿತು. ಎರಡನೆಯ ದಿನ ಸಂಜೆ ಯಾರೋ ಹಾಡುತ್ತಿದ್ದರು ಯಾರೋ ಪಕ್ಕವಾದ್ಯ ನುಡಿಸುತ್ತಿದ್ದರು. ಆಗ ವೆಂಕಟರಾಯರು ಅಲ್ಲಿಗೆ ಬಂದರು ಬಂದು ಕುಳಿತ ಹೊತ್ತಿನಿಂದ ೧೫-೨೦ ನಿಮಿಷ ಕಾಲ ಅವರ ಮುಖದಲ್ಲಿ ಸಂತೋಷ ಕಾಣಲಿಲ್ಲ. ಕೈಯಿಂದಲೂ ಮುಖಚೇಷ್ಟೆಯಿಂದಲೂ ಅಸಮಾಧಾನ ತೋರಿಬಂತು. ಕೊಂಚ ದೂರದಲ್ಲಿದ್ದ ನಾನು ಎದ್ದು ವೆಂಕಟರಾಯರ ಹತ್ತಿರಕ್ಕೆ ಬಂದು ಕುಳಿತೆ. ಇನ್ನು ನಾಲ್ಕೈದು ನಿಮಿಷ ಕಳೆಯಿತು. ವೆಂಕಟರಾಯರು "ಉಶ್ಶ್ಯ್" ಎಂದರು. ನಾನು "ಏನು ವೆಂಕಟರಾಯಪ್ಪ, ಏನು ಸಮಾಚಾರ?" ಎಂದೆ. ಅವರು ಕೈಯಿಂದ ಹಣೆಯ ಮೇಲೆ ಚಚ್ಚಿಕೊಳ್ಳುತ್ತ. "ತಡೆಯೋಕಾಗೋಲ್ಲ, ಸ್ವಾಮಿ ಮು . . . . . . ಮಕ್ಕಳು ಏನೇನೋಮಾಡಿಕೋತಾರೆ. ಇಂಥ ಕಾಲ ಬಂತಲ್ಲ ಸಂಗೀತಕ್ಕೆ. ಇನ್ನು ನನ್ನಂಥವರಿರಬಾರದು!" ಎಂದರು; ಹಾಗೆನ್ನುತ್ತ ಎದ್ದು ಹೊರಟುಹೋದರು. ಅಲ್ಲಿ ಮೃದಂಗ ವಾದ್ಯವಿತ್ತು, ಕಿವಿಗೆ ಕೇಳಿ ಬರುತ್ತಿದ್ದದ್ದು ಜಾಯಿಕಾಯಿ ಪೆಟ್ಟಿಗೆಯ ಸದ್ದು. ಮಿಕ್ಕ ವಿಚಾರವನ್ನು ಊಹಿಸಿಕೊಳ್ಳಬಹುದು. ವೆಂಕಟರಾಯರ ನಾದಸ್ಪರ್ಶ ಗ್ರಹಣ ಅಷ್ಟು ಸೂಕ್ಷ್ಮವಾದದ್ದು.

***

ಇನ್ನೊಂದು ದಿನ-೧೯೩೨-೩೩ರಲ್ಲಿ-ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಚಿಂತಲಪಲ್ಲಿ ವೆಂಕಟರಾಯರ ಮಕ್ಕಳು ರಾಮಚಂದ್ರರಾಯರ ಕಛೇರಿಯನ್ನು ಏರ್ಪಡಿಸಿದ್ದಾಗಿತ್ತು. ಅವರಿಗೆ ಮಹಾರಾಜರವರಿಂದ ಪ್ರಶಸ್ತಿ ದೊರೆತ ಹೊಸತು. ಆ ಹೊತ್ತು ಜನ ಪರಿಷತ್ತಿನ ಸಭಾಮಂದಿರದಲ್ಲಿ ಮಾತ್ರವಲ್ಲದೆ ವರಾಂಡದಲ್ಲಿ, ಅದರ ಮುಂದಿನ ಖಾಲಿ ಜಾಗದಲ್ಲಿ, ಅದರ ಎದುರಿಗಿನ ಸಂಸ್ಕೃತ ಕಾಲೇಜಿನ ಆವರಣದಲ್ಲಿ ಕಿಕ್ಕಿರಿದಿದ್ದರು. ಕಛೇರಿ ಪ್ರಾರಂಭವಾಗಬೇಕಾಗಿದ್ದ ಹೊತ್ತಿಗೆ ರಾಮಚಂದ್ರರಾಯರು ಬರಲಾಗಲಿಲ್ಲ. ಅವರ ತಂದೆ ವೆಂಕಟರಾಯರು ದಯಮಾಡಿಸಿ ಹೇಳಿದರು:

ವೆಂ: "ಹುಡುಗನಿಗೆ ಜ್ವರ ಬಂದಿದೆ. ಶಕ್ತಿಯಿಲ್ಲದೆ ಮಲಗಿದ್ದಾನೆ."

ನಾನು: "ಆತ ವಿಶ್ರಾಂತಿ ತೆಗೆದುಕೊಳ್ಳಬೇಕಾದದ್ದು ಸರಿ. ಆದರೆ ಇಲ್ಲಿ ನೆರೆದಿರುವ ಜನವನ್ನು ನೋಡಿ. ಇಷ್ಟೊಂದು ಮಂದಿಗೆ ನಾನು ಏನು ಸಮಾಧಾನ ಹೇಳಲಿ?"

ವೆಂಕಟರಾಯರು ದೈನ್ಯದ ಮುಖಮುದ್ರೆ ತೋರಿದರು.

ವೆಂ: "ನಾನೇನು ಮಾಡಲಿ ಸ್ವಾಮಿ?"

ನಾನು: "ಹಸೆಗೆ ಬನ್ನಿ."

ಹೀಗೆ ಹೇಳುತ್ತ "ಹಸೆಗೆ ಬಾರೇ ಕುಸುಮನೇತ್ರ" -ಎಂದೆ.

ವೆಂ: "ಮುದುಕನಾಗಿಬಿಟ್ಟೆನಲ್ಲ!"

ನಾನು: "ನಿಮ್ಮ ಊರು ಹುಣಸನಹಳ್ಳಿ. ಹುಣಸೆಮರ ಹಳೆಯದಾದಷ್ಟೂ ಅದರ ಕಾಯಿ ಸೊಗಸು ಎಂದು ಹೇಳುತ್ತಾರೆ."

ನನ್ನ ಒತ್ತಾಯಕ್ಕೆ ಒಪ್ಪಿ ವೆಂಕಟರಾಯರು ಹಾಡಲು ಕುಳಿತರು. ಆ ಹೊತ್ತು ಒಳ್ಳೆಯ ಬಲಿಷ್ಠರಾದ ಪಿಟೀಲು ವಿದ್ವಾಂಸರೂ ಮೃದಂಗ ವಿದ್ವಾಂಸರೂ ಸಹಕರಿಸಲು ಬಂದಿದ್ದರು. ವೆಂಕಟರಾಯಪ್ಪನವರು ಒಂದು ವರ್ಣ ಹಾಡಿ ಒಂದೆರಡು ಸಾಮಾನ್ಯ ಕೃತಿಗಳನ್ನು ಹಾಡಿ ಬಳಿಕ ತಮ್ಮ ಕೈವಾಡ ತೋರಿಸಲಾರಂಭಿಸಿದರು. ಬಹುಶಃ ಭೈರವಿರಾಗದ ಕೀರ್ತನೆ ಎಂದು ನನ್ನ ನೆನಪು, ಮೊದಲಿನ ಎರಡು ಮೂರು ಆವರ್ತ ಆದ ಬಳಿಕ ಪಿಟೀಲು ವಿದ್ವಾಂಸರು ವಾದ್ಯವನ್ನು ಕೆಳಗಿರಿಸಿ ಕೈಕಟ್ಟಿ ವೆಂಕಟರಾಯರ ಮುಖವನ್ನೇ ನೋಡುತ್ತಿದ್ದರು. ಅವರ ಒಂದೊಂದು ಆವರ್ತ ಮುಗಿಯುತ್ತಲೂ ಪಿಟೀಲು ವಿದ್ವಾಂಸರು ಸುಮಾರಾಗಿ ಕಮಾನು

ಹಾಕಿ ವೆಂಕಟರಾಯರಿಗೆ ಕೈಮುಗಿದು ವಾದ್ಯವನ್ನು ಕೆಳಗಿರಿಸುತ್ತಿದ್ದರು. ಇದು ಸ್ವಲ್ಪಕಾಲ ನಡೆಯಿತು. ಅನಂತರ ಒಂದೆರಡು ದೇವರನಾಮಗಳು, ಮಂಗಳ.

ಚಿಂತಲಪಲ್ಲಿ ವೆಂಕಟರಾಯರಿಗೆ ನೂರಾರು ದೇವರ ನಾಮಗಳು ಮುಖಸ್ಥವಾಗಿದ್ದವು. ಅವರ ದೇವರ ನಾಮದ ಗಾನವು ಕಂಠದಿಂದ ಬಂದದ್ದಲ್ಲ, ಹೃದಯದಿಂದ ಬಂದದ್ದು. ಶಾಸ್ತ್ರಪಾಂಡಿತ್ಯದ್ದಲ್ಲ, ಮನಃಪರಿಪಾಕದ್ದು.

***

ಅವರಿಗೆ ತೊಂಭತ್ತೆರಡು ತೊಂಭತ್ತಮೂರು ವರ್ಷ ವಯಸ್ಸಾಗಿದ್ದಾಗ ಒಂದು ದಿನ ನನ್ನ ಮನೆಗೆ ದಯಮಾಡಿಸಿದರು. ಪ್ರಾಸ್ತಾವಿಕವಾಗಿ ಮಾತನಾಡುವಾಗ ಶ್ರೀರಾಗದ ವಿಚಾರ ಬಂತು. ವೆಂಕಟರಾಯರು ಆಗ

ಎದಿರಾ ಆ-ಆ-ಆ
ನೀ ದಿವ್ಯರೂಪಮು

-ಎಂಬ ಕೃತಿಯನ್ನು ಹಾಡಿದರು. ಅತ್ಯಂತ ಸುಂದರವಾದ ರಚನೆ. ಆ ವಯಸ್ಸಿನಲ್ಲಿಯೂ ವೆಂಕಟರಾಯರ ಶಾರೀರದಲ್ಲಿ ಅತಿಮನೋಹರವಾದ ಪಲುಕುಬಡಿ. ಆ ಕೀರ್ತನೆ ತಮ್ಮ ಪೂರ್ವಿಕರೊಬ್ಬರು ರಚಿಸಿದ್ದೆಂದು ವೆಂಕಟರಾಯರು ಹೇಳಿದರು. ವೆಂಕಟರಾಯರ ಪೂರ್ವಿಕರು ಸಂಗೀತಗಾರರು. ಮನೆತನವೇ ಸಂಗೀತದ ಮನೆತನ.

"ನಿಮ್ಮ ಪೂರ್ವಿಕರ ಕೃತಿಗಳನ್ನೆಲ್ಲ ಸಂಗ್ರಹಮಾಡಿ ಕೊಡಿ. ಪ್ರಸ್ತಾರ ಹಾಕಿಕೊಡಿ. ಪ್ರಕಟನೆಗೆ ಏರ್ಪಾಟು ಮಾಡೋಣ" -ಎಂದು ನಾನು ಅವರಲ್ಲಿ ಹತ್ತಾರು ಸಲ ಬಿನ್ನಯಿಸಿದೆ. ಅವರು ಸಲಸಲವೂ "ಓಹೋ ಇನ್ನೊಂದು ವಾರದೊಳಗಾಗಿ ತಂದುಬಿಡುತ್ತೇನೆ. ಅದೇ ಕೆಲಸದಲ್ಲಿದ್ದೇನೆ. ಮಾಡಬೇಕು ಸ್ವಾಮಿ, ಅಗತ್ಯವಾಗಿ ಮಾಡಬೇಕು" -ಎಂದು ಹೇಳುತ್ತಲೇ ಬಂದರು.

ಹೀಗೆ ಕಾಲ ತಳ್ಳುವುದೂ ಒಂದು ಬಗೆಯ ಕಲಾಕುಶಲತೆ.

ವೆಂಕಟರಾಯರು ಸ್ವಭಾವದಲ್ಲಿ ದಿಟ್ಟರು. ಸ್ನೇಹಿತರೊಡನೆ ಮಾತನಾಡುವಾಗ ವಿನಯವನ್ನೂ ದೈನ್ಯವನ್ನೂ ಯಥೇಷ್ಟವಾಗಿ ತೋರಿಸುತ್ತಿದ್ದರೂ ಒಳಗಡೆ "ಯಾರದೇನು ಹೆಚ್ಚು?" ಎಂಬ ಪ್ರವೃತ್ತಿ ನೈಜವಾಗಿತ್ತು. ಆದದ್ದರಿಂದ ಅವರಿವರ ಆಶ್ರಯಕ್ಕಾಗಿ ತುಂಬ ಒದ್ದಾಡಿದವರಲ್ಲ. ಸ್ವಲ್ಪದರಲ್ಲಿಯೇ ಸಂತುಷ್ಟಿಯಿದ್ದದ್ದರಿಂದ ಅವರಿಗೆ ಸಮಾನರಾದ

ಬಹುಮಂದಿ ಪಡೆದಷ್ಟು ವಿಶಾಲವಾಗಿ ಹೆಸರನ್ನು ಹರಡಿಕೊಳ್ಳಲಾಗಲಿಲ್ಲ. ದೇವರು ಕೊಟ್ಟಷ್ಟರಲ್ಲಿ ಸಂತುಷ್ಟಿ, ವಿನೋದ, ಬಂಧುಪ್ರೀತಿ, ಕಲಾನಿಷ್ಠೆ-ಇಷ್ಟರಿಂದ ಅವರ ಜೀವನ ಪರಿಪೂರ್ಣವಾಗಿತ್ತು.

02

ಬೆಂಗಳೂರಿನ ವೈಣಿಕರು, ಪಿಟೀಲುಗಾರರು

ಬೆಂಗಳೂರಿನಲ್ಲಿ ನನಗೆ ತಿಳಿದಂತೆ ಇದ್ದ ವೈಣಿಕ ವಿದ್ವಾಂಸರು ಮೂವರು. ಅವರಲ್ಲಿ ತುಂಬ ಹಳಬರಾದವರು ಒಬ್ಬ ಐಯಂಗಾರ್ಯರು. ಅವರ ಹೆಸರು ರಂಗಸ್ವಾಮಿ ಐಯಂಗಾರ್ ಅಥವಾ ಕೃಷ್ಣಸ್ವಾಮಿ ಐಯಂಗಾರ್ ಎಂದು ನನ್ನ ಜ್ಞಾಪಕ. ಅವರ ಮನೆ ಇದ್ದದ್ದು ಬಳೆಪೇಟೆಯಿಂದ ಚಿಕ್ಕಲಾಲ್‌ಬಾಗಿಗೆ ಹೋಗುವ ರಸ್ತೆಯಲ್ಲಿ-ಪೂರ್ಣಯ್ಯನವರ ಸತ್ರದ ಪ್ರವೇಶದಲ್ಲಿ.

ನಾನು ನೋಡುವ ವೇಳೆಗೆ ಐಯಂಗಾರ್ಯರು ತುಂಬ ಮುದುಕರು. ಅವರ ಮನೆಯಲ್ಲಿ ವಾರಕ್ಕೆ ಎರಡು ಮೂರು ಸಾರಿ ಸಂಗೀತಸಾಧಕಗೋಷ್ಠಿ ಸೇರುತ್ತಿತ್ತು. ರಾತ್ರಿ ಸುಮಾರು ಎಂಟು ಎಂಟೂವರೆಯಿಂದ ಹನ್ನೊಂದು ಹನ್ನೊಂದುವರೆ ಘಂಟೆಯವರೆಗೆ. ಮೊದಲು ಐಯಂಗಾರ್ಯರು ವೀಣೆ ಹಿಡಿದು ರಾಗ ಒಂದಾವರ್ತಿ ಆಲಾಪನೆ ಮಾಡುವರು. ಅದನ್ನು ಅನುಸರಿಸಿ ಒಬ್ಬಾತ ಹಾಡುವನು, ಅದನ್ನೇ ಕೊಂಚ ವ್ಯತ್ಯಾಸ ಮಾಡಿ ಪಿಟೀಲುಗಾರನು ನುಡಿಸುವನು. ಇದನ್ನು ಅನುಸರಿಸಿ ಮತ್ತೊಬ್ಬಾತ ಹಾಡುವನು. ಬಳಿಕ ಕೀರ್ತನೆಯ ಆರಂಭ. ಪಲ್ಲವಿಯ ಅಥವಾ ಚರಣದ ಒಂದೊಂದು ಅಂಶವೂ ಹೀಗೆ ನಾಲ್ಕೈದು ಆವರ್ತಗಳಲ್ಲಿ ಪಾಠವಾಗುವುದು. ಮೃದಂಗಕಾರನು ಪ್ರತಿಯೊಂದು ಆವರ್ತವನ್ನೂ ಅನುಸರಿಸಿ ನುಡಿಸುವನು. ಅವನಿಗೆ ಕೊಂಚ ವಿರಾಮ ಕೊಡುವರು. ಆಗ ಆತ ಹೆಚ್ಚು ಕೆಲಸ ಮಾಡಿ ತೋರಿಸುವನು. ಈ ಕ್ರಮ ಈಗ ಇಲ್ಲಿ ಎಲ್ಲಿಯೂ ರೂಢಿಯಲ್ಲಿರುವಂತೆ ನನಗೆ ತಿಳಿದುಬಂದಿಲ್ಲ. ಆ ಅಭ್ಯಾಸ ಕಾಲದಲ್ಲಿ ನಾನು ಐಯಂಗಾರ್ಯರ ವಿದ್ವತ್ತನ್ನೂ ರಾಗನೈಪುಣಿಯನ್ನೂ ಕಂಡುಕೊಳ್ಳಲು ಅವಕಾಶ ದೊರೆಯಿತು.

ನನಗೆ ಅವರ ಪರಿಚಯವಾಗುವುದಕ್ಕೆ ಮುಂಚೆ ನಾನು ಅವರ ಮನೆಯ ಕಿಟಕಿಯ ಹತ್ತಿರ ಹೊರಗಡೆ ನಿಂತು ಸಂಗೀತ ಕೇಳಿದ್ದುಂಟು. ಹೀಗೆ ನಾಲ್ಕೈದು ಸಾರಿ ಆದ ಮೇಲೆ ಅವರ ಪರಿಚಯವಾಯಿತು.

ಐಯಂಗಾರ್ಯರು ವೇದ ಮಂತ್ರಗಳನ್ನು ಕೂಡ ವೀಣೆಯಿಂದ ನುಡಿಸುತ್ತಿದ್ದರು. ನನಗೆ ಇಂಥ ಸಂಗತಿ ಜ್ಞಾಪಕದಲ್ಲಿದೆ.

ಇಂದ್ರ ಶ್ರೇಷ್ಠಾನಿ
ದ್ರವೀಣಾನಿ ಧೇಹಿ

-ಈ ಋಗ್ವೇದ ಸೂಕ್ತವನ್ನು ಐಯಂಗಾರ್ಯರು ನುಡಿಸಿದ್ದನ್ನು ಕೇಳಿದಾಗ ನನಗಿಂತ ಹಿರಿಯರಾದ ಬಹುಮಂದಿ ಕೇಳಿ ಐಯಂಗಾರ್ಯರ ಪಾಂಡಿತ್ಯವನ್ನು ಪ್ರಶಂಸೆ ಮಾಡಿದರು.

ವೆಂಕಟರಾಮಯ್ಯನವರು

ಎರಡನೆಯವರು ರುದ್ರಪಟ್ಟಣದ ವೆಂಕಟರಾಮಯ್ಯನವರು. ಇವರು ಚಿಕ್ಕಪೇಟೆಯ ಬಳಿ ವ್ಯಾಸರಾಯಮಠದ ಒಂದು ಸಂದಿಯಲ್ಲಿ ವಾಸವಾಗಿದ್ದರು. ಇವರೂ ಮುದುಕರಾಗಿದ್ದರು. ಆದರೆ ತಮ್ಮ ವಿದ್ಯೆಯ ವಿಷಯದಲ್ಲಿ ಅವರಿಗಿದ್ದ ಉತ್ಸಾಹವನ್ನು ನೋಡಿದರೆ ಅವರು ಮುದುಕರೆನ್ನಿಸುತ್ತಿರಲಿಲ್ಲ. ಅವರ ಮನೆಗೆ ಹೋದಾಗ ಒಂದು ಘಂಟೆಯಷ್ಟಾದರೂ ಅಲ್ಲಿ ಕೂಡಲು ಏರ್ಪಾಟು ಮಾಡಿಕೊಂಡು ಹೋಗಬೇಕು. ಅವರದು ವಿಶೇಷ ಪಾಂಡಿತ್ಯಪ್ರದರ್ಶನ. ಚಿತ್ರವಿಚಿತ್ರ ಸ್ವರಪ್ರಯೋಗಗಳನ್ನು ಅವರು ಮಾಡಬಲ್ಲವರಾಗಿದ್ದರು. ಅವರ ಸಾಧನೆಯನ್ನು ಯಮಸಾಧನೆ ಎನ್ನುತ್ತಿದ್ದರು.

ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಹೇಗೋ ಸಂಗೀತಚರಿತ್ರೆಯಲ್ಲಿಯೂ ಹಾಗೆ ಆಗಾಗ ಪಾಂಡಿತ್ಯಪ್ರದರ್ಶನ ರಸಭಾವಕ್ಕಿಂತ ಹೆಚ್ಚು ಪ್ರಧಾನವಾಗುವುದುಂಟು. ಸಂಸ್ಕೃತದಲ್ಲಿ ಅಪೂರ್ವವಾದ ಶಬ್ದಗಳನ್ನೂ ಕ್ಲಿಷ್ಟ ಪ್ರಯೋಗಗಳನ್ನೂ ತೋರಿಸಿದ್ದೇ ಕೆಲಮಂದಿ ಕವಿಗಳ ವೈಶಿಷ್ಟ್ಯ.

ವರೀವರ್ತಿ ಜರೀಜರ್ತಿ ಸಂಜರೀಹರ್ತಿ

ಹೀಗೆ -ಮಾಘ ನೈಷಧಗಳ ಬಹುಭಾಗ ಹೀಗೆ. ಸಂಗೀತದಲ್ಲಿಯೂ ಹೀಗೆಯೇ ಶಾಸ್ತ್ರ ಪಾಂಡಿತ್ಯ ದೊಡ್ಡದೆನಿಸುವ ಕಾಲ ಒಂದಿತ್ತು. ವೆಂಕಟರಾಮಯ್ಯನವರು ಬಹುಶಃ ಆ ಸಂಪ್ರದಾಯಕ್ಕೆ ಸೇರಿದವರು.

ಅವರು ಶಾಸ್ತ್ರದಲ್ಲಿ ಹೇಗೋ ಪಾಠ ಹೇಳುವುದರಲ್ಲಿಯೂ ಹಾಗೆ ಪ್ರಾಮಾಣಿಕರಾಗಿದ್ದರು. ಒಟ್ಟಿನ ಮೇಲೆ ಬಡತನದ ಜೀವನ; ಆದರೆ ಅಲ್ಪತನದ್ದಲ್ಲ.

ವೀಣೆ ಗೋಪಾಲರಾಯರು

ಮೂರನೆಯವರು ಗೋಪಾಲರಾಯರು. "ವೀಣೆ ಗೋಪಾಲರಾಯರು" ಎಂದೇ ಇವರನ್ನು ಕುರಿತು ವ್ಯವಹಾರವಿದ್ದದ್ದು. ಇವರು ನಿರಹಂಕಾರಿಗಳು. ಗುಣಗ್ರಾಹಿಗಳು. ಎಲ್ಲಿ ಯಾರು ಹಾಡಿದರೂ ವಾದ್ಯ ನುಡಿಸಿದರೂ ಅದರ ಸುಂದರ ಭಾವಗಳನ್ನು ಗ್ರಹಿಸಿ ಬಹಿರಂಗವಾಗಿ ಸಂತೋಷಪಡುತ್ತಿದ್ದರು.

ಅವರ ವಾದನ ಮೃದುವಾದದ್ದು. ಕೋಮಲವಾದದ್ದು. ಲಲಿತ ಭಾವಗಳನ್ನು ಪ್ರಯಾಸವಿಲ್ಲದಂತೆ ವೀಣೆಯಲ್ಲಿ ತೋರಿಸುತ್ತಿದ್ದರು.

ಗೋಪಾಲರಾಯರ ತಾತಂದಿರು ಹೊಳಕಲ್ ನರಸಿಂಹಯ್ಯನವರು. ಬೆಂಗಳೂರಿನಲ್ಲಿ ಮೊದಮೊದಲು ಮುದ್ರಣಾಲಯಗಳನ್ನು ಸ್ಥಾಪಿಸಿದವರಲ್ಲಿ ಅವರೂ ಒಬ್ಬರು. ಅವರ ಅಚ್ಚಿನ ಕಾರ್ಖಾನೆಯಲ್ಲಿ ಕಂಪಾಸಿಟರುಗಳಾಗಿದ್ದವರು ವೈದಿಕ ವಿದ್ವಾಂಸರುಗಳು. ಅವರು ಬೆಳಗ್ಗೆ ಎಂಟರಿಂದ ಹನ್ನೆರಡು ಘಂಟೆಯವರೆಗೆ ಅಕ್ಷರಗಳನ್ನು ಜೋಡಿಸಿ ಬಳಿಕ ತಮ್ಮ ಮನೆಗಳಲ್ಲಿ ಸ್ನಾನ ನಿಮಂತ್ರಣ ಭೋಜನಗಳನ್ನು ಮುಗಿಸಿಕೊಂಡು ಮಧ್ಯಾಹ್ನ ನಾಲ್ಕು ಘಂಟೆಯ ವೇಳೆಗೆ ಬಂದು ಒಂದೆರಡು ಘಂಟೆ ಹೊತ್ತು ಕೆಲಸ ಮಾಡುತ್ತಿದ್ದರು. ತಾವು ಅಕ್ಷರ ಜೋಡಿಸುತ್ತಿದ್ದ ಗ್ರಂಥ ನಮ್ಮ ವೈದಿಕರಿಗೆ ಮುಖಸ್ಥವಾಗಿದ್ದದ್ದರಿಂದ ಅವರ ಕಣ್ಣೆದುರಿಗೆ ಲಿಖಿತ ಪ್ರತಿ ಇರಬೇಕಾಗಿರಲಿಲ್ಲ! ವಿಷ್ಣು ಸಹಸ್ರನಾಮ, ಆದಿತ್ಯಹೃದಯ, ಇಂದ್ರಾಕ್ಷಿ, ಶಿವಕವಚ, ನವಗ್ರಹಸ್ತೋತ್ರ, ಶಿವಮಹಿಮ್ನ-ಇಂಥ ಸ್ತೋತ್ರಸಾಹಿತ್ಯವೂ, ಗೋವಿನ ಕಥೆ, ವಿಭೀಷಣಬುದ್ಧಿ, ಜೈಮಿನಿ, ಗದುಗಿನ ಭಾರತ ಮೊದಲಾದ ಕಾವ್ಯಗಳೂ ಆಗ ಮಾರಾಟಕ್ಕೆ ಅವಶ್ಯವಾಗಿದ್ದ ಗ್ರಂಥಗಳು. ಈ ಗ್ರಂಥಗಳು ವೈದಿಕರಿಗೆ ಕಂಠಸ್ಥವಾಗಿದ್ದದ್ದರಿಂದ ಅವರು ತಮ್ಮ ಬಾಯಿಂದಲೇ ಅಕ್ಷರಗಳನ್ನು ಹೇಳಿಕೊಂಡು ಮೊಳೆ ಜೋಡಿಸುತ್ತಿದ್ದರು. ಹೆಚ್ಚು ತಪ್ಪುಗಳಾಗುವುದು ಸಾಧ್ಯವೇ ಇರಲಿಲ್ಲ. ಹೀಗೆ ಹೊಳಕಲ್ ನರಸಿಂಹಯ್ಯನವರ ಪ್ರಕಟಣೆಗಳು ತಪ್ಪಿಲ್ಲದೆ ಶುದ್ಧವಾಗಿದ್ದವೆಂದು ಹೆಸರಾಯಿತು. ಪುಸ್ತಕದಂಗಡಿಗೆ ಬಂದವರು "ಹೊಳಕಲ್ ನರಸಿಂಹಯ್ಯನವರ ಪ್ರತಿ ಕೊಡಿ" ಎಂದು ಕೇಳುತ್ತಿದ್ದರು. ಆ ಕಾಲದ ಕನ್ನಡ ಅಕ್ಷರಗಳು ತೆಲುಗಿನ ಅಕ್ಷರಗಳನ್ನು ಹೋಲಿಕೊಂಡು ಉದ್ದುದ್ದವಾಗಿ ಮುಳ್ಳುತಲೆಗಳನ್ನೆತ್ತಿಕೊಂಡಿರುತ್ತಿದ್ದವು.

ವೀಣೆ ಗೋಪಾಲರಾಯರ ಕಾಲಕ್ಕೂ ಆ ಪುಸ್ತಕದಂಗಡಿ ಇತ್ತು. ಗೋಪಾಲರಾಯರ ತಂದೆ ರಾಮಯ್ಯನವರು ಅದನ್ನು ನಡಸುತ್ತಿದ್ದರು.

ಗೋಪಾಲರಾಯರು ಅಂಗಡಿಯ ಸಂಪರ್ಕವನ್ನು ಹೆಚ್ಚಾಗಿ ಇಟ್ಟುಕೊಂಡಿರಲಿಲ್ಲ. ಅವರು ನಾಲ್ಕಾರು ಮನೆಗಳಲ್ಲಿ ಮಾನ್ಯ ಬೋಧಕರಾಗಿದ್ದರು. ನಡತೆಯಲ್ಲಿ ಸಭ್ಯರು. ತುಂಬ ಮರ್ಯಾದಸ್ಥರು. ಅವರನ್ನು ಬಲ್ಲವರಿಗೆ ಅವರ ವಿಷಯದಲ್ಲಿ ಗೌರವ ಮಾತ್ರವಲ್ಲ, ಸ್ನೇಹ ವಿಶ್ವಾಸಗಳು ತುಂಬಿರುತ್ತಿದ್ದವು.

ಅವರ ಸಂಗೀತ ನೆಮ್ಮದಿಯಾದ ಧ್ಯಾನಾನುಕೂಲವಾದ ಸಂಗೀತ.

ಪಿಟೀಲು ತಾಯಪ್ಪನವರು

ತಾಯಪ್ಪನವರು ಪಿಟೀಲು ವಾದನದಲ್ಲಿ ಹೆಸರುವಾಸಿಯಾಗಿದ್ದರು. ಅವರ ತಂದೆ ವೀರಭದ್ರಯ್ಯನವರು ಬಹಳ ಪ್ರಸಿದ್ಧರಾಗಿದ್ದರು, ಅದೇ ವಾದ್ಯದಲ್ಲಿ.

ತಾಯಪ್ಪನವರು ಕೆಲವು ಕಾಲದ ಮೇಲೆ ಬಾಯಿಹಾಡಿಕೆಯಲ್ಲೂ ಪ್ರಸಿದ್ಧರಾದರು.

ಒಂದಾನೊಂದು ದಿನ ಎನ್. ನರಸಿಂಹಮೂರ್ತಿಗಳವರೂ (ಮೈಸೂರು ಯೂನಿವರ್ಸಿಟಿಯ ಲೈಬ್ರೇರಿಯನ್) ನಾನೂ ಸಂಜೆ ಕಾಫಿ ಸೇವನೆಗಾಗಿ ಚಿಕ್ಕಪೇಟೆಯಲ್ಲಿ ಅಹಮದ್ ಬಿಲ್ಡಿಂಗ್ಸ್‌ನಲ್ಲಿದ್ದ ಮಾಡರ್ನ್ ಹಿಂದೂ ರೆಸ್ಟುರಾಂಟ್ ಎಂಬಲ್ಲಿಗೆ ಬಂದಿದ್ದೆವು. ಅಲ್ಲಿಂದ ಹೊರಹೊರಟು ಪಶ್ಚಿಮದ ಕಡೆ ತಿರುಗಿದಾಗ ಅಲ್ಲಿ ಒಂದು ಮನೆಯ ಮುಂದೆ ಚಪ್ಪರವೂ ಜನದ ಸಂದಣಿಯೂ ಕಾಣಿಸಿದವು. ಮೂರ್ತಿಗಳು ಅದೇನೆಂದು ವಿಚಾರಿಸಲು ಅದು ಮದುವೆಯ ಮನೆಯಂದೂ ಆ ರಾತ್ರಿ ಅಲ್ಲಿ ತಾಯಪ್ಪನವರ ಸಂಗೀತಕಛೇರಿಯೆಂದೂ ತಿಳಿದು ಬಂತು.

"ನಾವೂ ಬರಬಹುದೋ?"

"ಅಗತ್ಯವಾಗಿ ಬನ್ನಿ ಸ್ವಾಮಿ."

ನಾವು ಪುನಃ ರೆಸ್ಟುರಾಂಟಿಗೆ ಹೋಗಿ ಹೊಟ್ಟೆಯನ್ನು ಗಟ್ಟಿ ಮಾಡಿಕೊಂಡೆವು. ರಾತ್ರಿ ನಾವು ಬರುವುದು ಹೊತ್ತಾದೀತೆಂದು ನಮ್ಮ ನಮ್ಮ ಮನೆಗಳಿಗೆ ಹೇಳಿಕಳುಹಿಸಿ, ಅಲ್ಲಲ್ಲಿ ಕೊಂಚ ಕಾಲ ಕಳೆದು, ಸುಮಾರು ಎಂಟೂವರೆ ಘಂಟೆಗೆ ಮದುವೆಯ ಮನೆಯೊಳಕ್ಕೆ ಹೋಗಿ ಕುಳಿತೆವು. ಅದು ಯಾರದೋ ವರ್ತಕರ ಮನೆ; ವೀರಶೈವರದೆಂದು ತೋರುತ್ತದೆ. ಸಭೆ ನೆರೆದು ಕಛೇರಿ ಪ್ರಾರಂಭಿಸುವ ವೇಳೆಗೆ ಘಂಟೆ ಒಂಭತ್ತೂವರೆ ಆಗಿತ್ತು. ಆ ಹೊತ್ತು ತಾಯಪ್ಪನವರು ಭರ್ಜರಿ ಮನೋಭಾವದಲ್ಲಿದ್ದರು. ಆ ಕಛೇರಿಯಲ್ಲಿ ನನಗೆ ವಿಶೇಷವೆನ್ನಿಸಿದ ಅಂಶ ಗೌಳಿಪಂತು ರಾಗದ-

> ತೆರ ತೀಯಗರಾದಾ
> ತಿರುಪತಿ ವೆಂಕಟ ರಮಣ ಮತ್ಸರಮನು

ಈ ತ್ಯಾಗರಾಜ ಕೃತಿ. ಆ ವೇಳೆಗೆ ಸರಿಹೊತ್ತಾಗಿತ್ತು. ಗೌಳಿಪಂತು ರಾಗಕ್ಕೆ ಉಚಿತವಾದ ಹೊತ್ತು. ಒಂದು ಹತ್ತು ನಿಮಿಷ ಕಾಲ ನನ್ನ ಮನಸ್ಸು ಆ ಹಾಡಿಕೆಯಲ್ಲಿ ಲೀನವಾಗಿತ್ತು. ಬೇರೊಂದು ವಸ್ತುವಿನ ಸ್ಮರಣೆಯೇ ನನಗಿರಲಿಲ್ಲ. ಅಂದಿನ ವಾದ್ಯಗಳ ಜಮಾವಣೆಯೂ ಹಾಗೆಯೇ ಚೆನ್ನಾಗಿತ್ತು. ಆ ಕೃತಿಯನ್ನು ನಾನು ಅಲ್ಲಿಂದೀಚೆಗೆ ಅನೇಕ ವಿದ್ವಾಂಸರಿಂದ ಹಾಡಿಸಿ ಕೇಳಿದ್ದೇನೆ. ತಾಯಪ್ಪನವರು ಅದನ್ನು ಹಾಡಿದ್ದನ್ನೇ ಕೇಳಿದ್ದೇನೆ. ಆಹೊತ್ತು ಅವರಿಗಿದ್ದ ಮನೋಭಾವ, ಶಾರೀರಶುದ್ಧಿ, ವಾದ್ಯಸಹಕಾರ-ಇವುಗಳ ಜೊತೆಗೆ ವೇಳೆಯ ಪ್ರಭಾವವೂ ಸೇರಿತ್ತೆಂದು ತೋರುತ್ತದೆ -ಅದೊಂದು ಯೋಗವಿಶೇಷ.

ತಾಯಪ್ಪನವರ ಮನೆ ಇದ್ದ ಸ್ಥಳ ಗುಡುಮಯ್ಯನ ಪೇಟೆ ಎಂದು ನನ್ನ ಜ್ಞಾಪಕ. ಅಲ್ಲಿ ಅವರು ಶುಕ್ರಶುಕ್ರವಾರವೂ ಸಂಜೆ ಭಜನೆ ನಡಸುತ್ತಿದ್ದರು. ಬಹು ಮಂದಿ ಸೇರುತ್ತಿದ್ದರು. ನಾನೂ ಮೂರ್ತಿಗಳೂ ಆರೆಂಟು ತಿಂಗಳ ಕಾಲ ಪ್ರತಿ ಶುಕ್ರವಾರವೂ ಆ ಭಜನೆಗೆ ಹೋಗುತ್ತಿದ್ದೆವು. ಅದು ನನ್ನ ಜೀವನದಲ್ಲಿ ಒಂದು ಹಬ್ಬ.

ತಾಯಪ್ಪನವರು ಸಜ್ಜನರು, ಕಪಟವಿಲ್ಲದವರು ಮತ್ತು ಉದಾರಿಗಳು.

ಪಿಟೀಲು ಪುಟ್ಟಪ್ಪನವರು

ಪುಟ್ಟಪ್ಪನವರನ್ನು ಸಲಿಗೆಯಿಂದ ಪುಟ್ಟೊ ಎಂದು ಕರೆಯುತ್ತಿದ್ದರು. ಇವರು ತಾಯಪ್ಪನವರಿಗಿಂತ ವಯಸ್ಸಿನಲ್ಲಿ ಕೊಂಚ ಕಿರಿಯರೆಂದು ತೋರುತ್ತದೆ. ಅದರೆ ಇಬ್ಬರೂ ಎಲ್ಲ ವಿಷಯಗಳಲ್ಲೂ ಸಮಾನಸ್ಕಂಧರು. ತಮ್ಮ ವಾದ್ಯದಲ್ಲಿ ಒಂದೇ ಮಟ್ಟದ ಪ್ರಾವೀಣ್ಯ, ಒಂದೇಮಟ್ಟದ ಶಾಸ್ತ್ರಜ್ಞಾನ ಮತ್ತು ಇಬ್ಬರೂ ಸೇರಿ ಜೊತೆಯಲ್ಲಿ ಹಾಡುತ್ತಿದ್ದರು, ಇಬ್ಬರಿಗೂ ಗಾಢವಾದ ಸ್ನೇಹ.

ಕರ್ನಾಟಕ ಸಾಹಿತ್ಯ ಪರಿಷತ್ತು ಪ್ರಾರಂಭವಾದಾಗ ವಿದ್ವ್‌ತ್ ಪ್ರಮುಖರು ನಾನಾ ಪ್ರಾಂತಗಳಿಂದ ಬೆಂಗಳೂರಿಗೆ ಬಂದಿದ್ದರಷ್ಟೆ. ಅವರನ್ನು ಗೌರವಿಸುವುದಕ್ಕೆಂದು ಒಂದು ಸಂಜೆ ವಿನೋದಕೂಟವನ್ನು ಸೆಂಟ್ರಲ್ ಕಾಲೇಜ್ ಹಾಸ್ಟೆಲಿನ ಆವರಣದಲ್ಲಿ ಏರ್ಪಡಿಸಿತ್ತು. ಆ ಸಮಯದಲ್ಲಿ ಹಾಸ್ಟಲಿನ ವಾರ್ಡನರಾಗಿದ್ದ ಪ್ರೊಫೆಸರ್ ಬಿ. ವೆಂಕಟೇಶಾಚಾರ್ಯರು ಬಹು ವಿಧಗಳಲ್ಲಿ ಉಪಕರಿಸಿ ಸಹಾಯ ಮಾಡಿದರು. ಆ ವಿನೋದಕೂಟದಲ್ಲಿ ಉಪಾಹಾರವಾದ ಬಳಿಕ ಪುಟ್ಟಪ್ಪನವರ ಬಾಯಿ ಹಾಡಿಕೆಯ ಕಛೇರಿ ನಡೆಯಿತು. ಸಭಿಕರು ಆನಂದಪಟ್ಟು ಸಂಗೀತಗಾರರನ್ನು ಶ್ಲಾಘಿಸಿದರು. ಎಚ್.ವಿ.ನಂಜುಂಡಯ್ಯನವರು ಸಂಗೀತ ಬಹಳ ಚೆನ್ನಾಗಿತ್ತೆಂದು ನನ್ನ ಕಿವಿಯಲ್ಲಿ ಉಸಿರಿದರು. ಧಾರವಾಡ, ಮಂಗಳೂರು ಕಡೆಗಳಿಂದ ಬಂದಿದ್ದವರು “ಇಂಥ ಒಳ್ಳೆಯ ಸಂಗೀತ ಉಂಟೆಂದು ನಮಗೆ ತಿಳಿದಿರಲಿಲ್ಲ” ಎಂದರು.

ಪುಟ್ಟಪ್ಪನವರು ತುಂಬ ಸರಳರು. ಒಳ್ಳೆಯ ಸ್ವಭಾವದವರು. ಸಂತೋಷಶೀಲರಾದ ಸ್ನೇಹಿತರು.

೧೮

ಬೆಂಗಳೂರಿನ ನಾಗಸ್ವರ ವಿದ್ವಾಂಸರು

ಬೆಂಗಳೂರು ಬಾಯಿಹಾಡಿಕೆಗೂ ವೀಣೆ ಮೊದಲಾದ ಅತಿಸೂಕ್ಷ್ಮ ವಾದ್ಯಗಳಿಗೂ ಮೈಸೂರು ಪಟ್ಟಣದಷ್ಟು ಪ್ರಶಸ್ತವಾಗಲಿಲ್ಲವೆಂದು ಹೇಳಿದೆ. ಆದರೆ ಮೇಳದ ವಿಷಯದಲ್ಲಿ ಬೆಂಗಳೂರಿನ ಪ್ರಶಸ್ತಿ ಹೆಚ್ಚಿನದೆಂದು ಹೇಳಬಹುದು. ಓಲಗದವರು ಬೆಂಗಳೂರಿನಲ್ಲಿ ತಕ್ಕಷ್ಟು ಪ್ರೋತ್ಸಾಹ ಪಡೆದಿದ್ದರು. ಆ ಕಾಲದಲ್ಲಿ ತಾಲ್ಲೂಕು ಟೌನುಗಳಲ್ಲಿಯೂ ಒಳ್ಳೊಳ್ಳೆಯ ಮೇಳಗಾರರಿದ್ದರು. ಪುರಾತನ ದೇವಸ್ಥಾನಗಳೂ ಮಠಗಳೂ ಇದ್ದ ಕಡೆ ಓಲಗದ ಪ್ರಶಸ್ತಿ ಹೆಚ್ಚಾಗಿರುವುದು ಸ್ವಾಭಾವಿಕ. ಮುಳಬಾಗಲಿನಲ್ಲಿ ಬಹಳ ಸೊಗಸಾಗಿ ಮೇಳ ನುಡಿಸುವವರಿದ್ದರು. ಅವರಲ್ಲಿ ವೆಂಕಟಪ್ಪ ಎಂಬವರು ಮುಖ್ಯರು. ಇವರ ಮೇಳದ ಸೊಗಸನ್ನು ಮೆಚ್ಚಿಕೊಂಡ ಒಬ್ಬ ಮಠಾಧೀಶ್ವರರು ಅವರಿಗೆ ಒಂದು ಬೆಳ್ಳಿಯ ಮೇಳವನ್ನು ಮಾಡಿಸಿಕೊಟ್ಟಿದ್ದರು. ವೆಂಕಟಪ್ಪನವರು ಮರ್ಯಾದೆಯಾಗಿ ಆ ಬೆಳ್ಳಿಯ ಮೇಳವನ್ನು ಹೆಗಲ ಮೇಲೆ ಧರಿಸುತ್ತಿದ್ದರು. ಊದುತ್ತಿದ್ದದ್ದು ಅವರಿಗೆ ರೂಢಿಯಾದ ಮರದ್ದನ್ನು.

ಮುನಿವೆಂಕಟಪ್ಪ

ಅಲಸೂರಿನ ಮುನಿವೆಂಕಟಪ್ಪನವರು ಒಳ್ಳೆಯ ವಿದ್ವಾಂಸರು. ಆರ್ಕಾಟ್ ಶ್ರೀನಿವಾಸಾಚಾರ್ಯರವರು ಮುನಿಸಿಪಲ್ ಪಾರ್ಕಿನಲ್ಲಿ ಮಹಾಜನರ ಸಂತೋಷಕ್ಕಾಗಿ ಭಾನುವಾರ ಸಂಜೆ ಓಲಗ ನಡೆಯುವಂತೆ ಏರ್ಪಾಟುಮಾಡಿದಾಗ ಮುನಿವೆಂಕಟಪ್ಪನವರು ಅಲ್ಲಿ ನುಡಿಸುತ್ತಿದ್ದರು.

ಒಂದು ದಿನ ಸಂಜೆ ಅವರ ಕಛೇರಿ ನಡೆಯುತ್ತಿದ್ದಾಗ ಮೇಳವನ್ನು ಬದಿಗಿಟ್ಟು ಕೈಯಲ್ಲಿ ತಾಳ ತೋರಿಸುತ್ತಿದ್ದರು. ಶಿಷ್ಯನೊಬ್ಬ ನುಡಿಸುತ್ತಿದ್ದ. ಒಬ್ಬಾತ ಮುನಿವೆಂಕಟಪ್ಪನವರ ಬಳಿಗೆ ಹೋಗಿ "ನಾವು ಬಂದಿರುವುದು ನಿಮ್ಮ ಮೇಳ ಕೇಳುವುದಕ್ಕೆ, ಶಿಕನಾರುಗಳನ್ನು ಮುಂದೆ ಬಿಟ್ಟುಬಿಟ್ಟಿದ್ದೀರಲ್ಲ?" ಎಂದು ಕೇಳಿದ. ಮುನಿವೆಂಕಟಪ್ಪನವರು ನಕ್ಕು ಹೇಳಿದರು: "ಸ್ವಾಮಿ, ಈ ಹೊತ್ತಿನ ಶಿಕನಾರೇ ನಾಳೆಯ ವಿದ್ವಾಂಸ ಅಲ್ಲವೆ? ಹುಡುಗ ಚೆನ್ನಾಗಿ

ನುಡಿಸುತ್ತಾನೆ. ಹೀಗೆ ಹೊರಗೆ ಅಭ್ಯಾಸವಾದರೆ ಅವನ ವಿದ್ಯೆ ಬೆಳೆಯುತ್ತದೆ. ನೀವೆಲ್ಲ ಪ್ರೋತ್ಸಾಹ ಕೊಡಬೇಕು."

ಇನ್ನೊಬ್ಬ ಬೆಂಗಳೂರಿನ ವಿದ್ವಾಂಸ ನಾಗಭೂಷಣಂ ಎಂಬಾತ. ಈತ ದಕ್ಷಿಣದೇಶದಲ್ಲಿ ವಿದ್ಯೆ ಕಲಿತು ಬಂದವನು. ಹತ್ತಿಪ್ಪತ್ತು ಮೆಡಲುಗಳನ್ನು ಸಂಪಾದಿಸಿಕೊಂಡಿದ್ದ. ಆತನದು ಒಳ್ಳೆಯ ಘನವಾದ ಸಂಗೀತ. ಆರ್. ನರಸಿಂಹಾಚಾರ್ಯರು ಆತನ ಕಲಾಕೌಶಲವನ್ನು ತುಂಬ ಮೆಚ್ಚಿಕೊಂಡಿದ್ದರು.

ಇನ್ನೊಬ್ಬ ಹೆಸರುವಾಸಿಯಾಗಿದ್ದವನು ಮುನಿವೆಂಕಟದಾಸಯ್ಯ ಎಂಬಾತ. ಈತನ ವಾದನವೂ ಕೇಳಲು ತುಂಬ ಉಲ್ಲಾಸಕರವಾದದ್ದು. ಕೆಲವು ಕಾಲ ಈತನು ಶಂಕರಮಠದಲ್ಲಿ, ಆಚಾರ್ಯ ದೇವಾಲಯದಲ್ಲಿ ಸೇವೆ ನಡಸುತ್ತಿದ್ದ. ಬಸವನಗುಡಿಯಲ್ಲಿ ವಸಂತಪುರದ ರಾಮಯ್ಯ ಹಾಗೆಯೇ ಪ್ರಸಿದ್ಧ.

ಹೀಗೆ ಬಹುಮಂದಿ ಮೇಳದ ವಿದ್ವಾಂಸರು ಬೆಂಗಳೂರಿನಲ್ಲಿದ್ದರು.

ಬೆಂಗಳೂರಿನಲ್ಲಿ ಮೇಳದ ಸಂಭ್ರಮ ಪ್ರತಿ ವರ್ಷವೂ ಮೂರು ಸಂದರ್ಭಗಳಲ್ಲಿ ಇರುತ್ತಿತ್ತು:

1. ಕರಗ-ಚೈತ್ರಮಾಸದಲ್ಲಿ ಪಟ್ಟಣದ ನಾನಾ ಬೀದಿಗಳ ದೇವಸ್ಥಾನದ ಭಕ್ತ ಮಂಡಳಿಗಳಿಗೆ ಉತ್ಸವಾಡಂಬರದ ವಿಷಯದಲ್ಲಿ ಪರಸ್ಪರ ಸ್ಪರ್ಧೆ. ಬಳ್ಳಾಪುರ ಪೇಟೆಯ ರಂಗಸ್ವಾಮಿ ದೇವಾಲಯ, ಉಪ್ಪಾರಪೇಟೆ ನರಸಿಂಹಸ್ವಾಮಿ ದೇವಾಲಯ, ತುಪ್ಪದಾಂಜನೇಯನ ದೇವಾಲಯ, ನಗರ್ತರ ಪೇಟೆಯ ಕಾಳಮ್ಮನ ದೇವಾಲಯ, ಅಣ್ಣಮ್ಮನ ದೇವಾಲಯ, ಕೋಟೆಯ ಜಲಕಂಠೇಶ್ವರದೇವಾಲಯ, (ಸೂತಕದ) ಆಂಜನೇಯ ದೇವಾಲಯ - ಈ ಮತ್ತು ಇತರ ದೇವಾಲಯಗಳ ಸೇವಾಕರ್ತರುಗಳು ಆರು ತಿಂಗಳಿಗೆ ಮುಂಚೆಯೇ ಹೂವಿನವರಿಗೂ ಓಲಗದವರಿಗೂ ಮುಂಗಡ ಹಣ ಕೊಟ್ಟು ಒಪ್ಪಂದ ಮಾಡಿಕೊಂಡಿರುತ್ತಿದ್ದರು. ಓಲಗಕ್ಕಾಗಿ ಪೈಪೋಟಿ ನಡೆದು ದಕ್ಷಿಣ ದೇಶದಿಂದ ಮೇಳಗಾರರು ಬರುತ್ತಿದ್ದರು. ಇವರಲ್ಲಿ ನನಗೆ ತಿಳಿದಾತ ಸುಬ್ರಹ್ಮಣ್ಯ ಪಿಳ್ಳೆ. ಹಗಲು ಆತ ಕೈಗೆ ಸಿಕ್ಕುತ್ತಿರಲಿಲ್ಲ. ಸಂಜೆ ಗೊತ್ತಾದ ಹೊತ್ತಿಗೆ ಓಲಗ ಕೈಯಲ್ಲಿ ಹಿಡಿದು ನಿಂತನೆಂದರೆ ಆತನ ವೈಖರಿಯೇ ವೈಖರಿ.

   ನಾಗಸ್ವರದ ಸುಖವನ್ನು ಅನುಭವಿಸಬೇಕೆನ್ನುವವರು ಮೇಳಗಾರರಿಂದ ಒಂದೆರಡು ಫರ್ಲಾಂಗುಗಳ ದೂರದಲ್ಲಿರಬೇಕು. ಅದೂ ರಾತ್ರಿ-ಹತ್ತು ಘಂಟೆ ಕಳೆದ ಮೇಲೆ, ವಾತಾವರಣದಲ್ಲಿ ಧೂಳೂ ಇತರ ಶಬ್ದಗಳ ತರಂಗಗಳೂ ಕಡಮೆ ಆಗಿರುವ

ಕಾಲದಲ್ಲಿ ನಾದಲಹರಿ ಅಲೆ ಅಲೆಯಾಗಿ ಹರಿದು ಬರುತ್ತದೆ. ಸ್ವರಶುದ್ಧಿ, ರಾಗದ ಒಯ್ಯಾರ-ಇವನ್ನು ಸುಬ್ರಹ್ಮಣ್ಯ ಪಿಳ್ಳೆಯ ನಾಗಸ್ವರದಿಂದ ಕೇಳಬೇಕು.

ಇಂಥ ವಿದ್ವಾಂಸರನ್ನು-ಅವರ ನಾಲ್ಕಾರು ಗುಂಪುಗಳನ್ನು ಕರಗದ ದಿವಸಕ್ಕೆ ಕರಸುತ್ತಿದ್ದರು. ನಾನು ಸುಮಾರು ಹತ್ತು ಹನ್ನೆರಡು ವರ್ಷ ಆ ಸಂತೋಷವನ್ನು ಅನುಭವಿಸಿದ್ದೇನೆ. ರಾತ್ರಿ ಹನ್ನೆರಡು ಘಂಟೆಯ ವೇಳೆಗೆ ಕೋಟೆ ಆಂಜನೇಯಸ್ವಾಮಿ ಗುಡಿಯ ಬಳಿ, ಜನಸಂಮರ್ದ ಕಡಮೆಯಾಗಿರುವ ಕಡೆ ನಿಂತರೆ ದೊಡ್ಡ ಪೇಟೆಯ ಕಡೆಯಿಂದ ಘಮಘಮಾಯಿಸುವ ಮಲ್ಲಿಗೆ ವಾಸನೆಯೂ ತರಂಗತರಂಗವಾಗಿ ಹರಿದುಬರುವ ನಾಗಸ್ವರ ನಾದದ ಇಂಪೂ ಮನಸ್ಸನ್ನು ಪರವಶವನ್ನಾಗಿ ಮಾಡುತ್ತಿದ್ದವು.

ಕರಗಕ್ಕಾಗಿ ಬಂದ ಮೇಳದವರ ಗುಂಪು ಎರಡುಮೂರು ದಿನ ಇರುತ್ತಿತ್ತು. ದೇವರುಗಳ ಮೆರವಣಿಗೆ ಬೀದಿಗಳಲ್ಲೆಲ್ಲ ಬಂದು ಆ ಓಲಗದ ಸೊಂಪು ಮನೆ ಮಕ್ಕಳಿಗೆಲ್ಲ ಲಭಿಸುತ್ತಿತ್ತು.

2. ಬೆಂಗಳೂರಿನ ಎರಡನೆಯ ಓಲಗದ ಸಂದರ್ಭ ಗಣೇಶ ಚೌತಿಯದು. ಇದು ಮರಾಠಿ ಭಾಷೆ ಮಾತನಾಡುವ ಜನರಲ್ಲಿ ವಿಶೇಷ. ಬೆಂಗಳೂರಿನ ಸಂತೂಸಾಪೇಟೆ, ಚಿಕ್ಕ ಪೇಟೆ, ರಾಣಾಸಿಂಗ್ ಪೇಟೆ ಮುಂತಾದ ಕಡೆಗಳಲ್ಲಿರುವ ಪಟ್ಟೆಗಾರರು ದರ್ಜಿಗಳು ಮುಂತಾದ ಜನಾಂಗ ಒಂದೊಂದು ದಿನ ಮೇಳ ಮಾಡಿಸಿಕೊಂಡು ಮೆರವಣಿಗೆ ಹೊರಡುತ್ತಿದ್ದರು. ಅವರಲ್ಲಿ ಪ್ರಮುಖರಾದವರು ಪನ್ನೀರು ದಾನಿಯನ್ನೂ ಹೂವಿನ ಹಾರವನ್ನೂ ಕೈಯಲ್ಲಿ ಹಿಡಿದು ದಾರಿಯಲ್ಲಿ ಅವರಿಗೆ ಕಾಣಬಂದ ದೊಡ್ಡ ಮನುಷ್ಯರಿಗೆಲ್ಲ ಹೂಗಂಧಗಳನ್ನು ಸಮರ್ಪಿಸುತ್ತಿದ್ದರು. ಅದಕ್ಕಿಂತ ಮಿಗಿಲಾದದ್ದು ಆ ಓಲಗದ ಸವಿ. ಇದು ಐವತ್ತು ವರ್ಷಗಳ ಕೆಳಗಿನ ಮಾತು. ಈಗ ಆ ಸಂಭ್ರಮ ಉಂಟೋ ಇಲ್ಲವೋ ನಾನು ಅರಿಯೆ.

3. ಮೂರನೆಯದು ಅಲಸೂರಿನಲ್ಲಿ ಸೋಮೇಶ್ವರಸ್ವಾಮಿಯ ರಥೋತ್ಸವ ಕಾಲದ್ದು. ಆಗಣ ಹೂಪಾಲಕಿಯ ಉತ್ಸವ ಬೇಸಗೆಯ ಒಂದು ಹುಣ್ಣಿಮೆಯ ಬೆಳುದಿಂಗಳಿನಲ್ಲಿ. ಅದಕ್ಕಾಗಿ ಜನ ಚಾಮರಾಜ ಪೇಟೆಯಿಂದ ಸಹ ತಂಡತಂಡವಾಗಿ ಹೋಗುತ್ತಿದ್ದರು. ಆಗಿನ ಓಲಗ ಭರ್ಜರಿ ಓಲಗ. ಒಂದು ಸಾರಿ ಒಬ್ಬ ಸಂಗೀತ ವಿದ್ವಾಂಸರು ಅಲಸೂರಿಗೆ ಹೋಗಿ ಆ ಒಲಗವನ್ನು ಕೇಳಿ ಬಂದ ಮೇಲೆ ನಾನು ಅವರನ್ನು ಕೇಳಿದೆ-ಓಲಗ ಹೇಗಿತ್ತೆಂದು. ನಾನು ಯಾವ ಕಾರಣದಂದಲೋ ಆ ಸಾರಿ ಹೋಗಲಾಗಿರಲಿಲ್ಲ. ಆ ವಿದ್ವಾಂಸರು ಹೇಳಿದರು.: “ಸ್ವಾಮಿ, ನಾನು

ದೂರದಲ್ಲಿ ನಿಂತು ಕೇಳಿದೆ. ಅದು ವೀಣೆಯೋ, ಪಿಟೀಲೋ, ಕೊಳಲೋ ಎನ್ನುವ ಹಾಗಿತ್ತು ಅದರ ನಾದ. ಸಂಗೀತವೆಂದರೆ ಅದು ಸಂಗೀತ".

ಇದೆಲ್ಲ ಗತವೈಭವವೆಂದು ನನಗನ್ನಿಸುತ್ತದೆ. ಈಗ ಬೆಂಗಳೂರಿನಲ್ಲಿ ನಾನು ಯಾವಾಗಲಾದರೂ "ಚೆನ್ನಾಗಿತ್ತಲ್ಲ -ಅದು ಯಾರು?" ಎಂದರೆ- "ಯರೋ ದಕ್ಷಿಣ ದೇಶದವರು" ಎನ್ನುತ್ತಾರೆ. ದಕ್ಷಿಣ ದೇಶದವರು ಮಹಾ ವಿದ್ವಾಂಸರು. ಅವರು ಅವಶ್ಯವಾಗಿ ಬೆಂಗಳೂರಿಗೆ ಬರಬೇಕಾದದ್ದು. ಅದು ಸಂತೋಷದ ವಿಷಯವೂ ಹೌದು, ಆದರೆ ಬೆಂಗಳೂರಿನವರೂ ಹಾಗೆ ಮೇಲಕ್ಕೆ ಬರಬೇಡವೇ?

ಅತಿಶಯ ನಿಷ್ಠೆ

ದಕ್ಷಿಣ ದೇಶದಲ್ಲಿ ನಾಗಸ್ವರದ ಕಲೆ ಸೊಂಪಾಗಿ ಬೆಳೆದಿದೆ ಮತ್ತು ಬೆಳೆಯುತ್ತಿದೆ. ನನ್ನ ಸ್ನೇಹಿತರಾದ ಎ. ಶೇಷಗಿರಿರಾಯರು ಮದರಾಸ್ ಪ್ರಾಂತದಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಹುದ್ದೆಯಲ್ಲಿದ್ದವರು. ಅವರು ಒಂದು ಮಾತು ಹೇಳಿದರು. ತಮಿಳು ದೇಶದ ಯಾವುದೋ ಒಂದು ಹಳ್ಳಿಗೆ ಇವರು ಹೋಗಿದ್ದಾಗ ಅಲ್ಲಿಯ ಗುಡಿಯ ಮೇಳವನ್ನು ಕೇಳಿ ಆನಂದಭರಿತರಾಗಿ ಆ ಮೇಳದಾತನನ್ನು "ಬೆಂಗಳೂರಿಗೆ ಒಂದು ಸಾರಿ ಬಂದು ಎರಡು ಮೂರು ದಿನ ಇರಲಾಗುತ್ತದೆಯೆ? ಖರ್ಚು ವೆಚ್ಚಗಳನ್ನೆಲ್ಲ ನಾವು ನೋಡಿಕೊಳ್ಳುತ್ತೇವೆ" ಎಂದರಂತೆ. ಅದಕ್ಕೆ ಉತ್ತರವಾಗಿ ಆತ ಹೇಳಿದ: "ಸ್ವಾಮಿ, ಈ ದೇವಾಲಯದ ಸೇವೆಗಾಗಿ ಕೊಟ್ಟಿರುವ ಇನಾಂ ಜಮೀನಿನಿಂದ ನಮ್ಮ ಜೀವನ. ನಿಮಗೆ ಯಾವ ರಾಗವನ್ನಾದರೂ ಕೇಳಬೇಕೆಂದು ಇಷ್ಟವಿದ್ದರೆ ಅದನ್ನು ದಯವಿಟ್ಟು ತಿಳಿಸಿ. ಅದನ್ನು ನಮಗೆ ಬಂದಂತೆ ಇಲ್ಲಿಯೇ ಸಂತೋಷದಿಂದ ನುಡಿಸುತ್ತೇವೆ. ತಾವು ಕೇಳಬಹುದು. ಬೇಕಾದವರು ಕೇಳಬಹುದು. ಆದರೆ ಈ ಸನ್ನಿಧಾನದಿಂದ ಹೊರಗಡೆ ನಾವು ಬರಲಾಗುವುದಿಲ್ಲ."

ತಮಿಳು ದೇಶದಲ್ಲಿ ಕಾವೇರಿಯ ಉಭಯ ತೀರಗಳಲ್ಲಿಯೂ ಇತರ ಸಣ್ಣ ದೊಡ್ಡ ನದಿಗಳ ತೀರಗಳಲ್ಲಿಯೂ ಮೈಲಿ ಮೈಲಿಗೂ ಒಂದು ದಿವ್ಯ ಕ್ಷೇತ್ರವಿರುತ್ತದೆ. ಆ ನೂರಾರು ಗುಡಿಗಳಲ್ಲಿ ನಿತ್ಯಸೇವೆಗಾಗಿ ನೂರಾರು ನಾಗಸ್ವರ ಕುಟುಂಬಗಳು ಸ್ಥಿರವಾಗಿ ನೆಲಸಿರುತ್ತವೆ. ಅದು ಸಂಗೀತವಿದ್ಯೆಗೆ ದಕ್ಷಿಣ ದೇಶದಲ್ಲಿರುವ ಭಾಗ್ಯ.

ಮಾಲ್‌ಕೌಸ್

ನನ್ನ ನಾಗಸ್ವರದ ಅನುಭವವನ್ನು ಕುರಿತು ಒಂದು ವಿಶೇಷ ಸಂಗತಿಯನ್ನು ಹೇಳಬೇಕೆನಿಸುತ್ತದೆ.

೧೯೩೪-೩೫ರ ಸಮಯದಲ್ಲಿ ಆಗಿನ ಮಹಾರಾಜರ ವರ್ಷವರ್ಧಂತಿಯ ಉತ್ಸವ ಕಾಲದಲ್ಲಿ ಮೈಸೂರಿಗೆ ಹೋಗಿದ್ದೆ. ಅಂದು ಬೆಳಗ್ಗೆ ಅರಮನೆಗೆ ಹೋದೆ. ಬೆಳಗ್ಗೆ ಸುಮಾರು ಒಂಭತ್ತು ಘಂಟೆ ಇರಬಹುದು. ಅಂಬಾವಿಲಾಸದ ತೊಟ್ಟಿಯಲ್ಲಿ ಸಭೆ ನೆರೆದಿತ್ತು. ಸಭಾಮಂದಿರ ಶೋಭಾಯಮಾನವಾಗಿತ್ತು. ಹೂಮಾಲೆಗಳ ತೋರಣ ಅಲಂಕಾರಗಳ ಜೊತೆಗೆ ಆ ಭವನದ ಒಂದೊಂದು ಅಂಕಣದಲ್ಲೂ ಒಂದು ಗಾಜಿನ (ಫೌಂಟನ್) ನೀರಿನ ಚಿಲುಮೆ ಆಡುತ್ತಿತ್ತು. ಅದರಲ್ಲಿ ಬುಗ್ಗೆಯಿಂದ ಮೇಲಕ್ಕೆದ್ದು ಅದರ ತಟ್ಟೆಯಲ್ಲಿ ಬೀಳುತ್ತಿದ್ದ ಧಾರೆ ಪನ್ನೀರಿನದು. ಸಭೆಯಲ್ಲಿ ಎಲ್ಲೆಲ್ಲಿಯೂ ಸೊಗಸಾದ ಪರಿಮಳ. ಒಂದು ಕಡೆ ಓಲಗ ನಡೆಯುತ್ತಿತ್ತು. ಅಲ್ಲಿ ನಾನು ಕೆಲವರು ಸ್ನೇಹಿತರ ನಡುವೆ ಕುಳಿತಿದ್ದೆ. ನನ್ನ ಪಕ್ಕದಲ್ಲಿದ್ದ ಸ್ನೇಹಿತರು “ಎಷ್ಟು ಸುಖವಾಗಿದೆಯಪ್ಪ ಈ ರಾಗ! ಇದು ಯಾವ ರಾಗ?” ಎಂದು ಪಿಸುಮಾತಿನಲ್ಲಿ ಕೇಳಿದರು. ನಾನು ಮೆಲುದನಿಯಲ್ಲಿ “ಯಾವುದೋ ಹಿಂದೋಳದ ಜಾತಿಗೆ ಸೇರಿದ ರಾಗ ಇರಬಹುದು” ಎಂದೆ. ನನ್ನ ಬಲಪಕ್ಕದಲ್ಲಿ ಬಿಡಾರಂ ಕೃಷ್ಣಪ್ಪನವರು ಕುಳಿತಿದ್ದರು. ಅವರು ನನ್ನ ಕಿವಿಯಲ್ಲಿ “ಇದು ಮಾಲ್‌ಕೌಸ್” ಎಂದು ಹೇಳಿದರು. ಅವರ ಮುಖದ ಮೇಲೆ ಆಗ ಇದ್ದ ನಗು, ಅವರು ನನ್ನಲ್ಲಿ ತೋರಿದ ವಿಶ್ವಾಸ ಮೋಹಕವಾದವು. ಆ ಪ್ರತಿಮೆ ನನ್ನ ನೆನಪಿನಲ್ಲಿ ನಿಂತಿದೆ. ಆ ಬೆಳಗ್ಗೆ ನಾವು ಅನುಭವಿಸಿದ ಸುಖದ ಸವಿಯೂ ಹಾಗೆಯೇ ನಿಂತಿದೆ. ಅದು ಮನಸ್ಸನ್ನು ಶಾಂತಿಗೆ ತಂದು ಪರವಸ್ತುಧ್ಯಾನಕ್ಕೆ ಅನುಗೊಳಿಸುವ ರಾಗ ಮತ್ತು ರಾಗರೀತಿ. ನಾವು ಗಂಧರ್ವರನ್ನು ಕೇಳಿಲ್ಲ. ಆ ಹೊತ್ತಿನ ಮಾಲ್‌ಕೌಸ್ ಅದೇ ಗಂಧರ್ವಗಾನವೆಂದು ಭಾವಿಸುವಂತೆ ಇತ್ತು. ಆಮೇಲೆ ನಾನು ವಿಚಾರಿಸಿದೆ: ಆ ಮೇಳದವರು ಕಾಶಿಯ ಕಡೆಯವರಂತೆ. ಅವರು ಊದುತ್ತಿದ್ದ ವಾದ್ಯವನ್ನು ಶಹನಾಯ್ ಎಂದು ಕರೆಯುತ್ತಾರಂತೆ.

ಅರಸಿಕತೆ

ಇಂಥ ಕಲಾಪ್ರೋತ್ಸಾಹಕರನ್ನು ನಮ್ಮ ನವೀನ ರಾಜ್ಯಪದ್ಧತಿ ನಿರ್ನಾಮಮಾಡಿದೆ. ದೆಹಲಿಯಲ್ಲಾಗಲಿ ಲಕ್ನೋದಲ್ಲಾಗಲಿ ಅಂಥ ವಾದ್ಯಗಾರರು ಇದ್ದಾರೆಯೊ? ಅವರಿಂದ ಮಾಲ್‌ಕೌಸ್ ರಾಗ ನುಡಿಸಿ ನಮ್ಮ ಇಂದಿನ ಬೀದಿ ಭಾಷಣದ ಪ್ರಭುಗಳು ವರ್ಷಕ್ಕೊಮ್ಮೆಯಾದರೂ ಕೇಳುವುದುಂಟೊ? ಕೇಳುವವರ ಕಿವಿಗಳು ಸುಶಿಕ್ಷಿತವಾದ ಕಿವಿಗಳೊ? ಈ ವಿಷಯವನ್ನೆಲ್ಲ ನಮ್ಮ ಪೂರ್ವಿಕರು ಆಮೂಲಾಗ್ರವಾಗಿ ಆಲೋಚನೆ ಮಾಡಿ ತಮ್ಮ ಸಿದ್ಧಾಂತವನ್ನು ಬಹು ಸುಂದರವಾಗಿ ಹೇಳಿದ್ದಾರೆ:

> ಸಂಗೀತಸಾಹಿತ್ಯರಸಾನಭಿಜ್ಞಃ
> ಸಾಕ್ಷಾತ್ಪಶುಃ ಪುಚ್ಛವಿಷಾಣಹೀನಃ ।
> ತೃಣಂ ನ ಖಾದನ್ನಪಿ ಜೀವಮಾನಃ
> ತದ್ಭಾಗಧೇಯಂ ಪರಮಂ ಪಶೂನಾಮ್ ॥

ಸಂಗೀತ ಸಾಹಿತ್ಯಗಳ ರಸವನ್ನು ರುಚಿಸಲಾರದವನು ಪ್ರತ್ಯಕ್ಷವಾಗಿ ಎದುರಿಗೆ ನಿಂತ ಪಶುವೇ. ಪಶುಸಮಾನನು ಮಾತ್ರವಲ್ಲ, ಪಶುವೇ ಅವನು. ಹಾಗದರೆ ವ್ಯತ್ಯಾಸವೇನು? ಬೇರೆ ಹಸುವಿಗೆ ಕೊಂಬು ಬಾಲಗಳುಂಟು; ಇವನಿಗೆ ಕೊಂಬು ಬಾಲಗಳಿಲ್ಲ ಅಷ್ಟೆ. ಪಶು ಹುಲ್ಲು ತಿನ್ನುತ್ತದಲ್ಲ? ಇವನು ತಿನ್ನುತ್ತಾನೋ? -ಎಂದರೆ ಇವನು ಹುಲ್ಲನ್ನೇನೋ ತಿನ್ನುವುದಿಲ್ಲ, ನಿಜ, ಆದರೆ ಇವನು ಸ್ವಂತ ವಿವೇಕದಿಂದ ಹುಲ್ಲನ್ನು ತಿನ್ನದೆ ಬಿಟ್ಟವನಲ್ಲ. ಪಶುಗಳ ಅದೃಷ್ಟದಿಂದ ಇವನು ಹುಲ್ಲನ್ನು ತಿನ್ನುವುದಿಲ್ಲವೆನ್ನಬೇಕು. ಅರ್ಥಾತ್ ಪಶುಗಳ ಅದೃಷ್ಟ ಕಡಮೆಯಾಗಿದ್ದಿದ್ದರೆ ಇವನು ಹುಲ್ಲನ್ನೂ ತಿಂದುಬಿಡುತ್ತಿದ್ದ.

೧೯

ವರದಾಚಾರ್ಯರ ರಸಜ್ಞತೆ, ಶೀಲೋನ್ನತಿ

ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರಿಂದ ಕನ್ನಡ ಸಾಹಿತ್ಯಕ್ಕೆ ಆಗಿರುವ ಉಪಕಾರವನ್ನು ಯಾರೂ ವಿಸ್ತಾರವಾಗಿ ವಿವರಿಸಿರುವಂತೆ ನನಗೆ ಕಂಡುಬಂದಿಲ್ಲ. ಅವರು ಆಡುತ್ತಿದ್ದ ನಾಟಕಗಳು ಮುದ್ರಣ ಕಾಣಲಿಲ್ಲ. ಅವರ ನಾಟಕಸಾಹಿತ್ಯದ, ಹಾಡುಗಳ, ಮತ್ತು ಪದ್ಯಗಳ ಸೊಗಸನ್ನು ವರ್ಣಿಸಲು ಮಾತುಗಳು ಸಾಲದು. ಅವು ಎಷ್ಟು ನಿರ್ದುಷ್ಟವಾಗಿ, ಎಷ್ಟು ರಸವತ್ತಾಗಿ, ಎಷ್ಟು ಓಜಸ್ವಿಯಾಗಿ ಬರುತ್ತಿತ್ತೆಂಬುದನ್ನು ಕೇಳಿ ನಾನು ಆಶ್ಚರ್ಯಪಡುತ್ತಿದ್ದೆ.

ವರದಾಚಾರ್ಯರೊಡನೆ ಮಾತುಕಥೆಯಾಡುವ ಯೋಗ ನನ್ನ ಪಾಲಿಗೆ ಬಂದದ್ದಲ್ಲ. ಅವರನ್ನು ಹತ್ತಿರದಿಂದ ಕಂಡವನೂ ನಾನಲ್ಲ. ನಾಟಕಶಾಲೆಯಲ್ಲಿ, ಪ್ರೇಕ್ಷಕಸ್ಥಾನದಲ್ಲಿ ಕುಳಿತು ದೂರದಿಂದ ಅವರ ಕಲಾಪ್ರಭಾವವನ್ನು ಅನುಭವಿಸಿ ಮುಗ್ಧರಾದ ಸಾವಿರಾರು ಮಂದಿಯಲ್ಲಿ ನಾನೊಬ್ಬ.

ಅವರ ಸಮೀಪದಲ್ಲಿದ್ದು ಅವರನ್ನು ಬಲ್ಲ ಸ್ನೇಹಿತರಿಬ್ಬರು ಮೂವರು ನನಗೆ ಸ್ನೇಹಿತರು. ಅವರು ಪ್ರಾಸ್ತಾವಿಕವಾಗಿ ವರದಾಚಾರ್ಯರನ್ನು ಕುರಿತು ಆಡಿದ ಮಾತುಗಳು ನನ್ನ ನೆನಪಿನಲ್ಲಿವೆ. ವರದಾಚಾರ್ಯರು ಅಸಾಧಾರಣ ವ್ಯಕ್ತಿಯೆಂಬುದು ಈ ಮಿತ್ರ ಪ್ರಶಂಸೆಯಿಂದಲೂ ನನ್ನ ಮನಸ್ಸಿಗೆ ಸ್ಥಿರಪಟ್ಟಿದೆ.

ವರದಾಚಾರ್ಯರ ನಾಟಕ ನಾನು ನೋಡಿರುವುದು ಮೂರು ನಾಲ್ಕು ಮಾತ್ರ. ಪ್ರಹ್ಲಾದಚರಿತ್ರೆ ಎರಡು ಮೂರು ಸಲ, ಮನ್ಮಥ ವಿಜಯ ಎರಡು ಸಲ. ಬಹುಶಃ ಸಾರಂಗಧರ ಚರಿತ್ರೆ ಒಂದು ಸಲ, ಇನ್ನೊಂದು ಶಾಕುಂತಲವಿರಬಹುದು-ಇಷ್ಟು ಮಾತ್ರ. ಅದು ಈಗ್ಗೆ ಐವತ್ತು ಐವತ್ತೈದು ವರ್ಷಗಳ ಹಿಂದೆ.

ಪ್ರಹ್ಲಾದ ಚರಿತ್ರೆ

ಮೊದಲು ತುಳಸೀತೋಟದ ಬಳಿಯಲ್ಲಿದ್ದ ನಾಟಕಶಾಲೆಯಲ್ಲಿ ಪ್ರಹ್ಲಾದ ಚರಿತ್ರೆ ನೋಡಿದೆನೆಂದು ನನ್ನ ಜ್ಞಾಪಕ. ಆಗ ನಾನು ಚಾಮರಾಜಪೇಟೆಯ ನಾಲ್ಕನೆಯ ಬೀದಿಯಲ್ಲಿ ವಾಸವಾಗಿದ್ದೆ. ನನ್ನ ಮನೆಯ ಎದುರಿನಲ್ಲಿ ಅಡ್ವೊಕೇಟ್ ಎಂ. ಜಿ. ವರದಾಚಾರ್ಯರು [1] ವಾಸವಾಗಿದ್ದರು. ಅವರು ನನ್ನ ಆಪ್ತ ಸ್ನೇಹಿತರು. ಅವರು ಕಾಲವಶರಾಗಿದ್ದು ೧೯೧೯ರಲ್ಲಿ; -ವರ್ಷ ಐವತ್ತು ಕಳೆದಿದ್ದರೂ ನನ್ನ ದುಃಖ ಅಂದಿನಂತೆಯೇ ಇಂದೂ ಉಳಿದಿದೆ. ಎಂ.ಜಿ. ವರದಾಚಾರ್ಯರು ರಸಿಕರು, ಸಾಹಿತ್ಯ ವಿಶಾರದರು, ವೀರ್ಯ ವರ್ಚಸ್ಸಂಪನ್ನವಾದ ವಾಗ್ಮಿತೆಯುಳ್ಳವರು, ಉದಾರಿ. ಇವರಿಗೆ ಎ.ವಿ. ವರದಾಚಾರ್ಯರ ನಾಟಕ ಕಲೆಯಲ್ಲಿ ತುಂಬ ಮೆಚ್ಚಿಕೆ, ತುಂಬ ಆದರಣೆ. ಅವರೂ ನಾನೂ ಜೊತೆಗೂಡಿ ತುಳಸೀ ತೋಟದ ನಾಟಕಮಂದಿರಕ್ಕೆ ಹೋಗಿ ಪ್ರಹ್ಲಾದ ಚರಿತ್ರೆಯನ್ನು ನೋಡಿ ಆನಂದಪಟ್ಟೆವು. ಅದು ಜನಕ್ಕೆ ಪ್ರಿಯವಾದ ನಾಟಕ. ಮಂದಿರದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಈ ನಾಟಕವನ್ನು ನಾನು ನೋಡಿದ ಹತ್ತು ಹದಿನೈದು ದಿನಗಳ ಮೇಲೆ ಒಂದು ದಿನ ಸ್ನೇಹಿತರೊಬ್ಬರ ಮನೆಗೆ ಹೋದೆ. ಅಲ್ಲಿ ಹತ್ತು ಹನ್ನೆರಡು ಮಂದಿ ಮಿತ್ರರು ಇಸ್ಪೀಟು ಆಡುತ್ತಾ ಕುಳಿತಿದ್ದರು. ಅವರಲ್ಲಿ ಐದಾರು ಮಂದಿಯ ಬಾಯಲ್ಲಿ ಯಾವಾಗಲೂ ಈ ನಾಟಕದ ಹಾಡುಗಳೇ.

ಕಿಚ್ಚೆಟ್ಟಿ ಸತ್ರದ ಬಳಿ

ಇನ್ನೊಂದು ಸಾರಿ ನಾನು ಆ ನಾಟಕವನ್ನೂ, ಮನ್ಮಥ ವಿಜಯವನ್ನೂ ನೋಡಿದ್ದು ಕಿಚ್ಚೆಟ್ಟಿ ಸತ್ರದ ಬಳಿಯ ನಾಟಕಶಾಲೆಯಲ್ಲಿ. ಕಿಚ್ಚೆಟ್ಟಿ ಸತ್ರವಿದ್ದದ್ದು ಈಗಿನ ಗಾಂಧೀ ನಗರದಲ್ಲಿ, ಅದರ ಉತ್ತರ ಭಾಗದಲ್ಲಿ. ನಮ್ಮ ನವೀನ ದೇಶಾಭಿಮಾನವು ಪ್ರಾಚೀನವನ್ನು ಅಳಿಸಿಹಾಕುವುದರಲ್ಲಾಗಿದೆ. ಕಿಚ್ಚೆಟ್ಟಿ ಎಂಬುದು ಕೃಷ್ಣಶೆಟ್ಟಿ ಎಂಬ ಹೆಸರಿನ ಅಪಭ್ರಂಶ. ಕೃಷ್ಣಶೆಟ್ಟಿ-ಕಿಟ್ಟಶೆಟ್ಟ-ಕಿಚ್ಚೆಟ್ಟಿ. ಕೃಷ್ಣಶೆಟ್ಟರು ಧರ್ಮಿಷ್ಠರು. ಅವರು ಸತ್ರ ಕಟ್ಟಿಸಿದರು. ಅವರದು ರೈಲ್ವೆ ಸೌಕರ್ಯ ಹೊಟೇಲು ಸೌಕರ್ಯಗಳು ಇಲ್ಲದ ಕಾಲ. ಹಿಂದೂಪುರ, ತುಮಕೂರು, ಚಿಕ್ಕಬಳ್ಳಾಪುರ ಪ್ರಾಂತಗಳಿಂದ ಬಂದ ಸರಕಿನ ಬಂಡಿಗಳೂ, ಜನರೂ ಇಳಿದುಕೊಳ್ಳಲು ಅನುಕೂಲಿಸಲೆಂದು ಅವರು ಈ ಸತ್ರದ ಧರ್ಮ ಕಾರ್ಯ ಮಾಡಿದರು. ಕಾಲಪ್ರಗತಿಯಿಂದ ಅದು ಉಪೇಕ್ಷೆಗೆ ತುತ್ತಾಯಿತು. ಅದನ್ನು ಬೇರೆ ಯಾವುದಾದರೂ ಜನೋಪಕಾರ ಕಾರ್ಯಕ್ಕೆ ಬಳಸಿಕೊಂಡು ಕೃಷ್ಣಶೆಟ್ಟರ ಧರ್ಮವನ್ನು ಊರ್ಜಿತಪಡಿಸಬಹುದಾಗಿತ್ತು. ಆತನ ಹೆಸರನ್ನಾದರೂ ಉಳಿಸಬಹುದಾಗಿತ್ತು. ಹಿಂದಿನವರ ಒಳ್ಳೆಯ ಹೆಸರನ್ನು ಇಂದಿನವರು ತೊಡೆದುಹಾಕಿದರೆ ಇಂದಿನ ಸುಪ್ರತಿಷ್ಠಿತರಿಗೂ ಕಾಲಾನುಕಾಲಕ್ಕೆ ಅದೇ ಗತಿ ಬಾರದೆಹೋದೀತೇ? ಅದು ಹಾಗಿರಲಿ. ವರದಾಚಾರ್ಯರ ಕಾರಣದಿಂದ ಕೃಷ್ಣಶೆಟ್ಟರ ಹೆಸರು ಕೊಂಚಕಾಲವಾದರೂ ತೊಡೆದುಹೋಗದೆ ಆಗಾಗ ಜನದ ನೆನಪಿಗೆ ಬರುತ್ತಿತ್ತು.

ನರಸಿಂಹಯ್ಯಂಗಾರ್ಯರು

ವರದಾಚಾರ್ಯರು ನಾಟಕವಾಡುತ್ತಿದ್ದಾಗ ನಾಟಕಮಂದಿರಕ್ಕೆ ಭೂಷಣವಾಗಿದ್ದ ಒಬ್ಬಾತನನ್ನು ನಾನು ಮರೆಯಲಾಗದು. ಆತನ ಹೆಸರು ನರಸಿಂಹಯ್ಯಂಗಾರ್ ಎಂದು. ಅವರ ಅಣ್ಣ ಅನಂತರಾಮಯ್ಯಂಗಾರ್ಯರು, ಪುರಪ್ರಮುಖರಾಗಿ ಪ್ರಸಿದ್ಧರಾಗಿದ್ದ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರೊಡನೆ ಡ್ರೆಸ್ ಬಟ್ಟೆಗಳ ವ್ಯಾಪಾರದಲ್ಲಿ ಪಾಲುದಾರರಾಗಿದ್ದರು.

ನರಸಿಂಹಯ್ಯಂಗಾರ್ಯರದು ಒಳ್ಳೆಯ ಠೀವಿಯ ಆಕಾರ. ಆಳು ಎತ್ತರ, ಬಣ್ಣ ಸ್ನಿಗ್ಧವಾದ ಕಂದುಬಣ್ಣ. ಸೊಗಸಾಗಿ ಡ್ರೆಸ್ಸು ಮಾಡಿಕೊಳ್ಳುವರು, ಹೊಸ ಸ್ಟೈಲಿನಲ್ಲಿ. ತಲೆಗೆ ಕೋರೆ ರುಮಾಲು ಸುತ್ತುವರು-ಪಂಜಾಬಿ ಸ್ಟೈಲಿನಲ್ಲಿ. ಹ್ಯಾಟು ಧರಿಸುವುದೂ ಉಂಟು. ಎಲ್ಲರೊಡನೆಯೂ ನಗುನಗುತ ಮಾತನಾಡುವರು. ತುಂಬ ವರ್ಚಸ್ವಿಯಾದ ವ್ಯಕ್ತಿ, ಕಳೆಕಳೆಯಾಗಿರುವರು; ಖುಷ್‌ಭಾಷ್ ಮನುಷ್ಯ. ನಾಟಕದಲ್ಲಿ ಅವರದೇನೂ ಪಾತ್ರವಿಲ್ಲ. ಅವರನ್ನು ನೋಡುವುದೇ ಒಂದು ಸೊಗಸು. ತುಂಬ ಒಳ್ಳೆಯವರು, ದಯಾಳು. ಯಾವುದಾದರೂ ತಂಟೆ ತಕರಾರೆದ್ದರೆ ಸಮಾಧಾನ ಹೇಳುವರು. ಪ್ರಭಾವಶಾಲಿ ಅಧಿಕಾರಿ ಜನರು ಬಂದಾಗ ಇವರು ಅವರನ್ನು ಬರಮಾಡಿಕೊಳ್ಳುವರು (Receptionist). ಅಂಥ ಸ್ನೇಹತತ್ಪರನೂ, ಹಸನ್ಮುಖಿಯೂ, ಉಡುಗೆ ತೊಡಿಗೆಗಳಿಂದ ದರ್ಶನೀಯನೂ ಆದ ಮನುಷ್ಯ ಸಭೆಗೊಂದು ಭೂಷಣವಾಗಿರುತ್ತಾನೆ.

ಕಲೆಯು ಭಾಷಾತೀತ

ಆ ವರ್ಷಗಳಲ್ಲಿ ಮದರಾಸಿನ ಪ್ರಸಿದ್ಧ “ಹಿಂದೂ” ಪತ್ರಿಕೆಯ ಎ. ರಂಗಸ್ವಾಮಯ್ಯಂಗಾರ್ಯರು ಬೇಸಗೆ ಕಳೆಯಲು ಬೆಂಗಳೂರಿಗೆ ಬಂದಿರುತ್ತಿದ್ದರು. ಅವರ ಬಿಡಾರ ಚಾಮರಾಜಪೇಟೆಯಲ್ಲಿ-ಅವರ ಸೋದರಳಿಯಂದಿರು (“ಸ್ವದೇಶ ಮಿತ್ರನ್” ತಮಿಳು ಪತ್ರಿಕೆಯ) ಸಿ. ಆರ್. ಶ್ರೀನಿವಾಸನ್ ಅವರ ಮನೆಯಲ್ಲಿ. ರಂಗಸ್ವಾಮಯ್ಯಂಗಾರ್ಯರಿಗೆ ವರದಾಚಾರ್ಯರ ನಾಟಕದ ವಿಷಯದಲ್ಲಿ ತುಂಬ ಉತ್ಸಾಹ. ಅವರು ನನ್ನ ಮನೆಗೆ ಬಂದು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ರಂಗಸ್ವಾಮಯ್ಯಂಗಾರ್ಯರು ವಿದ್ವಾಂಸರು. ಸಂಸ್ಕೃತ-ಸಂಗೀತಗಳಲ್ಲಿ ಪರಿಶ್ರಮ ಮಾಡಿದ್ದವರು.

ರಂಗಸ್ವಾಮಯ್ಯಂಗಾರ್ಯರು ತಮಿಳರು. ಅವರಿಗೆ ಕನ್ನಡ ತಿಳಿಯದು. ಆದರೂ ದ್ವಿಭಾಷಿಯ (Interpreter) ಅಪೇಕ್ಷೆಯಿಲ್ಲದೆ ಅವರು ನಾಟಕ ಸಂದರ್ಭಗಳನ್ನು ಒಂದು ಸಹ ಬಿಡದೆ ಅರ್ಥವರಿತು ಅನುಸರಿಸುತ್ತಿದ್ದರು.

ಈ ಸಂಗತಿಯಲ್ಲಿ ಅಡಗಿರುವ ತತ್ತ್ವ ನಮ್ಮ ಇಂದಿನ ಸಂದರ್ಭಕ್ಕೆ ಹೊಂದತಕ್ಕದ್ದಾಗಿದೆ.

1. ಕಥಾವಸ್ತು (ಪ್ರಹ್ಲಾದ, ಮನ್ಮಥ) ಕನ್ನಡಿಗರಿಗಿರುವಂತೆ ತಮಿಳರಿಗೂ ಚಿರಪರಿಚಿತವಾದದ್ದು.
2. ಪದಗಳು ಕನ್ನಡದವಾದಾಗ ತಮಿಳು ಜನರಿಗೆ ಸೋದರಪ್ರಾಯವಾಗಿ ಪರಿಚಯವಿರುವಂಥವು.
3. ಪದಗಳು ಸಂಸ್ಕೃತದವಾದಾಗ ಭಾಷೆಯು ಸರ್ವಭಾರತೀಯ ಶ್ರೇಣಿಗೆ ಸಮೀಪವಾಗುತ್ತದೆ. ಹಾಗೆ ಕರ್ಣಾಟಕೇತರರಿಗೆ ಸುಲಭವಾಗುತ್ತದೆ.
4. ಕರ್ಣಾಟಕ ಸಂಗೀತವು ತಮಿಳರಿಗೂ ಕನ್ನಡಿಗರಿಗೂ ಸಮಾನವಾದದ್ದು.

ಜಾತಿವರ್ಣಾತೀತವಾದ ಜನಪದಭಾವನೆ ಇಂಡಿಯಕ್ಕೆ ಅವಶ್ಯವೆನ್ನುವಂತೆ ಭಾಷಾತೀತವಾದ ಸಾಹಿತ್ಯ, ಸಂಸ್ಕೃತಿ ನಮಗೆ ಬೇಕಾಗಿದೆ ಎಂದು ಹೇಳಬೇಕು. ವರದಾಚಾರ್ಯರ ನಾಟಕಗಳ ಮೂಲಕ ತಮಿಳು-ಕನ್ನಡ ಸ್ನೇಹ ಬೆಳೆದು ಬಲಪಟ್ಟಿತು.

ವರದಾಚಾರ್ಯರ ಕಲಾನೈಪುಣಿ

ಕಿಚ್ಚೆಟ್ಟಿ ಸತ್ರದ ನಾಟಕಮಂದಿರದಲ್ಲಿ ವರದಾಚಾರ್ಯರ ನಾಟಕ ನೋಡುತ್ತಿದ್ದಾಗ, ಆ ರಾಗಗಳ ಸ್ವಭಾವವನ್ನು ಕುರಿತು ರಂಗಸ್ವಾಮಯ್ಯಂಗಾರ್ಯರು ಹೇಳುತ್ತಿದ್ದದ್ದು ನನಗೆ ಜ್ಞಾಪಕವಿದೆ. ಹಾಗೆಯೇ ಅವರು ನಾಟಕ ಪರಿಭಾಷೆಯ ವಿಷ್ಕಂಭ, ಶುದ್ಧ ವಿಷ್ಕಂಭ, ಮಿಶ್ರ ವಿಷ್ಕಂಭ ಮೊದಲಾದ ಸಂಕೇತಗಳ ವಿವರಣೆ ಕೊಡುತ್ತಿದ್ದದ್ದೂ ನನಗೆ ನೆನಪಿದೆ.

ವರದಾಚಾರ್ಯರ ಅಭಿನಯಕೌಶಲದ ಕೀರ್ತಿ ಆ ವೇಳೆಗೆ ಮದರಾಸು ಪ್ರಾಂತದಲ್ಲಿ ಹರಡಿ ಬೇರೂರಿತ್ತು. ಮದರಾಸಿನಲ್ಲಿ ಅವರು ನಡಸಿದ್ದ ನಾಟಕ ಪ್ರದರ್ಶನಗಳನ್ನು ತಮಿಳು ಜನತೆ ನೋಡಿ ಕೊಂಡಾಡಿತ್ತು. ಈ ಜನಾದರಣೆಯ ರಹಸ್ಯ ವರದಾಚಾರ್ಯರ ಕಲಾನೈಪುಣಿ. ಅವರು ಯಾವ ಪಾತ್ರ ಧರಿಸಿದರೂ ಅದರಲ್ಲಿ ಭಾವಪರಿಪೂರ್ಣತೆ ಕಾಣುತ್ತಿತ್ತು. ನಟನ ಆಂಗಿಕದಲ್ಲಿಯೂ ವಾಚಿಕದಲ್ಲಿಯೂ ತದ್ವತ್ತೆ ಬರಬೇಕು. ಹಿರಣ್ಯಕಶಿಪುವೇ ಪ್ರತ್ಯಕ್ಷವಾಗಿ ನಿಂತಿದ್ದಾನೋ ಎನ್ನಿಸುವಂತೆ ಸತ್ಯ ಪ್ರತಿಭಾಸವಾಗಬೇಕು. ಈ ಪರಿಣಾಮವನ್ನುಂಟುಮಾಡುವ ಶಕ್ತಿ ಅವರಿಗೆ ವರವಾಗಿ ಬಂದಿತ್ತು.

ಅವರ ವಿಶೇಷ ಶಕ್ತಿಗಳಲ್ಲಿ ಗಣ್ಯವಾಗಬೇಕಾದದ್ದು ಅವರ ಗಮಕ. ಪದ್ಯಗಳನ್ನು ಹೇಳುವುದರಲ್ಲಿಯೂ ಹಾಡಿನಲ್ಲಿಯೂ ವರದಾಚಾರ್ಯರು ತೋರಿಸುತ್ತಿದ್ದ ವರ್ಣಾಕ್ಷರ ಪದಯೋಜನೆ ಅನುಕರಣೀಯವಾದದ್ದು. ಅದರಲ್ಲಿ ಅಕ್ಷರ ಅಕ್ಷರಕ್ಕೂ ಬೆಲೆಯುಂಟು. ಪದ ನುಡಿದರೆ ಅರ್ಥ, ಬಿಡು ಬಿಟ್ಟರೆ ಅರ್ಥ. ಹೀಗೆ ಸ್ವಾರಸ್ಯ ತುಂಬಿದ್ದು ಅವರ ಪದ್ಯ ಧಾಟಿ. ವರದಾಚಾರ್ಯರಂತೆ ಕಂದಪದ್ಯ ಹೇಳಬಲ್ಲ ಗಮಕಿ ಈಗ ಯಾರಿದ್ದಾರೋ ಕಾಣೆ. ಆ ಕಲೆ ಲುಪ್ತವಾಗಿ ಹೋಯಿತೋ ಹೇಗೋ! ವರದಾಚಾರ್ಯರ ಬಾಯಿಂದ ಬಂದಾಗ ಕಂದ ಪದ್ಯ ಕನ್ನಡದ ಭಾಗ್ಯನಿಧಿಯೆಂದೆನಿಸುತ್ತಿತ್ತು. ಅಕ್ಷರ ಅಕ್ಷರವೂ ಸ್ಪಷ್ಟವಾಗಿ ಅದಕ್ಕೆ ಸಲ್ಲುವ ಒತ್ತುಭಾರದಿಂದ ನುಡಿದು ಬಂದು, ಕೇಳುವವರ ಎದೆಯುಬ್ಬಿಸುವಂತೆ, ಕಣ್ಣರಗಿಸುವಂತೆ ಅವರ ಬಾಯಿಂದ ಬರುತ್ತಿತ್ತು. ಕಂದಪದ್ಯ ಕೇಳಬೇಕೆಂದರೆ ವರದಾಚಾರ್ಯರ ಬಾಯಿಂದ ಕೇಳಬೇಕು. ಕಂದಪದ್ಯವು ಸಂಸ್ಕೃತದ ಆರ್ಯಾ ಛಂದಸ್ಸಿಗೆ ಸಂಬಂಧಪಟ್ಟದ್ದು. ಅದು ಕನ್ನಡ ತೆಲುಗು ಭಾಷೆಗಳೆರಡರಲ್ಲಿಯೂ ಪ್ರಚುರವಾಗಿದೆ. ಅದಕ್ಕೆ ಸಮಾನವಾದದ್ದು ತಮಿಳು ಮೊದಲಾದ ಭಾಷೆಗಳಾವುದರಲ್ಲಾದರೂ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ವರದಾಚಾರ್ಯರಂಥ ಗಮಕಿಗಳ ಬಾಯಿಂದ ಅದು ಬಹುಸುಂದರವಾದ ರಚನೆಯೆಂದು ಮನದಟ್ಟಾಗುವಂತೆ ಬರುತ್ತಿತ್ತು. ಇಂಥ

ಕಂದಪದ್ಯಗಳನ್ನು ಸರಳವಾಗಿ, ಲಲಿತವಾಗಿ, ರಚಿಸಿ ಕೊಟ್ಟವರು ಎಸ್. ಜಿ. ನರಸಿಂಹಾಚಾರ್ಯರು.

ಎಸ್.ಜಿ. ನರಸಿಂಹಾಚಾರ್ಯರ ಸಹಕಾರ

ವರದಾಚಾರ್ಯರಿಗೆ ಸಾಹಿತ್ಯ ರಚಿಸಿಕೊಟ್ಟಿದ್ದವರೂ ಇತರರ ಸಾಹಿತ್ಯವನ್ನು ಪರಿಷ್ಕಾರಪಡಿಸಿಕೊಟ್ಟವರೂ ಮಹಾ ವಿದ್ವತ್ಕವಿಗಳಾದ ಎಸ್.ಜಿ. ನರಸಿಂಹಾಚಾರ್ಯರೆಂದು [2] ಕೇಳಿದ್ದೇನೆ. ಅಂಥ ವಿದ್ವದ್ರಸಿಕರನ್ನು ಸಾಹಿತ್ಯ ಸಹಾಯಕ್ಕಾಗಿ ಒಲಿಸಿಕೊಂಡದ್ದು ವರದಾಚಾರ್ಯರ ಗುಣವಿವೇಕಶಕ್ತಿಯನ್ನು ತೋರಿಸುತ್ತದೆ.

ಮನ್ಮಥವಿಜಯದ ಮತ್ತು ಪ್ರಹ್ಲಾದ ಚರಿತ್ರೆಯ ಹಾಡುಗಳು ಭಾಷಾ ಶುದ್ಧಿಯಿಂದಲೂ ಪ್ರಶಸ್ತವಾಗಿದ್ದವು.

ಬಲಂ ಛಲಂ ।
ಛಲಂ ಬಲಂ ।
ನೆಲಂ ಇದೂ ।
ಅಲುಂಗದೇ ॥

ಇದು ಹಿರಣ್ಯಾಕ್ಷ ಹಿರಣ್ಯಕಶಿಪುಗಳ ಕತ್ಥನ.

ಘನ ವಸಂತ ।
ಮನಕನಂತ ।
ಮುದವನೀವುದೂ ॥

ಇದೆಲ್ಲ ಎಸ್.ಜಿ. ನರಸಿಂಹಾಚಾರ್ಯರ ಕೈವಾಡ.

ಮನುಷ್ಯನ ಹೃದಯಭಾವಗಳ ಪರಿಪೂರ್ಣವಾದ ಅಭಿವ್ಯಕ್ತಿಗೆ ಮೂರು ಲಲಿತಕಲೆಗಳ ಸಮ್ಮೇಳನ ಅವಶ್ಯವಾಗಿದೆ: (೧) ಕಾವ್ಯ, (೨) ಸಂಗೀತ, (೩) ಅಭಿನಯ. ಸಂಗೀತವಿಲ್ಲದಿದ್ದರೆ ಸಾಮಾಜಿಕರ ಹೃದಯಕ್ಕೆ ತೀವ್ರತೆ ಬರಲಾರದು. ಹೃದಯದ ಚಟುವಟಿಕೆಗೆ ತಕ್ಕ ವಾತಾವರಣವನ್ನು ಕಲ್ಪಿಸುವ ಶಕ್ತಿ ಸಂಗೀತಕ್ಕೆ ಸೇರಿದ್ದು. ಅದು ತನ್ನ ಕೆಲಸವನ್ನು ಉಪಕ್ರಮಿಸಿದ ಬಳಿಕ, ಅಭಿನಯವು ಅಂಗಾಂಗ ಚಲನೆಗಳಿಂದ ಕಥಾಭಾವಕ್ಕೆ ರೂಪ ಕೊಡುತ್ತದೆ. ಮೊದಲು ನಿರಾಕಾರವಾಗಿದ್ದ ಹೃದಯಭಾವವು ಅಭಿನಯ ಪ್ರಭಾವದಿಂದ ಸಾಕಾರವಾಗಿ ಪ್ರತ್ಯಕ್ಷವಾಗುತ್ತದೆ. ಆಗ ಕಾವ್ಯಭಾವವು ತನ್ನ

ಪರಿಪೂರ್ಣ ಸ್ವರೂಪಕ್ಕೆ ಬರುತ್ತದೆ. ಹೀಗಾಗಿರುವುದರಿಂದ ಗಾನ-ಅಭಿನಯಗಳಲ್ಲಿ ನಿಸ್ಸೀಮರಾಗಿದ್ದ ವರದಾಚಾರ್ಯರ ಜೊತೆಗೆ ಕಾವ್ಯಮರ್ಮಜ್ಞರಾದ ಎಸ್.ಜಿ. ನರಸಿಂಹಾಚಾರ್ಯರು ಸೇರಿದ್ದು ರಸಿಕಪ್ರಪಂಚದ ಸುಯೋಗ.

ವರದಾಚಾರ್ಯರೂ ನರಸಿಂಹಾಚಾರ್ಯರೂ ಕೆಲವು ಕಾಲ ಚಿತ್ರದುರ್ಗದಲ್ಲಿದ್ದರಂತೆ. ಆಗ ಅವರಿಬ್ಬರಿಗೂ ಸ್ನೇಹವಾಯಿತು. ಸಮಾನೋದ್ದೇಶವು ಅವರ ಆಪ್ತತೆಯನ್ನು ಹೆಚ್ಚಿಸಿತು.

ವರದಾಚಾರ್ಯರು ಬೇರೆ ಲೇಖಕರನ್ನೂ ಸಹಾಯಕ್ಕಿರಿಸಿಕೊಂಡಿದ್ದರು. ಅವರಿಗೆ ಪದ್ಯ ಹಾಡುಗಳನ್ನು ರಚಿಸಿಕೊಡುತ್ತಿದ್ದ ಇತರರಲ್ಲಿ ಶ್ರೀನಿವಾಸ ಅಯ್ಯಂಗಾರ್ಯರೆಂಬವರೊಬ್ಬರೆಂದು ಕೇಳಿದ್ದೇನೆ. ಹಾಗಾದರೂ ಒಟ್ಟಿಗೆ ನಾಟಕವನ್ನು ನೋಡಿ ಸವರಿ ಸಿದ್ಧಪಡಿಸುತ್ತಿದ್ದವರು ಎಸ್.ಜಿ. ನರಸಿಂಹಾಚಾರ್ಯರು.

ವರದಾಚಾರ್ಯರ ಧಾರ್ಮಿಕ ಮನೋವೃತ್ತಿ

ವರದಾಚಾರ್ಯರು ಉದಾರಿಗಳು. ಅವರ ಬಳಿ ಬೇಡಲು ಹೋಗಿ ಬರಿಗೈಯಿಂದ ಹಿಂದಿರುಗಿದವರಿಲ್ಲ. ನೂರಾರು ಮಂದಿ ದೀನ ದರಿದ್ರರಿಗೆ ಅವರು ಅನ್ನ ವಸ್ತ್ರಗಳನ್ನೂ ಉದ್ಯೋಗವನ್ನೂ ಕಲ್ಪಿಸಿಕೊಟ್ಟಿದ್ದರು. ಸಹೋದ್ಯೋಗಿಗಳನ್ನು ತಮ್ಮ ಕುಟುಂಬದವರೆಂಬಂತೆ ಪ್ರೀತಿ ವಿಶ್ವಾಸಗಳಿಂದ ಕಾಣುತ್ತಿದ್ದರು. ಮದುವೆ ಮುಂಜಿಗಳಿಗಾಗಿ ಯಾಚನೆ ಮಾಡಬಂದವರಿಗೆ ಅವರವರ ಅದೃಷ್ಟವಿದ್ದಂತೆ ಲಾಭ. ವರದಾಚಾರ್ಯರು ತಮ್ಮ ಕೈಯಲ್ಲಿ ಏನಿದ್ದರೆ ಅದನ್ನು ಕೊಟ್ಟು “ಕೃಷ್ಣಾರ್ಪಣ” ಎಂದು ಕೈ ಮುಗಿಯುತ್ತಿದ್ದರು.

ವರದಾಚಾರ್ಯರು ಎಂಥ ಸತ್ಯವಂತರೆಂಬುದನ್ನು ಕುರಿತು ನನ್ನ ಒಬ್ಬ ಲಾಯರ್ ಮಿತ್ರರಿಂದ ಕೇಳಿರುವ ಸಂಗತಿಯೊಂದನ್ನು ನಿದರ್ಶನವಾಗಿ ಹೇಳಬಯಸುತ್ತೇನೆ. ಇದನ್ನು ನನಗೆ ಹೇಳಿದ ಮಿತ್ರರು ಪರಮ ಪ್ರಾಮಾಣಿಕರು ಮತ್ತು ಲಾಯರ್ ಕಸಬಿನಲ್ಲಿ ಅಗ್ರ ಶ್ರೇಣಿಗೆ ಸೇರಿದವರು.

ವರದಾಚಾರ್ಯರು ಒಬ್ಬ ಸಾಹುಕಾರನ ಬಳಿ ಹಣ ಸಾಲವಾಗಿ ತೆಗೆದುಕೊಂಡಿದ್ದರು. ಆ ಮೊಬಲಗು ಬಡ್ಡಿ ಸೇರಿ ಸುಮಾರು ಮೂವತ್ತು ಸಾವಿರದಷ್ಟಾಗಿತ್ತು. ಆ ಸಾಹುಕಾರನು ತಾನು ಇನ್ನು ತಡೆಯಲಾಗದೆಂದು ಮೊಕದ್ದಮೆ ಹೂಡಿದ್ದ. ಕೋರ್ಟಿನ ಹುಕುಂ ಆಗಿ ಜಪ್ತಿ ಕ್ರಮ ನಡೆಯುವುದು ಖಂಡಿತವೆಂದು ಎಲ್ಲರಿಗೂ ತೋರಿತ್ತು.

ಆಗ ವರದಾಚಾರ್ಯರ ಸ್ನೇಹಿತನೊಬ್ಬಾತ ಮೇಲೆ ಪ್ರಸ್ತಾವಿಸಿದ ಲಾಯರ ಬಳಿ ಬಂದು, ಉಪಾಯವೇನಾದರೂ ಉಂಟೆ? -ಎಂದು ಕೇಳಿದ. ಲಾಯರು ಕಾಗದದ ಕಟ್ಟನ್ನೆಲ್ಲಾ ಪರೀಕ್ಷೆ ಮಾಡಿನೋಡಿ ಹೀಗೆ ಹೇಳಿದರು:

“ಮೊಕದ್ದಮೆಯೇನೋ ಬಲವಾಗಿದೆ. ಆದರೆ ಒಂದಾನೊಂದು ದಸ್ತೈವಜು ಇದರಲ್ಲಿ ಕಾಣುವುದಿಲ್ಲ. ಆ ದಸ್ತೈವಜಿಗೆ ಸಂಬಂಧಪಟ್ಟ ಸಂಗತಿಯನ್ನು ರುಜುವಾತುಪಡಿಸಲು ಆ ಕಕ್ಷಿಗೆ ಯಾವ ಆಧಾರವೂ ಇಲ್ಲ. ಆ ಸಂಗತಿಯ ವಿಚಾರವನ್ನು ಕುರಿತು ಜಡ್ಜಿಯೋ ಎದುರು ಪಕ್ಷದ ಲಾಯರೋ ಪ್ರಶ್ನೆ ಮಾಡಿದರೆ ಆಗ ವರದಾಚಾರ್ಯರು ಅದು ತಮಗೆ ಜ್ಞಾಪಕವಿಲ್ಲವೆಂದು ಹೇಳಿದರೆ ಕೇಸು ನಿಲ್ಲಲಾರದು. ನಿಮ್ಮ ಸ್ನೇಹಿತರು ಹಾಗೆ ಹೇಳಿಯಾರೋ?”

ಈ ಸಲಹೆಯನ್ನು ವರದಾಚಾರ್ಯರು ಕೇಳಿದೊಡನೆಯೇ "ಹ್ಹ" ಎಂದು ಅವರಿಗೆ ಸಹಜವಾಗಿದ್ದ ಅಟ್ಟಹಾಸದ ನಗುವನ್ನು ನಕ್ಕು ಹೇಳಿದರು ! "ಮೂವತ್ತು ಸಾವಿರ ರೂಪಾಯಿಗೋಸ್ಕರ ಈ ನಾಲಿಗೆ ಒಂದು ಸುಳ್ಳು ಹೇಳಬೇಕೆ? ಭಗವಂತ ಈ ಕೈಗೆ ಅಂಥ ಮೂವತ್ತು ಸಾವಿರ ರೂಪಾಯಿಗಳನ್ನು ಎಷ್ಟು ಸಲ ಅನುಗ್ರಹಿಸಿದ್ದಾನೆ! ಇನ್ನೂ ಅನುಗ್ರಹಮಾಡಲಾರನೆ? ಇರಲಿ, ಸಾಹುಕಾರ ಏನು ಮಾಡುತ್ತಾನೆ? ನನ್ನ ಹಳೆಯ ಪರದೆಗಳನ್ನೂ ಹಳೆಯ ಬೊಂತೆಗಳನ್ನು ಕಿತ್ತುಕೊಂಡು ಹೋದಾನು, ಹೋಗಲಿ. ಬೇರೆಕಡೆ ಹಣ ತೆಗೆದು ಹೊಸ ಪರದೆ ಬರೆಸಿ, ಹೊಸ ಡ್ರೆಸ್ ಹಾಕಿ, ನಾಟಕವಾಡೋಣ : ಆಗ ಈ ಸಾಲ, ಆ ಸಾಲ-ಎರಡನ್ನೂ ತೀರಿಸೋಣ. ಸುಳ್ಳು ಹೇಳಿ ಋಣದಿಂದ ತಪ್ಪಿಸಿಕೊಳ್ಳುವುದು ನನ್ನಿಂದ ಆಗುವ ಕೆಲಸವಲ್ಲ."

ಇದು ಆಚಾರ್ಯರಲ್ಲಿದ್ದ ಸತ್ತ್ವ. ಅದೇ ಆತನ ಜೀವನದ ಮೇಲ್ಮೆಯ ಅಂತರಂಗ. ಎಲ್ಲ ವಿಷಯಗಳಲ್ಲಿಯೂ ಅತ ಋಜುವಾಗಿ ನಡೆದವರು. ಅವರ ನಾಟಕ ಕಳೆ ಕಟ್ಟಿದ್ದು ಆ ಋಜುತೆಯಿಂದ : ಸ್ವಭಾವದ ಯಥಾರ್ಥವನ್ನು ಹಿಡಿದಿದ್ದದ್ದರಿಂದ.

೨೦

ಸಂ.ಗೋ.ಬಿಂದೂರಾಯರು

ಒಂದು ದಿನ ಮಧ್ಯಾಹ್ನ ಮೂರು ಘಂಟೆಯ ಸಮಯದಲ್ಲಿ ಬಿಂದೂರಾಯರು ನನ್ನ ಮನೆಗೆ ದಯಮಾಡಿಸಿದರು. ನಾನು ಕೇಳಿದೆ:

ನಾನು: "ಯಾವಾಗ ಬಂದಿರಿ?"

ಬಿಂ: "ಬೆಳಗ್ಗೆ ಚಿತ್ರದುರ್ಗದಿಂದ ಹೊರಟು ಹನ್ನೊಂದು ಘಂಟೆಗೆ ಬಂದೆ. ತಮ್ಮನ ಮನೆಯಲ್ಲಿ ಸ್ನಾನ ಭೋಜನ ತೀರಿಸಿಕೊಂಡು ತಮ್ಮನ್ನು ನೋಡಲು ಬಂದೆ. ನನಗೆ ಈ ಹೊತ್ತು ತೊಂಭತ್ತೆರಡಾಯಿತು. ಆ ಮಾತು ತಮ್ಮಲ್ಲಿ ಹೇಳಬೇಕೆನಿಸಿತು."

ನಾನು: "ಹೇಗೆ ಬಂದಿರಿ? ಗಾಡಿಯಲ್ಲೊ?"

ಬಿಂ: (ಕಾಲುಗಳ ಕಡೆ ಕೈ ತೋರಿಸಿ) "ಇದು ಇರುವಾಗ ಗಾಡಿ ಏಕೆ?"

ಕೊಂಚ ಹೊತ್ತು ಸ್ವಂತ ವಿಷಯಗಳನ್ನು ಕುರಿತು ಮಾತನಾಡಿದೆವು. ಬಳಿಕ ಹೊರಟರು. ನಾನು ಕೇಳಿದೆ:

ನಾನು: "ಈಗ ಎಲ್ಲಿಗೆ?"

ಬಿಂ: "ಚಾಮರಾಜಪೇಟೆಯಲ್ಲಿ ಕೆಲ ಮಂದಿ ಹಳೆಯ ಸ್ನೇಹಿತರನ್ನು ನೋಡಬೇಕು."

ನಾನು: "ತುಂಬ ಬಿಸಿಲಾಗಿದೆಯಲ್ಲ-ಗಾಡಿ ತರಿಸಲೆ?"

ಬಿಂ: "ಚಾಮರಾಜಪೇಟೆಗೆ ಗಾಡಿ ಏಕೆ? ಹತ್ತಿರವೇ ಇದೆ."

ಅದೇ ನನಗಾದ ಕಡೆಯ ಸಾರಿಯ ದರ್ಶನ. ಆ ದಿವಸ ಅವರ ಮುಖದಲ್ಲಿ ಕಾಣುತ್ತಿದ್ದ ತೇಜಸ್ಸನ್ನೂ ಅವರ ದೇಹದಲ್ಲಿ ಕಾಣುತ್ತಿದ್ದ ದಾರ್ಢ್ಯವನ್ನೂ ನೋಡಿದವರಿಗೆ ಅವರ ಅವಸಾನ ಅಷ್ಟು ಸಮೀಪದಲ್ಲಿದೆಯೆಂದು ಅನ್ನಿಸುತ್ತಿರಲಿಲ್ಲ.

ಚಿಟಕಿನಿ ಅಂಗಡಿಯ ಗೋಷ್ಠಿ

ಬಿಂದೂರಾಯರಿಗೆ ನನ್ನ ಪರಿಚಯ ಎಷ್ಟು ಹಳೆಯದೋ ನನಗೆ ಅವರ ಪರಿಚಯ ಅದಕ್ಕಿಂತ ಹಳೆಯದು. ಆಗ ನಾನು ಅವರನ್ನು ದೂರದಿಂದ ನೋಡಿ ಮನಸ್ಸಿನೊಳಗೆ ಅತಿಶಯವಾಗಿ ಮೆಚ್ಚಿಕೊಳ್ಳುತ್ತಿದ್ದೆ.

೧೯೧೦-೧೧ ರ ಸುಮಾರು. ಬೆಂಗಳೂರು ಚಿಕ್ಕಪೇಟೆಯ ಅಹಮದ್ ಬಿಲ್ಡಿಂಗ್ಸ್ ಕಟ್ಟಡದ ಪಶ್ಚಿಮದಲ್ಲಿ ಒಂದು ಓಣಿ. ಅ ಓಣಿಯನ್ನು ಬಿಟ್ಟರೆ ಮೊದಲನೆಯ ಅಂಗಡಿ (ಷಾಪ್) ಸೀತಾರಾಮಯ್ಯನವರದು. ಅದರಲ್ಲಿ ಗಾಜಿನ ಸಾಮಾನು, ಸೋಪು, ಕ್ಷೌರದ ಸಾಮಗ್ರಿ, ಹೊಲಿಗೆಯ ದಾರ, ಕಸೂತಿಯ ದಾರ (Knitting), ಬಗೆ ಬಗೆಯ ಸೂಜಿಗಳು, ಚಿತ್ರಪಟಗಳಿಗೆ ಹಾಕುವ ಚೌಕಟ್ಟುಗಳು-ಇತ್ಯಾದಿ ಸಾಮಾನುಗಳ ವ್ಯಾಪಾರ ನಡೆಯುತ್ತಿತ್ತು. ಅಂಥ ಅಂಗಡಿಗಳನ್ನು ಚಿಟಕಿನಿ ಅಂಗಡಿಗಳು ಎಂದು ಕರೆಯುತ್ತಿದ್ದರು. ನಾನು ಹೇಳುತ್ತಿರುವ ಕಾಲದಲ್ಲಿ ಅಂಥ ಅಂಗಡಿಗಳು ಚಿಕ್ಕಪೇಟೆಯಲ್ಲಿಯೇ ಎಂಟು ಹತ್ತು ಇದ್ದವು.

ಸೀತಾರಾಮಯ್ಯನವರ ಅಂಗಡಿಯಲ್ಲಿ ಪ್ರತಿದಿನವೂ ಸಂಜೆ ಐದೂವರೆಯಿಂದ ಆರೂವರೆಯವರೆಗೆ ಒಂದು ಮಿತ್ರಗೋಷ್ಠಿ ಸೇರುತ್ತಿತ್ತು. ಅಲ್ಲಿ ಬರುತ್ತಿದ್ದವರೆಲ್ಲ ಸರಕಾರದ ಬೇರೆ ಬೇರೆ ಕಛೇರಿಗಳಲ್ಲಿ ಉದ್ಯೋಗಸ್ಥರಾಗಿದ್ದವರು. ಅವರಲ್ಲಿ ಕೆಲವರನ್ನು ಸ್ಮರಿಸಿಕೊಳ್ಳಬೇಕು: (೧) ಬಿ.ವೆಂಕಟಕೃಷ್ಣಪ್ಪ (೨) ಆರ್. ವೆಂಕಟರಾಮಯ್ಯ (೩) ಇನ್ಸ್ಪೆಕ್ಟರ್ ಚೌಡಯ್ಯ (೪) ಎಸ್.ಎನ್.ಹನುಮಂತರಾವ್ (೫) ಎಸ್.ಎನ್.ಶ್ರೀನಿವಾಸರಾವ್ (೬) ಎಚ್.ನಾಗೇಶರಾವ್ (೭) ಶಾಮಯ್ಯಂಗಾರ್ (೮) ಎಸ್.ಜಿ.ಬಿಂದೂರಾವ್.

ಇವರೆಲ್ಲರೂ ಸಂಗೀತ ಸಾಹಿತ್ಯಪ್ರೇಮಿಗಳು. ಅವರ ಪೈಕಿ ನನಗೆ ಹೆಚ್ಚು ಬಳಕೆಯಿದ್ದವರು ವೆಂಕಟಕೃಷ್ಣಪ್ಪನವರು. ಅವರ ವಿಷಯವೂ ಬರೆಯಲರ್ಹವಾದದ್ದು.

ಬಿ. ವೆಂಕಟಕೃಷ್ಣಪ್ಪನವರು

ವೆಂಕಟಕೃಷ್ಣಪ್ಪನವರು ಎಕ್ಸೈಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದರು. ಮೈಸೂರಿನ ಮಹಾರಾಜ ಕಾಲೇಜಿನ ಹಾಸ್ಟೆಲಿನಲ್ಲಿ ಅವರಿಗೂ ನನಗೂ ಪ್ರಥಮ ಪರಿಚಯ. ಅವರು ಸೀನಿಯರ್ ಬಿ.ಎ.ಕ್ಲಾಸಿನಲ್ಲಿದ್ದರು. ನಾನು ಫೋರ್ತ್ ಫಾರ್ಮಿನಲ್ಲಿದ್ದೆ. ಅವರ ಕೊಠಡಿಯ ಸಂಗಾತಿ ಮಧ್ವಾಚಾರ್ಯರೆಂಬುವರು, ಮದನಪಲ್ಲಿಯ ಕಡೆಯವರು. ನನ್ನ ಕೊಠಡಿಯ ಪಕ್ಕದಲ್ಲಿಯೇ ಅವರ ಕೊಠಡಿ. ಹೀಗೆ ಬಳಕೆ ಬೆಳೆಯಿತು.

ವೆಂಕಟಕೃಷ್ಣಪ್ಪನವರೂ ಮಧ್ವಾಚಾರ್ಯರೂ ಆಕಾರದಲ್ಲಿ ಗಿಡ್ಡು. ಮಧ್ವಾಚಾರ್ಯರು ದಪ್ಪವಾಗಿಯೂ ಇದ್ದರು. ನಾನು ತೆಲುಗು ಮಾತನಾಡುತ್ತಿದ್ದದ್ದರಿಂದ ಅವರಿಗೆ ನನ್ನಲ್ಲಿ ಹೆಚ್ಚು ಅಭಿಮಾನ.

ಆ ಕಾಲದಲ್ಲಿ ಆ ಹಾಸ್ಟಲಿನಲ್ಲಿ ಒಂದು ವಿದ್ಯಾರ್ಥಿ ಸಂಘವಿತ್ತು. ನಾನು ಅದಕ್ಕೆ ಕಾರ್ಯದರ್ಶಿ. ಆಗಾಗ ವಿದ್ವಾಂಸರಿಂದ ಉಪನ್ಯಾಸಗಳನ್ನೇರ್ಪಡಿಸುತ್ತಿದ್ದದ್ದುಂಟು. ಒಂದು ಸಾರಿಯ ಉಪನ್ಯಾಸವನ್ನು ಸೀನಿಯರ್ ಎಫ್.ಎ.ಕ್ಲಾಸಿನಲ್ಲಿದ್ದ ಅಪ್ಪಾಜಿರಾಯರೆಂಬವರು ಮಾಡಿದರು. ಆ ದಿನದ ಅಧ್ಯಕ್ಷರು ವಾರ್ಡನರಾಗಿದ್ದ ಬಿ.ದಾಸಪ್ಪನವರು. ಉಪನ್ಯಾಸದ ವಿಷಯ ಸೆನೋಫನ್ (Xenophon) ಎಂಬಾತ ಬರೆದಿರುವ "ಸಾಕ್ರಟೀಸ್ ಗುರುವಿನ ಜ್ಞಾಪಕಗಳು" (Memorabilia) ಎಂಬ ಗ್ರಂಥ. ಉಪನ್ಯಾಸ ಮುಗಿದ ಮೇಲೆ ನಾನು ವಂದನಾರ್ಪಣೆಯ ಭಾಷಣ ಮಾಡಿದೆ. ಸಭಿಕರು ಇನ್ನೂ ಆ ಸಭಾ ಮಂದಿರದಲ್ಲಿದ್ದಾಗಲೇ ಮಧ್ವಾಚಾರ್ಯರು ಓಡಿಬಂದು ನನ್ನನ್ನು ಎರಡು ಕೈಗಳಿಂದಲೂ ಮೇಲಕ್ಕೆತ್ತಿ ಹಿಡಿದರು. ಆಗ ವೆಂಕಟಕೃಷ್ಣಪ್ಪನವರೂ ಅಲ್ಲಿದ್ದರು.

ಹೀಗೆ ಪ್ರಾರಂಭವಾಯಿತು ವೆಂಕಟಕೃಷ್ಣಪ್ಪನವರಿಗೆ ನನ್ನ ವಿಷಯದಲ್ಲಿ ಮಮತೆ.

ಪ್ರಸಕ್ತ ಕಾಲದಲ್ಲಿ ವೆಂಕಟಕೃಷ್ಣಪ್ಪನವರು ಬೆಂಗಳೂರಿನಲ್ಲಿ ಸೆಕ್ರೆಟೇರಿಯಟಿನಲ್ಲೋ ರೆವೆನ್ಯು ಕಮಿಷನರ ಆಫೀಸಿನಲ್ಲೋ ಒಂದು ಜವಾಬ್ದಾರಿಯ ಹುದ್ದೆಯಲ್ಲಿದ್ದರು. ಬಿಡುವು ಮಾಡಿಕೊಂಡು ಸಂಗೀತಸಾಹಿತ್ಯ ವ್ಯಾಸಂಗವನ್ನು ನಡೆಸುತ್ತಿದ್ದರು. ಅವರು ಸಂಕೇತಿಗಳು. ಸಂಕೇತಿ ಜನಾಂಗಕ್ಕೆ ಸಂಗೀತವು ಕುಲವಿದ್ಯೆಯೆಂದು ಅವರು ಹೇಳಿಕೊಳ್ಳುವುದುಂಟು. ವೆಂಕಟಕೃಷ್ಣಪ್ಪನವರಿಗೆ ಸಂಗೀತಶಾಸ್ತ್ರದ ಪರಿಶ್ರಮ ಚೆನ್ನಾಗಿತ್ತು. ಅವರು

‘ಹಾರ್ಮೋನಿಯಂ ಸ್ವಯಂಬೋಧಿನಿ’ ಎಂಬ ಗ್ರಂಥವನ್ನೂ ಇನ್ನೂ ಒಂದೆರಡು ಗೀತಸಂಕಲನಗಳನ್ನೂ ಬರೆದು ಪ್ರಕಟಪಡಿಸಿದರು.

ಹಾಸ್ಯಪ್ರಿಯತೆ

ಕನ್ನಡ ಸಾಹಿತ್ಯದಲ್ಲಿಯೂ ಅವರು ಕೆಲಸ ಮಾಡಿದ್ದಾರೆ. ಸರ್ ವಾಲ್ಟರ್ ಸ್ಕಾಟ್ ಕವಿಯ ('Black Dwarf') ಎಂಬ ಕಾದಂಬರಿಯನ್ನು ಅವರು "ಶ್ಯಾಮ ಕುಬ್ಜ" ಎಂಬ ಹೆಸರಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ವೆಂಕಟಕೃಷ್ಣಪ್ಪನವರೂ ನಾನೂ ಒಂದು ವಾರದಲ್ಲಿ ಮೂರು ನಾಲ್ಕು ದಿವಸವಾದರೂ ಚಿಕ್ಕಪೇಟೆಯಲ್ಲಿ ಸೇರುತ್ತಿದ್ದೆವು. ಒಂದು ದಿನ ಸಂಜೆ ಅವರೂ ನಾನೂ ಸೀತಾರಾಮಯ್ಯನವರ ಷಾಪಿನ ಕಡೆಗೆ ನಡದುಹೋಗುತ್ತಿದ್ದೆವು. ದಾರಿಯಲ್ಲಿ ನಮ್ಮ ಎಡಗಡೆಯ ಶ್ರೇಣಿಯಲ್ಲಿ ರಾವ್ ಬಹದ್ದೂರ್ ಬಿ. ಕೆ. ಗರುಡಾಚಾರ್ಯರ "ಸಿಟಿ ಮಾರ್ಟ್" ಅಂಗಡಿಯಿತ್ತು. ಆ ಅಂಗಡಿಯಲ್ಲಿ ಸರಕಾರಿ ಅಧಿಕಾರಸ್ಥರು, ಕೆಲಮಂದಿ ಲಾಯರುಗಳು, ಪಿಂಛನ್‌ದಾರರು ಸಂಜೆ ಹರಟೆಗಾಗಿ ಸೇರುವುದು ಪದ್ಧತಿ. ಆ ದಿನ ಆ ಗೋಷ್ಠಿಯೊಳಗಿನ ಯಾರೋ ಒಬ್ಬರು ನನ್ನ ಹೆಸರನ್ನು ಗಟ್ಟಿಯಾಗಿ ಹೇಳಿ "ಏನಪ್ಪೋ-ಇನ್ನೂ ಬರಲಿಲ್ಲ?" ಎಂದು ಕೂಗಿ ಎರಡು ಕೈಗಳನ್ನೂ ಮೇಲಕ್ಕೆತ್ತಿ ಅಲ್ಲಾಡಿಸಿದರು. ನನಗೆ ಅದರ ಅರ್ಥ ಹೊಳೆಯಲಿಲ್ಲ. ವೆಂಕಟಕೃಷ್ಣಪ್ಪನವರು ಆ ಕೂಡಲೆ ಅಲ್ಲಿ ನಿಂತು ತಾವೂ ಎರಡು ಕೈಗಳನ್ನೆತ್ತಿ ಅಲ್ಲಾಡಿಸುತ್ತ "ರೂಪಾಯಿ ಬರಲಿಲ್ಲಪ್ಪೋ-ರೂಪಾಯಿ ಬರಲಿಲ್ಲ" ಎಂದರು. ನಾನು ಬೆಪ್ಪಾಗಿ ಅದೇನೆಂದು ಕೇಳಿದೆ. ವೆಂಕಟಕೃಷ್ಣಪ್ಪನವರು ವಿವರಿಸಿದರು:

"ನಿನ್ನ 'ರಂಗಾಚಾರ್ಲು' ಪುಸ್ತಕದ ಪ್ರತಿಗಳನ್ನು ದಿವಾನ್ ಆನಂದರಾಯರು ತಮಗೆ ಬೇಕಾದವರಿಗೆ ಒಂದೊಂದು ಪ್ರತಿ ಕಳಿಸಿದ್ದಾರೆ. ಅದನ್ನು ಈ ಮನುಷ್ಯ ನೋಡಿ ನೀನು ಎಲ್ಲರಿಗೂ ಉಚಿತವಾಗಿ ಕೊಡುತ್ತಿದ್ದೀ ಎಂದು ತಪ್ಪು ತಿಳಿದುಕೊಂಡು ಹೀಗೆ ಆಡಿದರು. ನಾನು ಅದಕ್ಕೆ ಹೇಳಿದೆ, ಬೆಲೆ ಒಂದು ರೂಪಾಯಿ ಕೊಟ್ಟರೆ ಪುಸ್ತಕ ದೊರೆತೀತೆಂದು."

ಹೀಗೆ ಹೇಳಿ ನನ್ನ ಕಡೆ ತಿರುಗಿ "ಬೆಪ್ಪೆ, ಇದಕ್ಕೆಲ್ಲ ಮರುಳುಹೋಗಿ ಬಿಟ್ಟಿ ಪುಸ್ತಕ ಕೊಡಬೇಡ. ನೀನು ಖಂಡಿತ ಹಾಗೆ ಮಾಡಕೂಡದು" -ಎಂದು ನನ್ನಿಂದ ಭಾಷೆ ತೆಗೆದುಕೊಂಡರು.

ವೆಂಕಟಕೃಷ್ಣಪ್ಪನವರು ತುಂಬಾ ಸಾತ್ತ್ವಿಕರು, ಹಾಸ್ಯಶೀಲರು, ಉದಾರಿಗಳು.

ಮೇಲೆ ಹೇಳಿದ ಆರ್. ವೆಂಕಟರಾಮಯ್ಯನವರು ವೆಂಕಟಕೃಷ್ಣಪ್ಪನವರ ಸ್ವಜನ, ವೆಂಕಟಕೃಷ್ಣಪ್ಪನವರದು ಬಾಯಿಹಾಡಿಕೆ; ವೆಂಕಟರಾಮಯ್ಯನವರದು ಪಿಟೀಲು.

ವೆಂಕಟರಾಮಯ್ಯನವರು ಕೋ-ಆಪರೇಟಿವ್ ಇಲಾಖೆಯಲ್ಲಿದ್ದರು. ಒಳ್ಳೆಯ ಆಳು, ಠೀವಿಯಿಂದ ಪೋಷಾಕು ಹಾಕಿಕೊಳ್ಳುವರು.

ಇನ್‌ಸ್ಪೆಕ್ಟರ್ ಚೌಡಯ್ಯನವರು ಘಟದಾದ್ಯದಲ್ಲಿ ಪರಿಶ್ರಮ ಮಾಡಿದ್ದವರು. ಅವರೂ ಒಳ್ಳೆಯ ರಸಿಕರು.

ಹನುಮಂತರಾವ್, ಶ್ರೀನಿವಾಸರಾವ್-ಈ ಅಣ್ಣತಮ್ಮಂದಿರು ಅಮಲ್ದಾರರಾಗಿದ್ದು ಅಸಿಸ್ಟೆಂಟ್ ಕಮಿಷನರ ಪದವಿಗೆ ಹತ್ತಿದವರು. ಅವರಿಬ್ಬರೂ ಕಾವ್ಯ ಪುರಾಣಗಳಲ್ಲಿ ಆಸಕ್ತರಾಗಿದ್ದರು.

ನಾಗೇಶರಾಯರೂ ಇತರರೂ ಸತ್ಕಾವ್ಯಾಭಿಮಾನಿಗಳು.

ಭಾರತವಚನ ಪ್ರಾರಂಭ

ಈ ರಸಿಕವರ್ಗವು ಸಂಜೆ ಆಫೀಸಿನಿಂದ ಮನೆಗೆ ಬಂದ ತರುವಾಯ ಬಟ್ಟೆ ಬದಲಾಯಿಸಿಕೊಂಡು ಒಂದೊಂದು ದಿನ ಒಬ್ಬೊಬ್ಬ ಮಿತ್ರರ ಮನೆಯಲ್ಲಿ ಸೇರುವ ವಾಡಿಕೆ ಮಾಡಿಕೊಂಡಿದ್ದರು. ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆಯಲ್ಲಿ ಮಿರ್ಜಿರ ರಾಮರಾವ್ ಎಂಬವರ ಮನೆಯಲ್ಲಿ ಎಚ್.ನಾಗೇಶರಾಯರಿದ್ದರು. ಅಲ್ಲಿ ಈ ರಸಿಕವರ್ಗ ಸೇರಿದ್ದನ್ನು ನಾನು ನೋಡಿದ್ದೇನೆ. ವೆಂಕಟಕೃಷ್ಣಪ್ಪ ಏನನ್ನಾದರೂ ಹಾಡುವರು. ಇನ್ನೊಬ್ಬರು ಯಾವುದಾದರೂ ಶ್ಲೋಕ ಹೇಳುವರು. ಬಿಂದೂರಾಯರು ಭಾರತವಾಚನ ಮಾಡುವರು. ಆಗ್ಗೆ ಬಿಂದೂರಾಯರ ಪರಿಚಯ ನನಗೆ ಆಗಿರಲಿಲ್ಲ.

ಮಿತ್ರಗೋಷ್ಠಿಯ ವಿನೋದದಲ್ಲಿ ಪ್ರಾರಂಭವಾದದ್ದು ಬಿಂದೂರಾಯರ ಭಾರತವಾಚನ, ಕ್ರಮೇಣ ಅದು ಅವರಿಗೆ ಸಂತೋಷದ ಕಾರ್ಯಕ್ರಮವಾಯಿತು. ಆಮೇಲೆ ಅದು ನಿತ್ಯ ಪಾರಾಯಣವಾಯಿತು. ಬರುಬರುತ್ತ ಅದು ಜೀವನವ್ರತವಾಯಿತು. ಹಾಗೆಯೇ ಅದು ಒಂದು ಲೋಕಸಮಾರಾಧನೆಯಾಯಿತು. ಕಡೆಗೆ ಅದು ಜೀವನದ ಪರಮಸಿದ್ಧಿಯಾಯಿತು. ವಿನೋದದಲ್ಲಿ ಪ್ರಾರಂಭವಾದ ಭಾರತವಾಚನ ಪರಮಾತ್ಮ ಸಂತೃಪ್ತಿಯಲ್ಲಿ ಪರ್ಯವಸಾನವಾಯಿತು.

ಸರಕಾರಿ ಉದ್ಯೋಗ

ಬಿಂದೂರಾಯರು ಆಗ ಸೆಕ್ರೆಟೇರಿಯಟಿನಲ್ಲಿ ಉದ್ಯೋಗದಲ್ಲಿದ್ದರು. ಆ ಕಾಲದ ಫ್ಯಾಷನ್ ಮೇರೆಗೆ ಪೋಷಾಕು ಧರಿಸುತ್ತಿದ್ದರು. ಭರ್ಜರಿ ಮೀಸೆ, ಓಪನ್‌ಕಾಲರ್ ಕೋಟು, ನೆಕ್ ಟೈ, ಪೈಜಾಮ ಮೊದಲಾದ ಆಡಂಬರಗಳೆಲ್ಲ ಇದ್ದವು. ದರ್ಬಾರು ಠೀವಿಯ ಆಸಾಮಿ. ಅವರ ಆಫೀಸಿನಲ್ಲಿ ಅವರ ಜಬರ್ದಾರಿಯನ್ನು ಕುರಿತು ಕಂಡವರು ಮಾತನಾಡಿಕೊಳ್ಳುತ್ತಿದ್ದರು.

ಒಂದಾನೊಂದು ದಿನ ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದ ಡಿಸೂಜಾರವರಿಗೂ ಬಿಂದೂರಾಯರಿಗೂ ಮಾತು ಕೊಂಚ ಬಿಸಿಬಿಸಿಯಾಗಿ ಬಿಂದೂರಾಯರು ಕುಸ್ತಿಗೆ ಸಿದ್ಧರಾಗಿರುವಂತೆ ಕೋಟಿನ ತೋಳುಗಳನ್ನು ಮೇಲಕ್ಕೆತ್ತಿ ಮುಷ್ಟಿಮಾಡಿ ನಿಂತರು. ಹೇಗೋ ಯಾರೋ ಸಮಾಧಾನಮಾಡಿದರು.

ಸ್ವಲ್ಪಕಾಲದ ಮೇಲೆ ಅವರನ್ನು ಮೈಸೂರಿನ ದಸರಾ ಎಗ್ಸಿಬಿಷನ್ ಆಫೀಸಿಗೆ ವರ್ಗಮಾಡಿದರು. ಅಲ್ಲಿ ಅವರು ತೋರಿಸಿದ ದಕ್ಷತೆಯನ್ನು ಕಂಡು ಆಗ ಅಲ್ಲಿಯ ಸೆಕ್ರೆಟರಿಗಳಲ್ಲೊಬ್ಬರಾಗಿದ್ದ ಬಿ.ಸೀತಾರಾಮಾಚಾರ್ಯರು ಬಿಂದೂರಾಯರನ್ನು ಕೃಷ್ಣರಾಜೇಂದ್ರಮಿಲ್ಸ್ ಮೊದಲಾದ ಕಾರ್ಖಾನೆಗಳ ಕಾರ್ಯಾಲಯಕ್ಕೆ ಕರೆದುಕೊಂಡರು. ಹೀಗೆ ಮೈಸೂರಿಗೆ ಹೋದ ಬಳಿಕ ಬಿಂದೂರಾಯರ ಭಾರತವಾಚನ ಪರಿಪಕ್ವವಾಗಿ ಕ್ರಮೇಣ ಅದೇ ಅವರ ಜೀವಿತವ್ರತವಾಯಿತು.

ಈ ಸಮಯದಲ್ಲಿ ವೆಂಕಣ್ಣಯ್ಯನವರಿಗೂ ಬಿಂದೂರಾಯರಿಗೂ ಸ್ನೇಹ ಬೆಳೆಯಿತು.

ಪರಿಷತ್ತಿನಲ್ಲಿ ಗಮಕ ಪಾಠ

೧೯೩೩-೩೪ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷನಾಗುವ ಜವಾಬ್ದಾರಿ ನನ್ನ ಪಾಲಿಗೆ ಬಂದಿತು. ಆಗ ಪರಿಷತ್ತಿನಲ್ಲಿ ಭಾರತವಾಚನದ ಅಭ್ಯಾಸವನ್ನು ಪ್ರೋತ್ಸಾಹ ಪಡಿಸಬೇಕೆಂದು ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ, ಶ್ರೀನಿವಾಸಮೂರ್ತಿ ಮೊದಲಾದವರಿಗೂ ತೋರಿತ್ತು. ಅವರೆಲ್ಲರ ಪ್ರಯತ್ನ ಅನುಮೋದನೆಗಳಿಂದ ಪರಿಷತ್ತಿನಲ್ಲಿ ಕಾವ್ಯವಾಚನದ ಅಥವಾ ಗಮಕ ಕಲೆಯ ಕ್ಲಾಸುಗಳನ್ನು ನಡೆಸತಕ್ಕದ್ದೆಂದೂ ಆ ಕೆಲಸವನ್ನು ಬಿಂದೂರಾಯರು ನಡೆಸಿಕೊಡಬೇಕೆಂದೂ ತೀರ್ಮಾನವಾಯಿತು.

ಗಮಕ ಕಲೆ ನನಗೆ ಬಾಲ್ಯದಿಂದ ಪ್ರಿಯವಾದದ್ದು. ಮುಳಬಾಗಲು, ಶ್ರೀನಿವಾಸಪುರ, ಚಿಂತಾಮಣಿ ಮೊದಲಾದ ಊರುಗಳಲ್ಲಿ ಸಾಮಾನ್ಯವಾಗಿ ತೆಲುಗರಾದ ವೈಶ್ಯರು "ವಾಚಕ"ದ ಅಭ್ಯಾಸವನ್ನು ನಡೆಸುತ್ತಿದ್ದದ್ದನ್ನು ನಾನು ಕಂಡಿದ್ದೆ. ಆಂಧ್ರ ಭಾಗವತ, ಮನುಚರಿತ್ರೆ ಮೊದಲಾದ ಕಾವ್ಯಗಳನ್ನು ಒಬ್ಬ ವಿದ್ವಾಂಸನು ಹೇಳಿಕೊಡುತ್ತಿದ್ದ. ಯಾವ ಯಾವ ಕಥಾ ಸನ್ನಿವೇಶಕ್ಕೆ ಯಾವ ಯಾವ ರಾಗ ಉಚಿತವಾದದ್ದು, ಎಲ್ಲೆಲ್ಲಿ ರಾಗವನ್ನು ಹೇಗೆ ವಿನ್ಯಾಸ ಮಾಡತಕ್ಕದು, ಉಚ್ಚಾರಣೆ ಯಾವ ಮಟ್ಟದಲ್ಲಿರಬೇಕಾದದ್ದು, ಪದಗಳನ್ನು ಬಿಡಿಸುವುದು ಹೇಗೆ, ಅವುಗಳ ಮೇಲೆ ಸ್ವರಭಾರವನ್ನು ಹಾಕುವುದು ಹೇಗೆ-ಇದನ್ನೆಲ್ಲ ಆ ಪಂಡಿತನು ಕಲಿಸುತ್ತಿದ್ದನು. ನನ್ನ ತಂದೆ ಒಳ್ಳೆಯ ವಾಚಕನೆಂದೆನಿಸಿಕೊಂಡಿದ್ದರು.

ಹೀಗೆ ನನಗೆ ಒಳ್ಳೆಯ ಕಾವ್ಯವಾಚನದ ವಿಷಯದಲ್ಲಿ ಉತ್ಸಾಹ.

ಬಿಂದೂರಾಯರಿಗೆ ಒಳ್ಳೊಳ್ಳೆಯ ಶಿಷ್ಯ ಶಿಷ್ಯೆಯರು ದೊರೆತದ್ದೂ ಒಂದು ಭಾಗ್ಯ. ಅವರಲ್ಲಿ ಮೊಟ್ಟಮೊದಲನೆಯ ಸಾರಿ ಶಿಷ್ಯೆಯರಾಗಿದ್ದವರಲ್ಲಿ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾವ್ ಅವರು ಈಗಲೂ ತಮ್ಮ ಕಾವ್ಯವಾಚನದಿಂದ ಸಭಿಕರನ್ನು ಸಂತೋಷಪಡಿಸುತ್ತಿದ್ದಾರೆ.

ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ನಡೆಸುತ್ತಿದ್ದ ಕಾಲದಲ್ಲಿಯೇ ಬಿಂದೂರಾಯರು ಬಹುಮಟ್ಟಿಗೆ ವಾನಪ್ರಸ್ಥ ಧರ್ಮವನ್ನು ಹಿಡಿದಿದ್ದರು. ಒಪ್ಪತ್ತು ಊಟ: ಅದೂ ಸ್ವಯಂಪಾಕ. ಸ್ನಾನ ಸಂಧ್ಯಾವಂದನೆ ಪೂಜಾದಿಗಳಲ್ಲಿ ಅತಿಶಯವಾದ ಶ್ರದ್ಧೆ. ಏಕಾದಶಿ ಮೊದಲಾದ ಹರಿದಿನಗಳಲ್ಲಿ ಸಂಪೂರ್ಣ ಉಪವಾಸ.

ಅವರು ತೊಂಭತ್ತರ ಸುಮಾರಿನಲ್ಲಿದ್ದಾಗ ಒಂದು ದಿನ ಕೇಳಿದೆ- “ವಾಚನವಾದ ಮೇಲೆ ಸ್ವಲ್ಪ ಆಹಾರ ತೆಗೆದುಕೊಳ್ಳಬಹುದಲ್ಲ?” -ಎಂದು. ಅವರು ಹೇಳಿದರು:

“ದಿನಕ್ಕೆ ಒಂದು ಸಾರಿ ಊಟ. ಬೆಳಗ್ಗೆ ಹತ್ತು ಹನ್ನೊಂದು ಘಂಟೆಗೆ ಒಂದಿಷ್ಟು ಅನ್ನಸಾರು ಮಾಡಿಕೊಳ್ಳುತ್ತೇನೆ. ಕೊಂಚ ಪಲ್ಯವೋ ಉಪ್ಪಿನಕಾಯಿಯೋ ಇದ್ದರೆ ಆಗಬಹುದು. ಸ್ವಲ್ಪ ಮಜ್ಜಿಗೆ, ಆಮೇಲೆ ಆಯಾಸವಾಗಿದ್ದರೆ ಒಂದು ಬಟ್ಟಲು ನೀರು. ಇಷ್ಟೇ ನನ್ನ ಪದ್ಧತಿ. ಸಂಜೆ ಎಲ್ಲಿಯಾದರೂ ಭಾರತವಾಚನವಾಗಿದ್ದರೆ ಅಲ್ಲಿ ಅವರು ಒಂದು ಲೋಟ ಹಾಲು ಕೊಟ್ಟರೆ ತೆಗೆದುಕೊಳ್ಳುವುದುಂಟು. ಅಷ್ಟು ಹೊರತು ಯಾವ ಆಹಾರವೂ ನನಗೆ ಬೇಕಾಗುವುದಿಲ್ಲ.”

ನಾನು ಆಗ ಅಂದುಕೊಂಡೆ-ಇವರು ಈಹೊತ್ತೂ ದೃಢಕಾಯರಾಗಿರುವುದಕ್ಕೆ ಈ ಲಘ್ವಾಶಿತೆಯೇ, ನಿಯಮನಿಷ್ಠೆಯೇ ಮುಖ್ಯಕಾರಣ ಎಂದು.

ರಾಜೀನಾಮೆ

ಬಿಂದೂರಾಯರು ಸರಕಾರಿ ನೌಕರಿಯಿಂದ ಕಂಪನಿ ನೌಕರಿಗೆ ವರ್ಗಪಡಿಸಿಕೊಂಡ ಕಾಲದಲ್ಲಿ ನನಗೆ ಅವರ ಪರಿಚಯವಾಗಿತ್ತು. ಅವರು ಹಾಗೆ ನೌಕರಿಯನ್ನು ಬದಲಾಯಿಸಬೇಕೆಂದು ಪ್ರೋತ್ಸಾಹ ಕೊಟ್ಟವರಲ್ಲಿ ನಾನೂ ಒಬ್ಬ. ಸೀತಾರಾಮಾಚಾರ್ಯರಿಗೂ ನನಗೂ ಆಗ್ಗೆ ತುಂಬಾ ಸ್ನೇಹ ಬೆಳೆದಿತ್ತು. ಬಿಂದೂರಾಯರು ಆ ಕಂಪನಿಗೆ ಒಳ್ಳೆಯ ಸಹಾಯಕರಾದರೆಂದೂ ಅಲ್ಲಿ ದೊರೆಯುವ ಮಾನ ಮರ್ಯಾದೆಗಳಿಂದ ಅವರು ಸಂತುಷ್ಟರಾದಾರೆಂದೂ ನಾನು ನೀರೀಕ್ಷಿಸಿಕೊಂಡಿದ್ದೆ. ಒಂದೆರಡು ವರ್ಷ ಕಾಲ ಆ ಏರ್ಪಾಟು ತೃಪ್ತಿಕರವಾಗಿಯೇ ನಡೆಯಿತು.

ಆಮೇಲೆ ಬಿಂದೂರಾಯರ ಮಾತಿನಲ್ಲಿ ಆಗಾಗ ಅಸಂತೃಪ್ತಿಯ ಧ್ವನಿ ಹೊರಡುತ್ತಿತ್ತು. ಒಂದು ಕಂಪನಿಯ ಕಾರ್ಯಾಲಯವೆಂದರೆ ಅಲ್ಲಿ ಯಜಮಾನರು ಅನೇಕರಾಗುವುದು ಸ್ವಾಭಾವಿಕ. ಕೆಲಸ ಮಾಡುವಾತ ಇವರ ಮಾತನ್ನೂ ಕೇಳಬೇಕು: ಅವರ ಮಾತನ್ನೂ ಕೇಳಬೇಕು. ಇದು ಬಿಂದೂರಾಯರಂಥವರಿಗೆ ಸುಲಭವಲ್ಲ, ಯಥಾರ್ಥವನ್ನು ಬಚ್ಚಿಡುವುದೂ ದಾಖಲೆಗಳನ್ನು ಬಿಟ್ಟು ಯಾರೋ ಹೇಳಿದಂತೆ ಲೆಕ್ಕಪತ್ರಗಳನ್ನು ಬರೆದಿಡುವುದೂ ಅವರ ಮನಸ್ಸಿಗೆ ಒಗ್ಗದ ಕೆಲಸ.

ಹೀಗಾಗಿ ಸುಮಾರು ಒಂದು-ಒಂದೂವರೆ ವರ್ಷ ಗೊಣಗಾಡುತ್ತಿದ್ದು ಯಾವುದೋ ಒಂದು ಕಟುಸಂದರ್ಭ ಬಂದಾಗ ಬಿಂದೂರಾಯರು ಆ ಚಾಕರಿಗೆ ರಾಜೀನಾಮೆ ಕೊಟ್ಟರು.

ಮುಂದೆ ಜೀವನಕ್ಕೇನು ಉಪಾಯ? ಎಂದು ಸ್ನೇಹಿತರು ಕೇಳಿದಾಗ ದ್ರೌಪದಿ ಶ್ರೀಕೃಷ್ಣನನ್ನು ಕುರಿತು ಹೇಳಿದ ಪದ್ಯವನ್ನು ಹೇಳಿ “ಹರಿಯೇ ನಮಗೆ ಉಪಾಯ” ಎಂದರು.

ಅನಂತರ ಐದಾರು ವರ್ಷ ಕಳೆದ ಬಳಿಕ ಅವರ ಕೈಯಿಂದ ತಮ್ಮ ಹಳೆಯ ಚಾಕರಿಗೆ ಸಲ್ಲಬೇಕಾಗಿದ್ದ ಪಿಂಛನಿಗಾಗಿ ಸರಕಾರಕ್ಕೆ ಬೇಡಿಕೆ ಪತ್ರವನ್ನು ಬರೆಯಿಸಲು ಬಹು ಒತ್ತಾಯ ಮಾಡಬೇಕಾಯಿತು. ಮನಸ್ಸಿಲ್ಲದವರಾಗಿ ಅವರು ಪತ್ರ ಬರೆದರು. ಸರಕಾರ ಕೊಂಚ ಪಿಂಛನಿ ಮಂಜೂರು ಮಾಡಿತು. ಅದು ಬಹು ಕೊಂಚದ್ದು: ಉಪ್ಪಿಗಾದರೆ ಹುಣಸೇಹಣ್ಣಿಗಾಗದು, ಹುಣಿಸೇಹಣ್ಣಿಗಾದರೆ ಉಪ್ಪಿಗಾಗದು. ಬಿಂದೂರಾಯರು ತಮ್ಮ ಹಣಕಾಸಿನ ಸ್ಥಿತಿಯನ್ನು ಯಾರಿಗೂ ಎಂದೂ ತಿಳಿಯಪಡಿಸಿದವರಲ್ಲ. ಅವರು ಯಾರಲ್ಲಿಯೂ ಒಂದು ದಿನವೂ, ಒಂದು ಕ್ಷಣವೂ ತಮ್ಮ ಹಣಕಾಸಿನ ಸಂದರ್ಭವನ್ನು

ಸೂಚಿಸಿದವರು ಕೂಡ ಅಲ್ಲ. ಅವರು ಸಂತೋಷವಾಗಿದ್ದದ್ದನ್ನೂ ಅವರ ನಗುವನ್ನೂ ಅವರ ಸರಸತೆಯನ್ನೂ ನೋಡಿದವರಿಗೆ ಅವರಿಗೆ ಯಾವ ಕೊರತೆಯೂ ಇರಲಿಲ್ಲವೆನಿಸುತ್ತಿತ್ತು. ಅವರಿಗೆ ಕೊರತೆಯಿದ್ದದ್ದು ನಿಜ. ಆದರೆ ಅದನ್ನು ಅವರು ಅನುಭವಿಸಿದಂತೆ ಎಂದೂ ತೋರಲಿಲ್ಲ.

ಎಷ್ಟೋ ವರ್ಷಗಳ ಹಿಂದೆ ಅವರಿಗೆ ಪತ್ನೀವಿಯೋಗವಾಗಿತ್ತು. ಅವರ ಹೆಣ್ಣು ಮಕ್ಕಳು ಬೇರೆ ಕಡೆ ಗಂಡಂದಿರೊಡನೆ ವಿಹಿತರೀತಿಯಲ್ಲಿದ್ದರು. ಬಿಂದೂರಾಯರಿಗೆ ಗಂಡುಸಂತಾನವಿರಲಿಲ್ಲ. ಅವರ ತಮ್ಮಂದಿರು ತೀರಿಕೊಂಡಿದ್ದದ್ದರಿಂದ ಆ ದೊಡ್ಡ ಕುಟುಂಬವನ್ನು ಇವರೇ ನಿರ್ವಹಿಸುತ್ತಿದ್ದರು. ಅವರು ಎಷ್ಟು ತೀವ್ರವಾದ ಕಷ್ಟನಿಷ್ಠುರಗಳನ್ನು ಎಷ್ಟು ದೀರ್ಘಕಾಲ ಸಹಿಸಿರಬಹುದೆಂಬುದರ ಕಲ್ಪನೆ ಈಗ, ಅವರು ಇಹವನ್ನು ಬಿಟ್ಟು ತೆರಳಿದ ಮೇಲೆ ನನ್ನ ಮನಸ್ಸಿಗಾಗುತ್ತಿದೆ.

ಶ್ರೀರಾಮಕೃಷ್ಣರ ಒಂದು ಕಥೆ

ಬಿಂದೂರಾಯರನ್ನು ನೆನೆದಾಗಲೆಲ್ಲ ಭಗವಾನ್ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಕಥೆಯೊಂದು ನನಗೆ ಜ್ಞಾಪಕಕ್ಕೆ ಬರುತ್ತದೆ.

ಒಬ್ಬ ವಿದ್ವಾಂಸನು ಒಬ್ಬಾನೊಬ್ಬ ರಾಜನಲ್ಲಿಗೆ ಯಾಚಕನಾಗಿ ಹೋದ. ರಾಜ ಆತನನ್ನು ಕೇಳಿದ:

ರಾಜ: "ನೀವು ಯಾವ ಶಾಸ್ತ್ರದಲ್ಲಿ ಪಂಡಿತರು?"

ಯಾಚಕ: "ನಾನು ಶ್ರೀಮದ್ಭಾಗವತ ಪುರಾಣ ಹೇಳತಕ್ಕವನು."

ರಾಜ: "ಹಾಗೆಯೆ? ಬಹು ಸಂತೋಷ. ಭಾಗವತ ಪುರಾಣ ಕೇಳಲು ನನಗೆ ತುಂಬ ಕುತೂಹಲವುಂಟು. ಆದರೆ ನನಗೆ ಈಹೊತ್ತು ಬಿಡುವಿಲ್ಲ. ಮುಂದಿನ ಶನಿವಾರ ತಾವು ಬಂದರೆ ಕುಳಿತು ಕೇಳಿಯೇನು."

ಬ್ರಾಹ್ಮಣನಿಗೂ ಸಂತೋಷವಾಯಿತು. ಗೊತ್ತಾಗಿದ್ದ ಶನಿವಾರ ಅರಮನೆಗೆ ಹೋದ. ಆಗ ಅಲ್ಲಿದ್ದ ಚಾರರು "ಸ್ವಾಮಿ, ಇಂದು ದೊರೆಗಳು ಏನೋ ದೇಹಾಲಸ್ಯದಿಂದ ತಮ್ಮನ್ನು ನೋಡಲು ಆಗಲಾರದು. ಮುಂದಿನ ಶನಿವಾರ ದಯಮಾಡಿಸೋಣವಾಗಲಿ" ಎಂದರು.

ಇನ್ನೊಂದು ಶನಿವಾರವೂ ಮತ್ತೊಂದು ಶನಿವಾರವೂ ಹೀಗೆಯೇ ಕಳೆಯಿತು. ಯಾವುದೋ ಕಾರಣದಿಂದ ರಾಜನು ಯಾಚಕನನ್ನು ಕಾಣಲಾಗಲಿಲ್ಲ. ಆರನೆಯ ಶನಿವಾರ ರಾಜನು ಬಿಡುವು ಮಾಡಿಕೊಂಡು ಪುರಾಣ ಕೇಳಲು ಸಿದ್ಧನಾಗಿ ಕುಳಿತಿದ್ದ. ಅಂದು ಪೌರಾಣಿಕ ಬರಲಿಲ್ಲ. ರಾಜನಿಗೆ ಅದು ಸೋಜಿಗವೆನಿಸಿತು. ಕಾರಣವೇನೆಂದು ವಿಚಾರಿಸುವುಕ್ಕಾಗಿ ಸೇವಕರನ್ನು ಕಳುಹಿಸಿದ. ಆ ಬ್ರಾಹ್ಮಣ ಬರುವ ಮರ್ಜಿಯಲ್ಲಿಲ್ಲವೆಂದು ಅವರು ಪ್ರತ್ಯುತ್ತರ ತಂದರು. ಆಗ ರಾಜ ತಾನೇ ಆ ಬ್ರಾಹ್ಮಣನನ್ನು ಕಂಡು ವಿಚಾರಿಸಬೇಕೆಂದು ಆತನಿದ್ದ ಕಡೆಗೆ ಹೋಗಿ ನೋಡಿದ. ಆ ಬ್ರಾಹ್ಮಣ ಗ್ರಂಥದಲ್ಲಿ ಮಗ್ನನಾಗಿ ಕುಳಿತಿದ್ದ. ರಾಜ ಕೇಳಿದ:

ರಾಜ: "ಪಂಡಿತರೆ, ಇಂದು ನಾನು ತಮ್ಮ ಪುರಾಣ ಕೇಳುವ ಕುತೂಹಲದಿಂದ ಬಂದಿದ್ದೇನೆ. ತಾವು ನನ್ನ ಮನೆಗೆ ದಯಮಾಡಬೇಕು."

ಬ್ರಾಹ್ಮಣ: “ಮಹಾಸ್ವಾಮಿ. ನನಗೆ ಈಗ ಯಾಚನೆಯ ಹಂಬಲ ಬಿಟ್ಟುಹೋಗಿದೆ.”

ರಾಜ: “ಅದೇಕೆ?”

ಬ್ರಾಹ್ಮಣ: “ತಾವು ಮೊದಲ ದಿವಸ ಹೇಳಿದಿರಿ, ತಮಗೆ ಭಾಗವತದಲ್ಲಿ ಕುತೂಹಲವೆಂದು. ಅದಕ್ಕಾಗಿ ನಾನು ಆ ಗ್ರಂಥವನ್ನು ವಿಶೇಷವಾದ ಆಸಕ್ತಿಯಿಂದ ನಾಲ್ಕಾರು ಸಾರಿ ಓದಿದೆ. ನೀವು ಏನು ಪ್ರಶ್ನೆ ಕೇಳಬಹುದೋ! ಅದಕ್ಕೆ ಸಮಂಜಸವಾದ ಉತ್ತರವನ್ನು ನಾನು ಸಿದ್ಧಪಡಿಸಿಟ್ಟುಕೊಂಡಿರಬೇಕೆಂದು ಗ್ರಂಥವನ್ನು ಪುನಃ ಪುನಃ ಸಾವಧಾನವಾಗಿ ಓದಿದೆ. ಓದುತ್ತ ಓದುತ್ತ ಹೊಸ ಹೊಸ ಸ್ವಾರಸ್ಯಗಳನ್ನು ಗ್ರಂಥದಲ್ಲಿ ಕಂಡೆ. ಈಗ ನನಗೆ ಈ ಭಾಗವತ ರಸಾಯನಕ್ಕಿಂತ ದೊಡ್ಡ ಭಾಗ್ಯ ಯಾವುದೂ ಇಲ್ಲವೆಂದು ದೃಢಪಟ್ಟಿದೆ. ಆದದ್ದರಿಂದ ಯಾವ ಅಪೇಕ್ಷೆಯೂ ಈಗ ಇಲ್ಲ. ತಾವು ಸಾವಕಾಶ ಮಾಡಿದ್ದರಿಂದ ನನಗೆ ಮಹೋಪಕಾರವಾಯಿತು. ನಾನು ಧನ್ಯನಾದೆ”

***

ಹೀಗಾಯಿತು ಬಿಂದೂರಾಯರಿಗೆ.

ನಮ್ಮ ಜನರ ಔದಾರ್ಯ

ನಮ್ಮ ಮಹಾಜನರ ಔದಾರ್ಯವನ್ನು ಕುರಿತು ಒಂದು ಸಂಕೋಚದ ಮಾತನ್ನಾಡಬೇಕಾಗಿದೆ. ನೂರಾರು ಊರುಗಳವರು ಬಿಂದೂರಾಯರನ್ನು ಮೆಚ್ಚಿಕೊಂಡು ಆದರಿಸಿದರು. ಹುಬ್ಬಳ್ಳಿ, ಧಾರವಾಡ, ಗದಗು, ಬೆಳಗಾವಿ, ಬೆಂಗಳೂರು, ಮೈಸೂರು, ಬೊಂಬಾಯಿ-ಹೀಗೆ ಎಷ್ಟೋ ದೊಡ್ಡ ದೊಡ್ಡ ಪಟ್ಟಣಗಳವರು ಭಾರತವಾಚನಕ್ಕಾಗಿ ಅವರನ್ನು ಕರೆಸಿಕೊಂಡರು. ಅವರು ಸಂತೋಷದಿಂದ ಹಾಗೆ ಹೋಗಿ ನಾಲ್ಕಾರು ವಾರ ಭಾರತವಾಚನ ಮಾಡಿಬಂದರು. ಅವರಿಗೆ ಕೊಟ್ಟ ಪುರಸ್ಕಾರ ಎಂಥದಿರಬಹುದು? ಕೆಲವು ಕಡೆ ಪ್ರಯಾಣದ ವೆಚ್ಚ ಕೊಟ್ಟಿರಬಹುದು. ಸ್ವಯಂಪಾಕದ ಸಾಮಾನು ಕೊಟ್ಟಿರಬಹುದು. ಅಲ್ಲಲ್ಲಿ ಒಂದು ಲೋಟ ಹಾಲು ಕೊಟ್ಟಿರಬಹುದು. ಅವರ ಕಿವಿಗಳೆರಡು ತುಂಬಿ ಮೇಲ್ಹೊಳೆ ಹರಿಯುವಂತೆ ಹೊಗಳಿರಬಹುದು. ಹೊಗಳಿಕೆಯು ಅನ್ನಕ್ಕೆ ಪ್ರತಿನಿಧಿಯಲ್ಲವೆಂಬುದನ್ನು ನಮ್ಮ ಜನ ಮರೆತಿದ್ದಾರೆ. ಸಂಗೀತಗಾರರಿಗೂ, ನರ್ತಕರಿಗೂ ನಗದು ಸಂಭಾವನೆ ಸಲ್ಲಿಸುವಂತೆ ಗಮಕಿಗೆ ಏಕೆ ಸಲ್ಲಿಸಕೂಡದು?

ಇದರಲ್ಲಿ ಬಿಂದೂರಾಯರ ಲೋಪವೂ ಇದೆ. ಅವರು ಶುದ್ಧ ಲೌಕಿಕರಾಗಿ ಹುಟ್ಟಿದವರು. ಸರಕಾರಿ ಚಾಕರಿಯಲ್ಲಿ ಬೆಳೆದವರು. ಆದದ್ದರಿಂದ ಮಂಗಳಾರತಿ ತಟ್ಟೆಯನ್ನು ಪ್ರದಕ್ಷಿಣೆ ಮಾಡಿಸುವ ಕಲೆ ಅವರಿಗೆ ಬರಲಿಲ್ಲ.

ಹೀಗಾಗಿ ಅವರ ಧನಸಂಪಾದನೆ ಕಡೆಕಡೆಯ ಕಾಲದಲ್ಲಿ ಶೂನ್ಯವೇ ಆಗಿತ್ತು ಎಂದು ಹೇಳಬೇಕು. ಆದರೆ ಇದು ಯಾವ ಹೊರ ಮನುಷ್ಯನಿಗೂ ತಿಳಿದುಬಂದದ್ದಲ್ಲ.

ವಿನಾ ದೈನ್ಯೇನಜೀವನಮ್

ಎಂಬ ವ್ರತದಿಂದ ಅವರು ತಪ್ಪಲಿಲ್ಲ.

ಕರ್ನಾಟಕ ಏಕೀಕರಣವಾದ ಮೇಲೂ ಸರಕಾರಕ್ಕೆ ಅವರ ವಿಷಯ ಹೆಚ್ಚಾಗಿ ತಿಳಿದು ಬಂದಂತಿಲ್ಲ. ಕಡೆಕಡೆಯಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯೆಂದು ಏನೋ ಬಹುಮಾನ ದೊರೆಯಿತಂತೆ. ಈ ಬಹುಮಾನವನ್ನು ಪಡೆಯುವುದಕ್ಕಾಗಿ ಅವರು ಬೆಂಗಳೂರಿಗೆ ಬಂದಿದ್ದರಂತೆ. ಪ್ರಯಾಣದ ವೆಚ್ಚವನ್ನು ಸರಕಾರ ಕೊಟ್ಟಿತೆಂದು ನಾನು ನಂಬಿಕೊಂಡಿದ್ದೇನೆ. ಇನ್ನೇನನ್ನು ಕೊಟ್ಟಿತೋ ನನಗೆ ತಿಳಿದಿಲ್ಲ. ನಗದು ಏನನ್ನೂ ಕೊಟ್ಟಂತೆ ನನಗೆ ವರ್ತಮಾನ ಬಂದಿಲ್ಲ.

ಸರಕಾರದ ಕಲಾಪ್ರೋತ್ಸಾಹ

ಇನ್ನೊಂದು ವಾಸ್ತವಿಕ ಸಂಗತಿಯನ್ನು ಮಹಾಜನರ ತಿಳಿವಳಿಕೆಗೆ ತರಬೇಕೆಂದು ನನಗನ್ನಿಸುತ್ತದೆ. ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ರಚನೆಯಾದ ಸರಕಾರದ ಒಬ್ಬ ಮಂತ್ರಿಗಳು ಬೆಂಗಳೂರಿಗೆ ದಯಮಾಡಿಸಿದ್ದರು. ಈ ಬಡವನ ಮನೆಗೂ ಭೇಟಿಕೊಟ್ಟರು. ಆಗ ನಾನು ಅವರಲ್ಲಿ ಬೇಡಿದೆ, ಹೀಗೆ:

"ಸ್ವಾಮಿ, ದೇಶ ಸ್ವತಂತ್ರವಾಯಿತು. ಕರ್ಣಾಟಕ ಏಕೀಕೃತವಾಗುವಂತಿದೆ. ಈಗ ಕರ್ಣಾಟಕ ಸಂಸ್ಕೃತಿಯ ಪುರೋಭಿವೃದ್ಧಿಗೆ ಅವಶ್ಯವಾಗಿ ನಡೆಯಬೇಕಾದ ಒಂದು ಕಾರ್ಯವನ್ನು ತಮ್ಮಲ್ಲಿ ಬಿನ್ನಯಿಸಬೇಕೆಂದಿದ್ದೇನೆ. ಲಾಲಿಸಬೇಕು. ಕರ್ಣಾಟಕ ಸಂಸ್ಕೃತಿಗೆ ಲಕ್ಷಣ ಪ್ರಾಯರಾಗಿರುವ ಇಬ್ಬರು ಮಹನೀಯರು ಈಗ ಮುದುಕರಾಗಿದ್ದಾರೆ. ವಿದ್ವಾನ್ ಕೆ.ವಾಸುದೇವಾಚಾರ್ಯರಿಗೆ ವರ್ಷ ತೊಂಭತ್ತಾಯಿತು. ಎಸ್.ಜಿ.ಬಿಂದೂರಾಯರಿಗೆ ವರ್ಷ ಎಂಭತ್ತಾಯಿತು. ಇಬ್ಬರಿಗೂ ಧ್ವನಿ ಕುಗ್ಗಿದೆ.

"ಸಂಗೀತವಾಗಲಿ, ಕಾವ್ಯವಾಚನವಾಗಲಿ ಸೊಗಯಿಸುವುದು ಕಂಠ ಸಂಪತ್ತಿನಿಂದ. ಈಗ ಇಷ್ಟು ಕುಗ್ಗಿದ್ದರೂ ಈ ಇಬ್ಬರು ಕರ್ಣಾಟಕ ವಿದ್ವಾಂಸರ ಗಾನರೀತಿಯೂ ವಾಚನರೀತಿಯೂ ಇನ್ನೂ ಕಾಂತಿಗುಂದದೆ ಇವೆ. ಅವು ಇನ್ನು ಬಹುಕಾಲ ಹಾಗೆ ಉಳಿಯಲಾರವು. ಆದದ್ದರಿಂದ ವಾಸುದೇವಾರ್ಚಾರ ಗಾನವಿಧಾನವನ್ನೂ ಶೈಲಿಯನ್ನೂ ಕೊಂಚ ಮಟ್ಟಿಗಾದರೂ ನಾವು ದಾಖಲೆ ಮಾಡಿಟ್ಟರೆ ಉತ್ತರೋತ್ತರ ಬರುವ ಗಾನಾಭ್ಯಾಸಿಗಳಿಗೆ ಅದು ಕೊಂಚ ಮಾತ್ರವಾದರೂ ಮೇಲ್ಪಂಕ್ತಿಯಾಗಿದ್ದೀತು. ಹಾಗೆಯೇ ಬಿಂದೂರಾಯರ ಕಾವ್ಯವಾಚನ. ಅವರು ಹಾಡಿದ ಕೆಲವು ಪದ್ಯಗಳನ್ನಾದರೂ ನಾವು ಸ್ಥಾಯಿಯಾಗಿ ದಾಖಲೆ ಮಾಡಿಟ್ಟರೆ ಅದು ಮುಂದೆ ಬರುವ ಕಾವ್ಯವಾಚಕರಿಗೆ ಮೇಲ್ಪಂಕ್ತಿಯಾಗಿದ್ದೀತು. ಹೀಗೆ ದಾಖಲೆ ಮಾಡಿಡುವುದಕ್ಕಾಗಿ ಸರಕಾರದವರು ಆ ವಿದ್ವಾಂಸರ ಬಳಿ ಒಂದು ಟೇಪ್‌ರೆಕಾರ್ಡರ್ ಯಂತ್ರವನ್ನೂ ಮತ್ತೊಬ್ಬರ ಬಳಿ ಇನ್ನೊಂದು ಯಂತ್ರವನ್ನೂ ಇರಿಸುವುದಾದರೆ ಆ ವಿದ್ವಾಂಸರು ದಾಖಲೆ ಯಂತ್ರದ ಪಾತ್ರದೊಳಕ್ಕೆ ಹಾಡಲು ಅನುಕೂಲಿಸುತ್ತದೆ.

"ಸಂಗೀತಗಾರರಿಗೇ ಆಗಲಿ ಕಾವ್ಯವಾಚಕರಿಗೇ ಆಗಲಿ ಒಳ್ಳೆಯ ಧಾಟಿ ಯಾವಾಗ ಬೇಕೆಂದರೆ ಆಗ ಬರುವುದಿಲ್ಲ. ಅವರ ಕಂಠ ನೆನಸಿಕೊಂಡಾಗ ಸಿದ್ಧವಾಗುವುದಿಲ್ಲ. ಆದದ್ದರಿಂದ ಅಂಥವರ ಬಳಿ ಯಂತ್ರ ಸಿದ್ಧವಾಗಿದ್ದರೆ ಅವರಿಗೆ ಯಾವಾಗ ಮನಸ್ಸು

ಬರುತ್ತದೋ ಯಾವಾಗ ರಾಗದ ಕಾವು ಏರುತ್ತದೆಯೋ ಯಾವಾಗ ಕಂಠ ಶುದ್ಧವಾಗಿರುತ್ತದೆಯೋ ಆಗ ಅವರು ಹಾಡಿ ದಾಖಲೆ ಮಾಡಿಸುವುದು ಸಾಧ್ಯವಾಗುತ್ತದೆ.

ಎಷ್ಟೋ ಸಾರಿ ಗಾಯಕನು ಏಕಾಂತದಲ್ಲಿ ಕುಳಿತಾಗ ಅವನಿಗೆ ಭಾವಾವೇಶ ಬರುತ್ತದೆ. ರಾತ್ರಿ ಹತ್ತು ಘಂಟೆಯಲ್ಲಿ, ಬೆಳಗಿನ ಝಾವ ಮೂರು ಘಂಟೆಗೆ ಅವನಿಗೆ ತಿಳಿಯದಂತೆ ರಾಗಾವೇಶ ಬರುತ್ತದೆ. ಮಹಾ ಮಹಾ ವಿದ್ವಾಂಸರಿಗೆ ಹೀಗಾಗುವುದನ್ನು ನಾನು ಬಲ್ಲೆ. ರಾಜಕೀಯದಲ್ಲಿರುವ ನಮ್ಮಂಥವರಿಗೆ ಭಾಷಣಗಳು ಇಷ್ಟಪಟ್ಟಾಗ ಬರುತ್ತವೆ-ಎಷ್ಟು ಬೇಕೆಂದರೆ ಅಷ್ಟು ಬರುತ್ತವೆ, ಕಲೆಯ ವಿಚಾರ ಹಾಗಲ್ಲ. ಕಲಾಮಾತೃಕೆ ತಾನಾಗಿ ಒಲಿದು ಬರಬೇಕು. ಬಂದಾಗ ಅದನ್ನು ಜಾಗ್ರತೆ ಕಂಡುಕೊಳ್ಳುವವನು ಭಾಗ್ಯಶಾಲಿ.

“ನಾನು ಕೇಳಿರುವುದರಲ್ಲಿ ಟೇಪ್‌ರೆಕಾರ್ಡರ್ ಯಂತ್ರ ಸುಮಾರು ಎರಡೂವರೆಮೂರು ಸಾವಿರ ರೂಪಾಯಿಗಳಿಗೆ ಸಿಕ್ಕುತ್ತದಂತೆ. ಎರಡು ಯಂತ್ರಗಳಿಗೆ ಒಟ್ಟು ಆರು ಸಾವಿರ ಖರ್ಚಾಗಬಹುದು. ಮೇಲು ಖರ್ಚು ನಾಲ್ಕು ಸಾವಿರವೆಂದಿಟ್ಟುಕೊಂಡರೂ ಸರಕಾರ ಹತ್ತು ಸಾವಿರ ರೂಪಾಯಿ ಮಂಜೂರು ಮಾಡುವುದಾದರೆ ವಾಸುದೇವಾಚಾರ್ಯರ ಗಾನಸೌಂದರ್ಯವನ್ನೂ ಬಿಂದೂರಾಯರ ಕಾವ್ಯವಾಚನದ ಸೌಂದರ್ಯವನ್ನೂ ಚಿರಕಾಲ ನಮ್ಮ ಜನಕ್ಕೆ ಉಳಿಸಿದಂತಾಗುತ್ತದೆ.”

ಮಂತ್ರಿವರ್ಯರು ಈ ಬಿನ್ನಹವನ್ನು ಲಾಲಿಸಿ ಆಲೋಚಿಸುವುದಾಗಿ ಭರವಸೆ ಹೇಳಿದರು.

ಕೆಲವು ದಿನಗಳಾದ ಮೇಲೆ ದೆಹಲಿಯಿಂದ ನನಗೆ ಪತ್ರ ಬರೆದು ನನ್ನ ಸಲಹೆಯನ್ನು ತಾವು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಿಗೆ ತಿಳಿಸಿರುವಂತೆಯೂ, ಮುಂದಿನ ವಿಚಾರವನ್ನು ಮೈಸೂರಿನ ಮುಖ್ಯಮಂತ್ರಿಗಳು ನಡಸಬಹುದೆಂದೂ ಅಪ್ಪಣೆ ಕೊಡಿಸಿದರು.

ನನ್ನ ಬಿನ್ನಹ ಫಲಗಾಣಲಿ. ಸರಕಾರವೆಂಬುದು ಮಹಾವ್ಯಾಪಾರ. ಮಂತ್ರಿಗಳಿಗೆ ಎಷ್ಟೋ ಕಷ್ಟಗಳಿರಬಹುದು. ಸಿಕ್ಕುಗಳಿರಬಹುದು, ತೊಡಕುಗಳಿರಬಹುದು. ನಾನು ಸರಕಾರವನ್ನು ಕಾಣದವನಾದದ್ದರಿಂದ ಅದಕ್ಕಿರುವ ಕಷ್ಟಗಳನ್ನು ತಿಳಿಯದೆ ನಾನು ಆಕ್ಷೇಪಣೆ ಮಾಡಬಾರದು.

ಬಿಂದೂರಾಯರಂಥ ಅಪೂರ್ವ ಕಲಾಪ್ರವೀಣರು ತಮ್ಮ ಕಲಾಪ್ರತಿಭೆಯ ಗುರುತನ್ನು ಲವಲೇಶವಾಗಿಯಾದರೂ ಹಿಂದೆಬಿಡದೆ ಕಣ್ಣು ಮುಚ್ಚಿಕೊಳ್ಳಬೇಕಾಯಿತಲ್ಲಾ ಎಂಬುದು ನನ್ನ ಕೊರತೆ. ಈಗ ಸರಕಾರ ಹಣ ಕೊಡಬಹುದು. ಮಹಾಜನ ಚಂದಾ ಎತ್ತಬಹುದು. ಬಿಂದೂರಾಯರನ್ನು ಹಿಂದಕ್ಕೆ ತರಲಾದೀತೋ? ಅಂಥ ಓಜಸ್ಸಂಪನ್ನವಾದ

ಶಾರೀರವನ್ನೂ ಗಮಕಧಾಟಿಯನ್ನೂ ಹಿಂದಕ್ಕೆ ತರಲಾದೀತೊ? ವಿಚಾರ ಮಾಡೋಣವಾಗಲಿ.

೨೧

ರಸಿಕರೆಂಥವರು?

ಇಷ್ಟು ಜನ ಸಂಗೀತ ವಿದ್ವಾಂಸರನ್ನೂ ರಸಿಕರನ್ನೂ ಸ್ಮರಿಸಿದ್ದಾದ ಮೇಲೆ ಇದರ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸುವುದು ಯುಕ್ತ. ಸದ್ಯದ ಪ್ರಪಂಚದಲ್ಲಿ ರಸಿಕತೆ ಕಡಮೆಯಾಗುತ್ತಿದೆಯೆಂಬ ಕೊರಗೇ ಆ ಉದ್ದೇಶ. ಎಲ್ಲೆಲ್ಲಿಯೂ ಎಲ್ಲ ಜೀವನಕ್ಷೇತ್ರಗಳಲ್ಲಿಯೂ ವ್ಯಾಪಾರಪ್ರವೃತ್ತಿಯೂ ಅದರ ಲಕ್ಷಣವಾದ ಆಪಣದ್ರವ್ಯದ ಪ್ರಶಸ್ತಿಯೂ ಹೆಚ್ಚುತ್ತಿವೆ. ಸಂಗೀತ ಕೇಳಿದರೆ ಏನು ಬರುತ್ತದೆ?-ಎಂದು ಕೇಳುವ ಜನ ಹೆಚ್ಚುತ್ತಿದ್ದಾರೆ. ಮಹಡಿ ಮನೆಗೆ ಬೆಲೆಯುಂಟು. ರೇಷ್ಮೆವಸ್ತ್ರಗಳಿಗೆ ಬೆಲೆಯುಂಟು. ಮೋಟರ್ ಕಾರುಗಳಿಗೆ ಬೆಲೆಯುಂಟು. ಚಿನ್ನರನ್ನಗಳಿಗಂತೂ ಮೊದಲಿನಿಂದ ಉಂಟೇ ಉಂಟು. ಹೆಂಡತಿಂಡಿಗಳಿಗೂ ಬೆಲೆಯುಂಟು-ಧನಿಕ ವರ್ಗದಲ್ಲಿ. ಕಾವ್ಯ ಸಂಗೀತಗಳು ಮಾತ್ರ ಬೆಲೆಸಲ್ಲದ ವಸ್ತುಗಳು. ಮನೆಯಲ್ಲಿ ಮದುವೆಯಾದರೆ ಕೆಲವು ಸದ್ದುಗಳಾಗುವುದು ಪದ್ಧತಿ. ಆ ಸದ್ದುಗಳ ಕೋಠಿಗೆ ಸೇರಿದವು ಕಾವ್ಯವಾಚನ, ಸಂಗಿತ ಇತ್ಯಾದಿ. ನಮ್ಮ ಸಮಾಜ ಜೀವನದಲ್ಲಿ ಬೆಲೆ ಕಳೆದುಕೊಂಡಿರುವ ವಸ್ತುಗಳು ಮೂರು:

1. ಮಂತ್ರ
2. ಕಾವ್ಯ
3. ಗಾನ

ಇವು ಅಗ್ಗವಾಗಿ-ಖರ್ಚು ಎಷ್ಟು ಕಡಮೆಯಾದರೆ ಅಷ್ಟು ನಡೆಯಲಿ ಎಂಬುದು ನಮ್ಮ ಇಂದಿನ ಪ್ರತಿಷ್ಠಾವಂತರ ಮನೋಗತ. ನಾನು ಕೇಳಿದ ಒಂದು ನಿಜವಾದ ಸಂಗತಿಯನ್ನು ಉದಾಹರಿಸಬಹುದು.

ಒಂದು ಪ್ರಕರಣ

ಬೆಂಗಳೂರಿನಲ್ಲಿ ಒಬ್ಬಾನೊಬ್ಬ ಸಾಹುಕಾರರ ಮನೆಯಲ್ಲಿ ಮದುವೆ. ಎಲ್ಲ ವಿಷಯಗಳಲ್ಲಿಯೂ ಅತಿಶಯವಾದ ವಿಜೃಂಭಣೆ. ದೊಡ್ಡ ಚಪ್ಪರ, ಅದಕ್ಕೆ ಬಟ್ಟೆ

ಗುನ್ನಾಪಟ್ಟಿಗಳ ಅಲಂಕಾರಗಳು. ಬಣ್ಣ ಬಣ್ಣದ ವಿದ್ಯುದ್ದೀಪಗಳು, ಸೋಫ ಕುರ್ಚಿ ಮೊದಲಾದ ಪರಿಕರಗಳು-ಇವೆಲ್ಲ ಯಥೇಷ್ಟವಾಗಿದ್ದವು.

ಸಂಜೆ ನಾಲ್ಕು ಘಂಟೆಯ ವೇಳೆಗೆ ಸಂಗೀತದವರು ಬಂದರು. ಹಾಡುವವರೊಬ್ಬರು, ಜೊತೆ ಹಾಡಿನವರೊಬ್ಬರು, ಪಿಟೀಲು ವಿದ್ವಾಂಸ, ಮೃದಂಗದ ವಿದ್ವಾಂಸ, ತಂಬೂರಿ ಶ್ರುತಿಯಾತ, ತಾಳಕ್ಕೊಬ್ಬ-ಈ ಆರು ಜನ ಅವರ ವಾದ್ಯಗಳೊಂದಿಗೆ ಇಳಿದರು. ಅವರಲ್ಲಿ ಒಬ್ಬಾತ ಯಜಮಾನನನ್ನು ಗಾಡಿ ಬಾಡಿಗೆ ಕೇಳಿದ.

ಯಜಮಾನ: "ಅದೆಲ್ಲ ಬೇರೆ ಎಲ್ಲೈತೆ? ಆ ಖರ್ಚೆಲ್ಲ ಕಂತ್ರಾಟಿನಲ್ಲೇ ಸೇರೈತೆ."

ಹಾಡುವವರು ಆ ಹೊತ್ತಿನಲ್ಲಿ ತಕರಾರು ಪ್ರಾರಂಭಿಸಬಾರದೆಂದು ಸುಮ್ಮನಾದರು. ಕಛೇರಿ ಪ್ರಾರಂಭವಾಯಿತು. ಸುಮಾರು ಐದೂವರೆ ಘಂಟೆಯಲ್ಲಿ ಸಂಗೀತದ ಪಾರ್ಟಿಯ ಒಬ್ಬಾತ ಯಜಮಾನರ ಬಳಿಗೆ ಹೋಗಿ "ಕಾಫಿಯ ಏರ್ಪಾಟು?" ಎಂದ.

ಯಜಮಾನ: "ಅದೆಲ್ಲ ಬೇರೆಯಿಲ್ಲ. ಕಂತ್ರಾಟಿನಲ್ಲಿ ಸೇರಿದೆ" ಎಂದು ಕೈಯಿಂದ 'ಅಲ್ಲ' ಹೇಳಿದ. ಸಂಗೀತಗಾರರು ತಾವೇ ಕಾಫಿ ತರಿಸಿಕೊಂಡರು.

ಘಂಟೆ ಎಂಟೂವರೆಯಾಯಿತು. ಯಜಮಾನರು "ಹೊತ್ತಾಯಿತ್ರೀ" ಎಂದು ಹೇಳಿದರು. ಸಂಗೀತಗಾರರು ಮಂಗಳ ಹಾಡಿದರು. ಯಜಮಾನರು ಕೈಯಲ್ಲಿ ಹೂವಿನ ಹಾರಹಿಡಿದು.

"ಏನು ಸ್ವಾಮಿ-ದುಡ್ಡೇನೋ ತೆಗೆದುಕೊಳ್ಳುತ್ತೀರಿ, ಹಾಡುತ್ತ ಹಾಡುತ್ತ ಮಧ್ಯೆ ಮಧ್ಯೆ ಹತ್ತು ಹತ್ತು ನಿಮಿಷ ಕಳೆದುಬಿಟ್ಟಿರಲ್ಲ ಸುಮ್ಮನೆ?" ಎಂದು ಹಾರ ಹಾಕಿದ.

ಪಿಟೀಲು ವಿದ್ವಾಂಸನಿಗೆ: "ಏನಪ್ಪಾ, ಸ್ವಾಮಿಗಳಂತೂ ದಂ ತೆಗೆದುಕೊಳ್ಳುತ್ತಿದ್ದರು. ನಿನಗೇನು? ಕೈ ತೀಡುವುದಕ್ಕೆ ಏನು ಕಷ್ಟ? ನೀನು ಯಾಕೆ ಸುಮ್ಮನಿರುತ್ತಿದ್ದೆ?"

ಮೃದಂಗದಾತನಿಗೂ ಇದೇ ಮರ್ಯಾದೆ: "ನಿನಗೇನಪ್ಪ ಡಬ್ಬ ತಟ್ಟುವುದಕ್ಕೆ?"

ಕೊನೆಗೆ ತಂಬೂರಿ ಶ್ರುತಿಯವರ ಹತ್ತಿರ ನಿಂತು- "ನೀವು ನಿಜವಾಗಿ ನಿಯತ್ತುವಂತರು. ಒಂದು ನಿಮಿಷ ಪುರಸತ್ತು ತೆಗೆದುಕೊಳ್ಳದೆ ಬಾರಿಸುತ್ತಿದ್ದೀರಿ. ನಿಮಗೆ ಕೊಡುವ ಹಣ ಋಣವಲ್ಲ" - ಎಂದು ಹಾರ ಹಾಕಿದರು.

ಹೀಗಿದೆ ನಮ್ಮ ಹೊಸ ಹಣವಂತರ ರಸಿಕತೆ. ಪಾಶ್ಚಾತ್ಯ ದೇಶಗಳಲ್ಲೂ ಇಂಥ ವರ್ಗವುಂಟಂತೆ. ಅವರನ್ನು The New Rich -ಅಭಿನವ ಕುಬೇರರು-ಎನ್ನುತ್ತಾರೆ.

ವರ್ತಕರ ಪ್ರೋತ್ಸಾಹ

ನಮ್ಮ ದೇಶದಲ್ಲಿ ನಲವತ್ತೈದು ಐವತ್ತು ವರ್ಷಗಳ ಹಿಂದೆ ರಾಸಿಕ್ಯ ಈ ಹೀನಸ್ಥಿತಿಯಲ್ಲಿರಲಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆಗಿನ ಮಂಡಿವರ್ತಕರಲ್ಲಿ ಸಂಗೀತಪ್ರೀಯರಾದವರು ಬಹು ಮಂದಿ ಇದ್ದರು. ಬೆಂಗಳೂರಿನಲ್ಲಿ ದೊಡ್ಡಣ್ಣನವರ ಸಭಾಮಂದಿರ ಲಭ್ಯವಾದ ಮೊದಲಿನಲ್ಲಿ ವಿದುಷಿ ರಾಜಾಯಿ ಎಂಬಾಕೆಯ ಹಾಡಿಕೆ, ವಿದುಷಿ ಸರಸ್ವತೀಬಾಯಿ ಎಂಬಾಕೆಯ ಹರಿಕಥೆ, ಮಹಾರಾಜಪುರಂ ವೈದ್ಯನಾಥಯ್ಯರ್ ಅವರ ಸಂಗೀತ-ಇದೆಲ್ಲ ನಡೆಯುತ್ತಿದ್ದಾಗ ಸಭಿಕರಲ್ಲಿ ಮೂರರಲ್ಲೊಂದು ಭಾಗ ವರ್ತಕ ಸಾಹುಕಾರರದು; ಮೂರರಲ್ಲೊಂದು ಭಾಗ ಅಧಿಕಾರಿಗಳದು, ಲಾಯರುಗಳದು; ಉಳಿದ ಭಾಗ ನನ್ನಂಥ ಇತರರದು. ಕೆಲಮಂದಿ ವರ್ತಕರು ಸಂಗೀತ ಪಾಠ ಮಾಡುತ್ತಿದ್ದದ್ದನ್ನು ನಾನು ಬಲ್ಲೆ. ಗಾರೆ ಕೆಲಸ ಮಾಡುತ್ತಿದ್ದವರಲ್ಲಿ ಒಬ್ಬಾತ ಪುದುಕೋಟೆಗೆ ಹೋಗಿ ದಕ್ಷಿಣಾಮೂರ್ತಿ ಪಿಳ್ಳೆಯವರಲ್ಲಿ ಖಂಜರಿ ಪಾಠ ಕಲಿತದ್ದನ್ನು ನಾನು ಬಲ್ಲೆ. ಮೈಸೂರಿನಲ್ಲಿ ಬಿಡಾರಂ ಕೃಷ್ಣಪ್ಪನವರಿಗೂ ವಾಸುದೇವಾಚಾರ್ಯರಿಗೂ ಆಶ್ರಯಕೊಟ್ಟವರು ಅಲ್ಲಿಯ ವರ್ತಕ ಸಾಹುಕಾರರು. ಕುಗ್ರಾಮವಾದ ಮುಳಬಾಗಲಿಗೆ ಬಂದ ಯಾವ ಸಂಗೀತಗಾರರೂ ಬರಿಗೈಯಿಂದ ಹಿಂದಿರುಗಿದ್ದಿಲ್ಲ. ಅದು ಒಳ್ಳೆ ಸುಭಿಕ್ಷದ ಕಾಲ. ಊರಿಗೆ ಬಂದ ಅತಿಥಿಗಳನ್ನು ಆದರ ಮಾಡಿ ಉಪಚರಿಸುವವರು ಊರೂರಲ್ಲಿಯೂ ನಾಲ್ಕೈದು ಮನೆಗಳವರಿರುತ್ತಿದ್ದರು. ಕುತೂಹಲದಿಂದ ಸಂಗೀತ ಕೇಳುವವರು ಐವತ್ತು-ಅರವತ್ತು ಮಂದಿ ಇರುತ್ತಿದ್ದರು. ಆ ಐವತ್ತು-ಅರವತ್ತು ಮಂದಿಯಲ್ಲಿ ಯತ್ಕಿಂಚಿತ್ತು ಚಂದಾ ಕೊಡಬಲ್ಲವರು ಹತ್ತು ಮಂದಿಯಾದರೂ ಇರುತ್ತಿದ್ದರು. ಸಾಮಾನ್ಯವಾಗಿ ಸಂಭಾವನೆ ಐದು ರೂಪಾಯಿಗೆ ಕಡಮೆಯಿಲ್ಲ. ಹತ್ತು ರೂಪಾಯಿ ಅಪರೂಪವಲ್ಲ. ಹತ್ತು ರೂಪಾಯಿ ತಮ್ಮ ಕೈಗೆ ಬಂದರೆ ಹಾಡುಗಾರರು ಸಂತೋಷಪಡುತ್ತಿದ್ದರು. ಕಳೆದ ನಲವತ್ತು-ಐವತ್ತು ವರ್ಷಗಳಲ್ಲಿ ಮಹಾಪ್ರಸಿದ್ಧರಾದ ವಿದ್ವಾಂಸರು ಸಹ ಹಿಂದಿನ ಕಾಲದಲ್ಲಿ ಹತ್ತು-ಹದಿನೈದು ರೂಪಾಯಿಗಳ ಸಂಭಾವನೆಯಿಂದ ಎಷ್ಟೋ ಸಂತೋಷಪಟ್ಟವರು.

ಆಗ ಕಲೆಗೆ ಪುರಸ್ಕಾರವಿತ್ತು. ಮನೆಗೆ ಒಳ್ಳೆಯ ತುಪ್ಪ, ಒಳ್ಳೆಯ ಹಾಲು ಹೇಗೋ ಮನಸ್ಸಿನ ಜೀವನಕ್ಕೆ ಸಂಗೀತ ಸಾಹಿತ್ಯಗಳು ಹಾಗೆ ಅವಶ್ಯದ್ರವ್ಯಗಳೆಂದು ಆಗ ಜನ ಭಾವಿಸಿದ್ದರು.

ಈಗ ಎಲ್ಲಕ್ಕೂ ಚಲಾವಣೆಯಲ್ಲಿರುವ ನಾಣ್ಯದಿಂದ ಬೆಲೆ. ವ್ಯಾಪಾರದ ಮನೋವೃತ್ತಿ, ಅಂಗಡಿಯ ಮನೋವೃತ್ತಿ (Commercial spirit) ಇಂದಿನ ನಾಗರಿಕತೆಯ

ಮುಖ್ಯಲಕ್ಷಣವೆಂದು ತೋರುತ್ತದೆ. ಅದು ನಮ್ಮ ಜೀವನದ ಬಹಿರಂಗಕ್ಕೆ ಹೆಚ್ಚು ಹೆಚ್ಚು ಬೆಲೆ ಕಟ್ಟಿ ಅಂತರಂಗಕ್ಕೆ ಬೆಲೆ ತಗ್ಗಿಸಿದೆ. ಎಂದು ಅಂತರಂಗಜೀವನ ಕ್ಷೀಣದಶೆಗೆ ಇಳಿಯಿತೋ ಅಂದೇ ಮನುಷ್ಯ ಜೀವನದ ಮಾನವತೆ ಇಳಿಮುಖವಾಯಿತು. ಮನುಷ್ಯತ್ವದಿಂದ ಮೃಗತ್ವಕ್ಕೆ ಇಳಿಯುತ್ತಿದ್ದೇವೆ.

***

ಈ ಲೇಖನಮಾಲೆಯಲ್ಲಿಯ ವ್ಯಕ್ತಿಚಿತ್ರಗಳ ಪ್ರಕರಣಗಳು ನರ್ತಕಿಯರನ್ನೂ ಗಾಯಕರನ್ನೂ ಕುರಿತವು. ಅವು ವಿಶೇಷವಾಗಿ ರಸಿಕರಿಗೆ ಇಷ್ಟವಾಗಬಹುದೆಂದು ನಾನು ಭಾವಿಸಿಕೊಂಡಿದ್ದೇನೆ.

ರಸಿಕರೆಂಬವರು ಯಾರು?

ಒಬ್ಬಾನೊಬ್ಬ ಹಣವಂತ ತನಗೆ ಮುಪ್ಪು ಬಂತೆಂದು ತೋರಿದಾಗ ತನ್ನ ವಂಶದ ಮತ್ತು ಸ್ವತ್ತಿನ ಭವಿಷ್ಯವನ್ನು ಕುರಿತು ಆಲೋಚಿಸುತ್ತ, ತನಗಿದ್ದ ನಾಲ್ವರು ಮಕ್ಕಳ ನೈಜಪ್ರವೃತ್ತಿಯನ್ನು ಕಂಡುಹಿಡಿಯಬೇಕೆಂದು ಒಂದು ಉಪಾಯವನ್ನು ಯೋಚಿಸಿದ. ಆ ನಾಲ್ವರನ್ನು ಬೇರೆಬೇರೆಯಾಗಿ ಕರೆದು ಒಬ್ಬೊಬ್ಬನ ಕೈಯಲ್ಲಿ ಒಂದೊಂದು ರೂಪಾಯಿ ಇಟ್ಟು "ನೀನು ಮನೆಗೆ ಆಗುವ ಯಾವ ಸಾಮಾನನ್ನಾದರೂ ಕೊಂಡು ತಾ" ಎಂದು ಹೇಳಿದ.

ಮೊದಲನೆಯವನು ಮೋಂಬತ್ತಿಗಳನ್ನು ತಂದ. ಅದನ್ನು ಹಚ್ಚಿಟ್ಟರೆ ಮನೆಗೆಲ್ಲ ಬೆಳಕಾಗುತ್ತದೆಯಷ್ಟೆ? ಎರಡನೆಯವನು ತಂದದ್ದು ಸಗಣಿಯನ್ನು. ಅದನ್ನು ಮನೆಯೆಲ್ಲ ಸಾರಿಸಲು ಬಳಸಬಹುದಲ್ಲವೆ? ಮೂರನೆಯವನು ಹುಲ್ಲನ್ನು ತಂದ. ಅದನ್ನು ಎಲ್ಲ ಕೋಣೆಗಳಲ್ಲಿಯೂ ಹಾಸಿ ಹರಡಬಹುದಷ್ಟೆ?

ನಾಲ್ಕನೆಯನು ಅಗರು ಜವ್ವಾಜಿ ಊದುಬತ್ತಿಯನ್ನು ತಂದ. ಅದನ್ನು ಹಚ್ಚಿಟ್ಟರೆ ಮನೆಯೆಲ್ಲ ಪರಿಮಳ ತುಂಬುತ್ತದಲ್ಲವೆ?

ಈ ನಾಲ್ಕನೆಯವನು ರಸಿಕ.

ಪ್ರಪಂಚದಲ್ಲಿ ಪದಾರ್ಥಗಳಿಗೆ ಬೆಲೆತರುವ ಕಾರಣಗಳು ಎರಡು: ಒಂದು ಉಪಯೋಗ; ಎರಡನೆಯದು ಸೊಗಸು.

ಮೊರ ಪೊರಕೆಗಳಿಗೆ ಉಪಯೋಗದ ದೃಷ್ಟಿಯಿಂದ ಬೆಲೆ. ಹೂ ಗಂಧಕ್ಕೆ ಸೊಗಸಿನ ದೃಷ್ಟಿಯಿಂದ ಬೆಲೆ.

ಅಕ್ಕಿ ಬೇಳೆ ಉಪ್ಪು ಬೆಲ್ಲ ಇಲ್ಲದಿದ್ದರೆ ಊಟವಿಲ್ಲ; ಬದುಕೇ ಇಲ್ಲದೆ ಹೋಗುತ್ತದೆ. ಹೂ ಗಂಧ ಇಲ್ಲದಿದ್ದರೆ ಯಾರೂ ಸಾಯುವುದಿಲ್ಲ. ಇದು ಬಹು ಮಂದಿಯ ವಾದ. ಆದರೆ ಇದಕ್ಕೊಂದು ಉತ್ತರವಿದೆ.ಅನ್ನ ತೊವ್ವೆ ತಿಂದು ಸುವಾಸನೆ ಕಾಣದೆ ಬದುಕಿದರೆ ಅದೆಂಥ ಬದುಕು? ನಾಯಿ ನರಿಗಳೂ ತಿಂದು ಬದುಕುವುದಿಲ್ಲವೆ?

ಇದು ಎಲ್ಲ ಜನರಲ್ಲಿಯೂ ಇರುವ ಪ್ರಶ್ನೆ. ಕನ್ನಡದ ಒಂದು ಗಾದೆ ಸಿದ್ಧಾಂತವನ್ನು ಸೂಚಿಸುತ್ತದೆ: “ಸಗಣಿಯವನ ಸಂಗಕ್ಕಿಂತ ಗಂಧಹುಡಿಯವನಕೂಡ ಗುದ್ದಾಟ ಲೇಸು.”

ರಸಿಕ ಸ್ವಭಾವ

ಒಂದೇ ಕಾಲದಲ್ಲಿ ಒಬ್ಬ ಬಂಧುಗಳ ಮನೆಯಲ್ಲಿ ಲಾಡು ಚಿರೋಟಿ ಔತಣಕ್ಕೆ ಕರೆ ಬಂದಿರುತ್ತದೆ. ಅದೇ ದಿನ ಅದೇ ಕಾಲದಲ್ಲಿ ಬೇರೊಂದು ಕಡೆ ಶ್ರೀಮತಿ ಸುಬ್ಬಲಕ್ಷಮ್ಮನ ಸಂಗೀತ ಏರ್ಪಾಟಾಗಿರುತ್ತದೆ, ನೀವು ಎಲ್ಲಿಗೆ ಹೋಗುತ್ತೀರಿ? ನಂಟರ ಮನೆಗೆ ಹೋದರೆ ನಿಮ್ಮನ್ನು ಆದರದಿಂದ ಬರಮಾಡಿಕೊಂಡು ಕೂಡಿಸಿ ಉಪಚಾರ ಮಾಡುತ್ತಾರೆ. ಕಛೇರಿಗೆ ಹೋದರೆ ಅಲ್ಲಿ ನಿಮ್ಮನ್ನು ಮಾತನಾಡಿಸುವವರಿಲ್ಲ. ಸಾವಿರ ಮಂದಿಯ ನಡುವೆ ನೀವೇ ಪ್ರಯತ್ನಪಟ್ಟು ಎಲ್ಲೋ ಒಂದು ಕಡೆ ಸ್ಥಳಮಾಡಿಕೊಂಡು ಕೂಡಬೇಕಾಗುತ್ತದೆ. ನೀವು ಯಾವುದನ್ನು ಆರಿಸುತ್ತೀರಿ? ನಾಲಗೆಯ ಸುಖವನ್ನೆ, ಕಿವಿ ಮನಸ್ಸುಗಳ ಸಂತೋಷವನ್ನೆ? ಯಾವ ಸುಖ, ಯಾವ ಸಂತೋಷ ಮನಸ್ಸಿಗೆ ಹೆಚ್ಚಾಗಿ ತಲುಪುತ್ತದೋ, ಮನಸ್ಸಿನಿಂದ ಜೀವವನ್ನು ಹೆಚ್ಚಾಗಿ ಸಂಸ್ಕರಿಸುತ್ತದೋ ಆ ಸುಖಕ್ಕೆ ಮೊದಲನೆಯ ಸ್ಥಾನ ಕೊಡುವುದು ರಸಿಕ ಸ್ವಭಾವ.

ಟಿ.ಎಸ್.ವೆಂಕಣಯ್ಯನವರು ರಸಿಕರು. ಅವರೂ ನಾನೂ ದುಂಬಿಗಳ ಹೊಳೆಯುವ ಕಪ್ಪನ್ನೂ ಝೇಂಕಾರವನ್ನೂ ಪುಷ್ಪಸನ್ನಿಧಿಯಲ್ಲಿ ದುಂಬಿ ತೋರುವ ವಿಲಾಸಗಳನ್ನೂ ಕುರಿತು ಮಾತನಾಡಿಕೊಳ್ಳುತ್ತಿದ್ದೆವು. ಲಾಲ್‌ಬಾಗಿನಲ್ಲಿ ಅರುಣೋದಯದ ವೇಳೆಗೆ ಹೋದರೆ ಅಲ್ಲಿ ಭೃಂಗಸಂಭ್ರಮವನ್ನು ಕಾಣಲಾದೀತೆಂದುಕೊಂಡು ಮಾರನೆಯ ದಿನ ಅಲ್ಲಿಗೆ ಹೋಗತಕ್ಕದ್ದೆಂದು ನಿಶ್ಚಯಿಸಿಕೊಂಡೆವು. ನಾಲ್ಕು ಘಂಟೆಗೇ ಎದ್ದು ಲಾಲ್‌ಬಾಗಿಗೆ ಓಡಿದೆವು. ನಾವಿಬ್ಬರೂ ಕಾಫಿ ವ್ಯಸನಿಗಳು. ಆ ಬೆಳಗ್ಗೆ ಅದು ನಮ್ಮಿಬ್ಬರಿಗೂ ಮರೆತುಹೋಯಿತು. ಗೇಟು ಬಳಿಯ ಕಾವಲುಗಾರನನ್ನು ಬೇಡಾಡಿ ನಾಲ್ಕೂವರೆ ನಾಲ್ಕು ಮುಕ್ಕಾಲು ಘಂಟೆಯ ವೇಳೆಗೆ ಸುರಹೊನ್ನೆ ಮರಗಳ ಬಳಿ ನಿಂತು ಕಾದು ನೋಡಿದೆವು. ಹತ್ತು ಹದಿನೈದು ನಿಮಿಷ ಬಿಟ್ಟು ಪಾದರಿ ಮರದ ಬಳಿ ಓಡಿದೆವು. ಅಲ್ಲಿ ಹತ್ತು ನಿಮಿಷವಿದ್ದು ಹಿಪ್ಪೆ(ಮಾಧ್ವೀಕ) ಮರದ ಬಳಿ ಹೋಗಿ ನಿಂತೆವು. ಈ ವೇಳೆಗೆ ಮಬ್ಬು ಮುಗಿದು ಬಾಲಸೂರ್ಯಪ್ರಭೆ ಬರುತ್ತಿತ್ತು. ದುಂಬಿಗಳನ್ನು ಕುರಿತು ಪೂರ್ವಕವಿಗಳು ಮಾಡಿದ್ದ ಪ್ರಶಂಸೆ ಅಕ್ಷರ ಅಕ್ಷರವೂ ನಿಜವೆಂದು ನಮಗೆ ಅಂದು ಪ್ರತ್ಯಕ್ಷವಾಯಿತು.

ಊಟ ಗೊಡ್ಡುಸಾರನ್ನವಾದರೂ ಸಂಗೀತ ಭಾವಸಂಪನ್ನವಾಗಿರಬೇಕು. ಬಟ್ಟೆ ಹರಕಲಾದರೂ ಸರಿ; ಮಲ್ಲಿಗೆಯ ಘಮಲಿದ್ದರೆ ಸಾಕು. ಇದು ರಸಿಕನ ಮತ.

ರಸದ ಲಕ್ಷಣ

ರಸ ಎಂದರೆ ರುಚಿ ಕೊಡುವಂಥಾದ್ದು. ಯಾವ ಒಂದು ರುಚಿ ಅಥವಾ ಗುಣ ಪದಾರ್ಥದಲ್ಲಿರುವುದರಿಂದ ಆ ಪದಾರ್ಥ ನಮಗೆ ಇನ್ನೂ ಬೇಕು, ಮತ್ತೂ ಬೇಕು ಎಂದೆನ್ನಿಸುತ್ತದೋ ಅದೇ ರಸ.

ರಸದ ಲಕ್ಷಣವನ್ನು ವೇದದಲ್ಲಿ ಹೇಳಿದೆ:

ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ ಭವತಿ ॥

ವಸ್ತುವಿನ ಯಾವ ಗುಣವಿಶೇಷದಿಂದ ಅಥವಾ ಶಕ್ತಿವಿಶೇಷದಿಂದ ಅದನ್ನು ಪಡೆದವನು ಆನಂದಿಸುತ್ತಾನೋ ಅದೇ ರಸ.

ಲೋಕಾನುಭವಗಳಲ್ಲಿ ಯಾರು ರಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾನೋ ಅವನು ರಸಿಕ.

ರಸಿಕನಿಗೆ ಮುಖ್ಯವಾದದ್ದು ಪದಾರ್ಥದ ಗಾತ್ರವಲ್ಲ, ಅದರ ಗುಣ. ಅವನು ಗಣನೆ ಮಾಡುವ ಬೆಲೆ ಮಾರುಕಟ್ಟೆಯದಲ್ಲ, ಮನಸ್ಸಿನದು.

ಮಹಾನುಭಾವರಾದ ವಿಶ್ವೇಶ್ವರಯ್ಯನವರು ಊಟ ಮಾಡುತ್ತಿದ್ದದ್ದು ಒಟ್ಟು ನಾಲ್ಕೈದು ಚಮಚಗಳಷ್ಟನ್ನೆ. ಆದರೆ ಅವರು ಒಂದೊಂದು ಬಟ್ಟಲಿನಿಂದ ಗ್ರಹಿಸಿದ ಒಂದೊಂದು ಚಮಚದ ಗ್ರಾಸದ ರುಚಿಯನ್ನೂ ಅನುಭವಿಸುತ್ತಿದ್ದರು. ಅವರು ಒಬ್ಬಟ್ಟಿಗೆ National Delicacy ಎಂದು ಹೆಸರಿಟ್ಟಿದ್ದರು. ಆದರೆ ಅವರ ಬಾಯಿಗೆ ಸೇರುತ್ತಿದ್ದದ್ದು ಒಂದು ಒಬ್ಬಟ್ಟಿನ ಮಧ್ಯದ ಅಂಗೈಯಷ್ಟು ಭಾಗ. ಇದು ರಸಿಕಭೋಜನ. ಅದರಲ್ಲಿ ಪುಡಿಗಳೂ ಒಗ್ಗರಣೆಗಳೂ ಹೆಚ್ಚಾಗಿರಬೇಕಾಗಿಲ್ಲ. ಭೋಜ್ಯ ವಸ್ತುವಿನ ಕೇವಲ ರುಚಿಯನ್ನು ಮಾತ್ರ ಅವರು ನೋಡುತ್ತಿದ್ದರು.

ರಸಿಕನು ಮನೋರಾಜ್ಯದ ನಿವಾಸಿ. ಅವನಿಗೆ ದೇಹರಾಜ್ಯ ಬೇಡವೆಂದಲ್ಲ. ದೇಹವಿಲ್ಲದೆ ಮನಸ್ಸಿಲ್ಲ. ಆದರೆ ರಸಿಕರ ಪಾಲಿಗೆ ದೇಹಾನುಭಾವವು ಮರದ ಕೊಂಬೆ-ರಂಬೆಗಳಂತೆ; ಮನಸ್ಸಿನ ಅನುಭವವು ಹೂವು ಹಣ್ಣುಗಳಂತೆ.

ಎಲ್ಲರ ಮನೆಗಳಲ್ಲಿಯೂ ಅಡಿಗೆಯ ಮನೆ, ಊಟದ ಮನೆ, ಉಗ್ರಾಣಗಳು ಇರುತ್ತವೆ. ಹಾಗೆಯೇ ನಡುಮನೆ, ಕೂಡುವ ಕೋಣೆಗಳೂ ಇರುತ್ತವೆ. ನಾವು ಹೆಚ್ಚಾಗಿ ಹೊತ್ತು

ಕಳೆಯುವುದು ಕೂಡುವ ಕೋಣೆಗಳಲ್ಲಿ; ಇಲ್ಲಿ ನಮ್ಮ ಸಂತೋಷ ಸಲ್ಲಾಪಗಳು.

ರಸಿಕನು ಹಾಗೆ ದೈಹಿಕ ವ್ಯಾಪಾರಗಳಲ್ಲಿ ಅವಶ್ಯವಾದಷ್ಟು ಕಾಲ ಕಳೆಯುತ್ತಾನೆ. ಆದರೆ ಅವನ ಕುತೂಹಲವಿರುವುದು ತನ್ನ ಮನಸ್ಸಿನ ಜೀವನದಲ್ಲಿ. ಅಲ್ಲಿ ಅವನು ಪಟ್ಟ ಸಂತೋಷವೇ ಅವನ ಲೆಕ್ಕಕ್ಕೆ ಜೀವನದ ಸಾರಭಾಗ.

ಇದೇ ಮಾತನ್ನು ವಸ್ತ್ರಾಭರಣಗಳ ವಿಷಯದಲ್ಲಿಯೂ ಹೇಳಬಹುದು. ಒಬ್ಬ ಕೇರಳ ಸುಂದರಿ ತನ್ನ ದೊಡ್ಡ ಕಪ್ಪು ತುರುಬಿನಲ್ಲಿ ಒಂದೇ ಒಂದು ಮಲ್ಲಿಗೆ ಹೂವನ್ನು ಮೂಡಿದಿದ್ದಳು. ಹೂವಿನ ಬೊಂತೆಯನ್ನಲ್ಲ. ಕೂದಲಿನ ಕಪ್ಪು ಅವರಣದಿಂದ ಮಲ್ಲಿಗೆ ಹೂವಿನ ಧವಳತೆ ಎತ್ತಿಕಾಣುತ್ತಿತ್ತು; ಹಾಗೆಯೇ ಆ ತುರುಬಿನ ಸೊಂಪೂ ದ್ವಿಗುಣವಾಗಿ ಸೊಗಯಿಸುತ್ತಿತು.

ಆರ್ಕಾಟ್ ಶ್ರೀನಿವಾಸಾಚಾರ್ಯರು ಸಂಗೀತ ಕೇಳುತ್ತಿದ್ದದ್ದೂ ಹಾಗೆಯೇ. ತಾವು ಆರಿಸಿ ಕರೆದ ಸಂಗೀತ ವಿದ್ವಾಂಸರನ್ನು ಹಾಡಿಸುತ್ತಿದ್ದದ್ದು ಮುಕ್ಕಾಲು ಅಥವಾ ಒಂದು ಘಂಟೆ ಮಾತ್ರ. ಅಷ್ಟು ಕೊಂಚ ಹೊತ್ತಿನಲ್ಲಿ ಅವರು ಬೇಡುತ್ತಿದ್ದದ್ದು ಯಾವುದೋ ಒಂದು ರಾಗವನ್ನು ಅಥವಾ ಒಂದು ಕೃತಿಯನ್ನು. ಅವರಿಗೆ ಬೇಕಾಗಿದ್ದದ್ದು ಬಹುವಲ್ಲ, ಸ್ವಲ್ಪ. ಆದರೆ ಅದು ಮಧು ಖಂಡವಾದ ಸ್ವಲ್ಪ.

ಒಂದು ಮಡಿಕೆ ಹಾಲಿನಲ್ಲಿ ಸಾರಭಾಗ ಅದರ ಕೆನೆ ಅಥವಾ ಒಂದು ಗಜ್ಜಿಗದ ಕಾಯಷ್ಟು ಬೆಣ್ಣೆ. ಇಷ್ಟು ಮಾತ್ರವೇ ರಸಿಕನಿಗೆ ಬೇಕಾದದ್ದು; ಮಡಿಕೆಯಷ್ಟೂ ಅಲ್ಲ.

ರಸಿಕತೆ ಸಂಸ್ಕಾರಕಾರಕ

ನಮ್ಮ ಎಲ್ಲ ಪ್ರಪಂಚಾನುಭವವೂ ಸಾಮಾನ್ಯವಾಗಿ ಎರಡು ಮೆಟ್ಟಲುಗಳಲ್ಲಿ ಇರುತ್ತದೆ: ಒಂದು ದೇಹದ್ದು, ಇನ್ನೊಂದು ಮನಸ್ಸಿನದು. ಪ್ರಾರಂಭವಾಗುವುದು ದೇಹದಲ್ಲಿ. ಆಮೇಲೆ ಅದು ಮನಸ್ಸಿಗೆ ವ್ಯಾಪಿಸುತ್ತದೆ. ಉಪನಿಷದಾಚಾರ್ಯರು ಆನಂದವೆಂದರೆ ಏನೆಂಬುದನ್ನು ವಿವರಿಸ ಹೊರಟು ಮೊದಲು ಒಬ್ಬ ಆರೋಗ್ಯ ದೃಢಕಾಯನೂ ದ್ರವ್ಯೋಪಪತ್ತಿಯುಳ್ಳವನೂ ಆದ ಯುವಕನು ಪಡುವ ಅತ್ಯಂತ ಸೌಖ್ಯವನ್ನು ಉದಾಹರಿಸುತ್ತಾರೆ. ಬಳಿಕ ಅದನ್ನು ನೂರರಿಂದ, ನೂರು ನೂರರಿಂದ ಗುಣಿಸಿ ಬ್ರಹ್ಮಾನಂದವನ್ನು ಊಹಿಸಿಕೊಳ್ಳ ಹೇಳುತ್ತಾರೆ. ಇದು ಒಂದು ಸ್ಥೂಲವಾದ ಬೋಧನೆಯ ಮಾರ್ಗ. ಇದರಲ್ಲಿ ನಮಗೆ ಲಕ್ಷ್ಯಕ್ಕೆ ಬರಬೇಕಾದದ್ದು ದೇಹವು ನಮ್ಮ ಜಗದನುಭವದಲ್ಲಿ ಮೊದಲನೆಯ ಮೆಟ್ಟಲೆಂಬುದು. ದೇಹಾನುಭವವೇ ಎಲ್ಲ ಅನುಭವಗಳನ್ನು ಅಳೆಯುವುದಕ್ಕೂ ಮೂಲಮಾನ. ದೇಹದ ಸಂತೋಷ ಕ್ಷಣಿಕವಾದದ್ದು. ಆದರೆ ಆ ಸಂತೋಷವು ಮನಸ್ಸಿನಲ್ಲಿ ಅವತಾರವೆತ್ತಿದಾಗ ಅಲ್ಲಿ ಆದ ಪರಿಣಾಮ ಚಿರಕಾಲದ್ದಾಗಿರುತ್ತದೆ. ಈ ಪರಿಣಾಮವೇ ರಸಿಕತೆ. ರಸದ ಉತ್ತಮ ಪರಿಣಾಮವು ಮನಸ್ಸಿನಲ್ಲಾಗಿ ಅಲ್ಲಿಂದ ಅದು ಜೀವವನ್ನು ಮುಟ್ಟುತ್ತದೆ. ಹೀಗೆ ರಸಿಕತೆ ಸಂಸ್ಕಾರಕಾರಕವಾದದ್ದು. ಅದು ಮನಸ್ಸಿನಲ್ಲಿ ಆಹ್ಲಾಜನಕವಾಗಿಯೂ ಜೀವದಲ್ಲಿ ವಿಕಾಸಕಾರಕವಾಗಿ ಮನುಷ್ಯನ ಬಹಿರಂಗ ವ್ಯಾಪಾರದಲ್ಲಿ ನಯ, ವಿನಯ, ಸಹನೆ, ಸಭ್ಯತೆ, ಗುಣ ಸಂತೋಷ-ಈ ಪ್ರಕಾರದ ಪರಿಣಾಮಗಳನ್ನು ಆಗಮಾಡಿಸುತ್ತದೆ. ಈ ಕಾರಣದಿಂದ ರಸಿಕತೆಗೆ ಮುಖ್ಯ ಪೋಷಕಗಳಾದ ಸಂಗೀತ ಸಾಹಿತ್ಯಗಳು ಲೋಕದಲ್ಲಿ ಬೆಲೆ ಪಡೆದುಕೊಂಡಿರುತ್ತವೆ.

೨೨

ಕಲೋಪಾಸನೆ

ನನ್ನ ಅರವತ್ತು ಎಪ್ಪತ್ತು ವರ್ಷಗಳ ಸಂಗೀತಾನುಭವದ ಸಾರಾಂಶವನ್ನು ಸಂಗ್ರಹವಾಗಿ ಅರಿಕೆ ಮಾಡುವುದು ಅಯುಕ್ತವೆನ್ನಿಸಲಾರದು.

ನಮ್ಮ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಆಗಿರುವಂತೆ ಸಂಗೀತಕ್ಷೇತ್ರದಲ್ಲಿಯೂ ಎಷ್ಟೋ ಬದಲಾವಣೆಗಳು ಆಗಿವೆ. ಉಡಿಗೆತೊಡಿಗೆಗಳಲ್ಲಿ ಫ್ಯಾಷನ್ ಬದಲಾಯಿಸುವಂತೆ ಸಂಗೀತದಲ್ಲಿಯೂ ನಡೆದಿದೆ. ಈಗ ಮೂವತ್ತು ನಲವತ್ತು ವರ್ಷಗಳ ಹಿಂದೆ ಒಬ್ಬ ಸ್ನೇಹಿತರ ಮನೆಯ ಮದುವೆಯ ಸಂದರ್ಭದಲ್ಲಿ ಮಳವಳ್ಳಿ ಸುಂದರಮ್ಮನವರು ಹಾಡುತ್ತಿದ್ದರು. ಆ ಹಾಡುಗಳಲ್ಲಿ ಹರಿಕಾಂಬೋಧಿ ರಾಗದ 'ದಿನಮಣಿವಂಶ' ಎಂಬ ತ್ಯಾಗರಾಜರ ಕೀರ್ತನೆ ಒಂದು. ಇದನ್ನು ಹಾಡಿದ ಅರ್ಧ ಘಂಟೆಯೊಳಗಾಗಿ ಒಬ್ಬ ಸ್ನೇಹಿತರು ಬಂದು ನನ್ನ ಕಿವಿಯಲ್ಲಿ "ದಿನಮಣಿವಂಶ ಹಾಡಿಸು" ಎಂದು ಉಸಿರಿದರು. ನನ್ನ ಕೋರಿಕೆಯಂತೆ ಆಕೆ ಅದನ್ನು ಎರಡನೆಯ ಸಾರಿ ಹಾಡಿದರು. ಇನ್ನು ಮುಕ್ಕಾಲು ಘಂಟೆಯಾದ ಬಳಿಕ ಮತ್ತೊಬ್ಬರು ಸ್ನೇಹಿತರು 'ದಿನಮಣಿವಂಶ' ಬೇಕೆಂದು ಸೂಚಿಸಿದರು. ನಾನು ಅದನ್ನು ಆಕೆಗೆ ಹೇಳಿದಾಗ ಆಕೆ,

"ಈಗ ಎರಡು ಸಾರಿ ಆಯಿತಲ್ಲ?" ಎಂದರು. ನಾನು ಹೇಳಿದೆ:

"ಕೇಳುವವರಿಗೆ ಬೇಸರವಿಲ್ಲದಿದ್ದರೆ ಹಾಡುವವರಿಗೆ ಏಕೆ ಬೇಸರ? ಬೇರೊಂದು ಕಛೇರಿಯಲ್ಲಿ ನೀವು ಹಾಡುವುದಿಲ್ಲವೇ? ಇದೂ ಹಾಗೆ."

ಆಕೆ ನಕ್ಕು ಮೂರನೆಯ ಸಾರಿ ಅದನ್ನೇ ಹಾಡಿದರು.

ಹಾಗಿತ್ತು ಆಗ 'ದಿನಮಣಿವಂಶ' ಫ್ಯಾಷನ್. ಈಗ ಅದು ಫ್ಯಾಷನ್ನಿನಿಂದ ಮರೆತು ಹೋಗಿದೆ. ಅದನ್ನು ಈಗ ಯಾರು ಹಾಡುತ್ತಾರೋ!

ಹಾಗೆಯೇ ಒಂದಾನೊಂದು ಕಾಲದಲ್ಲಿ ಮದುವೆಯ ಮೆರವಣಿಗೆಯಲ್ಲಿ 'ಶಿವದೀಕ್ಷಾ' ಎಂಬ ಕುರಂಜಿ ರಾಗದ ಹಾಡು ಇಲ್ಲದೆ ಮೆರವಣಿಗೆಯೇ ಇಲ್ಲ. ಹಾಗಿತ್ತು ಅದರ ಪ್ರಶಸ್ತಿ.

ಈಗ ಅದನ್ನು ಜ್ಞಾಪಕಮಾಡಿಕೊಳ್ಳುವವರು ಯಾರು?

ಸಂಸ್ಕಾರ ಅಗತ್ಯ

ಇಂಥಾದ್ದು ಎಷ್ಟೋ ಇವೆ. ಫ್ಯಾಷನ್ನುಗಳು ಬದಲಾಯಿಸುತ್ತವೆ. ಜನದ ಅಭಿರುಚಿಯೂ ಬದಲಾಯಿಸುತ್ತದೆ. ಅವರ ಸಂವೇದನಶಕ್ತಿಯೂ ಬದಲಾಯಿಸುತ್ತದೆ. ಒಂದು ರಾಗದ ಅಥವಾ ಹಾಡಿನ ಮಾಧುರ್ಯದ ಸೂಕ್ಷ್ಮಾಂಶಗಳನ್ನು ಗ್ರಹಿಸಲು ಶ್ರೋತನಲ್ಲಿ ಬಹುಕಾಲದ ಅನುಭವದಿಂದ ಸಂಪಾದಿಸಿದ ಸೂಕ್ಷ್ಮಸಂವೇದನಶಕ್ತಿ ಇರಬೇಕು. ಶ್ರೋತನಲ್ಲಿ ಇಂಥ ಸಂಸ್ಕಾರವಿಲ್ಲದಿದ್ದರೆ ಅವನಿಗೆ ಬೇಕಾಗುವುದು ಗಟ್ಟಿಯಾದ ಶಬ್ದ. ಏನೋ ಶಬ್ದ ಬಂದು ಕಿವಿಯ ಮೇಲೆ ಬಡಿಯುತ್ತಿದ್ದರೆ ಅವನ ಪಾಲಿಗೆ ಅದು ಸಂಗೀತವೆನ್ನಿಸುತ್ತದೆ.

ಹೀಗೆ ಸಂಸ್ಕಾರವೂ ಯೋಗ್ಯತಾಸಿದ್ಧತೆಯೂ ಎರಡು ಪಕ್ಷಗಳಲ್ಲಿಯೂ ಇರಬೇಕು. ಗಾಯಕನೊಬ್ಬನಲ್ಲಿದ್ದರೆ ಸಾಲದು. ಸುಸಂಸ್ಕೃತರಾದ ಶ್ರೋತರು ಹಿಂದಿನ ಕಾಲದಲ್ಲಿ ಎಲ್ಲ ಸಾಮಾನ್ಯ ಜನವರ್ಗಗಳಲ್ಲಿಯೂ ಇದ್ದರು. ವರ್ತಕರು, ಜಮೀನುದಾರರು, ವೈದಿಕರು, ಸರಕಾರಿ ಉದ್ಯೋಗಸ್ಥರು-ಈ ಎಲ್ಲ ವರ್ಗಗಳಲ್ಲಿಯೂ ಗುಣಗ್ರಹಣಶಕ್ತರಾದ ಶ್ರೋತರುಗಳಿರುತ್ತಿದ್ದರು. ಈಗ ಅಂಥ ಶ್ರೋತರ ಸಂಖ್ಯೆ ನಮ್ಮ ಸಮಾಜದಲ್ಲಿ ಅಷ್ಟು ಹೆಚ್ಚಾಗಿಲ್ಲವೆಂದು ನನಗನ್ನಿಸುತ್ತದೆ.

ಇನ್ನು ಗಾಯಕರ ವಿಚಾರ. ಗಾಯನಪದ್ಧತಿಯಲ್ಲಿ ಬದಲಾವಣೆಯಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಪೂರ್ವಿಕರದು ನೆಮ್ಮದಿಯ ಸಂಗೀತ. ಈಚಿನವರದು ರಭಸದ ಸಂಗೀತ. ಹಿಂದಿನವರ ಸಂಗೀತದಲ್ಲಿ ನಾದಧಾರೆ ಮುಖ್ಯ. ಈಚಿನವರ ಸಂಗೀತದಲ್ಲಿ ಸ್ವರಪಾಂಡಿತ್ಯ ಮುಖ್ಯ.

ಗಾಯನಪದ್ಧತಿ

ಹಿಂದಿನ ಸಂಗೀತಗಾರರು ಹಿಂಕಾರ ಸಾಧನೆ ಗುಂಕಾರ ಸಾಧನೆಗಳಿಗೆ ಹೆಚ್ಚು ಗಮನ ಕೊಡುತ್ತಿದ್ದರು. ನಾದವು ನಾಭಿಪ್ರದೇಶದಿಂದ ಹೊರಟು ಹೃದಯವನ್ನು ಸೇರಿ ಅಲ್ಲಿಂದ ಕಂಠದ ದ್ವಾರಾ ಹೊರ ಹರಿಯಬೇಕು. ವಾಸುದೇವಾಚಾರ್ಯರು ಗುಂಕಾರ ಸಾಧನೆ ಮಾಡುತ್ತಿದ್ದದ್ದನ್ನು ನಾನು ನೋಡಿದ್ದೇನೆ. ತುಟಿ ತೆರೆಯದೆ, ಕೈಕಾಲು ಚೇಷ್ಟೆ ಮಾಡದೆ, ಗಂಭೀರದಿಂದ ನಾದವು ನಾನಾ ಸ್ಥಾಯಿಗಳಲ್ಲಿ ಬರುತ್ತಿದ್ದದ್ದನ್ನು ಕೇಳಿದ್ದೇನೆ. ಬಿಡಾರಂ ಕೃಷ್ಣಪ್ಪನವರೂ ಹೀಗೆಯೇ ಸಾಧನೆ ಮಾಡಿದ್ದರು. ಆ ವಿದ್ವಾಂಸರುಗಳು ಹಾಡುವ ಕಾಲದಲ್ಲಿ ಒಂದು ಪಲ್ಲವಿಯನ್ನು ತೆಗೆದುಕೊಂಡು

ಮಂ-ದ-ಹಾ-ಸ
ವ-ದ-ನ ॥

ಹೀಗೆ ಅಕ್ಷರ ಅಕ್ಷರದ ನಡುವೆಯೂ ನಾದವನ್ನು ಸಾವಕಾಶವಾಗಿ ವಿಸ್ತಾರ ಮಾಡಿ ಹಾಡುತ್ತಿದ್ದರು. ಒಂದು ಆವರ್ತ- 'ಮಂದಹಾಸವದನ ಕೃಷ್ಣ' -ಈ ಒಂಭತ್ತು ಅಕ್ಷರಗಳ ಒಂದು ಆವರ್ತಕ್ಕೆ ಎರಡು ಮೂರು ನಿಮಿಷ ತೆಗೆದುಕೊಳ್ಳುತ್ತಿದ್ದವರೂ ಉಂಟು. ಅದೇ ವಿಲಂಬಗತಿ. **ವಿಲಂಬ ಕಾಲದಲ್ಲಿ ಹಾಡುವುದೇ ಗಾಯನ ನಾದಾಧಿಕಾರಕ್ಕೆ ಹೆಗ್ಗುರುತು.**

ನಾದರಸ

ಈಗ ವಿಲಂಬದ ನಾದವಿನ್ಯಾಸ ಅಪರೂಪವೆಂದು ಬಹುಜನ ಹೇಳಿದ್ದನ್ನು ಕೇಳಿದ್ದೇನೆ. ಕೀಟ್ಸ್ ಎಂಬ ಇಂಗ್ಲಿಷ್ ಕವಿ ಎಲ್ಲಿಯೋ ಒಂದು ಕಡೆ "Every syllable must be loaded with the precious ore" -ಎಂದು ಹೇಳಿದ್ದಾನೆ. ಹಾಗೆಯೇ ನಮ್ಮ ವೇದವ್ಯಾಸರ ಕವಿತ್ವವನ್ನು ಕುರಿತು "ಪ್ರತಿಪರ್ವ ರಸೋದಯಮ್," "ರಸಃಪರ್ವಣಿ ಪರ್ವಣಿ" ಎಂದು ಹೇಳಿದ್ದಾರೆ. ಹಾಗೆಯೇ ಒಳ್ಳೆಯ ಹಾಡಿಕೆಯಲ್ಲಿ ನೀರಸವಾದ ಸ್ಥಾನ ಒಂದು ಸೂಜ್ಯಗ್ರದಷ್ಟೂ ಇರಬಾರದು. ಅಕ್ಷರ ಅಕ್ಷರದ ನಡುವೆಯೂ ನಾದರಸವು ದ್ರಾಕ್ಷಾಪಾಕದಂತೆ ಸೇರಿರಬೇಕು. ಇದು ಸಾಧನೆಯಿಂದ ಶಕ್ಯವಾಗತಕ್ಕದ್ದು; ಬರಿಯ ಶಾಸ್ತ್ರಪಾಂಡಿತ್ಯದಿಂದ ಅಲ್ಲ.

ಮಹಾನುಭಾವರಾದ ವೀಣೆ ಶೇಷಣ್ಣನವರು ಯಾವುದೋ ಒಂದು ಭಾರಿ ಕಛೇರಿಗಾಗಿ ಮದರಾಸಿಗೆ ಹೋಗಿ ಅಲ್ಲಿ ಮೂರು ನಾಲ್ಕು ದಿನ ಬಿಡಾರ ಮಾಡಿದ್ದರು. ಒಂದು ದಿನ ಬೆಳಗ್ಗೆ ಅವರನ್ನು ನೋಡಲು ತಿರುಕ್ಕೋಟಿಕಾವಲ್ ಕೃಷ್ಣಯ್ಯರ್ ಅವರು ಅಲ್ಲಿಗೆ ಬಂದರು. ಸ್ನೇಹಿತರಿಬ್ಬರೂ ಮಾತುಕಥೆ ನಡಸುತ್ತಿದ್ದಾಗ ಅಲ್ಲಿಗೆ ಮೂರನೆಯವರೊಬ್ಬರು ಬಂದರು. ಆತ ಗೋವಿಂದಸ್ವಾಮಿ. ಕೃಷ್ಣಯ್ಯರ್ ಅವರು ಗೋವಿಂದಸ್ವಾಮಿಯನ್ನು ಕುರಿತು(ತಮಿಳು ಭಾಷೆಯಲ್ಲಿ) ಕೇಳಿದರು:

ಕೃ: "ಈಗ ಏನು ಮಾಡಿಕೊಂಡಿದ್ದೀ?"

ಗೋ: "ಅಭ್ಯಾಸ ಮಾಡಿಕೊಂಡಿದ್ದೇನೆ."

ಕೃ: "ಹಾಗಾದರೆ ಕೊಂಚ ನುಡಿಸು ಕೇಳೋಣ!"

ಗೋ: "ನಾನು ವಾದ್ಯ ತಂದಿಲ್ಲವಲ್ಲ?"

ಕೃ: "ಇಗೋ ವಾದ್ಯ. ಇದನ್ನು ತೆಗೆದುಕೋ"

ಹೀಗೆ ಹೇಳುತ್ತ ತಾವು ತೋಳಿನಲ್ಲಿ ತಗಲಿಹಾಕಿಕೊಂಡಿದ್ದ ಪಿಟೀಲು ಚೀಲವನ್ನು ಗೋವಿಂದಸ್ವಾಮಿಗೆ ಕೊಟ್ಟರು.ಕೃಷ್ಣಯ್ಯರು ಬಗಲಿಗೆ ಯಾವಾಗಲೂ ಒಂದು ಚೀಲ ತಗಲಿಹಾಕಿಕೊಂಡು ಅದರಲ್ಲಿ ವಾದ್ಯ, ಕಮಾನು, ಕಮಾನಿಗೆ ಹಾಕುವ ರೆಸಿನ್ ಪುಡಿ-

ಇವನ್ನಿಟ್ಟಿರುತ್ತಿದ್ದರು. ಊಟ ಮಾಡುವ ಕಾಲದಲ್ಲಿ, ಮಲಗುವಾಗಲೂ ಅದು ಪಕ್ಕದಲ್ಲಿಯೇ ಇರುತ್ತಿತ್ತು.

ಗೋವಿಂದಸ್ವಾಮಿ ಆ ಪಿಟೀಲನ್ನು ತೆಗೆದುಕೊಂಡು ಕೇಳಿದರು:

ಗೋ: "ಏನು ನುಡಿಸಲಿ?"

ಕೃ: "ನಿನಗೆ ಚೆನ್ನಾಗಿ ಅಭ್ಯಾಸವಾಗಿರುವುದನ್ನು ನುಡಿಸು"

ಗೋವಿಂದಸ್ವಾಮಿಯವರು ಪ್ರಸಿದ್ಧವಾದ "ವಿರಿಬೋಣಿ" ವರ್ಣವನ್ನು ಮೂರು ಕಾಲದಲ್ಲಿ ನುಡಿಸಿದರು. ಅದನ್ನು ಕೇಳಿ ಕೃಷ್ಣಯ್ಯರ್ ಅವರು-

"ಪರವಾಯಿಲ್ಲ. ನನ್ನ ಕಮಾನಿಗೆ ರೆಸಿನ್ ತಿಕ್ಕುವುದಕ್ಕೆ ಅರ್ಹನಾಗಿದ್ದೀ."

ಗೋವಿಂದಸ್ವಾಮಿ "ಅದು ತಮ್ಮ ಅನುಗ್ರಹ" -ಎಂದು ವಿನಯದಿಂದ ಹೇಳಿ ಅಪ್ಪಣೆ ಪಡೆದು ಹೊರಟುಹೋದರು.

ಬಳಿಕ ಶೇಷಣ್ಣನವರು ಕೃಷ್ಣಯ್ಯರ್ ಅವರನ್ನು ಕುರಿತು ಕೇಳಿದರು:

"ಅದೇನು ಹಾಗೆ ಹೇಳಿದಿರಿ? ಇನ್ನು ಅದಕ್ಕಿಂತ ಚೆನ್ನಾಗಿ ನುಡಿಸುವುದಕ್ಕಾಗುತ್ತದೆಯೆ?"

ಕೃಷ್ಣಯ್ಯರ್ ಅವರು ತಾವು ಪಿಟೀಲನ್ನು ಕೈಗೆ ತೆಗೆದುಕೊಂಡು, ಗೋವಿಂದಸ್ವಾಮಿಯವರು ನುಡಿಸಿದ್ದ ಮೂರನೆಯ ಕಾಲದಿಂದ ಆರಂಭಿಸಿ ಅಲ್ಲಿಂದಾಚೆಗೆ ಇನ್ನು ಮೂರು ಕಾಲ ನುಡಿಸಿದರಂತೆ! ಶೇಷಣ್ಣನವರು ಎದ್ದು ನಿಂತು.

"ಅಯ್ಯಾ! ನೀವು ಮನುಷ್ಯರಲ್ಲ. ರಾಕ್ಷಸರು. ಅಥವಾ ಪಿಶಾಚಿ. ಇಂಥ ಸಾಧನೆ ಮಾಡುವವರು ಭೂಲೋಕದಲ್ಲಿ ಇರುತ್ತಾರೆಯೆ?"

ಶೇಷಣ್ಣನವರೂ ಅದೇ ವರ್ಗಕ್ಕೆ ಸೇರಿದವರೆಂದು ವಾಸುದೇವಾಚಾರ್ಯರು ಸೂಚಿಸಿ ಬರೆದಿದ್ದಾರೆ. ಅವರ ಸಾಧನೆಯೂ ಹಾಗೆಯೇ. ಯಮಸಾಧನೆ. ಒಂದೊಂದು ಸ್ವರವನ್ನೂ, ಒಂದೊಂದು ಸ್ವರಾಂಶವನ್ನೂ ನುಡಿಸಿ ನುಡಿಸಿ ಬೆಟ್ಟನ್ನು ಸವೆಯಿಸಿ ಸವೆಯಿಸಿ ತಂತಿಯನ್ನು ಪಳಗಿಸಿ ಪಳಗಿಸಿ ಸರ್ವಾಂಗ ಸಂಪೂರ್ಣವಾಗಿ, ಇಂಗ್ಲಿಷಿನಲ್ಲಿ Perfect ಎಂದು ಹೇಳುವಂತೆ ಸ್ವಾಧೀನ ಪಡೆಸಿಕೊಂಡಿದ್ದವರು ಶೇಷಣ್ಣನವರು.

ಅಭ್ಯಾಸನಿಷ್ಠೆ

ಕೃಷ್ಣಯ್ಯರ್ ಅವರು ಪಿಟೀಲು ನಾಲ್ಕು ತಂತಿಗಳಲ್ಲಿ ಯಾವ ಯಾವ ತಂತಿಯಿಂದ ಯಾವ ಯಾವ ಮಿಲಿಮೀಟರಿನಲ್ಲಿ ಕೈಯನ್ನು ಹೇಗೆ ಹೇಗೆ ತಿರುಗಿಸಿದರೆ ಯಾವ ಯಾವ ಸ್ವರಾಂಶ ಆವಿರ್ಭವಿಸೀತೆಂಬುದನ್ನು ಚೆನ್ನಾಗಿ ಅರಿತುಕೊಂಡಿದ್ದರು. ಭೋಜನಕಾಲದಲ್ಲಿಯೂ ಅವರ ಮನಸ್ಸಿನ ಒಳಗಡೆ ಸಪ್ತಸ್ವರಗಳು ನಾನಾ ಭಂಗಿಗಳೇ ನಲಿದಾಡುತ್ತಿದ್ದವು. ಅವರಿಗೆ ಒಂದು ಹೊಸ ನಾದಭಾವವೋ ಸ್ವರಭಂಗಿಯೋ ಮನಸ್ಸಿಗೆ ಹೊಳೆದಾಗ ಊಟ ನಿಲ್ಲಿಸಿ ಅಲ್ಲಿಯೇ ಕೈ ತೊಳೆದು ಪಿಟೀಲಿನ ಮೇಲೆ ಆ ಹೊಸ ಸ್ಫೂರ್ತಿಯನ್ನು ಪ್ರಯೋಗಕ್ಕೆ ತರುವರು. ಅದು ಸುಂದರವೆಂದು ಮನಸ್ಸಿಗೆ ಸ್ಥಿರಪಡುವವರೆಗೂ ಊಟ ಮರೆತುಹೋಗುವುದು. ಸಂಗೀತಪ್ರಶ್ನೆಗೆ ಉತ್ತರ ದೊರೆಯಿತೆಂದು ದೃಢವಾದ ಮೇಲೆ ಮತ್ತೆ ಕೈತೊಳೆದು ಊಟ ಮುಗಿಸುವರು.

ಇಂಥಾದ್ದು ಕೃಷ್ಣಯ್ಯರ್ ಅವರ ಅಭ್ಯಾಸನಿಷ್ಠೆ.

ಈ ಮೇಲಿನ ಸಂಗತಿಗಳು ಪ್ರಾಮಾಣಿಕರಿಂದ ನನಗೆ ತಿಳಿದುಬಂದವು. ಪೂರ್ವಕಾಲದ ಕಲೋಪಾಸಿಗಳ ಸಾಧನ ಶ್ರದ್ಧೆಯನ್ನು ತೋರಿಸುವುದಕ್ಕಾಗಿ ಅದನ್ನು ಇಲ್ಲಿ ಉದಾಹರಿಸಿದ್ದೇನೆ. ಎಲ್ಲ ಪೂರ್ವ ವಿದ್ವಾಂಸರೂ ಶೇಷಣ್ಣನವರೂ ಕೃಷ್ಣಯ್ಯರ್ ಅವರೂ ಆಗಿದ್ದರೆಂದು ನಾನು ಹೇಳುತ್ತಿಲ್ಲ. ಪೂರ್ವಿಕರ ಧ್ಯೇಯ ಎಷ್ಟು ಮಾತ್ರದ್ದಾಗಿತ್ತೆಂಬುದನ್ನು ಸೂಚಿಸುವುದಷ್ಟೇ ನಮ್ಮ ಈಗಿನ ಉದ್ದೇಶ.

೨೩

ಸಾಧನೆ-ಪ್ರತಿಭೆ

ವೀಣೆ ಶೇಷಣ್ಣನವರೂ ತಿರುಕ್ಕೋಟಿಕಾವಲ್ ಕೃಷ್ಣಯ್ಯರ್ ಅವರೂ ಮಹಾಸಾಧಕರಾದರೂ ಸಾಧನೆಯೇ ಸಂಗೀತದ ಸರ್ವಸ್ವವಲ್ಲ; ಅದು ಸಂಗೀತದ ಮಾತೃಕೆಯಲ್ಲ, ಮಾತೃಕಾಂಶವೂ ಅಲ್ಲ. ಸಂಗೀತದ ಮಾತೃಕಾಂಶವು-ಕಾವ್ಯಕ್ಕೆ ಹೇಗೋ ಹಾಗೆ-ಪ್ರತಿಭೆ, ಕಲ್ಪನ ಪ್ರತಿಭೆ (Creative Imagination). ವೈದಿಕರ ದೇವತಾಶಾಸ್ತ್ರದಲ್ಲಿ ಜಗದ್ವಸ್ತುಗಳಿಗೆ ರೂಪ ಲಕ್ಷಣಗಳನ್ನು ಕೊಡುವ ದೇವತೆ ತ್ವಷ್ಟೃನಂತೆ. ಹಾಗೆ ನಾದ ಸಾಮಗ್ರಿಗೆ ರೂಪ ಲಕ್ಷಣಗಳನ್ನು ಕೊಡುವ ಶಕ್ತಿ ಪ್ರತಿಭೆ. ಅದು ದೈವಾನುಗ್ರಹದಿಂದಲೋ ಪೂರ್ವಪುಣ್ಯದಿಂದಲೋ ಅವೆರಡರ ಸಮ್ಮೇಳನದಿಂದಲೋ ಲಭಿಸುವ ಭಾಗ್ಯ. ಸಾಧನೆಯು ಆ ಭಾಗ್ಯಲಾಭಕ್ಕಾಗಿ ಮಾಡಬೇಕಾದ ತಪಶ್ಚರ್ಯೆ.

ಪಾಚಕನು ಪಾತ್ರೆಯಲ್ಲಿ ಸೌಟನ್ನಾಡಿಸುವುದು ಪಾಯಸದ ರುಚಿ ಸೌಭಾಗ್ಯಕ್ಕಾಗಿ ಮಾಡಬೇಕಾದ ತಪಶ್ಚರ್ಯೆ.

ಒಂದಾನೊಂದು ಜೀವಸ್ಪರ್ಶಿಯಾದ ಸನ್ನಿವೇಶವನ್ನು ಕಲ್ಪಿಸುವ ಮನಶ್ಶಕ್ತಿಯೇ ಪ್ರತಿಭೆ. ಕವಿಯೋ ಶಿಲ್ಪಿಯೋ ವರ್ಣಚಿತ್ರಕಾರನೋ ಗಾಯಕನೋ ಮೊದಲು ತನ್ನ ಅಂತರಂಗದಲ್ಲಿ ಒಂದು ಮನಮುಟ್ಟುವ ಸಂದರ್ಭವನ್ನು ನಿರ್ಮಿಸಿಕೊಳ್ಳುತ್ತಾನೆ. ಅದು ಮನುಷ್ಯಸಾಮಾನ್ಯರಿಗೆ ಸಂತೋಷವನ್ನೋ ಸಂಕಟವನ್ನೋ ಉತ್ಸಾಹವನ್ನೋ ಭಯವನ್ನೋ ಉಂಟುಮಾಡಿದ ಸಂದರ್ಭ. ಅಂಥ ಸಂದರ್ಭದಲ್ಲಿ ಮನುಷ್ಯ ಹೇಗೆ ಹೇಗೆ ನಡೆದುಕೊಂಡನೆಂಬುದನ್ನು ತೋರಿಸಿ, ಆ ಮೂಲಕ ಮನುಷ್ಯನಿಗೆ ತನ್ನ ಅಂತರಂಗವನ್ನು ದರ್ಶನ ಮಾಡಿಸುವುದು ಕಲೆ. ಮಹಾಕಾವ್ಯವೂ ಮಹಾಶಿಲ್ಪವೂ ಮಹಾಗಾನವೂ ನಮ್ಮ ನಮ್ಮ ಅಂತರಂಗಗಳಿಗೆ ಕನ್ನಡಿಯಂತಿರುತ್ತವೆ. ಅಲ್ಲಿ ನಾವು ನಮ್ಮ ಉಚ್ಚ ಭಾವಗಳನ್ನೂ ನೀಚ ಭಾವಗಳನ್ನೂ ಅನುಭವಿಸುತ್ತೇವೆ.

ಸ್ವಾನುಭವ

ಸಾಧನೆ, ಪ್ರತಿಭೆ-ಇವು ಪರಸ್ಪರ ಪರಿಪೋಷಕಗಳೆಂದು ಹೇಳಿದೆವು. ಇವೆರಡಕ್ಕೂ ಪೋಷಕವಾದ ಸಂಗತಿ ಬೇರೆ ಒಂದಿದೆ. ಆ ಮೂರನೆಯ ಸಂಗತಿ ಸ್ವಾನುಭವ. ಹಾಡುವವನು ತಾನು ಅನುಭವಿಸಿದ್ದರೆ ತಾನೆ ತನ್ನ ಅನುಭವವನ್ನು ಮತ್ತೊಬ್ಬರಿಗೆ ಉಂಟು ಮಾಡಿಸಲು ಶಕ್ತನಾದಾನು? ಎಲ್ಲ ಕಲೆಯೂ ಹೃದಯಾನುಭವದ ವರ್ಗಾಯಿಸುವಿಕೆ (Transfer). ತನ್ನ ಮನಸ್ಸು ಕಂಡ ಒಂದು ವಿಶೇಷ ಅನುಭವವನ್ನು ಇನ್ನೊಬ್ಬರು ಅನುಭವಿಸುವಂತೆ ಮಾಡಿಸುವುದು ಕಾವ್ಯ. ತನ್ನ ಮನಸ್ಸು ಕಂಡ ಒಂದು ರೂಪ ಸೌಂದರ್ಯವನ್ನು ಮತ್ತೊಬ್ಬರ ಮನಸ್ಸು ಅನುಭವಿಸುವಂತೆ ಮಾಡುವುದು ಚಿತ್ರ ಲೇಖನ. ತನ್ನ ಹೃದಯವು ಅನುಭವಿಸಿದ ಭಾವಸೌಂದರ್ಯವನ್ನು ಮತ್ತೊಬ್ಬನ ಹೃದಯವು ಅನುಭವಿಸುವಂತೆ ಮಾಡುವುದು ಗಾನಕಲೆ.

ಎಲ್ಲ ನಿಜವಾದ ಕಲೆಗೂ ಇದು ಮುಖ್ಯ ಪ್ರಮಾಣ. ಮೊದಲು ಒಂದು ಹೃದಯದಲ್ಲಿ ಒಂದು ಇಷ್ಟವಾದ ಅನುಭವವಾಗಬೇಕು. ಆಮೇಲೆ ಆ ಅನುಭವವು ಇನ್ನೊಬ್ಬರ ಹೃದಯಕ್ಕೆ ಸ್ಥಾನಾಂತರ ಹೊಂದಬೇಕು. ಆದದ್ದರಿಂದ ಹಾಡುವವನು ತನ್ನ ಹಾಡಿಕೆ ಹೇಗಿದೆಯೆಂಬುದನ್ನು ತನ್ನ ಒಳಗೆ, ತನ್ನ ಹೃದಯದ ಅಂತರಂಗದಲ್ಲಿ ಕಂಡುಕೊಳ್ಳಬೇಕು. ತನಗೆ ಅದು ಸೊಗಯಿಸಿದ್ದರೆ ಇನ್ನೊಬ್ಬರಿಗೂ ಅದು ಸೊಗಯಿಸೀತು. ಎಲ್ಲ ಕಲಾಭ್ಯಾಸಿಗಳಿಗೂ ಅನ್ವಯಿಸತಕ್ಕ ಮಾತು ಇದು. ಲೇಖಕನಾಗಲಿ, ಶಿಲ್ಪಿಯಾಗಲಿ, ಅಭಿನಯ ಕರ್ತನಾಗಲಿ, ಅವನ ಕೃತಿ ಹೇಗಿತ್ತೆಂಬುದಕ್ಕೆ ರುಜುವಾತು ಮೊದಲು ಅವನ ಹೃದಯದ ಒಳಗಡೆಯೇ ಇರುತ್ತದೆ. ಹೀಗೆ ಅವನ ಕೃತಿಯ ಸ್ವಾರಸ್ಯಕ್ಕೆ ಮೂಲಸ್ಥಾನ ಅವನ ಹೃದಯ. **ಹೃದಯದ ಕಾವಿನಿಂದ ಕಾವ್ಯ; ಅಲ್ಲಿಯ ಕಲಕಿನಿಂದ ಕಲೆ.**

ಸಂಗೀತವು ಮನಸ್ಸನ್ನು ಕಲಕಬೇಕು. ಹಾಗಾಗದಿದ್ದರೆ ಅದು ಸಂಗೀತವಲ್ಲ. ಏನೋ ಸದ್ದು. ಕೇಳಿದವನ ಎದೆಯಲ್ಲಿ ಒಂದು ಶೋಕವೋ, ಕನಿಕರವೋ, ಒಲವೊ, ಮುನಿಸೋ, ಛಲವೋ, ಯಾವುದೋ ಒಂದು ಹೃದಯಭಾವವನ್ನು ಆ ಸಂಗೀತವು ಕಲಕಬೇಕು. ಈ ಕಲಕಾಟವನ್ನು ಯಾವ ನಾದಪ್ರವಾಹ ಉಂಟುಮಾಡಿಸಬಲ್ಲದೋ ಅದಕ್ಕೆ ಸಲ್ಲುತ್ತದೆ ಸಂಗೀತವೆಂಬ ಹೆಸರು. ಆದದ್ದರಿಂದ ಸಂಗೀತದ ಮೂಲಸ್ಥಾನವು ಹೃದಯ. ಇದು ಹಾಡುವವನಿಗೂ ಕೇಳುವವನಿಗೂ ಇಬ್ಬರಿಗೂ ಸಮಾನವಾಗಿರುವ ಸಾಕ್ಷಿ.

ತಪಸ್ಸಾಧನೆ

ಕಲ್ಪನಪ್ರತಿಭೆ ಲಭ್ಯವಾಗುವುದು ಬಹುಕಾಲದ ತಪಸ್ಸಾಧನೆಯಿಂದ. ಎಂದೋ ಒಂದು ದಿನ, ನಾವು ಎಷ್ಟೋ ತಿಂಗಳು ಕಾದ ಮೇಲೆ, ಮಾದಳೆಯ ಹಿಚುಕಾಯಿಯ ಹುಳಿಕಹಿಗಳು ಸಿಹಿಗೆ ತಿರುಗಿ ಪಕ್ವಕ್ಕೆ ಬಂದು ನಮಗೆ ರುಚಿಸುತ್ತವೆ. ಸಂಗೀತದ ಅತ್ಯಂತ ಸ್ವಾರಸ್ಯದ ಹಿಂದುಗಡೆ ಹಾಗೆ ಬಹುಕಾಲದ ಪಕ್ವಕ್ರಮ ನಡೆದಿರುತ್ತದೆ. ಶೇಷಣ್ಣನವರ ಪ್ರತಿಭೆ ಹಾಗೆ ಪಕ್ವಕ್ಕೆ ಬಂದದ್ದನ್ನು ಅವರ ಸಮೀಪದಲ್ಲಿದ್ದವರು ಬಹುಸಾರಿ ಕಂಡಿದ್ದಾರೆ.

ಒಂದು ಸಾರಿ ಮೈಸೂರಿನ ವಸಂತ ಮಹಲಿನಲ್ಲಿ ಅವರ ಕಛೇರಿ ನಡೆಯುತ್ತಿದ್ದಾಗ ಶೇಷಣ್ಣನವರು ಕಲ್ಯಾಣಿ ರಾಗವನ್ನು ನುಡಿಸುತ್ತಿದ್ದರು. ಕೊಂಚ ಹೊತ್ತು ನುಡಿಸಿದ ಬಳಿಕ ವೀಣೆಯ ದಂಡಿಕೆಯ ಮೇಲ್ಭಾಗವನ್ನು ಮೇಲಕ್ಕೆತ್ತಿ ತಮ್ಮ ಕಿವಿಯನ್ನು ತಂತಿಗಳ ಅತ್ಯಂತ ಸಮೀಪದಲ್ಲಿರಿಸಿ ಮೃದುವಾಗಿ ನಕ್ಕು “ಯಾವಾಗಲೋ ಬರುತ್ತದೆ! ಬಾ ಎಂದಾಗ ಬರುವುದಿಲ್ಲ” -ಎಂದು ತಮ್ಮಷ್ಟಕ್ಕೆ ತಾವೇ ಅಂದುಕೊಂಡರು. ಅದು ಸಣ್ಣ ಸಭೆಯಾಗಿದ್ದರಿಂದ ಅವರ ಮಾತು ನಮಗೆ ಕೇಳಿಸಿತು.

ಇನ್ನೊಂದು ಸಲ ಬೆಂಗಳೂರಿನ ಅನಂತಶಾಸ್ತ್ರಿಗಳ ಕೊಠಡಿಯಲ್ಲಿ ಹೀಗೆಯೇ ನಡೆಯಿತು. ಅಂಥಾದ್ದು ಇನ್ನೂ ಹಲವು ಕಡೆ ಆದದ್ದನ್ನು ನಾನು ಬಲ್ಲೆ. ಅದರ ತಾತ್ಪರ್ಯವೇನು? ಕಲೆ ಬೆಳೆಯುತ್ತದೆ-ಎಂಬುದು. ಶೇಷಣ್ಣನವರ ಕಲಾಪ್ರತಿಭೆ ಕಡೆಯವರೆಗೂ, ದಿನೇ ದಿನೇ ಬೆಳೆಯುತ್ತಲೇ ಇತ್ತು. ಅದು ಎಂದೂ ಕರಡುಕಟ್ಟಿ “ಇಲ್ಲಿಗೇ ಸಾಕು” ಎಂದು ಮೊಟಕು ಬೀಳಲಿಲ್ಲ.

ಜೀವಂತ ಕಲೆಯ ಲಕ್ಷಣ

ಇಂಥ ನಿರಂತರವಾದ ಬೆಳವಣಿಗೆಯೇ ಜೀವಂತ ಕಲೆಯ ಲಕ್ಷಣ. ಅದು ಒಂದು ಮರದ ಬೆಳವಣಿಗೆಯಂತೆ. ಮರ ಹಳೆಯದು, ಚಿಗುರು ಹೊಸದು. ದಿನದಿನವೂ ಹೊಸ ಹೊಸ ಪಲ್ಲವ ಅದರಲ್ಲಿ ಕಾಣಬರಬೇಕು. ಆಗ ಆ ಮರದಲ್ಲಿ ಜೀವಸತ್ತ್ವ ಉಂಟೆಂಬುದು ಸಿದ್ಧವಾಗುತ್ತದೆ. ಇದೇ ಅರ್ಥವನ್ನೇ ಕವಿ ಹೇಳಿರುವುದು:

> ಕ್ಷಣೇ ಕ್ಷಣೇ ಯನ್ನವತಾಮುಪೈತಿ
> ತದೇವ ಭಾವಂ ರಮಣೀಯತಾಯಾಃ ॥

ಲಾವಣ್ಯವೆಂದರೆ ಇದೆ. ಕ್ಷಣ ಕ್ಷಣವೂ ಇದು ಹೊಸದು, ಇದು ಹೊಸ ಬಗೆ-ಎನ್ನಿಸುವಂತಿರಬೇಕು-ಸೌಂದರ್ಯವತಿಯ ಕಿವಿಯೋಲೆಯ ವಜ್ರದ ಥಾಳಥಳ್ಯದಂತೆ. ಯುವತಿ ಒಂದು ಸಾರಿ ಎವೆಯಿಕ್ಕಿ ಎವೆ ತೆರೆದರೆ ಆ ಸೌಂದರ್ಯ ಹೊಸತಾಗುತ್ತದೆ. ಇಂಥಾದ್ದು ಪ್ರತಿಭೆ. ಇದು ಸಂಗೀತದ ತಿರುಳು.

ಇದಕ್ಕೆ ಸಾಧನೆ ಅವಶ್ಯವೆಂಬುದು ಮೇಲೆ ಹೇಳಿದ್ದರಲ್ಲಿ ಅಂತರ್ಗತವಾಗಿಯೇ ಇದೆ. ಸಾಧನೆಯೇ ತಪಸ್ಸು. ತಿರುಕ್ಕೋಟಿಕಾವಲ್ ಕೃಷ್ಣಯ್ಯರ್ ಅವರನ್ನು ಕುರಿತು ಹೇಳಿದ್ದರಲ್ಲಿ ಇದು ಸ್ಪಷ್ಟವಾಗಿದೆ. ಸಾಧನೆ ಮಾಡುವವನಿಗೆ ಸಾಧನೆಯ ಕಾಲದಲ್ಲಿ ಸಾಧನೆಯ ಪ್ರತಿಫಲವಾಗಿ ಅಂಕುರಿಸುತ್ತವೆ ಹೊಸ ಹೊಸ ಹೃದಯಭಾವಗಳು. ಹೊಸ ಹೊಸ ಭಾವಗಳಂತೆ ಹೊಸ ಹೊಸ ರಾಗಸಂಚಾರಗಳು.

ಅನುಕರಣೆ, ಸ್ವಂತ ನಿರ್ಮಿತಿ

ಇದರಿಂದ ಏನು ಸಿದ್ಧವಾಯಿತು? ಪೂರ್ವಿಕರಲ್ಲಿ ಸಾಧನೆ ಬಲವಾಗಿತ್ತೆಂಬುದು, ಈ ಸಾಧನೆ ಎಂಬುದರಲ್ಲಿ ಎರಡು ಅಂಶಗಳು ಸೇರಿವೆ: ಒಂದು ಅನುಕರಣೆ; ಇನ್ನೊಂದು ಸ್ವಂತ ನಿರ್ಮಿತಿ. ಈಚೀಚೆಗೆ ರೂಢಿಯಲ್ಲಿರುವ ಸಾಧನೆ ಎಂಬುದರಲ್ಲಿ ಅನುಕರಣೆಯೇ ಮುಖ್ಯವಾಗಿದೆ. ಸ್ವತಂತ್ರ ನಿರ್ಮಿತಿಯ ಪ್ರಯತ್ನ ಬಹು ಕಡಿಮೆಯಾಗಿದೆ. ಸ್ವತಂತ್ರ ನಿರ್ಮಿತಿ ಇಲ್ಲದೆ ಹೋದಲ್ಲಿ ಸಂಗೀತ ಹಳಸುತ್ತದೆ. ಹಾಡಿದ್ದೇ ಹಾಡೋ ಕಿಸಬಾಯಿದಾಸ ಎಂಬಂತಾಗುತ್ತದೆ. ಶಾರೀರ ಸಂಪತ್ತೂ, ಪಕ್ಕವಾದ್ಯಗಳ ಜಮಾವಣೆಯೂ ಚೆನ್ನಾಗಿದ್ದಲ್ಲಿ ಅನುಕರಣಪ್ರಧಾನವಾದ ಸಂಗೀತ ಶೋಭಿಸುತ್ತದೆ. ಈ ದರ್ಜೆಯ ಸಂಗೀತವನ್ನು ಅಲ್ಲಗಳೆಯತಕ್ಕದ್ದಲ್ಲ. ಮೇಲ್ದರ್ಜೆಯ ಸಂಗೀತದ ಸ್ವಾರಸ್ಯವನ್ನು ಅರಿವಿನಿಂದ ಅನುಭವಿಸಬೇಕಾದರೆ ಅದಕ್ಕೆ ತಕ್ಕ ಸಿದ್ಧತೆಯನ್ನು ನಮ್ಮಲ್ಲುಂಟುಮಾಡುವುದು ಈ ಎರಡನೆಯ ದರ್ಜೆಯ ಸಂಗೀತ. ಇದನ್ನು ಕೇಳಿ ಸಂಸ್ಕಾರ ಪಡೆದ ಕಿವಿಗೆ ಮಾತ್ರವೇ ಗೋಚರವಾಗತಕ್ಕದ್ದು ಕಲ್ಪನಸಂಗೀತದ ಸ್ವಾರಸ್ಯ.

ಪೂರ್ವಕಾಲದ ಸಂಗೀತ ವೈಶಿಷ್ಟ್ಯ

ಈ ಎರಡು ತರಗತಿಗಳೂ ಅಲ್ಲದ ಇನ್ನೂ ಕೀಳ್ಮಟ್ಟದ ಸಂಗೀತಗಳು ಈಗ ಎಷ್ಟೋ ರೂಢಿಗೆ ಬರುತ್ತಿವೆ. ಸಿನಿಮಾಗಳಲ್ಲಿಯೂ ಗ್ರಾಮೋಫೋನುಗಳಲ್ಲಿಯೂ ಬರುತ್ತಿರುವ ಸಂಗೀತದ ಬಹುಭಾಗದಲ್ಲಿ ಸಾಧನೆಯ ಗುಣವಿಲ್ಲ, ಕಲ್ಪನೆಯ ಗುಣ ಮೊದಲೇ ಇಲ್ಲ. ವಿಕಾರಕಲ್ಪನೆ ಅತಿಶಯವಾಗಿದೆಯೆಂದು ಬೇಕಾದರೆ ಹೇಳಬಹುದು.

ಪೂರ್ವಕಾಲದ ಸಂಗೀತದಲ್ಲಿ ನಾದಮಾಧುರ್ಯ ಮುಖ್ಯಾಂಶ. ಈಚೀಚೆಗೆ ತಾಳಚಾತುರ್ಯ ಮುಖ್ಯಾಂಶವಾಗುತ್ತಿದೆ. ಹಿಂದೆ ರಾಗಾಲಾಪನೆಗೆ ಮುಖ್ಯಸ್ಥಾನವಿತ್ತು. ತೋಡಿ, ಭೈರವಿ, ಶಂಕರಾಭರಣ ಇಂಥ ದೊಡ್ಡ ರಾಗಗಳನ್ನೆತ್ತಿ ವಿಸ್ತಾರವಾಗಿ ಆಲಾಪನೆ ಮಾಡುತ್ತಿದ್ದರು. ಒಂದು ರಾಗವನ್ನು ವಿಲಂಬ ಮಧ್ಯಮ ಕಾಲಗಳಲ್ಲಿ ಹಾಡುವುದು ಸಾಮಾನ್ಯವಾಗಿತ್ತು. ಆ ರಾಗದಲ್ಲಿ ವಿಸ್ತಾರವಾದ ಆಲಾಪನೆಯಾದ ಮೇಲೆ ಒಂದು ಕೃತಿಯನ್ನು ಎರಡು ಮೂರು ನಿಮಿಷಗಳಲ್ಲಿ ಮುಗಿಸಿಬಿಡುತ್ತಿದ್ದರು. ಕೃತಿ ಹಾಡುವಾಗ ಪಂಕ್ತಿ ಪಂಕ್ತಿಗೂ ಸ್ವರಸಂಯೋಜನೆ ಮಾಡುವುದು ಆಗಿನ ಪದ್ಧತಿಯಲ್ಲ. ಕೇಳುವವನ ಮನಸ್ಸಿನಲ್ಲಿ ರಾಗದ ಒಯ್ಯಾರ, ರಾಗದ ವಿಲಾಸ, ರಾಗದ ಪರಿಪರಿಯ ಸೊಗಸು ಕಿವಿಯ ತುಂಬ ತುಂಬಿ ಮನಸ್ಸಿನಲ್ಲಿಯೂ ತುಂಬಿ ತುಳುಕಾಡಬೇಕು. ಏಳೆಂಟು ದಿನ ಕಿವಿಯಲ್ಲಿ ಅದೇ ತುಂಬಿದ್ದು ಹೋದ ಕಡೆಯೆಲ್ಲ ಅದರ ಅನುಭವವಾಗುತ್ತಿರಬೇಕು.

ಈಚೀಚೆಗೆ ಆಲಾಪನೆ ಮೊಟಕುಬಿದ್ದು ಸ್ವರ ಸಂಯೋಜನೆ ಹೆಚ್ಚುತ್ತಿದೆ. ಇದರ ಜೊತೆಗೆ ತಾಳದ ಹೊಡೆತ ಜೋರಾಗಿದೆ. ದಕ್ಷಿಣ ದೇಶದಿಂದ ಬರುವ ಮೇಳದಲ್ಲಂತೂ ಡೋಲಿನ ಆಡಂಬರಕ್ಕೇ ಸಂಗೀತವೆಂದು ಹೆಸರು ಬಂದಂತಿದೆ. ನಾಗಸ್ವರದವನು ಎರಡು ನಿಮಿಷ ನುಡಿಸಿದ್ದಕ್ಕೆ ಡೋಲುಗಾರನು ಹತ್ತು ನಿಮಿಷ ತಾಳ ಕುಟ್ಟುತ್ತಾನೆ. ಡೋಲುಗಾರನೊಬ್ಬನು ಕೈಸೋಲುವವರೆಗೂ ಹೊಡೆದು, ಅವನು ನಿಲ್ಲಿಸಿದ ಕೂಡಲೇ ಇನ್ನೊಬ್ಬ ಡೋಲುಗಾರನು ತಾಳದ ಗತಿಯನ್ನು ತೋರಿಸಿ ವಾತಾವರಣವೆಲ್ಲ ತಾಳತನ್ಮಯವಾಗುವಂತೆ ಮಾಡುತ್ತಾರೆ. ತಾಳವಿದ್ಯೆ ದೊಡ್ಡದೆನ್ನಲು ಸಂದೇಹವಿಲ್ಲ. ಅದಕ್ಕೆ ಪ್ರಬಲವಾದ ಶಾಸ್ತ್ರಾಧಾರವೂ ಲೆಕ್ಕಾಚಾರವೂ ಉಂಟು. ಈ ತಾಳವಿದ್ಯೆ ದೀರ್ಘಕಾಲದ ಶಿಕ್ಷೆ ಸಾಧನೆಗಳನ್ನು ಅಪೇಕ್ಷಿಸುತ್ತದೆ. ಸ್ವತಂತ್ರವಾಗಿ ತಾಳಸೌಂದರ್ಯವನ್ನು ಅನುಭವಿಸಬೇಕೆನ್ನುವವರಿಗೆ ಲಯಗತಿಯ ವಿದ್ಯೆಯಲ್ಲಿ ಬೇಕಾದಷ್ಟು ಅವಕಾಶವುಂಟು. ಆದರೆ ಸಾಮಾನ್ಯ ಸಂಗೀತೋತ್ಸಾಹಿಗೆ ಅದು ಅಷ್ಟಾಗಿ ರುಚಿಸದು. ಭೋಜನದ ಷಡ್ರಸಗಳಲ್ಲಿ ಲವಣವೂ ಮುಖ್ಯವೇ.

ಷಣ್ಣಾಂ ರಸಾನಾಂ ಲವಣಂ ಪ್ರಧಾನಮ್ ॥

ಆದರೆ ಉಪ್ಪುನೀರನ್ನು ಯಾರು ಕುಡಿದಾರು? ಎಷ್ಟು ಕುಡಿದಾರು?

ಸಂಗೀತವೆಂಬುದರ ಸೊಗಸುಗಳನ್ನು ನಿಗದಿ ಮಾಡಿ ಹೇಳುವುದು ಅಸಾಧ್ಯದ ಕೆಲಸ. ಒಂದಾನೊಂದು ಹಾಡಿಕೆಗೆ ಬೆಲೆ ಬರುವುದು ಎರಡು ಸ್ಥಾನಗಳಿಂದ: (೧) ಹಾಡುವವನ ಸಂಸ್ಕಾರ ಯೋಗ್ಯತೆ, (೨) ಕೇಳುವವನ ಸಂಸ್ಕಾರ ಯೋಗ್ಯತೆ. ಎರಡು ಯೋಗ್ಯತೆಗಳೂ ಬೆಳೆಯುತ್ತಿರಬೇಕು. ಬೆಳವಣಿಗೆಯೆಂದರೆ ಎಂದೆಂದೂ ಮಾಸಲಾಗದ ಹೊಸತನ ಎಂದು ಬಿನ್ನಯಿಸಿದ್ದೇನೆ. ಆದದ್ದರಿಂದ ಹಾಡುವವರ ಹಾಗೆಯೇ ಕೇಳುವವರೂ ಸಂತತವಾಗಿ ತಮ್ಮ ತಮ್ಮ ಅಂತರಂಗಗಳನ್ನು ಚೊಕ್ಕಟಪಡಿಸಿ ಕೃಷಿ ಮಾಡುತ್ತಿದ್ದರೆ ಒಳ್ಳೆಯ ಸಂಗೀತ ಬದುಕೀತೆಂದು ನನ್ನ ನಂಬಿಕೆ. ಸಂಗೀತವು ಹಾಗೆ ಆಗಿಂದಾಗ್ಗೆ ಹೊಸ ಚಿಗುರು, ಹೊಸ ಮೊಗ್ಗುಗಳನ್ನು ತಾಳಿ ಸಂತತವಾಗಿ ಬೆಳೆಯುವುದು ಜನತೆಯ ಆತ್ಮಕ್ಕೆ ಹಿತಕರವೆಂದು ನಾನು ನಂಬಿದ್ದೇನೆ.

ನಖಮುಖ-ಮುಖರಿತ-ವೀಣಾ-
ನಾದರಸಾಸ್ವಾದ-ನವನವೋಲ್ಲಾಸಮ್ ॥
. . . .
ವೀಣಾವಾದನ-ವೇಲಾ-
ಕಂಪಿತಶಿರಸಂ ನಮಾಮಿ ಮಾತಂಗೀಮ್ ॥

೨೪

ಕಲಾನುಭವ

"ಕಲೆ" ಎಂದರೆ ನಮ್ಮ ಮನಸ್ಸಿಗೆ, ಕಣ್ಣು ಕಿವಿ ಮೊದಲಾದ ಇಂದ್ರಿಯಗಳ ಮೂಲಕ, ಒಂದು ಸೌಂದರ್ಯವನ್ನೋ, ಒಂದು ಮಹತ್ತ್ವವನ್ನೋ, ಒಂದು ಗಂಭೀರ ವಿಚಾರವನ್ನೋ ಅನುಭವಮಾಡಿಸಿಕೊಡಬಲ್ಲ ಕುಶಲ ಕರ್ಮ.

"ಅನುಭವ" ಎಂದರೆ ನಮ್ಮ ದೃಷ್ಟಿಯಲ್ಲಿರುವ ವಸ್ತುವಿನಂತೆ, ಅಥವಾ ತತ್ಕಾರ್ಯದಂತೆ, ನಾವು ನಮ್ಮ ಮನಸಿನೊಳಗೆ ಆಗುವುದು: ಆ ವಸ್ತುವಿನ ಭಾವವನ್ನು ನಾವು ನಮ್ಮ ಅಂತರಂಗದೊಳಗೆ ತುಂಬಿಕೊಂಡು, ಆ ವಸ್ತುವು ನಾವೇ ಎನಿಸುವಂತೆ, ಅಥವಾ ನಾವು ಆ ವಸ್ತುವೇ ಎನಿಸುವಂತೆ, ಆಗುವುದು. ಲಕ್ಷ್ಯವಸ್ತುವಿನಲ್ಲಿ ಲಕ್ಷ್ಯಕಾರನು ಬೆರೆತುಕೊಳ್ಳುವುದು ಅನುಭವದ ಪರಿಪೂರ್ಣದಶೆ.

ಕಲೆಗಳು ಅನೇಕ. ನಮ್ಮ ಪೂರ್ವಿಕರಲ್ಲಿ ಚತುಷ್ಷಷ್ಟಿಕಲೆಗಳು ಎಂದು ಲೆಕ್ಕವಿತ್ತು. ಎಷ್ಟಾದರಾಗಲಿ, ಅವುಗಳಲ್ಲಿ ಮುಖ್ಯವಾದವು ಮೂರು:

1. **ರೂಪಚಿತ್ರ:** ಕಣ್ಣಿನ ದ್ವಾರದಿಂದ ಮನಸ್ಸನ್ನು ಸೇರುವಂಥಾದ್ದು-ಪ್ರತಿಮೆ, ಬಿಂಬರೇಖೆ, ಚಿತ್ರಪಟ, ವರ್ಣಪಟ, ಅಭಿನಯ, ನರ್ತನ, ಇತ್ಯಾದಿ.
2. **ಸಂಗೀತ:** ಕಿವಿಯ ದ್ವಾರದಿಂದ ಮನಸ್ಸನ್ನು ಸೇರುವಂಥಾದ್ದು.
3. **ಕಾವ್ಯ:** ವಾಕ್ಪ್ರಬಂಧರೂಪದಲ್ಲಿ ಮನಸ್ಸನ್ನು ಸೇರುವಂಥಾದ್ದು.

ಮನಸ್ಸಿದ್ಧತೆ

ಅನುಭವದಲ್ಲಿ ಒಂದು ಕಡೆಯ ಮನಸ್ಸೂ ಇನ್ನೊಂದು ಕಡೆಯ ಲಕ್ಷ್ಯವಸ್ತುವೂ ಬೆರೆಯಬೇಕು. ಎಂದರೆ ಅದಕ್ಕಾಗಿ ಮನಸ್ಸು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆ ಒಂದುಂಟೆಂದು ತಾತ್ಪರ್ಯ. ಮನಶ್ಶಿಕ್ಷಣವಾಗಿದ್ದ ಮಟ್ಟಿಗೆ ಕಲಾಗುಣಗ್ರಹಣ. ಸಂಸ್ಕಾರದಂತೆ ಕಲಾನುಭವ.

ನಮ್ಮ ಮನಸ್ಸಂಸ್ಕಾರವಾದರೋ ನಮ್ಮ ನಮ್ಮ ಲೋಕಾನುಭವ ಜೀವನಾನುಭವಗಳಿಂದ ಉಂಟಾಗುತ್ತದೆ. ಲೋಕಾನುಭವವೂ ಜೀವನಾನುಭವವೂ ಕಲಾಕರ್ತನಿಗೂ ಕಲಾನುಭವಿಗೂ ಸಹ ಅವಶ್ಯವಾದ ಪೂರ್ವಸಿದ್ಧತೆ. ಕಲಾಕರ್ತನು ಸ್ವಾರಸ್ಯಗಳನ್ನು ಕಂಡುಕೊಳ್ಳುವುದೂ ರೂಪಗೊಳಿಸುವುದೂ ತನಗಾಗಿರುವ ಅನುಭವಗಳಿಂದ. ಹಾಗೆಯೇ ಕಲಾನುಭವಿಯು ಕಲಾಕೃತಿಯ ಸ್ವಾರಸ್ಯಗಳನ್ನು ಕಂಡುಕೊಳ್ಳುವುದೂ ಅಂಗೀಕರಿಸುವುದೂ ಅನುಭವದ ದೃಷ್ಟಿಯಿಂದ.

ಹೀಗೆ ಲೋಕಾನುಭವ, ಜೀವನಾನುಭವ, ಕಲಾನಿರ್ಮಿತಿ, ಕಲಾನುಭವ-ಇವು ಅನ್ಯೋನ್ಯ ಸಂಬದ್ಧಗಳು.

ಮೂರು ಘಟ್ಟಗಳು

ಕಲಾನುಭವದಲ್ಲಿ ನಾಲ್ಕಾರು ಅಂತಸ್ತುಗಳು ಅಥವಾ ಹಂತಗಳು ಇರುತ್ತವೆ. ಅವುಗಳಲ್ಲಿ ಮೂರನ್ನು ಮುಖ್ಯಘಟ್ಟಗಳೆಂದು ಗುರುತಿಸಬಹುದು:

1. ಮನಃಪ್ರಸಾದ;
2. ಭಾವಾವೇಶ;
3. ತಾತ್ಪರ್ಯಚಿಂತನೆ.

ಈಗ ಮೇಲೆ ಸೂಚಿಸಿದ ಮೂರು ಕಲಾಪ್ರಕಾರಗಳ ಹಂತಗಳನ್ನು ನೋಡೋಣ.

೧. ರೂಪಚಿತ್ರ

(೧) ಮನಃಪ್ರಸಾದ: ಚಿತ್ರಣಕಲೆಯಲ್ಲಿ ಮನಃಪ್ರಸಾದದ ಅಂಶವು ಸಾಮಾನ್ಯವಾದ ಅಲಂಕಾರ “ಚಿತ್ತಾರ” ಗಳದು. ದೇವಾಲಯದ ಗೋಡೆಯ ಮೇಲೆ ಆನೆ, ಕುದುರೆ, ಪದ್ಮ, ಹಂಸೆ, ಚಕ್ರ, ಸ್ವಸ್ತಿಕ-ಇಂಥ ಅಲಂಕಾರಗಳು ಸಾಲುಸಾಲಾಗಿರುತ್ತವೆ. ಇವುಗಳ ಉದ್ದೇಶ ನೋಟಕನ ಮನಸ್ಸನ್ನು ತಿಳಿಮಾಡುವುದು; ಅನುದಿನದ ಚಿಂತೆ ಸಂತಾಪಗಳಿಂದ ಅವನ ಮನಸ್ಸನ್ನು ಬೇರೆ ಮಾಡಿ ಒಳಗಿನಿಂದ ಹೊರಕ್ಕೆ ತಿರುಗಿಸುವುದು. ನಮ್ಮ ಮನೆಗಳಲ್ಲಿ ಬಹು ಹೊತ್ತು ಅಡಿಗೆಯ ಕೋಣೆಯಲ್ಲೋ ಉಗ್ರಾಣದಲ್ಲೋ ದುಡಿದು ಬೇಸತ್ತಿರುವ ಹೆಂಗಸರು ಕೊಂಚ ಬಿಡುವು ಮಾಡಿಕೊಂಡು ಬೀದಿಯ ಕಡೆಗೆ ಬಂದು ಒಂದು ಘಳಿಗೆ ಬೀದಿಯ ನೋಟ ನೋಡುತ್ತಿದ್ದು ಬಳಿಕ ಹಿಂತಿರುಗುತ್ತಾರಲ್ಲವೆ ? ಆಗ ಅವರಿಗೆ ಬೇಸರ ಮರೆತು, ದುಗುಡ ಕಳೆದು, ಕೊಂಚ ಹೊಸತನ ಬರುತ್ತದೆ. ಬೇರೆ ಲೋಕದ ನೋಟದಿಂದ ಹಳಸಿನ ಜಡ್ಡು ತೊಲಗಿ, ಲವಲವಿಕೆ ಬರುತ್ತದೆ. ಈ ಪ್ರಸನ್ನತೆಯೇ ಸಾಮಾನ್ಯವಾದ ಅಲಂಕಾರ ಚಿತ್ರಗಳ ರಾಶಿಯಿಂದ ನಮಗೆ ದೊರೆಯುವ ಲಾಭ. ಇದು ಮೊದಲ ಹಂತ.

(೨) ಭಾವಾವೇಶ: ಇದಾದ ಮೇಲೆ ನಾವು ಗರಡಿಯ ಗೋಡೆಯ ಮಧ್ಯರಂಗದ ವಿಗ್ರಹಗಳಿಗೆ ಬರುತ್ತೇವೆ. ಇಲ್ಲಿಯ ದೃಶ್ಯಗಳಿಗೆ ಒಂದು ಗೊತ್ತಾದ ಅರ್ಥವುಂಟು. ಮನಸ್ಸು ಪಟ್ಟಾಗಿ ಹಿಡಿದುಕೊಳ್ಳಲಿಕ್ಕೆ ಇಲ್ಲಿ ಗಟ್ಟಿಪದಾರ್ಥ ಅದಕ್ಕೆ ಸಿಕ್ಕುತ್ತದೆ. ಆದದ್ದರಿಂದ ಮನಸ್ಸು ಇಲ್ಲಿ ಕೊಂಚ ಕಾಲ ಸ್ಥಾಯಿಯಾಗಿ ನಿಲ್ಲುತ್ತದೆ. ಧ್ರುವನು ತಪಸ್ಸು ಮಾಡುತ್ತಿದ್ದಾನೆ. ಆಹಾ! ಚಿಕ್ಕ ಬಾಲಕ ಹೇಗೆ ತದೇಕನಿಷ್ಠನಾಗಿದ್ದಾನೆ! ಅಗೋ ಅಲ್ಲಿ ಮಾರ್ಕಂಡೇಯ- ಅವನದೆಂಥಾ ನಂಬಿಕೆ! ಇಲ್ಲಿ ಮಹಾತಾಯಿ ಸೀತಮ್ಮ. ಅದೆಂಥ ಸಹನೆ! ಎಂಥ ತಪೋನಿಷ್ಠೆ! ಅಲ್ಲಿ ವಾಮನಮೂರ್ತಿ, ಬಲಿಚಕ್ರವರ್ತಿಗೆ ದಂಡನೆಯ ರೂಪದಲ್ಲಿ ಅನುಗ್ರಹಮಾಡುತ್ತಿದ್ದಾನೆ. ಹೀಗೆಲ್ಲ ನಮ್ಮ ಮನಸ್ಸು ಊಹಿಸಿಕೊಂಡು ಭಾವಾವಿಷ್ಟವಾಗುತ್ತದೆ. ಸ್ಥಿರಾಕಾರಗಳಲ್ಲಿ ನಾವು ಭಾವಚಲಿತಗಳನ್ನು ಕಾಣುತ್ತೇವೆ. ನೋಡುತ್ತ ನೋಡುತ್ತ ಕಲಾಕೃತಿಯಿಂದ ಮನಸ್ಸು ಮೂಲಕಥೆಗೆ ತಿರುಗುತ್ತದೆ. ಇದು ಭಾವ ಪ್ರವಾಹ; ಅದೇ ರಸ. ಈ ರಸದ ಆಸ್ವಾದನೆಯೇ ಕಲಾಸಿದ್ಧಿಯ ಗೋಪುರ.

(೩) ತಾತ್ಪರ್ಯ ಚಿಂತನೆ: ಅನಂತರ ಮೂರನೆಯ ಹಂತ. ನಾವು ಗುಡಿಯ ಗೋಡೆಯನ್ನು ಬಿಟ್ಟು ಮನೆಗೋ ಇನ್ನೆಲ್ಲಿಗೋ ಹೋಗುತ್ತೇವೆ. ಆದರೆ ಆ ವಿಗ್ರಹ ಚಿತ್ರಗಳು ನಮ್ಮನ್ನು ಬಿಡದೆ ಅನುಗೂಡಿಬರುತ್ತವೆ. ಅವು ನಮ್ಮ ಅಂತರಂಗದಲ್ಲಿದ್ದುಕೊಂಡು ಭಾವಗಳನ್ನು ಕೆಣಕಿ ಕೆಣಕಿ ಎಬ್ಬಿಸುತ್ತವೆ. ಈ ಧ್ಯಾನಸಂತತದ ಪರಿಣಾಮವೇ

ರಸಪರಿಪುಷ್ಟಿ. ರಸಾಸ್ವಾದನೆ ಪರಿಪೂರ್ಣವಾದಾಗ ನಾವು ಕಲಾಕೃತಿಯೊಡನೆ ಒಂದುಗೂಡುತ್ತೇವೆ: ತಲ್ಲೀನರಾಗಿ ತಮ್ಮ ಬೇರೆತನವನ್ನು ಮರೆಯುತ್ತೇವೆ. ಇದು ಕಲಾನುಭವ-ಗೋಪುರದ ಕಲಶ.

ಮಾರ್ಗೇ ಮಾರ್ಗೇ ಜಾಯತೇ ಸಾಧುಸಂಗಃ ।
ಸಂಗೇ ಸಂಗೇ ಶ್ರೂಯತೇ ಕೃಷ್ಣಕೀರ್ತಿಃ ॥
ಕೀರ್ತೌ ಕೀರ್ತೌ ನಸ್ತದಾಕಾರವೃತ್ತಿಃ ।
ವೃತ್ತೌ ವೃತ್ತೌ ಸಚ್ಚಿದಾನಂದಭಾಸಃ ॥

೨. ಸಂಗೀತ

ಸಂಗೀತದ ಅನುಭವದಲ್ಲಿಯೂ ಮೇಲಿನಂತೆ ಮೂರು ಹಂತಗಳುಂಟು.

(೧) ಮನಃಪ್ರಸಾದದ್ದು : ಸಾಮಾನ್ಯವಾದ ಹಾಡು, "ವರ್ಣ" ವೆಂಬ ಗೇಯ ಕೃತಿ, ಗುರುವಂದನೆಯ ಪದ್ಯ, ಭಜನಾವಳಿ, ನಾಮ ಸಂಕೀರ್ತನೆ-ಇವುಗಳಿಂದ ಕಛೇರಿ ಪ್ರಾರಂಭವಾಗುತ್ತದೆ. ಅದು ಮನಸ್ಸನ್ನು ಉಲ್ಲಾಸಗೊಳಿಸಿ ಒಲಿಸಿಕೊಳ್ಳುವುದಕ್ಕೋಸ್ಕರ. ಮನಸ್ಸು ಕೊಂಚ ಕೊಂಚವಾಗಿ ಹರಿದು ಕ್ರಮೇಣ ರಾಗಸಮುದ್ರದ ಕಡೆಗೆ ತಿರುಗುತ್ತದೆ.

(೨) ಭಾವಾವೇಶದ್ದು : ಈಗ ಬರುತ್ತದೆ ಗಾನದ ಮಹಾಮಹಿಮೆ. ಗಾಯಕನು ರಾಗವಿಸ್ತಾರಕ್ಕೆ ಅವಕಾಶಕೊಡುವ ಒಂದು ಪ್ರೌಢಕೃತಿಯನ್ನೋ ಅಥವಾ "ಪಲ್ಲವಿ" ಎಂಬ ಗೇಯವಾಕ್ಯವನ್ನೋ ತೆಗೆದುಕೊಂಡು, ಅದರ ನಾನಾ ಭಾಗಗಳಲ್ಲಿ ರಾಗದ ವಿವಿಧ ವೈಖರಿಗಳನ್ನು ತುಂಬಿ ತೋರಿಸುತ್ತಾನೆ. ಇದರಲ್ಲಿ ಪರಿಣಾಮಕಾರಿಗಳಾದ ಅಂಶಗಳು ಎರಡು:

1. ನಾದದ ಅಖಂಡಧಾರೆ, ಅಥವಾ **ಧಾತು;**
2. ವ್ಯಂಜನಾಕ್ಷರಗಳ ಸ್ಫುಟಿತ, ಅಥವಾ **ಮಾತು;**

ವ್ಯಂಜನಸ್ಫೋಟದಿಂದ ನಾದಪ್ರವಾಹದ ಸೊಗಸು ಇಮ್ಮಡಿಯಾಗುತ್ತದೆ. ಕೀರ್ತನೆಯ "ಮಾತು" ವಿಗ್ರಹದ ಒಳಗಿನ ಅಚ್ಚುಕಟ್ಟು; ಗಾಯಕನ ಸ್ವರಧಾತುಸಂಯೋಜನೆ ಅದರ ಮೇಲೆ ಬಚ್ಚಾಣಿ ಬಣ್ಣ-ಇದರಿಂದ ಆಕಾರ ಸ್ಪಷ್ಟತೆ ಮತ್ತು ಕಳೆ. ಮಾತಿಲ್ಲದ ನಾದಧಾರೆಯಲ್ಲಿ ಭಾವವೇನೋ ಉಂಟು: ಆದರೆ ಅದು ಅಂಗಾಂಗಸ್ಪಷ್ಟತೆಯಿಲ್ಲದ್ದು. ಆಗ ಆ ಭಾವವನ್ನು ಗುರುತಿಸುವುದು ಸುಲಭವಲ್ಲ. ಮಾತು ಕೂಡಿಕೊಂಡಾಗ ಆ ನಾದ ಭಾವವು-ಸಂತೋಷವೋ ಪ್ರೇಮವೋ ಆರ್ತತೆಯೋ ಶರಣಾಗತಿಯೋ ಯಾವ ಬಗೆಯ ಹೃದಯವೇದನೆಯೋ ಗ್ರಾಹ್ಯವಾಗುತ್ತದೆ. ಇದರ ಜೊತೆಗೆ ಮಾತಿನ ವ್ಯಂಜನಾಂಶಗಳು ನಾದದ ಮಹಾಪ್ರವಾಹದ ನಡುವೆ ಅಲ್ಲಲ್ಲಿ ದ್ವೀಪಗಳಂತೆ, ಬಂಡೆಗಳಂತೆ, ಜಲಪಾತಗಳಂತೆ ರುಚಿವೈವಿಧ್ಯವನ್ನು ಕೊಡುತ್ತವೆ. ಈ ವ್ಯಂಜನಾಕ್ಷರಗಳೆಂಬ ಕಲ್ಲು ಇಟ್ಟಿಗೆಗಳಿಂದ ಗಾಯಕನು ರಾಗದ ಕಟ್ಟಡ ಕಟ್ಟಲಾಗುತ್ತದೆ. ಅವನ ರಾಗವಿನ್ಯಾಸ ಒಂದೊಂದು ಸಾರಿ ಮಹಾಸೌಧವೆಂಬಂತೆ, ಒಮ್ಮೊಮ್ಮೆ ಸೋಪಾನಪಂಕ್ತಿಯೆಂಬಂತೆ ನಮಗೆ ಅನುಭವ ಮಾಡಿಸುತ್ತದೆ.

ಭೂಸುರಾದಿ ಸಮಸ್ತಜನ-ಪೂಜಿತಾಬ್ಜಚರಣಾಯ ।
ವಾಸುಕಿತಕ್ಷಕಾದಿ-ಸರ್ಪಸ್ವರೂಪಧರಣಾಯ ।

ಇಂಥ ವಿಸ್ತಾರವಾದ ಚರಣಗಳನ್ನು ಶ್ರವಣ ಸಂಸ್ಕಾರ ಸಮರ್ಥನಾದ ಗಾಯಕನು ಹಾಡಿದಾಗ ನಾವು ನಮ್ಮೊಳಗೇ ಒಂದು ದೊಡ್ಡ ರಾಜಾಸ್ಥಾನದಲ್ಲಿರುವಂತೆ, ಒಂದು ಮಹೋದಾರವಾದ ಸಭಾಮಂದಿರದಲ್ಲಿರುವಂತೆ ಚಿತ್ತಸಮುನ್ನತಿಯನ್ನು ಪಡೆದು ಮೈ ಮರೆಯುತ್ತೇವೆ.

ಪದಗಳು ಸಾಮಾನ್ಯವಾದವೇ; ಅರ್ಥವು ಪರಿಚಿತವಾದದ್ದೇ. ಆದರೆ ರಾಗಪ್ರಭಾವವು ಅತಿಶಯವಾದದ್ದು. ಪದಗಳಲ್ಲಿಲ್ಲದ ಒಂದು ಶಕ್ತಿ ಪದಾಕ್ಷರಗಳ ಮಹಾ ಪ್ರವಾಹದಲ್ಲಿರುತ್ತದೆ. ಈ ಅಕ್ಷರಗಳಿಂದಲೇ ನಾದಧಾರೆಯಲ್ಲಿ ಅಲೆಗಳ ಕುಣಿತ.

ಗಾಯಕನ ಕಂಠಧ್ವನಿಯ ಕೊಂಕುಗಳು, ಜಾರುಗಳು, ತಿರಿಚುಗಳು, ಕೋಮಲ ಕಲಕಲಗಳು, ತೀವ್ರಸ್ಫುರಿತಗಳು-ಈ ನಾನಾ ಗತಿಗಳು ನಮ್ಮೆದೆಯನ್ನು ಕುಲುಕಿ, ಕಲಕಿ, ಭಾವತರಂಗಗಳನ್ನೆಬ್ಬಿಸುತ್ತವೆ. ನಾದವೇ ಲಹರಿ; ಅಕ್ಷರೋಚ್ಚಾರವೇ ತರಂಗ. ಗಾನದಲ್ಲಿ ಮಾತು ಮುಖ್ಯವಾದರೂ. ಅದರ ಮುಖ್ಯತೆ ಹೆಚ್ಚಾಗಿರುವುದು ಅದರ ನಾದದ ಬಹುರೂಪತಾನುಕೂಲತೆಯಲ್ಲಿ. ರಾಗಧಾರೆಯ ಏಕತೆಯಲ್ಲಿ ಶಬ್ದಾಕ್ಷರಗಳಿಂದ ಅನೇಕತೆ. ಒಂದೇ ಹೂವಿನ ಹಾರದಲ್ಲಿ ಹೂವು ಪತ್ರೆಗಳ ನಾನಾತ್ವ. ಇದರಿಂದ ರುಚಿಬಾಹುಳ್ಯ. ಕವಳ ಒಂದು, ಅಗಳು ನೂರು. ಹೀಗೆ ಮಾತು-ಧಾತುಗಳ ಸಾಮರಸ್ಯದಿಂದ ಸಂಗೀತ ಲಹರಿಯಲ್ಲಿ ಮನಸ್ಸು ಮಗ್ನವಾದಾಗ ರಸಾನುಭವದ ಪರಿಪೂರ್ಣತೆ.

(೩) ತಾತ್ಪರ್ಯ ಚಿಂತನೆ : ಅನಂತರ ಮೂರನೆಯ ಹಂತ. ನಾದಾಕ್ಷರಗಳು ಹೊರಕಿವಿಯನ್ನು ಮುಟ್ಟುತ್ತಿಲ್ಲ. ತಂಬೂರಿ ನಿಶ್ಯಬ್ದವಾಗಿದೆ. ಗಾಯಕನು ನಮ್ಮೆದುರಿಗೆ ಇಲ್ಲ. ಆದರೆ ಅವನ ನಾದದ ಒಂದು ಚೂರು ನಮ್ಮ ಮನಸ್ಸಿನ ಒಳಕಿವಿಯಲ್ಲಿ ಗುಞ್ ಗುಟ್ಟುತ್ತಿದೆ. ನಾವು ಎಲ್ಲಿ ಹೋದರೂ ಅಲ್ಲಿ ಆ ಗುಂಕಾರ ನಮ್ಮನ್ನನುಗೂಡಿ ಬರುತ್ತಿದೆ. ಈ ಅನುರಣಿತವೇ ಗಾನಗೋಪುರದ ಕಲಶ. ನಮ್ಮ ಮನಸ್ಸಿನ ಮಯಣದ ಹಲಗೆಯ ಮೇಲೆ ಗಾಯಕನ ಧ್ವನಿಮುದ್ರಿಕೆ ಒತ್ತಿರುತ್ತದೆ.

ಹರಿಯೇ-ಇದು ಸರಿಯೇ ॥
ನ ಹಿ ರೇ–ನ ಹಿ ಶಂಕಾ ॥
ಎಂದುರೋ ಮಹಾನುಭಾವುಲು ॥

ಇಂಥ ತುಣುಕುಗಳು ನಮ್ಮಲ್ಲಿ ನೆಲಸಿನಿಂತು ಮನಸ್ಸಿಗೆ ಸಂಸ್ಕಾರ ಮಾಡಿಸುತ್ತವೆ. ಅಹಂಕಾರವನ್ನು ಮುರಿಸುತ್ತವೆ. ಸ್ವಭಾವವನ್ನು ಶೋಧಿಸಿ ಮೃದುಗೊಳಿಸುತ್ತವೆ. ಹೃದಯೋನ್ನತಿಯೇ, ಹೃದಯನ್ನೈರ್ಮಲ್ಯವೇ, ಜೀವನದಲ್ಲಿ ಸೊಗಸೆನಿಸುತ್ತವೆ.

೩. ಕಾವ್ಯ

ಇಲ್ಲಿಯೂ ಮೂರು ಹಂತಗಳಿವೆ.

(೧) ಮನಃಪ್ರಸಾದದ್ದು : ಕಾವ್ಯದ ನಾಂದೀಪದ್ಯಗಳು, ದೇಶವರ್ಣನೆ ಪುರವರ್ಣನೆಗಳು, ಗಿರಿ ವನ ನದೀವರ್ಣನೆಗಳು, ಕೋಟೆ ದುರ್ಗಗಳ ವರ್ಣನೆಗಳು-ಇವು ವಾತಾವರಣ ಕಲ್ಪನೆಗಾಗಿ: ಅಲಂಕಾರ ಚಿತ್ತಾರಗಳು.

(೨) ಭಾವಾವೇಶದ್ದು : ಸ್ವಾರಸ್ಯ ಕೇಂದ್ರವಿರುವುದು ಕಥಾಸನ್ನಿವೇಶದಲ್ಲಿ, ಅದರ ಮಾನುಷ ಪಾತ್ರಗಳಲ್ಲಿ.

ತ್ಯಾಗರಾಜರು ತಮ್ಮ ಒಂದು ಗೇಯ ಕಾವ್ಯದಲ್ಲಿ ಹೀಗೆ ಕಥೆ ಹೇಳಿದ್ದಾರೆ:

ಸೀತಾದೇವಿಯ ಮುಂದೆ ಮಾರೀಚನು ಮಾಯಾಮೃಗವಾಗಿ ಸುಳಿದಾಡಿದನಷ್ಟೆ? ಆಕೆ ಅದು ನಿಜವಾದ ಜಿಂಕೆಯೆಂದು ಭ್ರಾಂತಿಪಟ್ಟು ಅದರ ಕಾಂತಿಗೂ ಬಣ್ಣಕ್ಕೂ ಮನಸೋತಳು, ಆ ಕಥೆ ಮಿಕ್ಕದ್ದು ಹಾಗಿರಲಿ. ಶ್ರೀರಾಮಚಂದ್ರನು ಸೀತೆಪಟ್ಟಿದ್ದ ಆಶೆಯನ್ನು ಜ್ಞಾಪಕದಲ್ಲಿರಿಸಿಕೊಂಡಿದ್ದ. ರಾವಣ ಸಂಹಾರವಾದ ಬಳಿಕ ಒಂದು ದಿನ ಸೀತಾ ರಾಮರು ವಿನೋದಕ್ಕಾಗಿ ವನದಲ್ಲಿ ತಿರುಗಾಡುತ್ತಿದ್ದಾರೆ. ಆಗ ಒಂದು ಎಳೆಯ ಜಿಂಕೆ ಅಲ್ಲಿ ಸುಳಿದಾಡುತ್ತಿದ್ದದ್ದು ರಾಮನ ಕಣ್ಣಿಗೆ ಬಿತ್ತು. ಇದರ ಮೈಯ ಕೋಮಲತೆಯೂ ಕಾಂತಿಯೂ ಸೀತೆ ಆಶೆಪಟ್ಟಿದ್ದ ಜಿಂಕೆಯದನ್ನೇ ಹೋಲುತ್ತಿತ್ತು. ಇದು ಸೀತೆಗೆ ಇಷ್ಟವಾದದ್ದೆಂದು ರಾಮನು ಭಾವಿಸಿ ಅದರ ಮೇಲೆ ಒಂದು ಬಾಣವನ್ನು ಬಿಟ್ಟ. ಮೃಗವು ಪ್ರಾಣಭಯದಿಂದ ತನ್ನ ಕೊರಳನ್ನು ನೀಳಮಾಡಿಕೊಂಡು ಓಡುತ್ತಿತ್ತು. ಸೀತಮ್ಮನು ಅದನ್ನು ಕಂಡು ಕನಿಕರಿಸಿ ಆ ಪ್ರಾಣವನ್ನು ಹಿಂಸಿಸಬಾರದೆಂದು ಬೇಡಿಕೊಂಡಳು. ಆದರೆ ಆ ವೇಳೆಗೆ ರಾಮಬಾಣವು ಧನುಸ್ಸಿನಿಂದ ಹೊರಟುಬಿಟ್ಟಿತ್ತಲ್ಲ? ಏನುಮಾಡಲಾದೀತು? ಆದರೂ ಶ್ರೀರಾಮನು ಶ್ರೀರಾಮನಲ್ಲವೆ? ಬಾಣವು ಹರಿಣವನ್ನು ಇನ್ನೂ ಸೋಕಿರಲಿಲ್ಲ. ಅದು ಸೋಕುವಷ್ಟರೊಳಗಾಗಿ ಆ ಮಹಾಧನ್ವಿಯು ಇನ್ನೊಂದು ಬಾಣವನ್ನು ಹೊರಡಿಸಿ ಅದರಿಂದ ಮೊದಲನೆಯ ಬಾಣವನ್ನು ಕತ್ತರಿಸಿ ಬೀಳಿಸಿದ. ಜಿಂಕೆಯ ಜೀವ ಉಳಿಯಿತು- ಆ ಸುಂದರ ಸುಕುಮಾರ ಜೀವ ಉಳಿಯಿತು.

ಎಂಥ ಮನೋಹರವಾದ ಕಲ್ಪನೆ ಇದು! ತ್ಯಾಗರಾಜರು ಇದನ್ನು ಗೇಯವನ್ನಾಗಿ ಮಾಡಿ ಮಾಡಿದರು. ಇದೇ ವಸ್ತುವನ್ನು ಇನ್ನೊಬ್ಬ ಕವಿ ವರ್ಣನೆ ಸಂಭಾಷಣೆಗಳಿಂದ

ಮನೋರಂಜಕವಾಗುವಂತೆ ವಿಸ್ತರಿಸಬಹುದು. ಮತ್ತೊಬ್ಬ ಕವಿ ಇದಕ್ಕೆ ನಾಟಕರೂಪವನ್ನು ಕೊಡಬಹುದು. ನಾನಾಪಾತ್ರಗಳ ಪ್ರಶ್ನೋತ್ತರಗಳಿಂದಲೂ ಚೇಷ್ಟಿತ ಪ್ರತಿಚೇಷ್ಟಿತಗಳಿಂದಲೂ ವಸ್ತು ಸನ್ನಿವೇಶವನ್ನು ನಮಗೆ ಪ್ರತ್ಯಕ್ಷಪಡಿಸಬಹುದು. ಹೇಗಾದರೂ ಅದರಲ್ಲಡಗಿರುವ ಹಾರ್ದಿಕ ದ್ರವ್ಯದ ಕಾರಣದಿಂದ ಅದು ಕಾವ್ಯವೇ ಸರಿ. ಅದರಲ್ಲಿ ನಾವು ರಾಮನ ಪತ್ನೀವಾತ್ಸಲ್ಯ, ಸೀತೆಯ ಹೃದಯಕೋಮಲತೆ, ರಾಮನ ಪರೇಂಗಿತ ಗ್ರಹಣ, ರಾಮನ ಶಸ್ತ್ರಚಾತುರ್ಯ-ಇವುಗಳನ್ನು ನೋಡುವುದರಲ್ಲಿ ಮನಸ್ಸು ನಿಮಗ್ನವಾಗಿರುತ್ತದೆ. ಅದೇ ರಸಸಮೃದ್ಧಿ.

(೩) ತಾತ್ಪರ್ಯ ಚಿಂತನೆ : ಈಗ ಮನಸ್ಸು ಮನನಕ್ಕೆ ಹೊರಡುತ್ತದೆ. ಅದು ಕಾವ್ಯಾನುಭವದ ಮೂರನೆಯ ಹಂತ. ರಾಮಚಂದ್ರನ ಧರ್ಮಿಷ್ಠತೆ ದೊಡ್ಡದೋ, ಸೀತೆಯ ಕರುಣೆ ದೊಡ್ಡದೋ? ಭರತನ ವಿರಕ್ತಿ ದೊಡ್ಡದೋ, ಲಕ್ಷ್ಮಣನ ಕಿಂಕರಭಾವ ದೊಡ್ಡದೋ? ಆಗ ಆಂಜನೇಯನನ್ನೆಲ್ಲಿರಿಸಬೇಕಾಗುತ್ತದೆ? ಹೀಗೆ ವಿಚಾರಮಾಡಿ ವಿಚಾರಮಾಡಿ ಅವರಷ್ಟು ಮಂದಿಯನ್ನೂ ನಾವು ನಮ್ಮ ಅಂತರಂಗಗಳಲ್ಲಿ ತುಂಬಿಕೊಳ್ಳುತ್ತೇವೆ, ತನ್ಮಯರಾಗುತ್ತೇವೆ. ಹಾಗೂ ಆಗಲಿ. ಇನ್ನೂ ಕಡೆಯ ಪ್ರಶ್ನೆಯೊಂದು ಉಳಿದುಕೊಳ್ಳುತ್ತದೆ: ಒಟ್ಟಿನಲ್ಲಿ ರಾಮಾದಿಗಳು ಸಾಧಿಸಿದ್ದೇನನ್ನು? ಅವರು ಪಟ್ಟ ಸುಖವೇನು? ಅವರು ಗಳಿಸಿದ ಸಂಪತ್ತೇನು? ಮುಪ್ಪು; ಬರಿಯ ಮುಪ್ಪು. ಹೆಣಗಿದರು, ತೆರಳಿದರು-ಇಷ್ಟೇ ತಾನೆ? ಈ ಭಾಗ್ಯಕ್ಕಾಗಿ ಬಾಳಬೇಕೆ?

ಪಾಂಡವರ ಪಾಡೂ ಇಷ್ಟು ಮಾತ್ರದ್ದೇ ಅಲ್ಲದೆ?

> ಅಜಯೋಽಯಂ ಜಯಾಕಾರಃ ॥
> ಜಯಾಕಾರೋ ಹ್ಯಪಜಯಃ ॥

ಧರ್ಮರಾಯನಿಗಾದ ಲಾಭ ಎಳ್ಳು ದರ್ಭೆಗಳ ಅಧಿಕಾರ. ಇಷ್ಟೇನೆ ಬದುಕಿನ ಸ್ವಾರಸ್ಯ?

ರಾಘವ ಯುಧಿಷ್ಠಿರರುಗಳ ಸ್ವಕೀಯ ವೈಯಕ್ತಿಕ ದೃಷ್ಟಿಯಿಂದ ಅವರದು ಕಷ್ಟ ಜೀವನ-ನಿಷ್ಫಲಜೀವನ, -ನಿಸ್ಸಾರಜೀವನ. ಆದರೆ ವಿಶಾಲ ಲೋಕದ ದೃಷ್ಟಿಯಿಂದ ಅವರದು ಸಾರ್ಥಕ ಜೀವನ, ಶಾಶ್ವತ ಪರಿಣಾಮಿಯಾದ ಜೀವನ, ವಿಶ್ವವ್ಯಾಪಿಯಾದ ಜೀವನ. ಹಾಗೆ ಧರ್ಮಕ್ಕಾಗಿ ಆದ ಜೀವನವೇ ಜೀವನ; ನ್ಯಾಯಕ್ಕಾಗಿ ನಡೆದ ಜೀವನವೇ ಜೀವನ; ಸೌಜನ್ಯಕ್ಕಾಗಿ ದುಡಿದ ಜೀವನವೇ ಜೀವನ.

ಇದು ಮಹಾಕಾವ್ಯಮನನವು ನಮ್ಮಲ್ಲಿ ಉತ್ಪನ್ನಮಾಡಿಸುವ ಸಿದ್ಧಾಂತ. ಅದು ನಾವು ತಪ್ಪಿಸಿಕೊಳ್ಳಲಾಗದ ಸಿದ್ಧಾಂತ. ಈ ಕಾರಣದಿಂದ ಕಾವ್ಯವು ಜೀವತಾರಕವಾಗುತ್ತದೆ.

ಇಂಥಾದ್ದೇ ಕಲಾನುಭವದ ಪರಮಸಿದ್ಧಿ.

ಪರಿಶಿಷ್ಟ

ಈಗ ಪರಿಶಿಷ್ಟಾಂಶವಾಗಿ ಒಂದು ಪ್ರಶ್ನೆ ಏಳುತ್ತದೆ:

"ಕಲೆ" ಎಂದರೆ ಸೌಂದರ್ಯದ ಅನುಭವ, ಮಹತ್ವದ ಅನುಭವ ಎಂದು ಹೇಳಿದೆ. ಈಗ ಯೂರೋಪು ಅಮೆರಿಕಗಳಿಂದ ನಮ್ಮ ದೇಶಕ್ಕೆ ಹೇರಳವಾಗಿ ಬರುತ್ತಿರುವ ನವೀನ ಕಲಾಕೃತಿಗಳಿಂದ ಅಂಥ ಅನುಭವ ಬರುತ್ತದೆಯೆ?

ನನ್ನ ಪಾಲಿಗೆ ಅದು ಹಾಗಿಲ್ಲ. ಆದರೆ ನಾನು ಸಂಪ್ರದಾಯಬಂಧನಕ್ಕೆ ಪರವಶನಾಗಿ ದೃಷ್ಟಿಸಂಕೋಚದಿಂದ ಅಂಧನಾಗಿರಬಹುದು. ಜಕಣಾಚಾರಿ, ತ್ಯಾಗಯ್ಯ, ವಾಲ್ಮೀಕಿ-ಇವರು ಯಾರಿಗೆ ಗುರುಗಳೋ ಅಂಥವರಿಗೆ ಸೊಗಸೆನ್ನಿಸದಿರುವ ಕಲೆಯಲ್ಲಿ ಇತರರು ಸೊಗಸು ಕಾಣಬಲ್ಲವರಾಗಬಾರದೆ?

ಹಾಗಾದರೆ ಸೊಗಸೆಂಬುದೆಂಥಾದ್ದು?

ಇದಕ್ಕೆ ಈಗ ಏಕೈಕಪ್ರಮಾಣವಿಲ್ಲ.

ನಮಗೆ ಉಡುಪಿನ ಮರ್ಯಾದೆ ಸೊಗಸು; ಬೇರೆಯವರಿಗೆ ಬೆತ್ತಲೆಯೇ ಸೊಗಸು. ನಮಗೆ ಅಂಗಾಂಗಭಾವವು ಸೂಚ್ಯವಾಗಿದ್ದರೆ ಸರಿ; ಪ್ರಕಟವಾದರೆ ಅಸಹ್ಯ. ಬೇರೆಯವರಿಗೆ ಹಾಗಲ್ಲ. ಅಮೆರಿಕ ಯೂರೋಪುಗಳಿಂದ ಬರುವ ಪತ್ರಿಕೆಗಳಲ್ಲಿ ಆ ಜನಕ್ಕೆ ರಬಾರಬಿ ರಂಗುಗಳೂ ಕೈಕಾಲುಗಳ ಹುಚ್ಚುಹುಚ್ಚು ತಿರಿಚುಗಳೂ ಸೊಗಸೆಂದು ತೋರುವಂತೆ ಭಾಸವಾಗುತ್ತದೆ. ಇದರಲ್ಲಿ "ಹಿಪ್ಪೀಸ್" (Hippies) "ಬೀಟ್‌ಲ್‌ಸ್" (Bettles) ಮೊದಲಾದ ನೂತನ ಪಂಥಗಳು ಹುಟ್ಟಿಕೊಂಡಿವೆ. ಅವುಗಳ ವೇಷಭಾಷೆಗಳು ನನ್ನಂಥವನ ಕಣ್ಣಿಗೆ ವಿಕಾರ ವಿಪರೀತವೆಂದೆನಿಸುತ್ತವೆ. ಅಲ್ಲಿಯ ಚಿತ್ರಕಲಾಕರ್ತರೂ ಈ ವಿಪರೀತ ಮಾರ್ಗವನ್ನು ಹಿಡಿಯುತ್ತಿದ್ದಾರೆ.

ಮನುಷ್ಯದೇಹದ ಎಲ್ಲ ಅಂಗಗಳ ಎಲ್ಲ ಅವಸ್ಥೆಗಳೂ ಸುಂದರವೋ? ಕೈ ಕಾಲು ತಿರಿಚಿದ್ದು, ತಲೆಕೂದಲು ಕೆದರಿಕೊಂಡದ್ದು-ಇವೆಲ್ಲ ಸೊಗಸೋ? ಬೆಟ್ಟುಗಳನ್ನೂ ತುಟಿಗಳನ್ನೂ ಸೊಟ್ಟುಪಟ್ಟು ಮಾಡಿದ್ದೆಲ್ಲ ಸೊಗಸೋ?

ಗಾನದಲ್ಲಿಯೂ ಹಾಗೆಯೇ. “ಜಾಜ್” (Jazz) ಎಂದು ಹೇಳುತ್ತಾರೆ, ಒಂದು ಬಗೆಯ ನಾನಾವಾದ್ಯಗಳ ಏಕಕಾಲ ಘೋಷಣೆಯನ್ನು. ಅದರಲ್ಲಿಯೂ ದಬಾದಬಿ, ರಬಾರಬಿ. ಇದು ಕಿವಿಗೆ ಸೊಗಸೋ?

ಕೆಲವು ನವೀನ ಕಾವ್ಯಗಳಲ್ಲಿಯೂ ಹಾಗೆಯೇ. ಎಲ್ಲಿಯದೋ ಉಪಮಾನ. ಇನ್ನೆಲ್ಲಿಯದೋ ಉಪಮೇಯ. ಪದಗಳ ಅನುಕ್ರಮ ಕೂಡ ಅನಿಶ್ಚಿತ. ಇದರ ಭಾವವೇನೆಂದು ಕಂಡುಕೊಳ್ಳುವುದು ಅಸಾಧ್ಯ.

ಒಟ್ಟಿನಲ್ಲಿ ಒಂದು ಅನಾಯಕತೆ, ಒಂದು ಉನ್ಮತ್ತತೆ ಹರಡುತ್ತಿರುವಂತೆ ಕಾಣುತ್ತದೆ.

ನನ್ನ ತಿಳಿವಳಿಕೆಯಲ್ಲಿ ನಿಜವಾದ ಕಲೆಯ ಸೌಂದರ್ಯಕಲ್ಪನೆ ಎರಡು ಲಕ್ಷಣಗಳನ್ನು ಹಿಡಿದಿರುತ್ತದೆ:

1. ಆರಿಸೋಣ (Selection);
2. ಪರಿಮಾಣನಿಯಮ (Proportion)

(೧) ಪ್ರಪಂಚದ ಎಲ್ಲ ವಸ್ತುಗಳೂ ಸುಂದರವಲ್ಲ, ಯಾವ ಒಂದು ವಸ್ತುವಿನಲ್ಲಿಯೂ ಎಲ್ಲ ಭಾಗಗಳೂ ಸುಂದರವಲ್ಲ. ಇಲ್ಲಿ ಸುಂದರವೆಂದರೆ ನಮಗೆ ಇಷ್ಟವಾದ ಅನುಭವವನ್ನು, ಎಂದರೆ ಸುಖವನ್ನು ಉಂಟುಮಾಡಿಸುವ ಗುಣ. ಈ ಗುಣವನ್ನು ವಸ್ತುವಿನಿಂದ ಚಿಂತಿಸಿ ಆರಿಸಿಕೊಳ್ಳಬೇಕು.

(೨) ವಸ್ತುವಿನ ಅಂಗಾಂಗಗಳಲ್ಲಿ, ನಾದದ ಏಳು ಬೀಳುಗಳಲ್ಲಿ, ಕಾವ್ಯದ ನಾನಾ ವಿಭಾಗಗಳಲ್ಲಿ, ಪರಸ್ಪರ ಹೊಂದಾಣಿಕೆ ಇರಬೇಕು. ಯಾವ ಒಂದೂ ಅತಿಯಾಗಬಾರದು.

ಹೀಗೆ (೧) ವಸ್ತುವಿನ ಪ್ರದರ್ಶನೌಚಿತ್ಯ. (೨) ಅಂಗಾಂಗ ಪ್ರಮಾಣದ ಅನುರೂಪತೆ-ಈ ಎರಡೂ ಕಲಾಕೃತಿಯ ಲಕ್ಷಣಗಳು. ಅವು ಪ್ರಕೃತಿಯ ಸೃಷ್ಟಿಯಲ್ಲಿ ಕಾಣುವ ಮಿತಿನಿಯತಿಗಳಿಂದಲೂ, ನಮಗೆ ಬಹುಕಾಲದಿಂದ ಬಂದಿರುವ ಅಭ್ಯಾಸದಿಂದಲೂ ಗೊತ್ತಾದವು.

ಅಂಗೌಚಿತ್ಯಕ್ಕೂ ಪರಿಮಾಣೌಚಿತ್ಯಕ್ಕೂ ಮೂಲಭೂತವಾದ ತತ್ತ್ವ ಒಂದುಂಟು. ಅದು ಸೌಂದರ್ಯದರ್ಶನದಿಂದಲೂ, ಮಹತ್ತ್ವದರ್ಶನದಿಂದಲೂ ಲೋಕದ ಮನಸ್ಸು ದುರ್ವಿಕಾರಕ್ಕೊಳಗಾಗಬಾರದೆಂಬುದು. ದೃಶ್ಯವು ಸುಖ ಕೊಡಬೇಕು, ಉದ್ರೇಕ ಕೊಡಬಾರದು-ಇದು ತತ್ತ್ವ. ಇದಕ್ಕೆ ಸಾಧಕವಾದದ್ದು ನಾಚಿಕೆಯ ಮನೋಭಾವ. ಇದು

ಸಾಮಾನ್ಯವಾಗಿ ಮನುಷ್ಯವರ್ಗಕ್ಕೆ ಸಹಜವಾದ ಗುಣ. ಎಳೆಯ ಮಕ್ಕಳಲ್ಲಿಯೂ ನಾವು ಅದನ್ನು ಕಾಣಬಹುದು. ಈ ಗುಣವನ್ನು ವೇದ ಕೊಂಡಾಡಿದೆ:

ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ ॥

"ಹ್ರೀ" ಎಂದರೆ ಲಜ್ಜೆ, ನಾಚಿಕೆ, ಸಂಕೋಚ. ಅದೇ ಮಾನ. ಅದೇ ಸ್ವಪ್ರಶಂಸಾವಿಮುಖತೆ. ಅದೇ ಅಹಂಕಾರವರ್ಜನೆ, ಅದೇ ಲೋಕಾಪವಾದಭಯ. "ಹ್ರೀ" ಎಂಬುದು ಆಂತರಂಗ ಸೌಂದರ್ಯದ ಒಂದು ಅಂಶ: ಅದು ಅಂತರಂಗ ಮಹತ್ತ್ವದ ಒಂದಂಶ. ಇದು ಕಲೆಯ ಕವಚ. ಇದಿಲ್ಲದಿದ್ದರೆ ಕಲಾಕೃತಿಯು ಲೋಕಕ್ಕೆ ವಿಕಾರಕಾರಕವಾಗಿ, ತಾನು ವಿಕಾರ ವಿಪರೀತವಾಗುತ್ತದೆ. ಹೀಗೆ ಕಲಾಕರ್ತನದು ಜವಾಬ್ದಾರಿಯುಳ್ಳ ಉದ್ಯೋಗ. ಅವನಿಗೆ ಸ್ವಾತಂತ್ರ್ಯ ಬೇಕಾಗಿರುವಂತೆ ಪರಿಮಿತಿಯೂ ಬೇಕು. ಅವನ ನಿರ್ಮಿತಿಗಳು ಹ್ರೀ ತತ್ತ್ವಕ್ಕೆ ವಿಘಾತ ತಾರದುವಾಗಿರಬೇಕು.

ನಾನು ಎಲ್ಲಿಯೋ ಎಂದೋ ನೋಡಿದ ಒಂದು ಪುರಾತನ ವಾಕ್ಯ ಈಗ ಜ್ಞಾಪಕಕ್ಕೆ ಬರುತ್ತದೆ.

ಅಂಗಪ್ರತ್ಯಂಗಕಾನಾಂ ಯಃ
ಸನ್ನಿವೇಶೋ ಯಥಾಕ್ರಮಮ್ ।
ಸುಶ್ಲಿಷ್ಟಃ ಸಂಧಿಬಂಧಃ ಸ್ಯಾತ್
ತತ್ ಸೌಂದರ್ಯಮುದಾಹೃತಮ್ ॥

1 ಜ್ಞಾಪಕ ಚಿತ್ರಶಾಲೆ ೧, ಪು. ೨೬-೩೨.

1 ಜ್ಞಾಪಕ ಚಿತ್ರಶಾಲೆ-೧, ಪು. ೨೬-೩೨.

1 ಜ್ಞಾಪಕ ಚಿತ್ರಶಾಲೆ ೧, ಪು.೯೮-೧೦೩

1 ಕಾವ್ಯಾಲಯ ಮೈಸೂರು, ೧೯೬೨.

2 ಪ್ರತಾಪರುದ್ರೀಯ, ೧-೮

1 ಜ್ಞಾಪಕ ಚಿತ್ರಶಾಲೆ-೧, ೨೬–೩೨.

1 ಈ ಶ್ಲೋಕವು ವಾಮನಪುರಾಣದ "ದಧಿವಾಮನಸ್ತೋತ್ರ" ದಲ್ಲಿದೆಯೆಂದು ಮೈಸೂರಿನ ಅಡ್ವೊಕೇಟ್ ಶ್ರೀ.ಕೆ.ಕೆ.ದಾಸ್‌ರವರೂ ಇತರ 'ಸುಧಾ' ವಾರ ಪತ್ರಿಕೆಯ ವಾಚಕರೂ ನನಗೆ ತಿಳಿಸಿ ಉಪಕಾರ ಮಾಡಿದ್ದಾರೆ.

1 ಜ್ಞಾಪಕ ಚಿತ್ರಶಾಲೆ -೧, ಪು. ೩೩–೪೨.

2 ಜ್ಞಾಪಕ ಚಿತ್ರಶಾಲೆ -೧, ೪೩–೪೮.